ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತ ಗಂಗೋತ್ರಿ, ಮೈಸೂರು– 570 006

ಎಂ.ಎ.

# ಪುರಾತನ ಇತಿಹಾಸ ಮತ್ತು ಪುರಾತತ್ವಶಾಸ್ತ್ರ

ಅಂತಿಮ ಎಂ.ಎ.

# ದಕ್ಷಿಣ ಭಾರತದ ಇತಿಹಾಸ (ರಾಜಕೀಯ ಮತ್ತು ಸಾಂಸ್ಕೃತಿಕ)




ಕೋರ್ಸ್: ಎಹೆಚ್‌ಎ – 6

ಬ್ಲಾಕ್ 1 – 5

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಮುಕ್ತಗಂಗೋತ್ರಿ, ಮೈಸೂರು– 570 006, www.ksoumysore.edu.in**


## ಪುರಾತನ ಇತಿಹಾಸ ಮತ್ತು ಪುರಾತತ್ವಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ

## ಅಂತಿಮ ಎಂ.ಎ.

## ಕೋರ್ಸ್ – 6: ದಕ್ಷಿಣ ಭಾರತದ ಇತಿಹಾಸ (ರಾಜಕೀಯ ಮತ್ತು ಸಾಂಸ್ಕೃತಿಕ)
## ಎಂಎಎ–21

**ಕೋರ್ಸಿನ ವಿನ್ಯಾಸ**


**ಪ್ರೊ. ಡಿ. ಶಿವಲಿಂಗಯ್ಯ**
ಉಪಕುಲಪತಿ ಮತ್ತು ಮುಖ್ಯಸ್ಥರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು– 570 006

**ಪ್ರೊ. ಟಿ.ಡಿ. ದೇವೆಗೌಡ**
ಡೀನ್(ಶೈಕ್ಷಣಿಕ)
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು– 570 006

**ಡಾ. ಎನ್.ಪಿ. ಸುಜಾತ**
ಮುಖ್ಯಸ್ಥರು
ಪುರಾತನ ಇತಿಹಾಸ ಮತ್ತು ಪುರಾತತ್ವಶಾಸ್ತ್ರ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು– 570 006

## ಕೋರ್ಸಿನ ಲೇಖಕರು


**1. ಡಾ. ಎನ್.ಸಿ. ಸುಜಾತ** **ಘಟಕಗಳು–11, 12 ಮತ್ತು 13**
ಮುಖ್ಯಸ್ಥರು
ಪುರಾತನ ಇತಿಹಾಸ ಮತ್ತು ಪುರಾತತ್ವಶಾಸ್ತ್ರ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು– 570 006

**2. ಡಾ. ಎನ್. ಸರಸ್ವತಿ** **ಘಟಕಗಳು–1, 2, 3, 4, 9, 14, 15, 16, 17 18, 19 ಮತ್ತು 20**
ಪ್ರಾಧ್ಯಾಪಕರು
ಇತಿಹಾಸ ವಿಭಾಗ
ಮೈಸೂರು ವಿಶ್ವವಿದ್ಯಾಲಯ
ಮಾನಸಗಂಗೋತ್ರಿ, ಮೈಸೂರು– 06

**3. ಡಾ. ಎನ್. ಸಾವಿತ್ರಿ** **ಘಟಕಗಳು–5, 6, 7, 8, ಮತ್ತು 10**
ಪ್ರಾಧ್ಯಾಪಕರು
ಇತಿಹಾಸ ವಿಭಾಗ
ಮಲ್ಲಮ್ಮ ಮರಿಮಲ್ಲಪ್ಪ ಮಹಿಳಾ ಪ್ರಥಮ ದರ್ಜೆ ಕಾಲೇಜು
ಮೈಸೂರು


## ಕೋರ್ಸಿನ ಸಂಪಾದಕರು


**ಡಾ. ಎನ್.ಸಿ. ಸುಜಾತ**
ಮುಖ್ಯಸ್ಥರು
ಪುರಾತನ ಇತಿಹಾಸ ಮತ್ತು ಪುರಾತತ್ವಶಾಸ್ತ್ರ ವಿಭಾಗ
ಕರಾಮುವಿ, ಮೈಸೂರು– 570 006


## ಪ್ರಕಾಶಕರು


**ಕುಲಸಚಿವರು**
**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ**
**ಮುಕ್ತಗಂಗೋತ್ರಿ, ಮೈಸೂರು– 570 006**



ಅಭಿವೃದ್ಧಿ ಪಡಿಸಿದವರು– ಶೈಕ್ಷಣಿಕ ವಿಭಾಗ, ಕ.ರಾ.ಮು.ವಿ., ಮೈಸೂರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, 2015. ಎಲ್ಲ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಲಿಖಿತ ಅನುಮತಿಯಿಲ್ಲದೆ ಇದರ ಯಾವ ಭಾಗವನ್ನೂ ಪಡಿಯಚ್ಚು ಅಥವಾ ಇನ್ನಾವುದೇ ವಿಧಾನದಿಂದ ನಕಲು ಮಾಡುವಂತಿಲ್ಲ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸುಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಮುಕ್ತಗಂಗೋತ್ರಿ, ಮೈಸೂರು–06 ಇಲ್ಲಿರುವ ವಿಶ್ವವಿದ್ಯಾನಿಲಯದ ಕಛೇರಿಯನ್ನು ಸಂಪರ್ಕಿಸಬಹುದು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು–06, ಇದರ ಪರವಾಗಿ ಮುದ್ರಿಸಿದವರು ಮತ್ತು ಪ್ರಕಟಿಸಿದವರು ಕುಲಸಚಿವರು (ಆಡಳಿತ).

# ಬ್ಲಾಕ್ ಪರಿಚಯ

ಪ್ರಿಯ ವಿದ್ಯಾರ್ಥಿಗಳೇ,

ಎಂ.ಎ. ಅಂತಿಮ ವರ್ಷದ 6ನೇ ಕೋರ್ಸಿನ ಶೀರ್ಷಿಕೆ **ದಕ್ಷಿಣ ಭಾರತದ ಇತಿಹಾಸ (ರಾಜಕೀಯ ಮತ್ತು ಸಾಂಸ್ಕೃತಿಕ)** ಆಗಿದ್ದು ಇದನ್ನು 5 ಬ್ಲಾಕ್‌ಗಳಾಗಿ ವಿಭಜಿಸಲಾಗಿದ್ದು ಒಟ್ಟು 20 ಘಟಕಗಳನ್ನು ಹೊಂದಿದೆ. ಎಲ್ಲಾ ಘಟಕಗಳನ್ನು ಪರಿಣತರು ಸಿದ್ಧಪಡಿಸಿರುತ್ತಾರೆ.

ಬ್ಲಾಕ್–1 ದಕ್ಷಿಣ ಭಾರತದ ಇತಿಹಾಸದ ಪ್ರಾಚೀನ ಮೂಲಗಳನ್ನು ಪರಿಚಯಿಸುತ್ತದೆ.

ಬ್ಲಾಕ್–2 ಬಾದಾಮಿ ಚಾಲುಕ್ಯರ ರಾಜಕೀಯ ಇತಿಹಾಸ ಮತ್ತು ಅವರ ಆಡಳಿತ ಮತ್ತು ಸಾಂಸ್ಕೃತಿಕ ಕೊಡುಗೆಗಳನ್ನು ಪರಿಚಯಿಸುತ್ತದೆ. ಹಾಗೆಯೇ ರಾಷ್ಟ್ರಕೂಟರ ರಾಜಕೀಯ ಇತಿಹಾಸ ಮತ್ತು ಅವರ ಆಡಳಿತ ಮತ್ತು ಸಾಂಸ್ಕೃತಿಕ ಕೊಡುಗೆಗಳನ್ನು ವಿವರಿಸುತ್ತದೆ.

ಬ್ಲಾಕ್–3 ಕಲ್ಯಾಣ ಚಾಲುಕ್ಯರ, ಹೊಯ್ಸಳರ ರಾಜಕೀಯ ಇತಿಹಾಸ ಮತ್ತು ಆಡಳಿತ ಹಾಗೂ ಸಾಂಸ್ಕೃತಿಕ ಕ್ಷೇತ್ರಕ್ಕೆ ಅವರ ಕೊಡುಗೆಗಳನ್ನು ಪರಿಚಯಿಸುತ್ತದೆ. ಹಾಗೆಯೇ ದೇವಗಿರಿಯ ಯಾದವರ ರಾಜಕೀಯ ಇತಿಹಾಸ ಮತ್ತು ಅವರ ಆಡಳಿತ ಮತ್ತು ಸಾಂಸ್ಕೃತಿಕ ಕೊಡುಗೆಗಳನ್ನು ವಿವರಿಸುತ್ತದೆ.

ಬ್ಲಾಕ್–4 ತಮಿಳು ಭೂಮಿಯ ಇತಿಹಾಸ, ಸಂಗಮ ಯುಗ, ಪಲ್ಲವರು, ಚೋಳರು ಮತ್ತು ಪಾಂಡ್ಯರ ಇತಿಹಾಸ ಮತ್ತು ಅವರ ಆಡಳಿತ ಮತ್ತು ಸಾಂಸ್ಕೃತಿಕ ಕೊಡುಗೆಗಳನ್ನು ವಿವರಿಸುತ್ತದೆ.

ಬ್ಲಾಕ್–5 ಸಾಮಾಜಿಕ, ಧಾರ್ಮಿಕ ಮತ್ತು ಭಕ್ತಿ ಚಳವಳಿಯನ್ನು ಪರಿಚಯಿಸುತ್ತದೆ ಮತ್ತು ಶಂಕರಾಚಾರ್ಯ, ರಾಮಾನುಜಾಚಾರ್ಯ, ಬಸವೇಶ್ವರ ಮತ್ತು ಮಧ್ವಾಚಾರ್ಯರ ಜೀವನ ಮತ್ತು ಬೋಧನೆಗಳ ಬಗ್ಗೆ ವಿವರಿಸುತ್ತದೆ.

## ಪರಿಚಯ

ಪ್ರಿಯ ವಿದ್ಯಾರ್ಥಿಗಳೇ,

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಟುಂಬಕ್ಕೆ ನಿಮ್ಮನ್ನು ಸ್ವಾಗತಿಸಲು ನನಗೆ ಬಹಳ ಸಂತೋಷವಾಗುತ್ತಿದೆ. ದಕ್ಷಿಣ ಭಾರತದ ಇತಿಹಾಸದ (ರಾಜಕೀಯ ಮತ್ತು ಸಾಂಸ್ಕೃತಿಕ) ಅಧ್ಯಯನಕ್ಕೆ ನಿಮ್ಮನ್ನು ಸ್ವಾಗತಿಸುತ್ತೇನೆ.

ಭಾರತದ ಇತಿಹಾಸ ಅತ್ಯಂತ ಪ್ರಾಚೀನ ಮತ್ತು ವ್ಯಾಪಕವಾದದ್ದು. ಭಾರತದ ಇತಿಹಾಸದ ಅನನ್ಯತೆ, ಉಪಖಂಡದ ಗ್ರಾಮೀಣ ಗುಣಲಕ್ಷಣದ ವ್ಯಾಪಕತೆಯಿಂದಾಗಿ ಇದರ ಅಧ್ಯಯನವನ್ನು ಆರಂಭದಿಂದ ಅಂತ್ಯದವರೆಗೆ ಒಂದು ಕೋರ್ಸಿನಲ್ಲಿ ಮಾಡಲು ಸಾಧ್ಯವೇ ಇಲ್ಲ. ಆದುದರಿಂದ ಕೋರ್ಸನ್ನು ದಕ್ಷಿಣ ಭಾರತದ ಇತಿಹಾಸ ಎಂದು ವಿಭಜಿಸಲಾಗಿದೆ.

ಈ ವರ್ಷ ನೀವು ದಕ್ಷಿಣ ಭಾರತದ ಇತಿಹಾಸದ (ರಾಜಕೀಯ ಮತ್ತು ಸಾಂಸ್ಕೃತಿಕ) ಬಗ್ಗೆ ಅಧ್ಯಯನ ಮಾಡುವಿರಿ. ಇದು ದಕ್ಷಿಣ ಭಾರತದ ಪ್ರಾಚೀನ ಇತಿಹಾಸದಿಂದ ತಮಿಳು ಭೂಮಿಯ ಇತಿಹಾಸದವರೆಗೆ ಅಧ್ಯಯನವನ್ನು ಒಳಗೊಳ್ಳುತ್ತದೆ. ಹಾಗೆಯೇ ಈ ಕೋರ್ಸ್ ಭಕ್ತಿ ಚಳವಳಿಯನ್ನು ಪರಿಚಯಿಸುತ್ತದೆ. ಕರಾಮುವಿ ನಿಮಗೆ ನೀಡುವ ಅಧ್ಯಯನ ಸಾಮಗ್ರಿಯು ದಕ್ಷಿಣ ಭಾರತದ ಇತಿಹಾಸವನ್ನು ಅರ್ಥಮಾಡಿಕೊಳ್ಳಲು ನೆರವಾಗುವುದಲ್ಲದೆ ನಿಮ್ಮ ಜ್ಞಾನವನ್ನೂ ಹೆಚ್ಚಿಸುತ್ತದೆ.

ನೀವು ಈ ಅಧ್ಯಯನವನ್ನು ಆನಂದಿಸುತ್ತೀರಿ ಎಂದು ಆಶಿಸುತ್ತ ನಿಮಗೆ ಶುಭ ಹಾರೈಸುತ್ತೇನೆ.

**ಡಾ. ಎನ್.ಪಿ. ಸುಜಾತ**
ಮುಖ್ಯಸ್ಥರು
ಪುರಾತನ ಇತಿಹಾಸ ಮತ್ತು ಪುರಾತತ್ವಶಾಸ್ತ್ರ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು– 570 006

# ಘಟಕ–1: ದಕ್ಷಿಣ ಭಾರತ ಇತಿಹಾಸದ ಆಧಾರಗಳು

1.0 ಉದ್ದೇಶಗಳು
1.1 ಪೀಠಿಕೆ
1.2 ಸಾಹಿತ್ಯ ಆಧಾರಗಳು
1.3 ದೇಶೀಯ ಆಧಾರಗಳು
1.4 ಸಂಗಂ ಕಾಲದ ಸಾಹಿತ್ಯಾಧಾರಗಳು
1.5 ಶಾತವಾಹನರ ಕಾಲದ ಸಾಹಿತ್ಯಾಧಾರಗಳು
1.6 ಗಂಗರ ಕಾಲದ ಸಾಹಿತ್ಯಾಧಾರಗಳು
1.7 ಪಲ್ಲವರ ಕಾಲದ ಸಾಹಿತ್ಯಾಧಾರಗಳು
1.8 ಬಾದಾಮಿ ಚಾಲುಕ್ಯರ ಕಾಲದ ಸಾಹಿತ್ಯಾಧಾರಗಳು
1.9 ರಾಷ್ಟ್ರಕೂಟರ ಕಾಲದ ಸಾಹಿತ್ಯಾಧಾರಗಳು
1.10 ಕಲ್ಯಾಣಿ ಚಾಲುಕ್ಯರ ಕಾಲದ ಸಾಹಿತ್ಯಾಧಾರಗಳು
1.11 ಸೆವುಣರ ಕಾಲದ ಸಾಹಿತ್ಯಾಧಾರಗಳು
1.12 ಚೋಳರ ಕಾಲದ ಸಾಹಿತ್ಯಾಧಾರಗಳು
1.13 ಹೊಯ್ಸಳರ ಕಾಲದ ಸಾಹಿತ್ಯಾಧಾರಗಳು
1.14 ವಿದೇಶಿ ಸಾಹಿತ್ಯಾಧಾರಗಳು
1.15 ಪುರಾತತ್ವ ಆಧಾರಗಳು
    1.15.1 ಭೂ ಉತ್ಖನನ
    1.15.2 ಶಾಸನಗಳು
    1.15.3 ನಾಣ್ಯಗಳು
    1.15.4 ಸ್ಮಾರಕಗಳು
1.16 ಸ್ವ ಪರೀಕ್ಷೆ ಪ್ರಶ್ನೆಗಳು
1.17 ಅಧ್ಯಯನದ ಗ್ರಂಥಗಳು
1.18 ಪ್ರಮುಖ ಪದಗಳು

## ಘಟಕ–1: ದಕ್ಷಿಣ ಭಾರತ ಇತಿಹಾಸದ ಆಧಾರಗಳು

### 1.0 ಉದ್ದೇಶಗಳು

ದಕ್ಷಿಣ ಭಾರತದ ಇತಿಹಾಸದ ಆಧಾರಗಳನ್ನು ಕುರಿತು ಅಧ್ಯಯನದ ಮೂಲಕ ನಿಮಗೆ ಪರಿಚಯಿಸಿ ಕೊಡುವುದು ಈ ಘಟಕದ ಉದ್ದೇಶವಾಗಿದೆ. ಈ ಘಟಕದ ಅಧ್ಯಯನದ ನಂತರ ನೀವು ಈ ಕೆಳಗಿನ ವಿಷಯಗಳನ್ನು ಕಲಿಯುವಿರಿ.

- ದಕ್ಷಿಣ ಭಾರತದ ಇತಿಹಾಸವನ್ನು ತಿಳಿಯಲು ಇರುವ
- ಸಾಹಿತ್ಯಾಧಾರಗಳು, ದೇಶೀಯ ಆಧಾರಗಳ ಬಗ್ಗೆ ತಿಳಿದುಕೊಳ್ಳುವಿರಿ
- ದಕ್ಷಿಣ ಭಾರತವನ್ನಾಳಿದ ಹಲವಾರು ರಾಜಮನೆತಗಳ ಬಗ್ಗೆ ಸಾಹಿತ್ಯಾಧಾರ, ಶಾಸನಧ್ಯಾಯಗಳ ಬಗ್ಗೆ ತಿಳಿದುಕೊಳ್ಳುವಿರಿ.
- ದಕ್ಷಿಣ ಭಾರತದ ಬಗ್ಗೆ ಇರುವ ವಿದೇಶಿ ಬರಹಗಾರರ ಬರವಣಿಗೆಗಳ ಬಗ್ಗೆ ತಿಳಿದುಕೊಳ್ಳುವಿರಿ.

### 1.1 ಪೀಠಿಕೆ

"ಆಧಾರಗಳಿಲ್ಲದೆ ಇತಿಹಾಸವಿಲ್ಲ". ಆದರೆ ಆಧಾರಗಳೆಲ್ಲವೂ ಇತಿಹಾಸವಲ್ಲ. ಆಧಾರಗಳೇ ಇತಿಹಾಸದ ಉಸಿರು. ಚರಿತ್ರೆಯ ಅಧ್ಯಯನ ಮತ್ತು ರಚನೆ ಮೂಲಾಧಾರಗಳನ್ನು ಅವಲಂಬಿಸಿದೆ. ಹೀಗಾಗಿ ಯಾವುದೇ ದೇಶದ ಚರಿತ್ರೆಯನ್ನು ರಚಿಸಬೇಕಾದರೆ ಆಧಾರಗಳ ಅಧ್ಯಯನ ಅತ್ಯಂತ ಅವಶ್ಯಕ. ಏಕೆಂದರೆ ಆಧಾರ ಎಂಬುದು ಆರಂಭ ಬಿಂದುವಾದರೆ, ಸತ್ಯಾನ್ವೇಷಣೆ ಚರಿತ್ರಕಾರನ ಗುರುತರ ಜವಾಬ್ದಾರಿಯಾಗಿರುತ್ತದೆ. ಆದ್ದರಿಂದಲೇ "ಆಧಾರಗಳಿಲ್ಲದೆ ಇತಿಹಾಸವಿಲ್ಲ" ಎಂದು ಹೇಳಲಾಗಿದೆ. ಭಾರತೀಯ ಇತಿಹಾಸದ ಆಕರಗಳು ಅತ್ಯಂತ ಪ್ರಾಚೀನ ಕಾಲದಿಂದ ಹಿಡಿದು ಕ್ರಿ.ಶ.12ನೇ ಶತಮಾನದ ಅಂತ್ಯದವರೆಗೆ ಮತ್ತು 13ನೇ ಶತಮಾನದಿಂದ 18ನೇ ಶತಮಾನದವರೆಗೆ ಹಾಗೂ ತರುವಾಯದ ಅವಧಿಗಳಲ್ಲಿ ಸಾಕಷ್ಟು ವ್ಯತ್ಯಾಸವನ್ನು ಹೊಂದಿವೆ. ಆದರೆ ಪ್ರಾಚೀನ ಭಾರತದ ಚರಿತ್ರೆಯ ರಚನೆಗೆ ಐತಿಹಾಸಿಕ ಕೃತಿಗಳ ಕೊರತೆ ಕಂಡುಬರುವಂತೆ, ದಕ್ಷಿಣ ಭಾರತದ ಚರಿತ್ರೆಯ ರಚನೆಗೆ ಐತಿಹಾಸಿಕ ಆಧಾರಗಳ ಕೊರತೆ ಎದ್ದು ಕಾಣುವುದರಿಂದ ಭಾರತೀಯರಲ್ಲಿ ಐತಿಹಾಸಿಕ ಪ್ರಜ್ಞೆ ಅಷ್ಟಾಗಿ ಇರಲಿಲ್ಲವೆಂಬುದು ಆಲ್ಬರೂನಿ, ಪ್ರೊ.ಮ್ಯಾಕ್ಸ್ ಮುಲ್ಲರ್, ಡಾ.ಫ್ಲೀಟ್ ಮತ್ತು ಹ್ಯೂಯೆನ್‌ತ್ಸಾಂಗ್‌ರವರ ಅಭಿಮತವಾಗಿದೆ. ಆದರೆ ಇವರ ಹೇಳಿಕೆಗಳು ಸ್ವಲ್ಪಮಟ್ಟಿಗೆ ಸತ್ಯವೆಂದು ಕಂಡುಬಂದರೂ ಸಂಪೂರ್ಣ ಸತ್ಯವಲ್ಲ. ಏಕೆಂದರೆ ಭಾರತಿಯರಿಗೆ ಐತಿಹಾಸಿಕ ಪ್ರಜ್ಞೆಯೇ ಇರಲಿಲ್ಲವೆಂದು ಹೇಳುವುದು ಘೋರ ಅಪರಾಧವಾಗುತ್ತದೆ. ಕೆಲವು ಧಾರ್ಮಿಕ ಕೃತಿಗಳು, ಮತೀಯ ಸಂಪ್ರದಾಯಗಳ ಬರಹಗಳು ಹಾಗೂ ಶಾಸನಗಳಲ್ಲಿ ಐತಿಹಾಸಿಕ ಪ್ರಜ್ಞೆಗೆ ಆಧಾರ ದೊರಕುತ್ತದೆ. ಉದಾ. ವೇದಗಳು (10 ರಾಜರ ಯುದ್ಧದ ಉಲ್ಲೇಖವಿದೆ), ಬೌದ್ಧ, ಜೈನ ಬರವಣಿಗೆಗಳು, ಪುರಾಣಗಳು, ಬಾಣನ ಹರ್ಷಚರಿತೆ, ಕಲ್ಹಣನ ರಾಜತರಂಗಿಣಿ, ಬಿಲ್ಹಣನ ವಿಕ್ರಮಾಂಕ ದೇವಚರಿತೆ, ಅಶೋಕನ ಶಾಸನಗಳು. ಈ ಕೃತಿಗಳು ಮತ್ತು ಶಾಸನಗಳಲ್ಲಿ ಭಾರತೀಯರು ತಮಗೆ ಐತಿಹಾಸಿಕ ಪ್ರಜ್ಞೆ ಇತ್ತು ಎಂಬುದನ್ನು ತೋರಿಸಿ ಕೊಟ್ಟಿದ್ದಾರೆ. ಒಂದು ವೇಳೆ ನಮ್ಮ ಭಾರತಮಾತೆ ಹೆರೋಡೋಟಸ್, ಥುಸಿಡೈಟಸ್ ಮತ್ತು ರೋಮ್‌ನ ಲಿವಿಯಂತಹ ಚರಿತ್ರಾಕಾರರಿಗೆ ಜನ್ಮ ನೀಡಿದ್ದರೆ ನಮ್ಮ ಭಾರತದ ಚರಿತ್ರೆಯೇ ಬೇರೆಯಾಗುತ್ತಿತ್ತು. ಆದರೂ ಕಲ್ಹಣ ಮತ್ತು ಕೌಟಿಲ್ಯನಂತಹ ವ್ಯಕ್ತಿಗಳಿಗೆ ಜನ್ಮ ನೀಡಿರುವುದು ನಿಜಕ್ಕೂ ಸಮಾಧಾನಕರ ಅಂಶವಾಗಿದೆ. ಒಟ್ಟಿನಲ್ಲಿ ಈವರೆಗೆ ದೊರೆತಿರುವ ಆಕರಗಳನ್ನು ಗಣನೆಗೆ ತೆಗೆದುಕೊಂಡು ದಕ್ಷಿಣ ಭಾರತದ ಚರಿತ್ರೆಯ ಭವ್ಯಭವನವನ್ನು ನಿರ್ಮಿಸುವುದು ಚರಿತ್ರಕಾರನ ಗುರುತರ ಜವಾಬ್ದಾರಿಯಾಗಿರಬೇಕು.

ಇಲ್ಲದಿದ್ದರೆ ಚರಿತ್ರೆ ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತದೆ ಹಾಗೂ ಹಾಸ್ಯಕೆ ಎಡೆ ಮಾಡಿಕೊಡುತ್ತದೆ. ಆಧಾರಗಳನ್ನು ಅಧ್ಯಯನದ ದೃಷ್ಟಿಯಿಂದ ಸಾಹಿತ್ಯಾಧಾರಗಳು ಮತ್ತು ಪುರಾತತ್ವ ಆಧಾರಗಳು ಎಂಬುದಾಗಿ ವಿಭಜಿಸಲಾಗಿದೆ.

## 1.2 ಸಾಹಿತ್ಯ ಆಧಾರಗಳು

ಪುರಾತತ್ವ ಸಂಶೋಧನೆಗೆ ಪ್ರಥಮ ಸ್ಥಾನವನ್ನಿತ್ತರೂ ಸಾಹಿತ್ಯಾಧಾರಗಳ ಬೆಲೆಯನ್ನು ಕಡೆಗಾಣಿಸಲಾಗದು. ಶಾಸನಗಳೂ, ನಾಣ್ಯಗಳು ಮತ್ತು ಶಿಲ್ಪಗಳನ್ನು ವಿಮರ್ಶಿಸುವ ಪುರಾತತ್ವ ಸಂಶೋಧಕರಿಗೆ ಸಾಹಿತ್ಯ ಜ್ಞಾನವು ಅತ್ಯವಶ್ಯಕವಾಗಿದೆ. ಸಾಹಿತ್ಯ ಮತ್ತು ಪುರಾತತ್ವ ಆಧಾರಗಳೆರಡೂ ಪರಸ್ಪರಾವಲಂಬಿಗಳಾಗಿವೆ. ಆದುದರಿಂದ ದಕ್ಷಿಣ ಭಾರತದ ಚರಿತ್ರೆಯ ರಚನೆಯಲ್ಲಿ ಸಾಹಿತ್ಯಾಧಾರಗಳ ಪಾತ್ರ ಪುರಾತತ್ವ ಆಧಾರಗಳಷ್ಟೇ ಮಹತ್ವದ್ದು. ಕ್ರಿ.ಪೂ.ಎರಡನೇ ಶತಮಾನದಲ್ಲಿ ನಾಗಾರ್ಜುನಕೊಂಡದ ಶಿಲ್ಪಕಲೆಯಲ್ಲಿ ಬರಹಗಾರನ ಚಿತ್ರವನ್ನು ಕಾಣಬಹುದಾಗಿದೆ. ಪ್ರಾಯಶಃ ಇದು ಬರವಣಿಗೆಯ ಕಲೆಯನ್ನು ಸೂಚಿಸುವ ಪ್ರಥಮ ಚಾರಿತ್ರಿಕ ದಾಖಲೆ. ಭಾರತದಲ್ಲಿ ಬರೆಯಲು ಭೂರ್ಜಪತ್ರ ಹಾಗೂ ಓಲೆ ಗರಿಗಳನ್ನು ಬಳಸಿದರೆ, ಮಧ್ಯ ಏಷ್ಯಾದಲ್ಲಿ ಕುರಿಯ ಚರ್ಮ ಮತ್ತು ಮರದ ಹಲಗೆಗಳನ್ನು ಬಳಸುತ್ತಿದ್ದರು. ಚರ್ಮ ಹಾಗೂ ಹಲಗೆಗಳ ಬರಹವನ್ನು ಶಾಸನ ಎಂದು ಕರೆಯುತ್ತಾರೆ. ತಾಳೆಗರಿ ಹಸ್ತಪ್ರತಿಗಳು ದಕ್ಷಿಣ ಭಾರತದಲ್ಲಿ ಅಧಿಕ ಸಂಖ್ಯೆಯಲ್ಲಿ ದೊರೆತಿವೆ. ಇವುಗಳನ್ನು ಮ್ಯುಸಿಯಂಗಳಲ್ಲೂ ಮತ್ತು ಗ್ರಂಥಭಂಡಾರಗಳಲ್ಲೂ ಸುರಕ್ಷಿತವಾಗಿ ಕಾಪಾಡಲಾಗಿದೆ.

ಪ್ರಾಚೀನ ಭಾರತದ ಚರಿತ್ರೆಯನ್ನು ರಚಿಸಲು ನಮ್ಮ ದೇಶದಲ್ಲಿರುವ ವಿವಿಧ ಭಾಷೆಗಳ ಸಾಹಿತ್ಯ ಕೃತಿಗಳನ್ನೆಲ್ಲಾ ವಿಮರ್ಶಿಸಬೇಕಾಗಿದೆ. ಇಂತಹ ಅಪಾರವಾದ ಸಾಹಿತ್ಯ ಆಕರಗಳನ್ನು ದೇಶೀಯ ಸಾಹಿತ್ಯಾಧಾರಗಳು ಮತ್ತು ವಿದೇಶಿ ಬರವಣಿಗೆಗಳು ಎಂಬುದಾಗಿ ವಿಂಗಡಿಸಬಹುದು.

## 1.3 ದೇಶೀಯ ಸಾಹಿತ್ಯಾಧಾರಗಳು

ವೇದಗಳನ್ನು "ಖಿಜ ಇಚಿಡಿಟುಥಿಣ ಖಣಜಿಡಿಚಿಡಿಥಿ ಒಂಟಿಣಟಜಿಟಣ" ಎಂದು ಪಾಶ್ಚಾತ್ಯರೇ ಅಂಗೀಕರಿಸಿದರೂ ಕೂಡ ದಕ್ಷಿಣ ಭಾರತದ ಚರಿತ್ರೆಯ ರಚನೆಗೆ ನೇರವಾಗಿ ಸಹಾಯ ನೀಡುವುದಿಲ್ಲ. ಆದರೆ ದಕ್ಷಿಣ ಭಾರತದ ಬಗ್ಗೆ ಕೆಲವು ವೇದಗಳು ಪ್ರಾಸಂಗಿಕವಾಗಿ ಹಲವು ವರ್ಣನೆಗಳನ್ನು ಒಳಗೊಂಡಿವೆ. ಋಗ್ವೇದದಲ್ಲಿ "ದಕ್ಷಿಣಪಥ" (ಮತ್ತಿನ ದಕ್ಷಿಣ ಪಥ) ಎಂಬ ದೇಶದ ಉಲ್ಲೇಖವಿದೆ. ಕೆಲವು ಬ್ರಾಹ್ಮಣಗಳು ಮತ್ತು ಅರಣ್ಯಕಗಳಲ್ಲೂ ಕನ್ನಡನಾಡಿನ ಕೆಲವಾರು ಊರುಗಳ ಹೆಸರುಗಳಿವೆ.

**ಪಾಣಿನೀಯ ಅಷ್ಟಾಧ್ಯಾಯ**

ಪಾಣಿನಿ ತನ್ನ ಅಷ್ಟಾಧ್ಯಾಯ ಕೃತಿಯಲ್ಲಿ ದಕ್ಷಿಣ ಭಾರತದ ರಾಜ್ಯಗಲನ್ನು ಹೆಸರಿಸಿದ್ದಾನೆ. ಉದಾ: ಕಳಿಂಗ ಮತ್ತು ನರ್ಮದಾ ನದಿಯ ಬಯಲಿನ ರಾಜ್ಯಗಲನ್ನು ತನ್ನ ಕೃತಿಯಲ್ಲಿ ಪ್ರಸ್ತಾಪಿಸಿದ್ದಾನೆ.

**ಬೌದ್ಧಗ್ರಂಥಗಳು**

ಪಾಳಿ, ಪ್ರಾಕೃತ ಮತ್ತು ಸಂಸ್ಕೃತ ಭಾಷೆಗಳಲ್ಲಿ ರಚಿತವಾದ ಬೌದ್ಧ ಗ್ರಂಥಗಳು ದಕ್ಷಿಣ ಭಾರತದ ಧಾರ್ಮಿಕ ಮತ್ತು ಸಾಮಾಜಿಕ ಸ್ಥಿತಿಗಳ ಬಗ್ಗೆ ತಿಳಿಸುತ್ತವೆ. ಹಾಗೆಯೇ ಮೌರ್ಯ ಚಕ್ರವರ್ತಿ ಅಶೋಕ ರಕ್ಷಿತನನ್ನು ಬನವಾಸಿಗೂ ಮತ್ತು ಮಹದೇವನನ್ನು ಮಹಿಷಮಂಡಲಕ್ಕೂ (ಮೈಸೂರು) ಬೌದ್ಧಮತ ಪ್ರಚಾರಕ್ಕಾಗಿ

ಕಳಿಸಿಕೊಟ್ಟನೆಂದು ತಿಳಿಸುತ್ತವೆ. ಹಾಗೆಯೇ ಗಂಗಾನದಿ ಬಯಲಿನಿಂದ ಗೋದಾವರಿ ನದಿ ಬಯಲಿನವರೆಗೆ ಭೂ ವ್ಯಾಪಾರ ಮಾರ್ಗಗಳ ಬಗ್ಗೆ ತಿಳಿಸುತ್ತವೆ.

**ಕೌಟಿಲ್ಯನ ಅರ್ಥಶಾಸ್ತ್ರ**

ಕ್ರಿ.ಪೂ.325–296ರ ಅವಧಿಯಲ್ಲಿ ರಚಿತವಾದ ಕೌಟಿಲ್ಯನ ಅರ್ಥಶಾಸ್ತ್ರದ ಹಸ್ತಪ್ರತಿಯನ್ನು ಕ್ರಿ.ಶ.1909ರಲ್ಲಿ ಮೈಸೂರಿನ ಶ್ಯಾಮಶಾಸ್ತ್ರೀ ಮೊದಲ ಬಾರಿಗೆ ಪತ್ತೆಹಚ್ಚಿ ಬೆಳಕಿಗೆ ತಂದರು. ನಂತರ ತಿರುವನಂತಪುರದ ಬಿ.ಗಣಪತಿಶಾಸ್ತ್ರೀರವರು ಈ ಗ್ರಂಥವನ್ನು ಸಂಪಾದಿಸಿ ಪ್ರಕಟಿಸಿದರು. ಕೌಟಿಲ್ಯನ ಅರ್ಥಶಾಸ್ತ್ರದ ದಕ್ಷಿಣ ಭಾರತದ ವ್ಯಾಪಾರದ ಪ್ರಗತಿಯನ್ನು ಕುರಿತು ಉಪಯುಕ್ತವಾದ ಮಾಹಿತಿಯನ್ನು ಒದಗಿಸಿಕೊಡುತ್ತದೆ. ದಕ್ಷಿಣ ಪಥದ ಮಾರ್ಗವು ಸುಪ್ರಸಿದ್ಧ ಗಣಿಗಳನ್ನು ಹಾದು ಹೋಗುತ್ತಿತ್ತು ಎಂದು ಕೌಟಿಲ್ಯನು ತಿಳಿಸುತ್ತಾನೆ. ದಕ್ಷಿಣದಲ್ಲಿ ಬಂಗಾರ, ಬೆಲೆಬಾಳುವ ಹರಳುಗಳು ಮತ್ತು ನಯವಾದ ಹತ್ತಿ ಬಟ್ಟೆಗಳನ್ನು ಉಲ್ಲೇಖಿಸಿರುವನು. ಅರ್ಥಶಾಸ್ತ್ರದಲ್ಲಿ ಮಧುರೈಗೂ ವಿಶಿಷ್ಟ ಹವಳವಾದ ಪಾಂಡ್ಯ ಕವಾಟಕ್ಕೂ ನಿಸ್ಸಂದಿಗ್ಧವಾದ ಪ್ರಸ್ತಾಪಗಳಿವೆ. ತಮಿಳು ದೇಶದೊಡನೆ ಕೌಟಿಲ್ಯನ ಪರಿಚಯ ಮೆಗಸ್ತನೀಸನಿಗಿದ್ದ ಪರಿಚಯಕ್ಕಿಂತಲೂ ಖಂಡಿತವಾಗಿಯೂ ಉತ್ತಮ ಮಟ್ಟದ್ದು ಇದ್ದಿರಲೇಬೇಕು.

**ಕಲ್ಪಸೂತ್ರ**

ಭದ್ರಬಾಹುವಿನಿಂದ ರಚಿತವಾದ ಕಲ್ಪಸೂತ್ರದಲ್ಲಿ ಚಂದ್ರಗುಪ್ತಮೌರ್ಯ ತನ್ನ ಆಳ್ವಿಕೆಯ ಕೊನೆಗಾಲದಲ್ಲಿ ಕರ್ನಾಟಕದ ಶ್ರವಣಬೆಳಗೊಳಕ್ಕೆ ಬಂದು ನೆಲಸಿ ಮೋಕ್ಷ ಗಳಿಸಿದ ವರ್ಣನೆ ಇದೆ. ಮೌರ್ಯ ಸಾಮ್ರಾಟರೆಂಬ ವಿಷಯದಲ್ಲಿ ಜಿಜ್ಞಾಸೆಯಿದ್ದಾಗ್ಯೂ ಕರ್ನಾಟಕ ಹಾಗೂ ದಕ್ಷಿಣ ಭಾರತದ ಹಲವಾರು ಸ್ಥಳಗಳು ಮತ್ತು ಇತರ ಸಂಗತಿಗಳು ಆ ವೇಳೆಗೆ ಉತ್ತರ ಭಾರತದಲ್ಲಿ ಪ್ರಸಿದ್ಧವಾಗಿದ್ದವೆಂಬ ಸಂಗತಿ ತಿಳಿದುಬರುತ್ತದೆ. ವಾತ್ಸಾಯನನ ಕಾಮಸೂತ್ರ ಮತ್ತು ವರಹಮಿಹಿರನ ಬೃಹತ್ ಸಂಹಿತೆಗಳಲ್ಲಿ ಬನವಾಸಿ, ಕರ್ನಾಟಕದ ಕುಂತಳ, ಮಹಿಷಕ ಎಂಬ ಪ್ರದೇಶಗಳ ಉಲ್ಲೇಖವಿದೆ.

**ಮೃಚ್ಛಕಟಿಕ**

ಶೂದ್ರಕನು ರಚಿಸಿದ ಸುಪ್ರಸಿದ್ಧ ಮೃಚ್ಛಕಟಿಕ ನಾಟಕದಲ್ಲೂ ಕರ್ನಾಟಕದ ಉಲ್ಲೇಖವಿದೆ. ಆದರೆ ಶೂದ್ರಕನೆಂದು ಹೇಳಲಾದ 10 ಅಂಕಗಳುಳ್ಳ ಮೃಚ್ಛಕಟಿಕದ ಕರ್ತೃತ್ವ ಮತ್ತು ಕಾಲದ ಬಗ್ಗೆ ಇಂದಿಗೂ ವಿವಾದಗಳಿವೆ. ಆದರೆ ಮೃಚ್ಛಕಟಿಕವು ಗಂಗರ ಕಾಲದಲ್ಲಿ ರಚಿತವಾಗಿರಬೇಕೆಂದು ಡಾ.ಸಾಲೆತ್ತೂರ್ ಊಹಿಸುತ್ತಾರೆ.

## 1.4 ಸಂಗಂ ಕಾಲದ ಸಾಹಿತ್ಯಾಧಾರಗಳು

ಪ್ರಾಚೀನ ತಮಿಳುನಾಡಿನ ಸಂಗಂ ಸಾಹಿತ್ಯ ಕೃತಿಗಳು ಆರಂಭದ ತಮಿಳುನಾಡಿನ ಇತಿಹಾಸ ರಚನೆಗೆ ಉಪಯುಕ್ತ ಮಾಹಿತಿಯನ್ನೊದಗಿಸುತ್ತವೆ.

**ಅಗತ್ತಿಯಮ್**

ಇದರ ಕರ್ತೃ ಅಗಸ್ತ್ಯಮುನಿ ಅಥವಾ ಅಗತ್ತಿಯರ್. ಇದು 3 ಭಾಗಗಳಲ್ಲಿದೆ. ಅಗತ್ತಿಯಮ್ ವ್ಯಾಕರಣ, ಜನಜೀವನದ ಬಗ್ಗೆ ಮಾಹಿತಿ ನೀಡುವ ಮೇರು ಕೃತಿ. ಆದರೆ ಅದೀಗ ಮಧ್ಯಕಾಲೀನ ವ್ಯಾಖ್ಯಾನಕಾರರ ವ್ಯಾಖ್ಯಾನಗಳಲ್ಲಿ ಅಲ್ಲೊಂದು ಇಲ್ಲೊಂದು ಉದಾಹೃತ ಸೂತ್ರಗಳಲ್ಲಿ ಮಾತ್ರ ಲಭ್ಯವಾಗಿದೆ.

**ತೊಲ್‌ಕಾಪ್ಪಿಯಂ**

ಅಗಸ್ತ್ಯಮುನಿಯ 12 ಶಿಷ್ಯರಲ್ಲೊಬ್ಬನಾದ ತೊಲ್‌ಕಾಪ್ಪಿಯರ್ ಇದರ ಲೇಖಕ. ತೊಲ್–ಕಾಪ್ಪಯಂ ಅತ್ಯಂತ ಪ್ರಾಚೀನ ವ್ಯಾಕರಣ ಗ್ರಂಥ. ಈ ಕೃತಿಯು ವಿಸ್ತಾರದಲ್ಲಿ ವಿಶ್ವಕೋಶದಂತಿದ್ದು, ತಮಿಳು ವ್ಯಾಕರಣ, ಕಾವ್ಯಮೀಮಾಂಸೆ, ಛಂದಸ್ಸು ಪ್ರಣಯ ಪುಷ್ಪಗಳ ಸಾಂಕೇತಿಕ ಅಲಂಕಾರ, ಸಮಕಾಲೀನ ರೂಢಿ ಸಂಪ್ರದಾಯಗಳ ಬಗ್ಗೆ ಮಾಹಿತಿ ನೀಡುತ್ತದೆ.

**ಪತ್ತುಪಾಟ್ಟು**

ಇದು 10 ವರ್ಣಾತ್ಮಕ ಕವನಗಳನ್ನು ಒಳಗೊಂಡಿದೆ. ಈ ಕವನಗಳು ಮುರುಗನ್, ಕಾಂಚಿಪುರದ ಸ್ಮರಣೆ, ಪಾಂಡ್ಯನಾಡು ಮತ್ತು ತಮಿಳುನಾಡಿನ ನಾಗರಿಕತೆಯ ಬಗ್ಗೆ ವಿವರನೆ ನೀಡುತ್ತವೆ.

**ಎಟ್ಟುತ್ತೊಗೈ**

ಇದರಲ್ಲಿ 8 ಕವನಸಂಕಲನಗಳಿವೆ. ಇದು ಪ್ರಾಚೀನ ತಮಿಳರ ಸಾಮಾಜಿಕ ಮತ್ತು ಧಾರ್ಮಿಕ ಚರಿತ್ರೆಯ ಬಗ್ಗೆ ಮಾಹಿತಿ ನೀಡುತ್ತದೆ ಹಾಗೂ ರಾಜನ ಪ್ರಣಯಗೀತೆಗಳ ಬಗ್ಗೆ ತಿಳಿಸುತ್ತದೆ.

**ಅಗನಾನೂರು**

ಇದು ಶಿವನನ್ನ ಕೊನ್ನೈ ಹೂಗಳನ್ನು ಧರಿಸುವವನೆಂದೂ, ಆತನ 3 ಕಣ್ಣುಗಳು ಮುಚ್ಚಿಕೊಳ್ಳುವುದಾಗಲಿ, ಮಿಟುಕಿಸುವುದಾಗಲೀ ಇಲ್ಲವೆಂದೂ, ಆತನ ಪತ್ನಿ ಉಮೆಯೆಂದೂ, ಆತನ ಆಯುಧ ಪರಶು ಎಂದೂ, ಜಟೆಯಲ್ಲಿ ಬಿದಿಗೆಯ ಚಂದ್ರನನ್ನು ಧರಿಸಿದನೆಂದೂ, ನೀಲಕಂಠನೆಂದೂ ಮತ್ತು ಆತನ ಕಾಲು ಮಣೆ ವಿಶ್ವವೆಂದು ವರ್ಣಿಸುತ್ತದೆ.

**ಪದಿನೇಳ್ ಕೀಲ್‌ಕ್ಕಣಕ್ಕು**

ಇದು 18 ನೀತಿ ಪರ ಕಾವ್ಯಗಳನ್ನು ಒಳಗೊಂಡಿದೆ. ಇದು ಧರ್ಮ, ನೀತಿ, ಕಾಮ ಆಡಳಿತದ ಬಗ್ಗೆ ಮಾಹಿತಿ ನೀಡುತ್ತದೆ.

**ತಿರುಕ್ಕುರಳ್**

18 ನೀತಿಪರ ಕಾವ್ಯಗಳಲ್ಲಿ ತಿರುವಳ್ಳವರ್‌ನ ತಿರುಕ್ಕುರಳ್ ಗ್ರಂಥ ವಿಶ್ವಪ್ರಸಿದ್ಧವಾದುದು. ತಮಿಳುನಾಡಿನ ಬೈಬಲ್ ಎಂದೆ ಪ್ರಸಿದ್ಧವಾದ ಈ ಕೃತಿಯಲ್ಲಿ 113 ಅಧ್ಯಾಯಗಳಿವೆ. ಇದು ರಾಜನೀತಿ, ನ್ಯಾಯ ವಿತರಣೆ ಹಾಗೂ ಧಾರ್ಮಿಕ ಮತ್ತು ಆರ್ಥಿಕ ಪರಿಸ್ಥಿತಿಗಳನ್ನು ವಿವರಿಸುತ್ತದೆ. ವೈದಿಕ ಧರ್ಮದ ಬಗ್ಗೆ ಉಲ್ಲೇಖಗಳಿವೆ. ಕುರುಳ್ ದಕ್ಷಿಣ ಭಾರತದ ಭಾಷೆಯೊಂದರಲ್ಲಿ ಪ್ರಪ್ರಥಮ ರಾಜ್ಯಶಾಸ್ತ್ರಕ್ಕೆ ಸಂಬಂಧಿಸಿದ ಅಪೂರ್ವ ಮಾಹಿತಿಗಳನ್ನೊಳಗೊಂಡ ಕೃತಿಯಾಗಿದೆ.

## 1.5 ಶಾತವಾಹನರ ಕಾಲದ ಸಾಹಿತ್ಯಾಧಾರಗಳು

**ಗಾಥಾ ಸಪ್ತಸತಿ**

ಗಾಥಾ ಸಪ್ತಸತಿ ಶಾತವಾಹನರ ಕಾಲದ ಒಂದು ಅತ್ಯುತ್ತಮ ಕೃತಿಯಾಗಿದೆ. ಶಾತವಾಹನರ 17ನೇ ರಾಜನಾದ ಹಾಲನು ಇದರ ಕರ್ತೃವಾಗಿದ್ದಾನೆ. ಈ ಕೃತಿಯು ಪೂರ್ಣವಾಗಿ ಲಭ್ಯವಾಗಿಲ್ಲ. ಕೆಲವು ಬರಹಗಾರರು ತಮ್ಮ ಗ್ರಂಥಗಳಲ್ಲಿ ವಿವರಿಸುವ ಕೆಲವು ಶ್ಲೋಕಗಳಿಂದ ಈ ಗ್ರಂಥದ ಬಗ್ಗೆ ಮಾಹಿತಿ ಸಿಗುತ್ತದೆ. ಇದರಲ್ಲಿ ಕೆಲವು ಪದಗಳು ಕನ್ನಡ ಭಾಷೆಯವುಗಳಾಗಿವೆ ಎಂದು ಹೇಳಲಾಗಿದೆ. ಇದು ಪ್ರಾಕೃತ ಭಾಷೆಯ ಕೃತಿಯಾಗಿದ್ದು,

ಶಾತವಾಹನ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಚರಿತ್ರೆಯ ಮೇಲೆ ಬೆಳಕನ್ನು ಚೆಲ್ಲುತ್ತದೆ. ಹಾಗೆಯೇ ಬನವಾಸಿ, ಚಿತ್ರದುರ್ಗ ಮತ್ತು ಕೊಲ್ಲಾಪುರ ಪ್ರದೇಶಗಳ ಮೇಲೆ ಶಾತವಾಹನರು ಸಾರ್ವಭೌಮತ್ವವನ್ನು ಸ್ಥಾಪಿಸಿದರೆಂದು ಈ ಗ್ರಂಥದಿಂದ ತಿಳಿಯಬಹುದಾಗಿದೆ. ಈ ಕೃತಿ ಶಿವ ಮತ್ತು ಗೌರಿಯ ಸ್ತೋತ್ರದಿಂದ ಆರಂಭವಾಗುವುದರಿಂದ ಶಾತವಾಹನರ ಕಾಲದಲ್ಲಿ ಶೈವಧರ್ಮ ಆಚರಣೆಯಲ್ಲಿದ್ದುದನ್ನು ತಿಳಿಸುತ್ತದೆ. ಇದರಲ್ಲಿ ಶೃಂಗಾರ, ಪ್ರೇಮ ಸನ್ನಿವೇಶಗಳನ್ನು ನಿರೂಪಿಸುವ ಮತ್ತು ದಕ್ಷಿಣ ಭಾರತದ ಗ್ರಾಮೀಣ ಜೀವನದ ವಿವಿಧ ಮುಖಗಳನ್ನು ಚಿತ್ರಿಸುವ 700 ಪದ್ಯಗಳಿವೆ. ಬಾಣಭಟ್ಟ ತನ್ನ ಹರ್ಷಚರಿತೆಯಲ್ಲಿ ಹಾಲನ ಗಾಥಾಸಪ್ತಸತಿಯು ಒಂದು ಶ್ರೇಷ್ಠ ಗ್ರಂಥವೆಂದು ಪ್ರಶಂಸಿಸಿದ್ದಾನೆ.

- ಲೀಲಾವೈ ಗ್ರಂಥವು ಹಾಲನ ಪೂರ್ವ ದಖನ್ನಿನ ದಂಡೆಯಾತ್ರೆಗಳ ವಿವರಣೆ ನೀಡುತ್ತದೆ.
- ಕಥಾ ಸರಿತ್ಸಾಗರ, ಹಾಲನು ಸಮರ್ಥ ದೊರೆಯೂ, ಶ್ರೇಷ್ಠ ವಿದ್ವಾಂಸನು ಮತ್ತು ಕವಿಗಳ ಆಶ್ರಯದಾತನೂ ಆಗಿದ್ದು ಪ್ರಾಕೃತ ಹಾಗೂ ಸಂಸ್ಕೃತ ಸಾಹಿತ್ಯಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದನೆಂದು ತಿಳಿಸುತ್ತದೆ.
- ಗುಣಾಢ್ಯನ ಬ್ರಹತ್ ಕಥಾ ಮತ್ತು ಶರ್ವವರ್ಮನ ಕಾತಂತ್ರ್ಯ ವ್ಯಾಕರಣ ಗ್ರಂಥಗಳು ಶಾತವಾಹನರ ಚರಿತ್ರೆಯ ಮೇಲೆ ಬೆಳಕನ್ನು ಚೆಲ್ಲುತ್ತವೆ. ರಮ್ಯಕಥೆಗಳ ಸಂಗ್ರಹವಾಗಿರುವ ಬೃಹತ್ ಕಥಾ ಸಾಹಿತ್ಯ ಮತ್ತು ಮಹಾಭಾರತಗಳಿಗೆ ಸರಿಸಮವಾಗಿ ನಿಲ್ಲಬಲ್ಲ ಕೃತಿಯಾಗಿದೆ.

## 1.6 ಗಂಗರ ಕಾಲದ ಸಾಹಿತ್ಯಾಧಾರಗಳು

- ಲೋಕ ವಿಭಾಗ ಎಂಬ ಕೃತಿ ಗಂಗರು ಮತ್ತು ಪಲ್ಲವರ ಸಂಬಂಧದ ಬಗ್ಗೆ ವಿವರಣೆ ನೀಡುತ್ತದೆ.
- ಪೂಜ್ಯಪಾದನ 'ಶಬ್ದಾವತಾರ' ಎಂಬ ಗ್ರಂಥ ಗಂಗರ ಚರಿತ್ರೆಯ ಮೇಲೆ ಬೆಳಕನ್ನು ಚೆಲ್ಲುತ್ತದೆ.
- ಶ್ರೀ ಪುರುಷನ ಗಜಶಾಸ್ತ್ರ ಗಜಗಳನ್ನು ಪಳಗಿಸುವುದರ ಬಗ್ಗೆ ಮತ್ತು ಶ್ರೀಪುರುಷನು ಚರ್ಚಾ ಪ್ರಸಂಗಗಳಲ್ಲಿ ಆಸಕ್ತನಾಗಿದ್ದುದರ ಬಗ್ಗೆ ತಿಳಿಸುತ್ತದೆ.
- ಶಿವಮಾರನ ಗಜಾಷ್ಟಕ ಮತ್ತು ಸೇತುಬಂಧ ಎಂಬ ಕೃತಿಗಳು ಗಜವಿದ್ಯೆ, ಅಶ್ವವಿದ್ಯೆ ಮತ್ತು ಧನುರ್ವಿದ್ಯೆಗಳಲ್ಲೂ ಶಿವಮಾರನು ಕೃತ ಪರಿಶ್ರಮನಾಗಿದ್ದನು ಎಂಬುದಾಗಿ ತಿಳಿಸುತ್ತವೆ.
- ಚಾವುಂಡರಾಯನ ಚಾವುಂಡರಾಯಪುರಾಣ ಅಥವಾ ತ್ರಿಷಷ್ಟಿಲಕ್ಷಣ ಮಹಾಪುರಾಣವು ಗಂಗ ಸಂತತಿಯ ಕೊನೆಯ ರಾಜರ ಬಗ್ಗೆ ವಿವರಣೆ ನೀಡುತ್ತದೆ.

## 1.7 ಪಲ್ಲವರ ಕಾಲದ ಸಾಹಿತ್ಯಾಧಾರಗಳು

ಸಂಗಂ ಕಾಲದ ತರುವಾಯ ತಮಿಳುನಾಡಿನ ಇತಿಹಾಸವನ್ನು ರಚಿಸಲು ಪಲ್ಲವರ ಕಾಲದಲ್ಲಿ ಸೃಷ್ಟಿಯಾದ ಸಂಸ್ಕೃತ ಮತ್ತು ತಮಿಳು ಗ್ರಂಥಗಳು ಪ್ರಮುಖ ಸಾಹಿತ್ಯ ಆಕರಗಳಾಗಿವೆ.

- ಭಾರವಿಯ ಕಿರಾತರ್ಜುನೀಯವು 18 ಅಧ್ಯಾಯಗಳನ್ನು ಒಳಗೊಂಡು ಮಹಾಭಾರತದ ಕಥೆಯನ್ನು ಆಧರಿಸಿದೆ. ಭಾರವಿ ಪಲ್ಲವರ ಸಿಂಹ ವಿಷ್ಣುವಿನ ಆಸ್ಥಾನದಲ್ಲಿದ್ದನು. ಈತನ ಕೃತಿ ಅರ್ಜುನನು ಮಹೇಶ್ವರನಿಂದ ಪಾಶುಪತಾಸ್ತ್ರವನ್ನು ಪಡೆದ ಕಥೆಯ ಬಗ್ಗೆ ತಿಳಿಸುತ್ತದೆ. ಕ್ರಿ.ಶ.634ರ ಐಹೊಳೆ ಶಾಸನದಲ್ಲಿ ಕಾಳಿದಾಸನೊಂದಿಗೆ ಭಾರವಿಯ ಹೆಸರನ್ನು ಉಲ್ಲೇಖಿಸಿರುವುದರಿಂದ ಭಾರವಿಯ ಕಾಲವನ್ನು ಊಹಿಸುವುದು ಕಷ್ಟವಲ್ಲ.

- ದಂಡಿಯ ದಶಕುಮಾರ ಚರಿತೆ, ಕಾವ್ಯಾದರ್ಶ ಮತ್ತು ಅವಂತಿ ಸುಂದರ ಕಥಾ ಎಂಬ ಗ್ರಂಥಗಳು ಪಲ್ಲವರ ಕಾಲದ ಪ್ರಮುಖ ಸಾಹಿತ್ಯ ಆಕರಗಳಾಗಿವೆ.
- ಪಲ್ಲವ ಮಹೇಂದ್ರವರ್ಮನ ಮತ್ತವಿಲಾಸ ಪ್ರಹಸನ ಹಾಸ್ಯ ಪ್ರಧಾನವಾದ ಕೃತಿಯಾಗಿದ್ದು, ಆಗಿನ ಕಾಲದ ಸಾಮಾಜಿಕ ಲೋಪದೋಷಗಳ ಬಗ್ಗೆ ವಿವರಣೆ ನೀಡುತ್ತದೆ. ಹಾಗೆಯೇ ಈ ಕೃತಿಯಲ್ಲಿ ಕಾಪಾಲಿಕ, ಪಾಶುಪತ ಮುಂತಾದ ಶೈವ ಒಳಪಂಗಡಗಳ ಉಲ್ಲೇಖವಿದೆ. ಮಹೇಂದ್ರವರ್ಮ ತನ್ನ ಕೃತಿಯಲ್ಲಿ ಬೌದ್ಧರನ್ನು ವ್ಯಂಗ್ಯವಾಗಿ ಚಿತ್ರಿಸಿದ್ದಾನೆ.
- ಮಾಮೂಲರ್ ಕವಿಯ ತಿರುಮಂದಿರಮ್, ತಿರುಮಲೆ ಶೈ ಆಳ್ವಾರರ ನನ್‌ಮುಖತಿರುವಂದಾಡಿ ಮತ್ತು ತಿರುಚ್ಚಂದವಿರುತ್ತನ್ ಗ್ರಂಥಗಳು ಅಂದಿನ ದಕ್ಷಿಣ ಭಾರತದ ಧಾಮಿಕ ಸ್ಥಿತಿಗತಿಗಳನ್ನು ಪ್ರತಿಬಿಂಬಿಸುತ್ತವೆ.

## 1.8 ಬಾದಾಮಿ ಚಾಲುಕ್ಯರ ಕಾಲದ ಸಾಹಿತ್ಯಾಧಾರಗಳು

- ಕೌಮುದಿ ಮಹೋತ್ಸವ
  ಬಾದಾಮಿ ಚಾಲುಕ್ಯರ ಕಾಲದ ಏಕೈಕ ದೇಶೀಯ ಕೃತಿ ಎಂದರೆ ಕೌಮುದಿಮಹೋತ್ಸವ. ಇಮ್ಮಡಿ ಪುಲಕೇಶಿಯ ಸೊಸೆ ಮತ್ತು ಚಂದ್ರಾದಿತ್ಯನ ರಾಣಿ ವಿಜಯ ಭಟ್ಟಾರಿಕೆ ಇದರ ಕರ್ತೃ ಎಂದೂ ಊಹಿಸಲಾಗಿದೆ. ಇದೊಂದು ಸಂಸ್ಕೃತ ನಾಟಕ ಗ್ರಂಥ. ಇದು ಸ್ವಲ್ಪಮಟ್ಟಿಗೆ ಚಾಲುಕ್ಯರ ಇತಿಹಾಸದ ಮೇಲೆ ಬೆಳಕನ್ನು ಚೆಲ್ಲುತ್ತದೆ. ಇದರಲ್ಲಿ ವಿಜಯ ಭಟ್ಟಾರಿಕೆ ಪಾಟಲಿಪುತ್ರದ ರಾಜಕುಮಾರ ಕಲ್ಯಾಣವರ್ಮ ಮತ್ತು ಮಥುರಾದ ರಾಜಕುಮಾರಿ ಕೀರ್ತಿಮತಿ ಇವರ ವಿವಾಹವನ್ನು ವರ್ಣಿಸಿದ್ದಾಳೆ. ಈಕೆಯ ಬರಹಗಳನ್ನು ಗಮನಿಸಿದ ರಾಜಶೇಖರನಂತಹ ವಿದ್ವಾಂಸರು ವಿಜಯ ಭಟ್ಟಾರಿಕೆಯನ್ನು "ಕರ್ನಾಟಕದ ಸರಸ್ವತಿ" ಎಂದಿದ್ದಾರೆ. ಕಾಳಿದಾಸನ ನಂತರ ವೈದರ್ಭಿ ಶೈಲಿಯನ್ನು ಪರಿಣಾಮಕಾರಿಯಾಗಿ ಬಹು ಜಾಣ್ಮೆಯಿಂದ ಉಪಯೋಗಿಸಿದವಳು ಇವಳೊಬ್ಬಳೆ ಆಗಿದ್ದಾಳೆಂದು ತಿಳಿದುಬಂದಿದೆ. ವಜ್ಜಿಕಾ ಇವಳ ಇನ್ನೊಂದು ಹೆಸರಾಗಿದೆ.
- ಬಾಣಭಟ್ಟರ ಹರ್ಷಚರಿತೆಯಲ್ಲಿ ಬಾದಾಮಿ ಚಾಲುಕ್ಯರ ಪ್ರಸಿದ್ಧ ಅರಸನಾದ ಎರಡನೆಯ ಪುಲಕೇಶಿಯ ಪ್ರಸ್ತಾಪವಿದೆ.
- ದಂಡಿ ಮತ್ತು ಬಿಲ್ಹಣನ ಕೃತಿಗಳು ಕೂಡ ಬಾದಾಮಿ ಚಾಲುಕ್ಯರ ಇತಿಹಾಸದ ಮೇಲೆ ಬೆಳಕನ್ನು ಚೆಲ್ಲುತ್ತವೆ.

## 1.9 ರಾಷ್ಟ್ರಕೂಟರ ಕಾಲದ ಸಾಹಿತ್ಯಾಧಾರಗಳು

ರಾಷ್ಟ್ರಕೂಟರ ಕಾಲದಲ್ಲಿ ರಚಿತವಾದ ಅನೇಕ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ರಾಷ್ಟ್ರಕೂಟರ ಚರಿತ್ರೆಯ ಮೇಲೆ ಬೆಳಕನ್ನು ಚೆಲ್ಲುತ್ತವೆ.

- **ಕವಿರಾಜಮಾರ್ಗ**
  ಕ್ರಿ.ಶ.9ನೇ ಶತಮಾನದಲ್ಲಿ ರಚಿತವಾದ ಕನ್ನಡ ಪ್ರಪ್ರಥಮ ಕೃತಿಯಾದ ನೃಪತುಂಗನ "ಕವಿರಾಜಮಾರ್ಗ" ಕರ್ನಾಟಕದ ಸೀಮಾರೇಖೆಯು ಉತ್ತರದಲ್ಲಿ ಗೋದಾವರಿಯಿಂದ ದಕ್ಷಿಣದಲ್ಲಿ ಕಾವೇರಿ ನದಿಯವರೆಗೂ ವಿಸ್ತರಿಸಿತ್ತೆಂದು ತಿಳಿಸುತ್ತದೆ. ಹಾಗೆಯೇ ಭಾಷಾ ಬೆಳವಣಿಗೆ ಮತ್ತು ಆ ಕಾಲದ ಜನಜೀವನದ ಮೇಲೆ ಬೆಳಕನ್ನು ಚೆಲ್ಲುತ್ತದೆ. ಕನ್ನಡ ಸಾಹಿತ್ಯ ಇತಿಹಾಸದ ಪರಂಪರೆಗೆ ಕವಿರಾಜಮಾರ್ಗವು ನಾಂದಿಯಾಗಿದೆ.

ಇದರಲ್ಲಿ ನೃಪತುಂಗನ ಅಭಿಮಾನ, ಔದಾರ್ಯಗಳ ಚಿತ್ರಣವಿದೆ ಮತ್ತು ಸಮಕಾಲೀನ ರಾಜಕೀಯ ವಿದ್ಯಮಾನಗಳನ್ನು ಅರಿಯಲು ಉಪಯುಕ್ತವಾಗಿದೆ. ಈ ಗ್ರಂಥವು ವಿಮಲ, ನಾಗಾರ್ಜುನ, ಜಯಬಂಧು ಮುಂತಾದ ಪ್ರಾಚೀನ ಕನ್ನಡ ಕವಿಗಳನ್ನು ಮತ್ತು ಅವರ ಕೃತಿಗಳನ್ನು ಉಲ್ಲೇಖಿಸಿದೆ. ಒಟ್ಟಿನಲ್ಲಿ ಚಾರಿತ್ರಿಕ ದೃಷ್ಟಿಯಿಂದ ಕವಿರಾಜಮಾರ್ಗವು ಅತಿ ಮಹತ್ವದ್ದಾಗಿದೆ. ಈ ಕೃತಿ "ಭಾರತೀಯ ಸಂಸ್ಕೃತಿಗೆ ಸಾವಿರ ವರ್ಷದ ಹಿಂದೆ ಹಿಡಿದ ಕನ್ನಡಿಯಂತಾಗಿರುತ್ತದೆ" ಎಂದು ರಂ.ಶ್ರೀ.ಮುಗಳಿ ಹೇಳಿದ್ದಾರೆ.

- ಅಮೋಘವರ್ಷನ "ಪ್ರಶ್ನೋತ್ತರ ರತ್ನಮಾಲ" ಸಂಸ್ಕೃತದಲ್ಲಿ ಬರೆದ ಒಂದು ಪುಟ್ಟ ಕಾವ್ಯ. ಇದು ನೃಪತುಂಗ ಜೈನತತ್ವಗಳ ಮನನದಿಂದ ರಾಜ್ಯ ತ್ಯಜಿಸಿದನೆಂಬುದನ್ನು ತಿಳಿಸುತ್ತದೆ.
- ಸೋಮದೇವ ಸೂರಿಯ "ನೀತಿ ವಾಕ್ಯಾಮೃತ" ಎಂಬ ಗ್ರಂಥವು ರಾಷ್ಟ್ರಕೂಟರ ಬಗ್ಗೆ ವಿವರಣೆ ನೀಡುತ್ತದೆ.
- ಕನ್ನಡ ಸಾಹಿತ್ಯ ರಂಗದಲ್ಲಿ ಅಮರ ಕೃತಿಗಳಾದ ಪಂಪನ ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯಗಳು ರಾಷ್ಟ್ರಕೂಟರ ಸಾಮಂತ ರಾಜ ಅರಿಕೇಸರಿ ಮತ್ತು ಆತನ ಉತ್ತರಾಧಿಕಾರಿಗಳ ಬಗ್ಗೆ ಮಾಹಿತಿಯನ್ನು ನೀಡುತ್ತವೆ. ಪಂಪ ತನ್ನ ವಿಕ್ರಮಾರ್ಜುನ ವಿಜಯದಲ್ಲಿ ವೇಮುಲವಾಡದ ಎರಡನೇ ಅರಿಕೇಸರಿಯನ್ನು ಅರ್ಜುನನಿಗೆ ಹೋಲಿಸಿದ್ದಾನೆ. ಈ ಕೃತಿಯಲ್ಲಿ ರಾಷ್ಟ್ರಕೂಟರ ಅರಸ ನಾಲ್ಕನೇ ಗೋವಿಂದನನ್ನು ಅರಿಕೇಸರಿ ವಂಶಾವಳಿ ಸೋಲಿಸಿದ ವಿಚಾರ, ಜಾತಿಪದ್ಧತಿ, ಮಹಿಳೆಯರ ಸ್ಥಾನಮಾನದ ಬಗ್ಗೆ ಪ್ರಸ್ತಾಪವಿದೆ. ಹಾಗೆಯೇ ರಾಷ್ಟ್ರಕೂಟರ ಅರಸ ಮೂರನೇ ಇಂದ್ರನ ಉತ್ತರ ಭಾರತದ ವಿಜಯಗಳ ಬಗ್ಗೆ ವಿವರಣೆ ಇದೆ. ಪಂಪ ತನ್ನ ಕಾಲದ ಬನವಾಸಿ ನಾಡಿನ ಜನರನ್ನು "ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿ ನಿಂಪುಗಳ್ಗಾಗರಮಾದ ಮಾನಸ"ರೆಂದು ವರ್ಣಿಸಿದ್ದಾನೆ. ಹಾಗೆಯೇ ಇಮ್ಮಡಿ ಕೃಷ್ಣನ ಸಾಮಾಂತನಾದ ವೇಮುಲವಾಡನ ಚಾಲುಕ್ಯ "ಬದ್ದೆಗನು" ನಾಲ್ವತ್ತೆರಡರಿಕೆ ಕಾಳಗಗಳಲ್ಲಿ ಅರಿನೃಪರನ್ನು ಸೋಲಿಸಿ 'ಸೋಲದ ಗಂಡ'ನೆಂಬ ಹೆಸರನ್ನು ಗಳಿಸಿದವನೆಂದೂ, ಚಾಲುಕ್ಯ ಭೀಮನನ್ನು 'ಮೊಸಳೆಯ ಪಿಡಿವಂತಿರೆ' ನೀರೊಳೊತ್ತಿದವನೆಂದೂ ತಿಳಿಸಿದ್ದಾನೆ.
- ಉದ್ಯೋತನ ಸೂರಿಯ ಕುವಲಯಮಾಲ ಎಂಬ ಪ್ರಾಕೃತ ಕೃತಿ ರಾಷ್ಟ್ರಕೂಟರ ರಾಜ್ಯದೊಳಗೆ ವ್ಯಾಪಾರ ಚೆನ್ನಾಗಿ ಅಭಿವೃದ್ಧಿ ಹೊಂದಿತ್ತೆಂದು ತಿಳಿಸುತ್ತದೆ.
- ಶಿವಕೋಟ್ಯಾಚಾರ್ಯರ ವಡ್ಡಾರಾಧನೆ ಕೃತಿಯು ಜೈನಧರ್ಮ ಕರ್ನಾಟಕಕ್ಕೆ ಬಂದದ್ದರ ಬಗ್ಗೆ ತಿಳಿಸುತ್ತದೆ. ಹಾಗೆಯೇ ರಾಷ್ಟ್ರಕೂಟರ ಆಡಳಿತ, ವ್ಯಾಪಾರ, ರಾಣಿಯರ ಜೀವನ ಚರಿತ್ರೆ, ವಿದ್ಯಾಭ್ಯಾಸ ಮತ್ತು ಜಾತಿಪದ್ಧತಿಯ ಬಗ್ಗೆ ತಿಳಿಸುತ್ತದೆ.
- ಪೊನ್ನನ ಶಾಂತಿಪುರಾಣ, ಜಿನಾಕ್ಷರಮಾಲೆ, ದುರ್ಗಸಿಂಹನ ಪಂಚತಂತ್ರ, ತ್ರಿವಿಕ್ರಮನ ನಳಚಂಪು ಇವು ರಾಷ್ಟ್ರಕೂಟರ ಬಗ್ಗೆ ತಿಳಿಸುತ್ತವೆ.
- ರಾಜಶೇಖರನ ಬಾಲ ರಾಮಾಯಣ ಹಾಗೂ ವಿಧಿಶಾಲ ಭಂಜಕ ಎಂಬ ಕೃತಿಗಳು ರಾಷ್ಟ್ರಕೂಟರು ಉತ್ತರ ಭಾರತದ ಮೇಲೆ ಮಾಡಿದ ದಾಳಿಗಲನ್ನು ವಿವರಿಸುತ್ತವೆ.

## 1.10 ಕಲ್ಯಾಣಿ ಚಾಲುಕ್ಯರ ಕಾಲದ ಸಾಹಿತ್ಯಾಧಾರಗಳು

ಕಲ್ಯಾಣಿ ಚಾಲುಕ್ಯರ ಚಕ್ರವರ್ತಿಯಾದ ಸತ್ಯಾಶ್ರಯನ ಆಸ್ಥಾನ ಕವಿ ರನ್ನ ಅಜಿತಪುರಾಣ ಮತ್ತು ಗದಾಯುದ್ಧ ಎಂಬ ಕೃತಿಗಲನ್ನು ರಚಿಸಿದ್ದಾರೆ. ಅಜಿತಪುರಾಣ ಎರಡನೇ ತೈಲಪನ ಬಾಲ್ಯ ಜೀವನದ ಬಗ್ಗೆ ತಿಳಿಸುತ್ತದೆ. ಹಾಗೆಯೇ ಗದಾಯುದ್ಧ ಅಥವಾ ಸಾಹಸಭೀಮ ವಿಜಯ ಚಾಲುಕ್ಯ ಸಂತತಿಯ ಉಗಮ ಮತ್ತು

ಸತ್ಯಾಶ್ರಯನ ಸಾಧನೆಗಳ ಬಗ್ಗೆ ಬೆಳಕನ್ನು ಚೆಲ್ಲುತ್ತದೆ. ಇಲ್ಲಿ ಕವಿ ತನ್ನ ಆಶ್ರಯದಾತನನ್ನು ಭೀಮನಿಗೆ ಹೋಲಿಸಿದ್ದಾನೆ. ಕವಿ ವರ್ಣನೆಗಳಲ್ಲಿ ಇಡೀ ಮಹಾಭಾರತದ ಕತೆ ನಿರೂಪಿಸಿದ್ದಾನೆ. ಈ ತಂತ್ರವನ್ನು ಕವಿಯೇ 'ಸಿಂಹಾವಲೋಕನ' ಕ್ರಮವೆಂದು ಕರೆದಿದ್ದಾನೆ.

ಕೊಂಕಣದ ಮಾಂಡಲೀಕನಾದ ಶಿಲಾಹಾರ ಪರಾಜಿತನನ್ನು ಸೋಲಿಸಿ ಅವನ ರಾಜಧಾನಿಯನ್ನು ಸತ್ಯಾಶ್ರಯನು ಸುಟ್ಟನೆಂಬ ಸಂಗತಿಯನ್ನು ಮತ್ತು ಉತ್ತರದ ಗೂರ್ಜರರ ಮೇಲೆ ಮಾಡಿದ ದಂಡಯಾತ್ರೆಗಳಲ್ಲಿ ತನ್ನ ತಂದೆಯೊಂದಿಗೆ ಭಾಗವಹಿಸಿದ ವಿವರಗಳನ್ನು ಒದಗಿಸುತ್ತದೆ.

- ಬಿಲ್ಹಣನ ವಿಕ್ರಮಾಂಕದೇವಚರಿತ ಆರನೇ ವಿಕ್ರಮಾದಿತ್ಯನ ಜೀವನ ಮತ್ತು ಸಾಧನೆಗಳ ಬಗ್ಗೆ ತಿಳಿಸುತ್ತದೆ. 18 ಅಧ್ಯಾಯಗಳುಳ್ಳ ಬಿಲ್ಹಣನ ವಿಕ್ರಮಾಂಕ ದೇವಚರಿತೆ ಚಾಲುಕ್ಯ ವಂಶದ ಮೂಲ ವಿವರಣೆಯಿಂದ ಪ್ರಾರಂಭವಾಗಿ ಅತಿ ಬಲಶಾಲಿಗಳಾಗಿದ್ದ ರಾಷ್ಟ್ರಕೂಟ ದೊರೆಗಳಿಂದ ರಾಜ್ಯವನ್ನು ಸೆಳೆದುಕೊಂಡ ತೈಲಪನ ಬಗೆಯು ಸಹ ತಿಳಿಸುತ್ತದೆ. ಹಾಗೆಯೇ ಇಮ್ಮಡಿ ಸೋಮೇಶ್ವರನ ಅಸಮರ್ಥತೆಯನ್ನು ತಿಳಿದ ವಿಕ್ರಮಾದಿತ್ಯ ಶೌರ್ಯದಿಂದ ಸಿಂಹಾಸನವನ್ನು ಪಡೆದುಕೊಂಡ ವಿಷಯವನ್ನು ಮತ್ತು ಚೋಳರನ್ನು ಸೋಲಿಸಿದ ವಿವರಣೆಯನ್ನು ನೀಡುತ್ತದೆ.
- ಚಾಲುಕ್ಯ ಎರಡನೇ ಸೋಮೇಶ್ವರನ ಕಾಲದ ಯಶಸ್ತಿತಿಲಕ ಮತ್ತು ವಿಜ್ಞಾನೇಶ್ವರನ 'ಮಿತಾಕ್ಷರ' ಗ್ರಂಥಗಳು ಅಂದಿನ ಕಾಲದ ಸಾಮಾಜಿಕ ವ್ಯವಸ್ಥೆ ಹಾಗೂ ನ್ಯಾಯ ನಿಬಂಧನೆಗೆ ಸಂಬಂಧಿಸಿದ ಮಾಹಿತಿಯನ್ನೊಳಗೊಂಡಿವೆ. ವಿಜ್ಞಾನೇಶ್ವರನ ಮಿತಾಕ್ಷರ ಈಗ ಪ್ರಚಲಿತವಾಗಿರುವ ಧರ್ಮ ಶಾಸ್ತ್ರಕ್ಕೆ ಇಂದಿಗೂ ಮಾತೃಕೆಯಾಗಿದೆ. ಆದ್ದರಿಂದಲೇ ಡಾ.ಪಿ.ವಿ.ಕಾಣೆರವರು ಧರ್ಮಶಾಸ್ತ್ರ ಗ್ರಂಥಗಳಲ್ಲಿ ಮಿತಾಕ್ಷರಕ್ಕೆ ವಿಶಿಷ್ಟ ಗೌರವ ಸ್ಥಾನವಿದೆ ಎಂದಿದ್ದಾರೆ.
- ಮೂರನೇ ಸೋಮೇಶ್ವರನ ಮಾನಸೋಲ್ಲಾಸ ಅಥವಾ ಅಭಿಲಷಿತ ಚಿಂತಾಮಣಿ ಒಂದು ಬೃಹತ್ ವಿಶ್ವಕೋಶದಂತಿದ್ದು ಸಮಕಾಲೀನ ಸಾಮಾಜಿಕ, ಧಾರ್ಮಿಕ ಸಂಗೀತ, ಭರತನಾಟ್ಯ ಮತ್ತು ರಾಜಕೀಯ ಸಿದ್ಧಾಂತಗಳ ಬೆಳವಣಿಗೆ ಮುಂತಾದ ವಿಚಾರಗಳ ಬಗ್ಗೆ ತಿಳಿಸುತ್ತದೆ.
- ಭಕ್ತಿಭಂಡಾರಿ ಬಸವೇಶ್ವರರ ಷಟ್ಸ್ಥಲವಚನ, ಶಿಖಾರತ್ನವಚನ, ಕಾಲಜ್ಞಾನ ವಚನ ಮತ್ತು ಮಂತ ಗೋಪ್ಯ ಕೃತಿಗಳು ಕಲ್ಯಾಣಿ ಕಳಚೂರರ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಗತಿಗಳ ಬಗ್ಗೆ ಮಾಹಿತಿ ನೀಡುತ್ತವೆ.

## 1.11 ಸೇವುಣರ ಕಾಲದ ಸಾಹಿತ್ಯಾಧಾರಗಳು

- ಕುಂತಳದ ಉತ್ತರ ಭಾಗದಲ್ಲಿ ರಾಜ್ಯ ಸ್ಥಾಪಿಸಿದ ಸೇವುಣರ ಆಸ್ಥಾನದಲ್ಲಿ ರಚಿತವಾದ ಹೇಮಾದ್ರಿಯ ಚತುರ್ವರ್ಗ ಚಿಂತಾಮಣಿ ಮತ್ತು ಸಾರಂಗ ದೇವನ ಸಂಗೀತ ರತ್ನಾಕರ ಗ್ರಂಥಗಳು ಆ ಕಾಲದ ಸಾಮಾಜಿಕ ಹಾಗೂ ಸಂಗೀತಕ್ಕೆ ಸಂಬಂಧಿಸಿದ ವರ್ಣನೆಗಳನ್ನೊಳ–ಗೊಂಡಿವೆ.
- ಬಿಲ್ಹಣನ ಸೂಕ್ತಿ ಮುಕ್ತಾವಳಿ, ಸೋಮೇಶ್ವರನ ಕೀರ್ತಿಕೌಮುದಿ, ಏಕಮ್ರನಾಥನ ಪ್ರತಾಪಚರಿತಮು ಮತ್ತು ಸಿದ್ದೇಶ್ವರ ಚರಿತಮು ಹಾಗೂ ಕಮಲ ಭವನನ ಶಾಂತೀಶ್ವರ ಪುರಾಣಗಳು ಸೇವುಣರ ಇತಿಹಾಸದ ಬಗ್ಗೆ ಮಾಹಿತಿಯನ್ನು ನೀಡುತ್ತವೆ.

## 1.12 ಚೋಳರ ಕಾಲದ ಸಾಹಿತ್ಯಾಧಾರಗಳು

ಚೋಳ ಸಾರ್ವಭೌಮತ್ವದ ಸ್ಥಾಪನೆಯೊಂದಿಗೆ ತಮಿಳು ಮಧ್ಯಕಾಲೀನ ಮಹಾಕಾವ್ಯಗಳ ಯುಗ ಆರಂಭವಾಯಿತು. ಹೀಗಾಗಿ ಚೋಳರ ಕಾಲದಲ್ಲಿ ಅಪಾರ ತಮಿಳು ಸಾಹಿತ್ಯ ಸೃಷ್ಟಿಯಾಯಿತು. ಶಿಲಪ್ಪದಿಕಾರಂ ಮಣಿಮೇಖಲೈ, ವಳಯಾಪತಿ, ಕುಂಡಲಕೇಶಿ ಕಾಣಿಸಿಕೊಂಡ ಮೇಲೆ ಕ್ರಿ.ಶ.10ನೇ ಶತಮಾನದ ಪೂರ್ವಾರ್ಧದಲ್ಲಿ ಜೀವಿಕ ಚಿಂತಾಮಣಿ ಉದಯವಾಯಿತು. ತಿರುತ್ತಕ್ಕದೇವರ್‌ನ ಜೀವಿಕ ಚಿಂತಾಮಣಿ ಒಂದು ಜೈನ ಕಾವ್ಯವಾಗಿದೆ. ಇದು ಮಂತ್ರಿ ಅರಸನ ಸಿಂಹಾಸನವನ್ನು ಆಕ್ರಮಿಸಿದ ವಿಚಾರ ಮತ್ತು ಅರಸನ ಮಗ ಮತ್ತೆ ಸಿಂಹಾಸನ ಪಡೆದು ಜೈನ ಭಿಕ್ಷುವಾದ ಕಥೆಯನ್ನು ಒಳಗೊಂಡಿದೆ.

- ಜಯಗೊಂಡಾರ್ ಕವಿಯ ಕಳಿಂಗ ತುಪ್ಪರಣಿ ಒಂದನೇ ಕುಲೋತ್ತುಂಗ ಚೋಳನ ದಿಗ್ವಿಜಯಗಳ ಬಗ್ಗೆ ತಿಳಿಸುತ್ತದೆ. ಈ ಕೃತಿಯನ್ನು ಪ್ರಾಚೀನ ಕಾಲದ ಅತ್ಯುತ್ತಮ ಸಮರ ಕಾವ್ಯವೆಂದು ಪರಿಗಣಿಸಲಾಗಿದೆ.
- ಒಟ್ಟುಕ್ಕೂತ್ತನ್ ಕವಿಯ ಉಲಾ ಅಥವಾ ಊಳವಿಯ ಪ್ರಕಾರ ಕಾವ್ಯಗಳು ಮೂರು ಪೀಳಿಗೆಯ ಚೋಳ ಅರಸರುಗಳಾದ ವಿಕ್ರಮಚೋಳ, ಎರಡನೇ ಕುಲೋತ್ತುಂಗ ಮತ್ತು ಎರಡನೆಯ ರಾಜ ರಾಜ ಚೋಳರ ಬಗ್ಗೆ ಮಾಹಿತಿ ನೀಡುತ್ತವೆ.
- ಸೆಕ್ಕಿಲಾರನ ಪೆರಿಯಪುರಾಣಂ, ಕಂಬನ ರಾಮಾಯಣ, ಬುಧಮಿಶ್ರನ ವೀರಸೋಳಿಯಂ ಕೃತಿಗಳು ಚೋಳರ ಕಾಲದ ಅಂದಿನ ಧಾರ್ಮಿಕ ಜೀವನವನ್ನು ಪ್ರತಿಬಿಂಬಿಸುತ್ತವೆ. ಹಾಗೆಯೇ ಶೈವ ನಾಯನ್ನಾರರ ಮತ್ತು ವೈಷ್ಣವ ಆಳ್ವಾರರ ಬರವಣಿಗೆಗಳು ಕೂಡ ಚೋಳರ ಕಾಲದ ಧಾರ್ಮಿಕತೆಯ ಮೇಲೆ ಬೆಳಕನ್ನು ಚೆಲ್ಲುತ್ತವೆ.

## 1.13ಹೊಯ್ಸಳರ ಕಾಲದ ಸಾಹಿತ್ಯಾಧಾರಗಳು

ಹೊಯ್ಸಳರ ಕಾಲದಲ್ಲಿ ಸಂಸ್ಕೃತ ಮತ್ತು ಕನ್ನಡದಲ್ಲಿ ಅನೇಕ ಕೃತಿಗಳು ರಚನೆಯಾದವು. ಅವು ಹೊಯ್ಸಳರ ಚರಿತ್ರೆಯ ರಚನೆಗೆ ಉಪಯುಕ್ತ ಆಕರಗಳಾಗಿವೆ.

- ಜನ್ನನ ಯಶೋಧರ ಚರಿತೆ ಹೊಯ್ಸಳರ ಮೂಲ, ವಂಶಾವಳಿ, ವಿಷ್ಣುವರ್ಧನನ ಬನವಾಸಿಯ ಆಕ್ರಮಣ ಮತ್ತು ವಿನಯಾದಿತ್ಯನ ಕಾಲದಿಂದ ಹೊಯ್ಸಳರು ಪ್ರಾಬಲ್ಯಕ್ಕೆ ಬಂದ ವಿಚಾರಗಳನ್ನು ತಿಳಿಸುತ್ತದೆ.
- ನಾಗಚಂದ್ರನ (ಅಭಿನವ ಪಂಪ) ರಾಮಚಂದ್ರ ಚರಿತ ಪುರಾಣವು ವಿಷ್ಣುವರ್ಧನನು ತನ್ನ ಅಣ್ಣನಿಗೆ ಆಡಳಿತದಲ್ಲಿ ನೀಡಿದ ಸಹಾಯ ಮತ್ತು ಸಹಕಾರಗಳನ್ನು ತಿಳಿಸುತ್ತದೆ.
- "ಅಭಿನವ ವಾಗ್ದೇವಿ" ಎಂಬ ಬಿರುದಾಂಕಿತಳೂ ಆದ ಕಂತಿಗೂ ಮತ್ತು ಅಭಿನವ ಪಂಪನಿಗೂ ಒಮ್ಮೆ ವಾಗ್ವಾದ ಉಂಟಾಯಿತು. ಈ ವಾಗ್ವಾದದಲ್ಲಿ ಪಂಪನು ಎಸೆದ ಸಮಸ್ಯೆಗಳನ್ನು ಯಶಸ್ವಿಯಾಗಿ ಬಿಡಿಸಿದಳೆಂದು "ಕಂತಿಯ ಹಂಪನ ಸಮಸ್ಯೆಗಳು" ಎಂಬ ಪದ್ಯಗಳಿಂದ ತಿಳಿದುಬರುತ್ತದೆ.
- ನರಸಿಂಹ ಬಲ್ಲಾಳನ ಮಂತ್ರಿಯಾಗಿದ್ದ ಕೆರೆಯ ಪದ್ಮರಸನ 'ದೀಕ್ಷಾಬೋಧೆ' ಎಂಬ ಕೃತಿಯು ಹೊಯ್ಸಳರ ರಾಜಕೀಯ ಜೀವನದ ಮೇಲೆ ಬೆಳಕನ್ನು ಚೆಲ್ಲುತ್ತದೆ.
- ಕನ್ನಡದ ಗಣಿತ ಗ್ರಂಥವಾದ ರಾಜಾದಿತ್ಯನ "ವ್ಯವಹಾರ ಗಣಿತ"ವು ಎರಡನೆಯ ಬಲ್ಲಾಳನಿಗೂ ಮತ್ತು ಸೇವುಣ ರಾಜನಾದ ಐದನೆಯ ಭಿಲ್ಲಮನಿಗೂ ನಡೆದ ಸೊರಟೂರು ಯುದ್ಧವನ್ನು ತಿಳಿಸುತ್ತದೆ. ಭಿಲ್ಲಮನು 20,000 ಪದಾತಿ ಸೈನ್ಯವನ್ನು ಮತ್ತು 12000 ಅಶ್ವದಳವನ್ನು ತೆಗೆದುಕೊಂಡು ಇಮ್ಮಡಿ

ಬಲ್ಲಾಳನ ಮೇಲೆ ಯುದ್ಧ ಕೈಗೊಂಡು ಸೋತು ಕೆಲವೇ ಸಂಖ್ಯೆಯ ಸೈನಿಕರುಳಿದು ಚಲ್ಲಾಪಿಲ್ಲಿಯಾದರು ಎಂಬುದಾಗಿ ತಿಳಿಸುತ್ತದೆ.

- ಸೋಮನಾಥನ "ಕರ್ನಾಟಕ ಕಲ್ಯಾಣಕಾರಕ" ಎಂಬ ಕೃತಿ ಹೊಯ್ಸಳರ ಕಾಲದಲ್ಲಿ ಹರಡಿದ್ದ ವಿವಿಧ ರೋಗಗಳಿಗೆ ಸಂಬಂಧಿಸಿದಂತೆ ಕಾರಣ ಮತ್ತು ನಿವಾರಣೋಪಾಯಗಳ ಬಗ್ಗೆ ಮಾಹಿತಿ ನೀಡುತ್ತದೆ.
- ಕನ್ನಡದ ಪ್ರಸಿದ್ಧ ಕವಿಯಾದ ರುದ್ರಭಟ್ಟನ 'ಜಗನ್ನಾಥ ವಿಜಯ' ಹೊಯ್ಸಳ ರಾಣಿಯರ ಕಲಾ ಪ್ರವೀಣತೆ ಹಾಗೂ ಸುಪ್ರಸಿದ್ಧ ಚಿತ್ರಗಾರ ಚಿರಗಟನು ಹೊಯ್ಸಳರ ಆಸ್ಥಾನದಲ್ಲಿದ್ದ ಬಗ್ಗೆ ವಿವರಣೆ ನೀಡುತ್ತದೆ.
- ಎರಡನೇ ವಿದ್ಯಾಚಕ್ರವರ್ತಿಯ "ಗದ್ಯಕರ್ಣಾಮೃತ" ಎಂಬ ಕೃತಿಯು ಹೊಯ್ಸಳ ವಂಶದ ರಾಜನಾದ ಎರಡನೇ ನರಸಿಂಹ ಮತ್ತು ಸೋಮೇಶ್ವರನ ಕಾಲಕ್ಕೆ ಸಂಬಂಧಿಸಿದ ಸಮಕಾಲೀನ ಐತಿಹಾಸಿಕ ಘಟನೆಗಳನ್ನು ತಿಳಿಸುತ್ತದೆ. ಇದು ಹೊಯ್ಸಳರ ವಂಶಾವಳಿ ಸೋಮೇಶ್ವರನ ಜನನ, ಬಾಲ್ಯಜೀವನ ಮತ್ತು ಇಮ್ಮಡಿ ನರಸಿಂಹನು ಕ್ರಿ.ಶ.1234ರಲ್ಲಿ ಪಾಂಡ್ಯರ ವಿರುದ್ಧ ಹೋರಾಡಿದ ವಿಚಾರವನ್ನು ಒಳಗೊಂಡಿದೆ.
- ಮೂರನೇ ವಿದ್ಯಾಚಕ್ರವರ್ತಿಯು 'ರುಕ್ಮಿಣಿ ಕಲ್ಯಾಣ'ವು ಹೊಯ್ಸಳ ವಂಶಜರನ್ನು 'ಯದು' ವಂಶಜರೆಂದು ತಿಳಿಸುತ್ತದೆ. ಹಾಗೆಯೇ ಎರಡನೇ ಮತ್ತು ಮೂರನೇ ಬಲ್ಲಾಳ, ಎರಡನೇ ಮತ್ತು ಮೂರನೇ ನರಸಿಂಹ ಸೋಮೇಶ್ವರರನ್ನು ಪ್ರಸ್ತಾಪಿಸಲಾಗಿದೆ. ಅಲ್ಲದೆ ಹೊಯ್ಸಳರು ಮತ್ತು ಪಾಂಡ್ಯರ ನಡುವೆ ನಡೆದ ವೈವಾಹಿಕ ಸಂಬಂಧಗಳ ಬಗ್ಗೆ ವಿವರಣೆ ನೀಡುತ್ತದೆ.
- ನಯಸೇನನ ಧರ್ಮಾಮೃತ ಎಂಬ ಕೃತಿಯು ಹೊಯ್ಸಳರ ಕಾಲದಲ್ಲಿ ಹಿಂದೂ ಧರ್ಮದಿಂದ ಜೈನ ಧರ್ಮಕ್ಕೆ ಪರಿವರ್ತಿತರಾದ ಜನಸಾಮಾನ್ಯರ ಬಗ್ಗೆ ತಿಳಿಸುತ್ತದೆ.
- ಮಲ್ಲಿಕಾರ್ಜುನನ "ಸೂಕ್ತಿ ಸುಧಾರರ್ಣವ" ಎಂಬ ಕೃತಿಯು ಹೊಯ್ಸಳ ಎಂಬ ಹೆಸರು ಬರಲು ಕಾರಣವನ್ನು ಮತ್ತು ಹೊಯ್ಸಳ ವಂಶಾವಳಿಯನ್ನು ತಿಳಿಸುತ್ತದೆ.
- ಕೇಶಿರಾಜನ ಶಬ್ಧಮಣಿದರ್ಪಣ, ಹರಿಹರನ ಗಿರಿಜಾ ಕಲ್ಯಾಣ, ರಾಘವಾಂಕನ ಹರಿಶ್ಚಂದ್ರ ಕಾವ್ಯ ಮತ್ತು ಸಿದ್ಧರಾಮ ಪುರಾಣ ಮತ್ತು ತಮಿಳಿನಲ್ಲಿ ರಚನೆಯಾದ 'ರಾಜ ಕಾಲ ನಿರ್ಣಯ' ಎಂಬ ಗ್ರಂಥಗಳು ಹೊಯ್ಸಳರ ಸಾಮ್ರಾಜ್ಯದ ಇತಿಹಾಸದ ರಚನೆಗೆ ಸಹಕಾರಿಯಾಗಿವೆ.

ಒಟ್ಟಿನಲ್ಲಿ ದೇಶೀಯ ಸಾಹಿತ್ಯ ಆಕರಗಳು ದಕ್ಷಿಣ ಭಾರತದ ಇತಿಹಾಸದ ರಚನೆಗೆ ಸಹಕಾರಿಯಾಗಿವೆ. ಅವುಗಳಲ್ಲಿ ಕಾಣಬರುವ ಪ್ರಾಸಂಗಿಕ ಉಲ್ಲೇಖನಗಳು ಐತಿಹಾಸಿಕ ಅಂಶಗಳನ್ನೊಳಗೊಂಡಿವೆ. ದಕ್ಷಿಣ ಭಾರತದ ಚರಿತ್ರೆಯ ರಚನೆಗೆ ದೇಶೀಯ ಸಾಹಿತ್ಯ ಕೃತಿಗಳು ಸಹಾಯಕವಾಗಿದ್ದರೂ ಕೂಡ ಅವುಗಳನ್ನು ಆಸ್ಥಾನ ಕವಿಗಳು ರಚಿಸಿರುವುದರಿಂದ ಉತ್ಪ್ರೇಕ್ಷೀಯ ಅಂಶಗಳಿಗೆ ಅವಕಾಶವಿರುತ್ತದೆ. ಅಂತಹ ಅಂಶಗಳನ್ನು ಇತರ ಆಧಾರಗಳಿಗೆ ಹೋಲಿಕೆ ಮಾಡಿ ಸತ್ಯಾಂಶವನ್ನು ತಿಳಿದು ಚರಿತ್ರೆಯನ್ನು ರಚಿಸಬೇಕು.

## 1.14 ವಿದೇಶಿ ಸಾಹಿತ್ಯಾಧಾರಗಳು

ದಕ್ಷಿಣ ಭಾರತ ಎಂದಿಗೂ ಒಂಟಿ ಜೀವನ ನಡೆಸಲಿಲ್ಲ. ತನ್ನ ಇತಿಹಾಸದ ಅತ್ಯಂತ ಆರಂಭ ಕಾಲದಿಂದಲೂ ಅನೇಕ ಹೊರದೇಶಗಳೊಡನೆ ನಿಕಟ ವ್ಯಾಪಾರ ಬಾಂಧವ್ಯವನ್ನು ಹೊಂದಿದೆ. ಹೀಗಾಗಿ ಇಟಲಿ, ಪರ್ಶಿಯ, ಗ್ರೀಕ್, ಮೆಸಪೊಟೋಮಿಯಾ, ಈಜಿಪ್ಟ್, ಅರೇಬಿಯಾ, ಚೈನಾ, ಪೋರ್ಚುಗಲ್ ಮುಂತಾದ ದೇಶಗಳ ಪ್ರವಾಸಿಗರು, ರಾಜಭಾರಿಗಳು, ಧರ್ಮಪ್ರಚಾರಕರು, ವ್ಯಾಪಾರಕ್ಕಾಗಿ, ಇಲ್ಲವೇ ಮತೀಯ ಉದ್ದೇಸಗಳಿಂದ ದಕ್ಷಿಣ ಭಾರತಕ್ಕೆ ಬಂದು ತಾವು ಕಣ್ಣಾರೆ ಕಂಡ ವಿಷಯಗಳ ಹಾಗೂ ಕಿವಿಯಾರೆ ಕೇಳಿದ ಸಂಗತಿಗಳ ಕಥನಗಳನ್ನು ಬಿಟ್ಟುಹೋಗಿದ್ದಾರೆ. ಇವರ ಬರಹಗಳನ್ನು ಎಚ್.ಎಲ್.ನಾಗೇಗೌಡರ "ಪ್ರವಾಸಿ ಕಂಡ

ಇಂಡಿಯಾ" ಎಂಬ ಕೃತಿಗಳಲ್ಲಿ ಕಾಣಬಹುದು. ಇಂತಹ ವಿದೇಶಿ ಬರಹಗಳು ಚರಿತ್ರೆಯ ಪುನರ್‌ರಚನೆಗೆ ಬಹಳ ಸಹಕಾರಿಯಾಗಿವೆ. ಆದರೆ ಇಂತಹ ಸಾಹಿತ್ಯವನ್ನು ಬಳಸುವಾಗ ಬಹಳ ಎಚ್ಚರಿಕೆಯಿಂದಿರಬೇಕು. ಏಕೆಂದರೆ ನಮ್ಮ ದೇಶದ ಸಂಸ್ಕೃತಿ, ಸಂಪ್ರದಾಯಗಳ ಪರಿಚಯವಿಲ್ಲದೆ ಬರೆದಿರಬಹುದು. ಅವರದು ಕೇವಲ ಧಾರ್ಮಿಕ ಮತ್ತು ಮತೀಯ ದೃಷ್ಟಿಯಾಗಿದ್ದು, ಅನ್ಯ ಧರ್ಮಗಳನ್ನು ತಿರಸ್ಕಾರ ಮನೋಭಾವದಿಂದ ಕಂಡು ಅವುಗಳನ್ನು ಕುರಿತು ಟೀಕೆಗಳನ್ನು ಮಾಡಿರಬಹುದು. ಅಂತಹ ವಿಷಯಗಳನ್ನು ದೇಶೀಯ ಸಾಹಿತ್ಯ ಆಧಾರಗಳಿಗೆ ಹೋಲಿಸಿ ಸತ್ಯವನ್ನು ತಿಳಿಯಬೇಕು. ಏನೇ ಇರಲಿ ದಕ್ಷಿಣ ಭಾರತದ ಚರಿತ್ರೆಯ ನಿರ್ಮಾಣದಲ್ಲಿ ದೇಶೀಯ ಬರಹಗಳಷ್ಟೆ ವಿದೇಶಿ ಬರಹಗಳೂ ಮಹತ್ವವೆನಿಸಿವೆ.

**ಮೆಗಸ್ತನೀಸ್**

ಗ್ರೀಕ್ ದೊರೆ ಸೆಲ್ಯೂಕಸ್‌ನ ರಾಯಭಾರಿಯಾಗಿ ಚಂದ್ರಗುಪ್ತ ಮೌರ್ಯನ ಆಸ್ಥಾನದಲ್ಲಿದ್ದ ಮೆಗಸ್ತನೀಸನ ಬರವಣಿಗೆಗಳಿಗೆ ಮಹತ್ವದ ಬೆಲೆ ಇದೆ. ಸಮಕಾಲೀನ ಭಾರತದ ಚಿತ್ರಣವನ್ನು ತನ್ನ ಇಂಡಿಕಾ ಎಂಬ ಗ್ರಂಥದಲ್ಲಿ ನೀಡಿದ್ದಾನೆ. ಆದರೆ ಇದರ ಮೂಲಪ್ರತಿ ಲಭ್ಯವಾಗಿಲ್ಲ. ಈ ಗ್ರಂಥದಲ್ಲಿ ಬಹುಭಾಗ ವಿಚಾರಗಳು ನಾಶವಾಗಿದ್ದರೂ ಅವುಗಳನ್ನಾಧರಿಸಿ ಆನಂತರ ಕಾಲದ ಗ್ರಂಥಕರ್ತರು ರಚಿಸಿರುವ ಪುಸ್ತಕಗಳಲ್ಲಿ ಅವು ಸುರಕ್ಷಿತವಾಗಿದೆ. ಅರಿಯನ್ ವಿರಚಿತ ಇಂಡಿಕಾದಲ್ಲಿ ಈ ವಿವರಗಳಿವೆ. ಪಾಂಡ್ಯರ ಬಗೆಗೂ ಮೆಗಸ್ತನೀಸ್ ಕೆಲವು ವಿಚಾರಗಳನ್ನು ಪ್ರಸ್ತಾಪಿಸಿದ್ದಾನೆ.

**ಪ್ಲಿನಿ**

ಪ್ಲಿನಿ ಮತ್ತೊಬ್ಬ ವಿದೇಶಿ ಲೇಖಕ. ಈತನನ್ನು ಹಿರಿಯ ಪ್ಲಿನಿ ಎಂತಲೂ ಕರೆಯುತ್ತಾರೆ. ಕ್ರಿ.ಶ.23ರಲ್ಲಿ ಜನಿಸಿದ ಈತ ಕ್ರಿ.ಶ.70(77)ರಲ್ಲಿ "ಇತಿಹಾಸ ಅಥವಾ ಪ್ರಾಕೃತಿಕ ಚರಿತ್ರೆ" ಎಂಬ ಉದ್ಗ್ರಂಥವನ್ನು ಬರೆದಿದ್ದಾನೆ. ಇದರಲ್ಲಿ ಇಂಡಿಯಾ ದೇಶಕ್ಕೆ ಸಂಬಂಧಪಟ್ಟ ನಾನಾ ವಿಚಾರಗಳಿವೆ. ಈ ಲ್ಯಾಟಿನ್ ಕೃತಿ 39 ಭಾಗಗಳನ್ನು ಒಳಗೊಂಡಿದೆ. ಆರನೆಯ ಭಾಗದಲ್ಲಿ ಭಾರತದ ಭೌಗೋಳಿಕ ಸ್ಥಿತಿಯನ್ನು ವಿವರಿಸಿದ್ದಾನೆ. ಮೆಗಸ್ತನೀಸನು ಬರೆದ ಪುಸ್ತಕವೇ ಇವನ ಭೂಗೋಳಕ್ಕೆ ಆಧಾರ. ಪ್ಲಿನಿಯು ಭಾರತವನ್ನು ಸಂದರ್ಶಿಸದೆ ರೋಮ್‌ನಲ್ಲಿ ವಾಸಿಸುತ್ತಿದ್ದಾಗ್ಯೂ ತನ್ನ ಹಿಂದಿನ ಬಹುತೇಕ ವಿದ್ವಾಂಸರ ಮತ್ತು ಭಾರತವನ್ನು ನೋಡಿ ಹಿಂದಿರುಗಿದವರ ಅಭಿಪ್ರಾಯಗಳನ್ನು ಸಂಗ್ರಹಿಸಿ ದಕ್ಷಿಣ ಭಾರತದ ಅನೇಕ ಭಾಗಗಳನ್ನು ಕುರಿತು ಬರೆದಿದ್ದಾನೆ. ಪ್ಲಿನಿ ತನ್ನ ನೈಜ ಇತಿಹಾಸದಲ್ಲಿ ಭಾರತದ ಖನಿಜ, ಬಂಗಾರದ ಕಲ್ಲುಗಳು ಪ್ರಪಂಚದಲ್ಲೆ ಉತ್ತಮ ಗುಣಪಟ್ಟವನ್ನು ಪಡೆದ ವಸ್ತುಗಳಾಗಿದ್ದವು. ಭಾರತದಲ್ಲಿ ಇಡೀ ಪ್ರಪಂಚದಲ್ಲೇ ಅತ್ಯಧಿಕವಾಗಿ ಬೆಲೆ ಬಾಳುತ್ತಿದ್ದ ವಜ್ರವೈಡೂರ್ಯ ಹಾಗೂ ಮುತ್ತುಗಳಿದ್ದ ರೋಮ್‌ನಲ್ಲಿ ಇವುಗಳಿಗೆ ಹೆಚ್ಚಿನ ಬೇಡಿಕೆಯಿತ್ತೆಂದು ಹೇಳಿದ್ದಾನೆ. ದಂತ, ಪಚ್ಚೆಕಲ್ಲು, ಶ್ರೀಗಂಧ, ಸಾಂಬಾರ ಪದಾರ್ಥಗಳು, ನವಿರಾದ ಬಟ್ಟೆಗಳು, ಪರಿಮಳ ದ್ರವ್ಯಗಳು ರಫ್ತಾಗುತ್ತಿದ್ದ ಮುಖ್ಯ ವಸ್ತುಗಳಾಗಿದ್ದವು. ರೋಮ್‌ನ ಯುವತಿಯರು ಭಾರತೀಯ ಮಸ್ಲಿನ್ ಬಟ್ಟೆಗಳನ್ನು 7 ಪದರಗಳಲ್ಲಿ ಅಲಂಕರಿಸಿಕೊಂಡು ಬೀಗುತ್ತಿದ್ದರು. ರೇಷ್ಮೆ ಬಟ್ಟೆಗಳು ಕೂಡ ಅಲ್ಲಿ ಜನಪ್ರಿಯವಾಗಿದ್ದವು. ರೇಷ್ಮೆ ಬಟ್ಟೆ ಮತ್ತು ರೇಷ್ಮೆ ನೂಲಿಗೆ ಅವರ ತೂಕದಷ್ಟೆ ಚಿನ್ನ ತೆರಬೇಕಾಗಿದ್ದಿತು. ಇದರಿಂದ ಅಪಾರ ಚಿನ್ನ ರೋಮ್‌ನಿಂದ ದಕ್ಷಿಣ ಭಾರತಕ್ಕೆ ಹರಿದು ಬರುತತಿತ್ತೆಂದು ತನ್ನ ಕೃತಿಯಲ್ಲಿ ದುಃಖ ತೋಡಿಕೊಂಡಿದ್ದಾನೆ. ಅವನ ಪ್ರಕಾರ ಯಾವ ವರ್ಷವೂ ಇಂಡಿಯಾ ದೇಶಕ್ಕೆ ಐವತ್ತೈದು ಕೋಟಿ ಸೆಸ್ಟರ್ಸ್‌ಗಳಿಗಿಂತ ಕಡಿಮೆ ನಾಣ್ಯಗಳು ಬರುತ್ತಿರಲಿಲ್ಲ. ಅಂದರೆ ಪ್ರತಿವರ್ಷ 12 ಕೋಟಿ ರೂ.ಗಳಷ್ಟು ನಾಣ್ಯ ಇಂಡಿಯಾ ದೇಶಕ್ಕೆ ಬರುತ್ತಿತ್ತು. ಆದರೆ ಪ್ಲಿನಿಗಿಂತ ಮುಂಚೆಯೇ ಅಂದರೆ ಕ್ರಿ.ಶ.22ರಲ್ಲಿ ರೋಮ್‌ನ ಚಕ್ರವರ್ತಿ ತಿಬೆರಸನು ರೋಮ್‌ನ ಸೆನೇಟಿನಲ್ಲಿ ಸ್ತ್ರೀಯರು ತಮ್ಮ ಚಪಲವನ್ನು ತೀರಿಸಿಕೊಳ್ಳುವುದಕ್ಕೋಸ್ಕರ ಕೊಳ್ಳುವ ವಿಚಿತ್ರ ವಸ್ತುಗಳ ಬಗ್ಗೆ ಪ್ರಸ್ತಾಪಿಸಿದ್ದಾನೆ.

ಪ್ಲಿನಿ ತನ್ನ ಗ್ರಂಥದಲ್ಲಿ ತಮಿಳುನಾಡಿನ ಅನೇಕ ಬಂದರುಗಲನ್ನು ಮತ್ತು ರೇವುಪಟ್ಟಣಗಳನ್ನು ಪ್ರಸ್ಥಾಪಿಸಿದ್ದಾನೆ. ಮೆಗಸ್ತನೀಸ್‌ನ ಇಂಡಿಕಾ ಬರವಣಿಗೆಯ ಆಧಾರದ ಮೇಲೆ ಶಾತವಾಹನರ ದೊರೆ 30 ನಗರಗಳನ್ನು, ಒಂದು ಲಕ್ಷ ಸೈನಿಕ ದಳವನ್ನು, ಎರಡು ಸಾವಿರ ಅಶ್ವಬಲವನ್ನು ಮತ್ತು ಒಂದು ಸಾವಿರ ಗಜಬಲವನ್ನು ಹೊಂದಿದ್ದನೆಂದು ಪ್ಲಿನಿ ತನ್ನ ಗ್ರಂಥದಲ್ಲಿ ತಿಳಿಸಿದ್ದನೆ. ಇದರಿಂದ ಶಾತವಾಹನ ಅರಸರು ತಮ್ಮ ಆಂತರಿಕ ಸುಭದ್ರತೆಗೆ ಗಮನಕೊಟ್ಟು ಪರರಾಜ್ಯಗಳ ಮೇಲೂ ತಮ್ಮ ಹತೋಟಿಯನ್ನು ಸ್ಥಾಪಿಸಿ ದಕ್ಷತೆಯಿಂದ ಸುಮಾರು ವರ್ಷಗಳ ಕಾಲ ಆಳ್ವಿಕೆ ನಡೆಸಿದರು ಎಂಬುದಾಗಿ ಅಭಿಪ್ರಾಯಪಡಲಾಗಿದೆ. ಹಾಗೆಯೇ ಪ್ಲಿನಿ ಶಾತವಾಹನರ ಸಮುದ್ರಯಾನ ವ್ಯಾಪಾರದ ಬಗ್ಗೆಯೂ ತಿಳಿಸಿದ್ದಾನೆ. ದಕ್ಷಿಣ ಭಾರತದ ಬಗ್ಗೆ ಇಷ್ಟೆಲ್ಲಾ ಮಾಹಿತಿ ಒದಗಿಸಿಕೊಟ್ಟಿರುವ ಪ್ಲಿನಿ ತನ್ನ ಗ್ರಂಥ ಪ್ರಕಟವಾದ ಎರಡು ವರ್ಷಗಳಲ್ಲೇ ಅಗ್ನಿ ಅನಾಹುತದಲ್ಲಿ ಸಿಕ್ಕಿ ದೈವಾಧೀನನಾದನು.

## ಗ್ರೀಕ್ ಅನಾಮಧೇಯನ ಪೆರಿಪ್ಲಸ್ ಆಫ್ ದಿ ಎರಿತ್ರಿಯನ್ ಸೀ

ಪೆರಿಪ್ಲಸ್ ಆಫ್ ದಿ ಎರಿತ್ರಿಯನ್ ಸೀ ಅನಾಮಧೇಯನೊಬ್ಬ ರಚಿಸಿದ ಕೃತಿಯಾಗಿದೆ. ಇದೊಂದು ಬಹು ಸಹನೆಯಿಂದ ಬರೆದ ಹಡಗಿನ ಸರಳ ದಿನಚರಿ. ಇದನ್ನು ಬರೆದವನು ಯಾರೆಂದು ಖಚಿತವಾಗಿ ಗೊತ್ತಿಲ್ಲ. ಆದರೂ ಇವನು ಈಜಿಪ್ಟಿನಲ್ಲಿದ್ದ ರೋಮನ್ ನಾಗರಿಕನಾದ ಗ್ರೀಕ್ ವರ್ತಕನೆಂದು ಗೊತ್ತಾಗಿದೆ. ಇದು ಪಶ್ಚಿಮ ಪ್ರಪಂಚದ ಜನರು ತಾವೇ ಕಟ್ಟಿದ, ತಮ್ಮವೇ ಆದ ಹಡಗುಗಳಲ್ಲಿ ಪೂರ್ವ ಪ್ರಪಂಚದೊಡನೆ ನಡೆಸಿದ ವ್ಯವಸ್ಥಿತ ವ್ಯಾಪಾರದ ಮೊಟ್ಟಮೊದಲನೆಯ ದಾಖಲೆಯಾಗಿದೆ. ಗ್ರಂಥದ ಹೆಸರು ಇಂಗ್ಲೀಷಿನಲ್ಲಿ ---- ಎಂದಿದೆ. ---- ಎಂಬುದು ಗ್ರೀಕ್ ಹಾಗೂ ರೋಮನ್ ಖಗೋಳಶಾಸ್ತ್ರಜ್ಞರು ಹಿಂದೂ ಮಹಾಸಾಗರ ಮತ್ತು ಅದರ ಸುತ್ತಮುತ್ತಣ ಪ್ರದೇಶಗಳಾದ ಕೆಂಪುಸಮುದ್ರ ಮತ್ತು ಪರ್ಶಿಯನ್ ಖಾರಿ ಇವೆಲ್ಲವನ್ನು ಸೇರಿಸಿ ಕರೆಯುತ್ತಿದ್ದ ಹೆಸರು. 'ಎರಿತ್ರಾ' ಎಂದರೆ ಕೆಂಪು ಎಂದರ್ಥ. ಈಜಿಪ್ಟ್‌ನಲ್ಲಿ ನೆಲಸಿದ್ದ ಈತ ಕ್ರಿ.ಶ.80ರ ಅವಧಿಯಲ್ಲಿ ಭಾರತದ ಕರಾವಳಿ ಪ್ರದೇಶಕ್ಕೆ ಸಮುದ್ರಯಾನ ಮಾಡಿದನು. ಇವನು ಇಲ್ಲಿನ ಮುಖ್ಯ ಬಂದರುಗಳು, ವ್ಯಾಪಾರ ಕೇಂದ್ರಗಳು, ಆಮದು ರಫ್ತುಗಳು ಮತ್ತು ಪ್ರಾಣಿಗಳು ಇತ್ಯಾದಿ ಬಗ್ಗೆ ವಿವರಗಳನ್ನು ನೀಡಿರುವನು. ಪೆರಿಪ್ಲಸ್ ಲೇಖಕ ತನ್ನ ಕೃತಿಯಲ್ಲಿ ಕೆಲವು ದಕ್ಷಿಣ ಭಾರತದ ಬಂದರುಗಳನ್ನು ಹೆಸರಿಸುತ್ತಾನೆ.

ಉದಾ:

- ಸೌರ – ಕ್ಯಾನನೂರ್
- ಟೆಂಡಿಸ್ – ತೊನ್ನೈ
- ಮುಜರಿಸ್ – ಕಾಂಗ್ರನೂರ್
- ನೆಲ್ಸಿಂಡಾ – ಕೊಟ್ಟಾಯಂ
- ಬಲಿತ – ವಾರ್ಕಾಲೈ
- ಕೆಮಾರಿ, ಕಾಲ್ಚಿ – ಕೊರ್‌ಕೈ (ಪಾಂಡ್ಯರ ಮೀನುಗಾರಿಕೆ ಇಲ್ಲಿ ನಡೆಯುತ್ತಿತ್ತು)
- ಕಮರ – ಕಾವೇರಿ ಪಟ್ಟಣ
- ಷೋಡುಕ – ಪಾಂಡಿಚೆರಿ/ಅರಿಕಮೇಡು (ಇಲ್ಲಿ ರೋಮನ್ನರ ವಸತಿ ಇತ್ತು)
- ಸೊಪಾತ್ಮ – ಮಾರ್ಕನಮ್

ದಾಮ್ನಕಟಕ ಬಹಳ ಮುಖ್ಯವಾದ ಮಾರುಕಟ್ಟೆಯಾಗಿತ್ತು ಎಂದಿದ್ದಾನೆ. ಪೈಥಾನ್, ನಾಸಿಕ್, ವೈಜಯಂತಿ ಮೊದಲಾದ ದಕ್ಷಿಣ ಭಾರತದ ಮಾರುಕಟ್ಟೆಗಳ ಪ್ರಸ್ತಾಪವನ್ನು ಕಾಣಬಹುದು. ರೇಷ್ಮೆ ಬಟ್ಟೆ, ವಜ್ರ, ಮುತ್ತುಗಳು, ಮೆಣಸು ಇತ್ಯಾದಿ ದಕ್ಷಿಣ ಭಾರತದಿಂದ ರಫ್ತಾಗುತ್ತಿದ್ದ ಮುಖ್ಯ ವಸ್ತುಗಳೆಂದು ಹಾಗೂ ನಾಣ್ಯಗಳು, ಗಾಜು, ತಾಮ್ರ, ತವರ, ಸೀಸ, ಮಧ್ಯ, ಮೊದಲಾದವು ಮುಖ್ಯ ಆಮದು ವಸ್ತುಗಳೆಂದು ವರ್ಣಿಸಿದ್ದಾನೆ. ಪೌರಾತ್ಯ ದೇಶಗಳ ಹಡಗುಗಳು ಕೆಂಪು ಸಮುದ್ರದ ಮೂಲಕ ಹಾದು ಅರೇಬಿಯನ್ ತೀರ ಪ್ರದೇಶದ ಕವೆಯನ್ನು ತಲುಪುತ್ತಿದ್ದವು. ಅಲ್ಲಿಂದ ಕೆಲವು ಹಡಗುಗಳು ಇಚಿಡಿಸ್‌ಗೂ, ಕೆಲವು ಬ್ರೂಚ್‌ಗೂ, ಕೆಲವು ಮಲಬಾರಿನ ಬಂದರಿಗಳಿಗೂ ತಲುಪುತ್ತಿದ್ದವು. ದಕ್ಷಿಣ ಭಾರತದಿಂದ ವರ್ತಕರೂ, ಧರ್ಮಭಿಕ್ಷುಗಳು ಮಲಯ ಪರ್ಯಾಯ ದ್ವೀಪಗಳಿಗೆ ಹೋಗಿ ಬರುತ್ತಿದ್ದರು ಎಂದು ತನ್ನ ಕೃತಿಯಲ್ಲಿ ತಿಳಿಸಿದ್ದಾನೆ. ಈ ಗ್ರಂಥದಲ್ಲಿ ಮೊದಲನೆಯ ಶಾತಕರ್ಣಿಯಂತಹ ಪ್ರಬಲ ದೊರೆ ಶಾತವಾಹನರ ವಂಶದಲ್ಲೇ ಇರಲಿಲ್ಲವೆಂದು ಹೇಳಲಾಗಿದೆ. ಈತನ ಸಂಕ್ಷಿಪ್ತ ಕಥನ ಅಪಾರ ಉಪಯುಕ್ತ ವಿಷಯಗಳಿಂದ ಕೂಡಿದೆ. ಅದಕ್ಕೆ ಸುವರ್ಣದಲ್ಲಿ ಬೆಲೆಕಟ್ಟಬಹುದಾಗಿದೆ. ಏಕೆಂದರೆ ಪ್ರಾಚೀನ ಭಾರತದಲ್ಲಿ ನಡೆಯುತ್ತಿದ್ದ ವ್ಯಾಪಾರ ವಾಣಿಜ್ಯಗಳ ಮತ್ತು ನೌಕಾ ವ್ಯವಹಾರಗಳ ವಿಷಯಗಳನ್ನು ಹಾಳಾಗದಂತೆ ರಕ್ಷಿಸಿದೆ.

**ಟಾಲೆಮಿ**

ಟಾಲೆಮಿ ಅಂಟೋನಿಸಸ್ ಪೇಯಸ್ ಎಂಬ ಗ್ರೀಕ್ ರಾಜನ ಆಳ್ವಿಕೆಯಲ್ಲಿ ಈಜಿಪ್ಟ್ ದೇಶದ ಅಲೆಗ್ಸಾಂಡ್ರಿಯದಲ್ಲಿದ್ದನು. ಇವನು ಖಗೋಳ ಶಾಸ್ತ್ರಜ್ಞನಷ್ಟೇ ಅಲ್ಲದೆ ಗಣಿತ, ಸಂಗೀತ ಮತ್ತು ಜ್ಯೋತಿಷ್ಯ ಶಾಸ್ತ್ರಜ್ಞನೂ ಆಗಿದ್ದನು. ಈತನ ಗ್ರಂಥವಾದ "ಜಿಯಾಗ್ರಾಫಿಕಲ್ ಔಟ್‌ಲೈನ್ ಅಥವಾ ಭೂಗೋಳ ವಿಜ್ಞಾನ ಕೈಪಿಡಿ"ಗೆ ನೆಲದ ಮೇಲೆ ಮತ್ತು ನೀರಿನ ಮೇಲೆ ಪ್ರವಾಸ ಮಾಡಿ ಬಂದ ಪ್ರವಾಸಿಗರ ಅನುಭವ ಹಾಗೂ ಕಂಡ ವಿಷಯಗಳೇ ಆಧಾರವಾಗಿದೆ. ಇವನ ಗ್ರಂಥವು ಕ್ರಿ.ಶ.130ರಲ್ಲಿ ರಚಿತವಾಯಿತೆಂದು ತಿಳಿದುಬರುತ್ತದೆ. ಈ ಗ್ರಂಥ ಪ್ರಾಚೀನ ಭಾರತದ ಸ್ಥಳನಾಮಗಳನ್ನು ನಿರ್ದೇಶಿಸುವುದಕ್ಕೆ ಬಹು ಉಪಯುಕ್ತವಾಗಿದೆ. ಕರ್ನಾಟಕದ ಪ್ರಾಚೀನತೆಯನ್ನು ನಿರ್ಧರಿಸುವುದಕ್ಕಂತೂ ಟಾಲೆಮಿಯ ಗ್ರಂಥ ಬಹು ಉಪಯುಕ್ತವಾಗಿದೆ. ಆದ್ದರಿಂದಲೇ ರಂ.ಶ್ರೀ.ಮುಗಳಿರವರು "ಕರ್ನಾಟಕ ರಾಜ್ಯವು ವಾಣಿಜ್ಯ ಮೊದಲಾದ ವಿಷಯಗಳಲ್ಲಿ ಮುಂದುವರಿದ ದೇಶವಾಗಿತ್ತೆಂದು ಟಾಲೆಮಿಯು ಸುಮಾರು ಎರಡು ಸಾವಿರ ವರ್ಷಗಳ ದೂರದಿಂದ ಎರಡೂ ಕೈಯೆತ್ತಿ ಸಾರುತ್ತಿದ್ದಾನೆ" ಎಂದಿದ್ದಾರೆ. ಗ್ರೀಕ್ ಭೂಗೋಳ ಶಾಸ್ತ್ರಜ್ಞ ಟಾಲೆಮಿ ತನ್ನ "ಭೂವಿವರಣೆ" ಗ್ರಂಥದಲ್ಲಿ ದಕ್ಷಿಣ ಭಾರತದ ಹಲವು ಸಂಗತಿಗಳನ್ನು ವರ್ಣಿಸಿದ್ದಾನೆ. ಇವನು ವಿಂಧ್ಯಪರ್ವತದ ದಕ್ಷಿಣದಲ್ಲಿದ್ದ ಅನೇಕ ಭಾಗಗಳನ್ನು ಹೆಸರಿಸಿರುವನು. ಕರ್ನಾಟಕದ ಬನವಾಸಿ, ಬಾದಾಮಿ, ಪಟ್ಟದಕಲ್ಲು, ಪುನ್ನಾಟ, ಚಿಮ್ಮಲಗಿ, ಇಂಡಿ, ಸವಡಿ, ಕಲಕೇರಿ, ಮುದುಗಲ್‌ಗಳನ್ನು ಉಲ್ಲೇಖಿಸಿದ್ದಾನೆ. ಚೋಳ, ಪಾಂಡ್ಯ ಮತ್ತು ಚೇರ ನಾಡುಗಳನ್ನು ವರ್ಣಿಸಿರುವನು. ಸಿಂಹಳ ದ್ವೀಪ ಭಾರತದ ಪೂರ್ವ ಪ್ರದೇಶದ ರೇವುಗಳು ಮತ್ತು ಇತರ ಪ್ರಾಚ್ಯ ಪ್ರದೇಶಗಳ ವಿವರಣೆಯು ಟಾಲೆಮಿಯ ಗ್ರಂಥದಲ್ಲಿ ಅಡಕವಾಗಿದೆ. ಶಾತವಾಹನರ ರಾಜಧಾನಿ ಪ್ರತಿಷ್ಠಾನ ಗೋದಾವರಿ ನದಿಯ ದಡದ ಮೇಲಿತ್ತೆಂಬುದಾಗಿ ಟಾಲೆಮಿಯ ಭೂಗೋಳಶಾಸ್ತ್ರ ತಿಳಿಸುತ್ತದೆ. ಆದ್ದರಿಂದಲೇ ಶಾತವಾಹನರಿಗೆ ಪ್ರತಿಷ್ಠಾನ ಪುರಾಧೀಶ್ವರರೆಂಬ ಹೆಸರು ಬಂದಿತೆಂದು ಅಭಿಪ್ರಾಯಪಡಲಾಗಿದೆ. ಆದರೆ ಟಾಲೆಮಿಯ ಭರತಖಂಡದ ಭೌಗೋಳಿಕ ಬಗೆಗಿನ ಸಾಮಾನ್ಯ ಕಲ್ಪನೆಯು ಅತಿರೇಕದ ನ್ಯೂನತೆಗಳಿಂದ ಕೂಡಿದೆ. ಇಷ್ಟಾದರೂ ಅವನ ಪ್ರಯತ್ನ ಸ್ತುತ್ಯರ್ಹವಾದುದು. ಅವನು ಅತ್ಯಮೂಲ್ಯ ದಾಖಲೆಗಳನ್ನೊದಗಿಸಿದ್ದಾನೆ.

## ಸಿಲೋನಿನ ದೀಪವಂಶ

ಸಿಲೋನಿನ ವೃತ್ತಾಂತವಾದ ದೀಪವಂಶ ದಕ್ಷಿಣ ಭಾರತದ ಚರಿತ್ರೆಯ ರಚನೆಗೆ ತುಂಬ ಸಹಕಾರಿಯಾಗಿದೆ. ದೀಪವಂಶ ಒಂದು ಅಪೂರ್ವ ಕಾವ್ಯವಾಗಿದೆ. ಇದು ಕ್ರಿ.ಶ.4ನೇ ಶತಮಾನದಲ್ಲಿ ರಚನೆಯಾದ ಕೃತಿ. ಒಲ್ಡನ್‌ಬರ್ಗ್‌ರವರ ಪ್ರಕಾರ ದೀಪವಂಶ ಮತ್ತು ಮಹಾವಂಶಗಳು ಒಂದೇ ಕಥೆಯ ಎರಡು ಪಾಠಗಳಷ್ಟೆ. ದೀಪವಂಶ ಅಶೋಕ ಧರ್ಮ ಪ್ರಚಾರಕರನ್ನು ಬನವಾಸಿಗೂ ಮತ್ತು ಮಹದೇವನನ್ನು ಮಹಿಷ ಮಂಡಲಿಗೂ ಕಳುಹಿಸಿದ ವಿಚಾರವನ್ನು ತಿಳಿಸುತ್ತದೆ. ಮಹದೇವ ಏಷ್ಯಾದ ಜ್ಯೋತಿಯಾದ ಗೌತಮಿಬುದ್ಧನ ತತ್ವಗಳನ್ನು ಮಹಿಷಮಂಡಲದಲ್ಲಿ ಪ್ರಚಾರ ಮಾಡಿದನು. ಇದರ ಪರಿಣಾಮವಾಗಿ ಸುಮಾರು 40 ಸಾವಿರ ಜನ ಬೌದ್ಧ ಧರ್ಮದ ಅನುಯಾಯಿಗಳಾದರೆಂದೂ ತಿಳಿದು ಬರುತ್ತದೆ.

## ಮಹಾವಂಶ

ಇದು ಅತ್ಯಂತ ಹತ್ತಿರದ ವಿದೇಶಿ ಮೂಲ. ಆ ಮೂಲದಿಂದ ಬೆಲೆ ಬಾಳುವ ಚಾರಿತ್ರಿಕ ಸಾಮಾಗ್ರಿಯನ್ನೆಷ್ಟೋ ಸಂಗ್ರಹಿಸಬಹುದು. ಮಹಾವಂಶ ಕ್ರಿ.ಶ.5ನೇ ಶತಮಾನಕ್ಕೆ ಸೇರಿದ ಮಹಾವಾಮನದೆಂಬ ಅಭಿಪ್ರಾಯವಿದೆ. ಭಾರತೀಯರ ಕಲ್ಪನೆಗಳ ಪ್ರಕಾರ ಮಹಾವಂಶವು ದೀಪವಂಶದ ಒಂದು ವ್ಯಾಖ್ಯಾನ. ಸಿಂಹಳದ ಮಹಾವಂಶವನ್ನು 'ಶಿಲಪ್ಪದಿಕಾರಮ್'ನ ಉರೈಪೆರುಕಟ್ಟುರೈ'ಯೊಂದಿಗೆ ಅಭ್ಯಸಿಸಿದರೆ ಸಂಗಮ್ ಇತಿಹಾಸದ ಅಂದರೆ ಸೇಂಗುತ್ತವನ್ ಗಜಬಾಹು ಸಮಕಾಲಿಕದ ಬಗೆಗೆ ಸುಳಿವು ಸಿಗುತ್ತದೆ.

## ಚೀನಿ ಬರವಣಿಗೆಗಳು

ದಕ್ಷಿಣ ಭಾರತದ ಚರಿತ್ರೆಯ ರಚನೆಗೆ ಚೀನಿ ಪ್ರವಾಸಿಗರ ಬರವಣಿಗೆಗಳು ಅಮೂಲ್ಯವಾದ ಆಕರಗಳಾಗಿವೆ. ಅವರು ದೊಡ್ಡ ಗಾತ್ರದ ಸಂಪುಟಗಳಲ್ಲಿ ತಮ್ಮ ಅನುಭವಗಳನ್ನು ಬರೆದಿಟ್ಟಿದ್ದಾರೆ. ಅವರ ಬರವಣಿಗೆಗಳನ್ನು ಈಗ ಆಂಗ್ಲ ಭಾಷೆಗೆ ಭಾಷಾಂತರಿಸಲಾಗಿದೆ. ಪಾನ್–ಕೌ ಎಂಬ ಬಹುಪುರಾತನ ಚೀನಿ ಲೇಖಕನ ಗ್ರಂಥದಲ್ಲಿ ಚೀನಾ ದೇಶಕ್ಕೂ ಮತ್ತು ದಕ್ಷಿಣ ಭಾರತಕ್ಕೂ ಕ್ರಿ.ಪೂ.ಎರಡನೇ ಶತಮಾನದ ಪ್ರಾರಂಭದಿಂದ ಬೇಕಾದಷ್ಟು ಸಂಪರ್ಕವಿತ್ತೆಂದು ಗೊತ್ತಾಗುತ್ತದೆ. ಚಿತ್ರದುರ್ಗದ ಬಳಿ ಇರುವ ಸುಮಾರು ಮೂರು ಸಾವಿರ ವರ್ಷಗಳಿಗೆ ಮೀರಿದ ಪ್ರಾಚೀನತೆಯುಳ್ಳ ಚಂದ್ರವಳ್ಳಿಯ ಶೋಧನೆಯಲ್ಲಿ ಕ್ರಿ.ಪೂ.139ರಲ್ಲಿ ಆಳುತ್ತಿದ್ದ ಹ್ಯಾಉಗಿ ಎಂಬ ಚೀನಿ ಚಕ್ರವರ್ತಿರ್ಯಯ ಹಿತ್ತಾಳೆ ನಾಣ್ಯ ಸಿಕ್ಕಿದೆ. ಇದನ್ನು ಕ್ರಿ.ಶ.1909ರಲ್ಲಿ ಮೈಸೂರು ರಾಜ್ಯದ ಪುರಾತತ್ವ ಇಲಾಖೆಯ ಹಿತ್ತಾಳೆ ನಾಣ್ಯ ಸಿಕ್ಕಿದೆ. ಇದನ್ನು ಕ್ರಿ.ಶ.1909ರಲ್ಲಿ ಮೈಸೂರು ರಾಜ್ಯದ ಪುರಾತತ್ವ ಇಲಾಖೆಯ ನಿರ್ದೇಶಕರಾಗಿದದ್ ಆರ್.ನರಸಿಂಹಾಚಾರ್ ಪತ್ತೆ ಮಾಡಿದರು. ಇದನ್ನು ಅವರು ಹಿತ್ತಾಳೆ ನಾಣ್ಯವೆಂದು ಬಣ್ಣಿಸಿದರು. ಡಾ.ರಾಜಶೇಖರ ಅವರಿಗೆ ಇನ್ನೊಂದು ಚೀನೀ ನಾಣ್ಯವು ಚಂದ್ರವಳ್ಳಿಯಲ್ಲಿ ದೊರಕಿತು. ಹಂಪಿಯ ಉತ್ಖನನದಲ್ಲಿ ಅನೇಕ ಚೀನೀ ನಾಣ್ಯಗಳು ದೊರಕಿದ್ದು, ಅವುಗಳ ಅಧ್ಯಯನ ಇನ್ನೂ ನಡೆಯಬೇಕಾಗಿದೆ. ಕ್ರಿ.ಪೂ.2ನೇ ಶತಮಾನದಲ್ಲಿ ಚೀನಾ ಸಾರ್ವಭೌಮನು ತನ್ನ ರಾಜದೂತರನ್ನು ಕಂಚಿಯ ರಾಜನ ಆಸ್ಥಾನಕ್ಕೆ ಕಳಿಸಿಕೊಟ್ಟನು. ದಕ್ಷಿಣ ಭಾರತದಿಂದಲೂ ಚೀನಾ ದೇಶಕ್ಕೆ ಬೌದ್ಧ ಸನ್ಯಾಸಿಗಳು ಹೋಗಿದ್ದರು. ಉದಾ: ಸಂಘವರ್ಮಿ ಮತ್ತು ಗುಣವರ್ಮ. ಹಾಗೆಯೇ ದಕ್ಷಿಣ ಭಾರತಕ್ಕೂ ಚೀನಾ ದೇಶಕ್ಕೂ ಇದ್ದ ವಿಶೇಷ ಸಂಪರ್ಕದ ಅರಿವು ಕ್ರಿ.ಶ.125ರಲ್ಲಿ ಪಾನ್‌ಯಾಂಗ್ ಎಂಬ ಸೇನಾಧಿಪತಿ ತನ್ನ ಚಕ್ರವರ್ತಿಗೆ ಮಾಡಿದ ವರದಿಯೊಂದರಿಂದ ಗೊತ್ತಾಗುತ್ತದೆ. ಅದರಲ್ಲಿ ದಕ್ಷಿಣ ಭಾರತದ ವರ್ಣನೆ, ವಜ್ರ, ವೈಡೂರ್ಯ ಮತ್ತು ಚಂದನ, ಬಟ್ಟೆ, ಮೆಣಸು, ಶುಂಠಿಗಳ ವಿಚಾರಗಳಿವೆ. ಹಾಗೆಯೇ ಕ್ರಿ.ಶ.105, 109 ಮತ್ತು ಕ್ರಿ.ಶ.161ರಲ್ಲಿ ಚೀನಾಕ್ಕೆ ಹೋದ ರಾಯಭಾರಿಗಳ

ವಿಚಾರವೂ ಇದರಲ್ಲಿ ಉಲ್ಲೇಖವಾಗಿದೆ. ಚೀನಾ ದೇಶದ ಬೌದ್ಧ ಭಿಕ್ಷುಗಳು ಹೆಚ್ಚು ಸಂಖ್ಯೆಯಲ್ಲಿ ಕ್ರಮೇಣ ಭಾರತಕ್ಕೆ ಬರತೊಡಗಿದರು. ಇವರಲ್ಲಿ ಫಾಹಿಯಾನ್, ಹ್ಯೂಯೆನ್-ತ್ಸಾಂಗ್ ಮತ್ತು ಇತ್ಸಿಂಗ್ ಪ್ರಮುಖರು. ಫಾಹಿಯಾನ್ ಎರಡನೇ ಚಂದ್ರಗುಪ್ತ ವಿಕ್ರಮಾದಿತ್ಯನ ಕಾಲದಲ್ಲಿ ಭಾರತಕ್ಕೆ ಬಂದು ಉತ್ತರ ಭಾರತದಲ್ಲಿ ಹೆಚ್ಚು ಕಾಲ ಸಂಚಾರ ಮಾಡಿ ಅಲ್ಲಿನ ಸ್ಥಿತಿಗತಿಗಳನ್ನು ವಿವರಿಸಿದ್ದರೂ ಕೂಡ ಅವನು ದಕ್ಷಿಣ ಭಾರತದಲ್ಲಿ ಸ್ವತಃ ಸಂಚರಿಸಲಿಲ್ಲ. ಆದ್ದರಿಂದ ಅವನ ಗ್ರಂಥದಲ್ಲಿ ದಕ್ಷಿಣ ಭಾರತ ಚರಿತ್ರೆಯ ರಚನೆಗೆ ಅಗತ್ಯ ಮಾಹಿತಿ ದೊರೆಯುವುದಿಲ್ಲ.

## ಹ್ಯೂಯೆನ್‌ತ್ಸಾಂಗ್

ಹ್ಯೂಯೆನ್‌ತ್ಸಾಂಗ್ ಚೀನಾದ ತಾಂಗ್ ರಾಜವಂಶದ ಕಾಲದಲ್ಲಿ ಭಾರತಕ್ಕೆ ಭೇಟಿ ನೀಡಿದ ಮೊದಲ ಯಾತ್ರಿಕ. ಈತ ಮಧ್ಯ ಚೀನಾದ ಹುನಾನ್ ಪ್ರಾಂತ್ಯದ ವೆನ್ ಪಾಪ್-ಕು ಎಂಬ ಹಳ್ಳಿಯಲ್ಲಿ ಕ್ರಿ.ಶ.600ರಲ್ಲಿ ಅಚಾರವಂತ ಕನ್‌ಫ್ಯೂಶಿಯಸ್ ಕುಟುಂಬದಲ್ಲಿ ಜನಿಸಿದನು. ಬೌದ್ಧಧರ್ಮವನ್ನು ಅಧ್ಯಯನ ಮಾಡುವ ಪರಮ ಉದ್ದೇಶದಿಂದ ಹ್ಯೂಯೆನ್‌ತ್ಸಾಂಗ್ ಕ್ರಿ.ಶ.629ರಲ್ಲಿ ಸಿಯಾಂ ಅನ್ನು ಬಿಟ್ಟು ಮಧ್ಯ ಏಷ್ಯಾದ ಉತ್ತರ ಮಾರ್ಗದ ಮೂಲಕ ಭಾರತಕ್ಕೆ ಬಂದನು. ಹ್ಯೂಯೆನ್‌ತ್ಸಾಂಗ್ "ಚೀನಾ ಇಂಡಿಯಾಗಳ ಸಂಸ್ಕೃತಿಯ ಸಾಮರಸ್ಯದ ಸಂಕೇತ"ವೆಂದು ಡಾ.ರಾಧಾಕೃಷ್ಣನ್‌ರವರು ತಮ್ಮ "ಚೀನಾ ಮತ್ತು ಭಾರತ" ಎಂಬ ಗ್ರಂಥದಲ್ಲಿ ಹೇಳಿದ್ದಾರೆ.

ಹ್ಯೂಯೆನ್‌ತ್ಸಾಂಗ್ ಕ್ರಿ.ಶ.640ರ ಸಮಯದಲ್ಲಿ ದಖನ್ ಮತ್ತು ತಮಿಳುನಾಡಿನಲ್ಲಿ ಸಂಚರಿಸಿದನು. ಈತ ವಿಂಧ್ಯ ಪರ್ವತವನ್ನು ದಾಟಿ ಇಮ್ಮಡಿ ಪುಲಕೇಶಿಯ ಆಸ್ಥಾನಕ್ಕೂ ಭೇಟಿ ನೀಡಿದ್ದನು. ಹ್ಯೂಯೆನ್‌ತ್ಸಾಂಗ್ ತನ್ನ ಮಹತ್ವದ ಕೃತಿ ಸಿ-ಯು-ಕಿ ಅಥವಾ ಪಶ್ಚಿಮ ದೇಶಗಳ ದಾಖಲೆಯಲ್ಲಿ ಎರಡನೇ ಪುಲಕೇಶಿ ಮತ್ತು ಹರ್ಷನ ನಡುವೆ ಕ್ರಿ.ಶ.634ರಲ್ಲಿ ನಡೆದ ನರ್ಮದ ಕಾಳಗವನ್ನೂ ಪ್ರಸ್ತಾಪಿಸಿದ್ದಾನೆ. ಅವನ ವಿಸ್ತಾರವಾದ ದಾಖಲೆಗಳಲ್ಲಿ ಇದೊಂದು ಸಣ್ಣ ರಾಜಕೀಯ ಹನಿಯಾಗಿದೆ. ಈ ಗ್ರಂಥದಲ್ಲಿ ಇಮ್ಮಡಿ ಪುಲಕೇಶಿಯ ವ್ಯಕ್ತಿತ್ವ ಮತ್ತು ದಕ್ಷಿಣ ಭಾರತದ ಭೌಗೋಳಿಕ ಲಕ್ಷಣಗಳನ್ನು ವಿವರಿಸಿದ್ದಾನೆ. ಹ್ಯೂಯೆನ್‌ತ್ಸಾಂಗ್ ತನ್ನ ಸಿ-ಯು-ಕಿಯಲ್ಲಿ ಬಾದಾಮಿ ಚಾಲುಕ್ಯ ಸಾಮ್ರಾಜ್ಯವು ಐದು ಸಹಸ್ರ 'ಲಿ'ಗಳಷ್ಟು ಸುತ್ತಳತೆ ಉಳ್ಳದ್ದಾಗಿದೆ. ಇಲ್ಲಿನ ಮಣ್ಣು ಫಲವತ್ತಾಗಿದೆ. ವಾಯುಗುಣ ಉಷ್ಣವಾಗಿದೆ. ಕಾಲವನ್ನು ಕ್ಷಣ, ತಕ್ಷಣ, ಲವ, ಮುಹೂರ್ತ್, ಕಾಲ, ದಿನ ಎಂದು ಅಳೆಯುತ್ತಾರೆ. ರಸ್ತೆಗಳು ಕಿರಿದಾಗಿ, ಸೊಟ್ಟಗೆ ಹೊಲಸಾಗಿವೆ. ಕಟುಕರು, ಬೆಸ್ತರು, ವರ್ತಕರು, ಊರಿನ ಹೊರಗೆ ವಾಸಿಸುತ್ತಾರೆ. ಮನೆಗಳನ್ನು ಮಣ್ಣು ಮತ್ತು ಗಾರೆಯಿಂದ ಕಟ್ಟಿ ಅದಕ್ಕೆ ಹುಲ್ಲು ಅಥವಾ ಹೆಂಚನ್ನು ಹೊದಿಸುತ್ತಾರೆ. ಕೂರಲು ಬಡವರ ಮನೆಗಳಲ್ಲಿ ಚಾಪೆಯನ್ನು ಬಳಸುತ್ತಾರೆ. ಬಿಳಿ ಬಟ್ಟೆಗೆ ಹೆಚ್ಚಿನ ಪ್ರಾಶಸ್ತ್ಯ. ಕೆಲವರು ಮೀಸೆಯನ್ನು ಕತ್ತರಿಸಿದರೆ ಮತ್ತೆ ಕೆಲವರು ಗಿರಲು ಮೀಸೆಯನ್ನು ಬಿಡುತ್ತಾರೆ. ಈ ಜನ ಸ್ನಾನ ಮಾಡದೆ ಏನನ್ನು ಮಾಡುವುದಿಲ್ಲ. ಮಣ್ಣಿನ ಪಾತ್ರೆ ಹೆಚ್ಚಾಗಿ ಬಳಸುತ್ತಾರೆ. ತಪ್ಪು ಮಾಡಿದವರನ್ನು ಜಲಪರೀಕ್ಷೆ, ಅಗ್ನಿಪರೀಕ್ಷೆ, ತೂಕಪರೀಕ್ಷೆ, ವಿಷಪರೀಕ್ಷೆಗಳಿಗೆ ಗುರಿಪಡಿಸುತ್ತಾರೆ ಎಂದಿದ್ದಾನೆ. ಹಾಗೆಯೇ ಕನ್ನಡನಾಡಿನ ಜನತೆಯ ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಗಳನ್ನೂ, ಅಜಂತ, ಬಾದಾಮಿ, ಬನವಾಸಿ, ಆಂಧ್ರ, ಬ್ರೂಚ್ ಸ್ಥಳಗಳನ್ನೂ, ದಾನ್ಯಕಟಕ ಮತ್ತು ಚೋಳನಾಡುಗಳಲ್ಲಿ ಜನಸಂಖ್ಯೆ ಕಡಿಮೆ ಇತ್ತು ಎಂಬ ವಿಚಾರವನ್ನೂ ತಿಳಿಸಿದ್ದಾನೆ. ಹ್ಯೂಯೆನ್‌ತ್ಸಾಂಗ್ ತನ್ನ ಬರವಣಿಗೆಯಲ್ಲಿ ಕಂಚಿ ಒಂದು ವಿದ್ಯಾಕೇಂದ್ರವಾಗಿತ್ತೆಂದನ್ನೂ, ಕಂಚಿಯಲ್ಲಿ 10 ಸಾವಿರ ಬೌದ್ಧ ಸನ್ಯಾಸಿಗಳು ವಾಸವಾಗಿದ್ದ ಅಂಶವನ್ನೂ ಜಿನ ದೇವಾಲಯಗಳ ಅಸ್ತಿತ್ವವನ್ನೂ ಮತ್ತು ಬೌದ್ಧ ಧರ್ಮದ ಕ್ಷೀಣತೆಯನ್ನು ಉಲ್ಲೇಖಿಸಿದ್ದಾನೆ. ಬನವಾಸಿಯಲ್ಲಿ 2 ಸಂಘರಮಗಳು, 3 ಸ್ತೂಪಗಳಿದ್ದವೆಂದೂ ಸಹ ತಿಳಿಸಿದ್ದಾನೆ. ಪಾಂಡ್ಯ ನಾಡಿನಲ್ಲಿ ನಿರ್ಗಂಧಿಕರು ಅಪಾರಸಂಖ್ಯೆಯಲ್ಲಿದ್ದ ವಿಚಾರವನ್ನು ಉಲ್ಲೇಖಿಸಿದ್ದಾನೆ ಒಟ್ಟಿನಲ್ಲಿ ಹ್ಯೂಯೆನ್‌ತ್ಸಾಂಗನ ಕಥನ ಫಾಹಿಯಾನನ ಕಥನಕ್ಕಿಂತ ರಸವತ್ತಾದುದು. ಆದುದರಿಂದಲೇ ಡಾ.ವಿ.ಎ.ಸ್ಮಿತ್‌ರವರು ಸಿ-ಯು-ಕಿ ಯಥಾರ್ಥವಾದ ವಿಷಯಗಳ ಭಂಡಾರವಾಗಿದ್ದು ಪುರಾತತ್ವ ಅಧ್ಯಯನದ ಪ್ರತಿಯೊಬ್ಬ ವಿದ್ಯಾರ್ಥಿಗೂ ಅವಶ್ಯಕವಾಗಿದೆ ಎಂದಿದ್ದಾರೆ. ಇಂತಹ ಹ್ಯೂಯೆನ್‌ತ್ಸಾಂಗ್ ಕ್ರಿ.ಶ.664ರಲ್ಲಿ ಮರಣ ಹೊಂದಿದನು. ಚೀನಾದ

ಪಶ್ಚಿಮ ರಾಜಧಾನಿಯಲ್ಲಿ ಅವನ ದೇಹವನ್ನು ಸಮಾಧಿ ಮಾಡಲಾಯಿತು. ಆದರೆ ಕ್ರಿ.ಶ.669ರಲ್ಲಿ ಚಕ್ರವರ್ತಿಯ ಆದೇಶದಂತೆ ಆ ಅವಶೇಷಗಳನ್ನು ಹೊರ ತೆಗೆದು ಬೇರೊಂದು ಕಡೆ ಹೂಳಲಾಯಿತು. ಅದರ ಮೇಲೆ ಹ್ಯೂಯೆನ್‌ತ್ಸಾಂಗನ ಕೊನೆ ದಿನಗಳನ್ನು ಶ್ರೀ ಜಿ.ಪಿ.ರಾಜರತ್ನಂರವರು ತಮ್ಮ "ಚೀನಾ ದೇಶದ ಬೌದ್ಧ ಯಾತ್ರಿಕರು" ಎಂಬ ಗ್ರಂಥದಲ್ಲಿ ವರ್ಣಿಸಿದ್ದಾರೆ.

## ಪುರಾತತ್ವ ಆಧಾರಗಳು ಅಥವಾ ಪ್ರಾಕ್ತನ ಆಧಾರಗಳು

ದಕ್ಷಿಣ ಭಾರತದ ಆದಿಮಾನವ ಜನಾಂಗಗಳ ಜೀವನವನ್ನರಿಯಲು (ಬರವಣಿಗೆಯ ಆಧಾರಗಳು ಅಲಭ್ಯವಾದ್ದರಿಂದ) ಮುಖ್ಯವಾಗಿ ಪುರಾತತ್ವ ಶೋಧನೆಯೇ ಪ್ರಧಾನವಾದುದು. ಪುರಾತತ್ವ ಶೋಧನೆಯೆಂದರೆ ಪ್ರಾಚೀನ ಸಂಸ್ಕೃತಿಯ ಅಧ್ಯಯನ ಅಥವಾ ದೇಶದ ಪ್ರಾಚೀನಾವಶೇಷಗಳನ್ನು ಕಂಡುಹಿಡಿಯುವುದು ಎಂದರ್ಥ. ಹಾಗೆಯೇ ಪ್ರಾಚೀನ ಪಟ್ಟಣಗಳ ಅವಶೇಷಗಳನ್ನು, ನಿವೇಶನಗಳನ್ನು ಭೂಶೋಧನೆಯಿಂದ ನಿರ್ಧರಿಸುವುದು, ಶಾಸನಗಳನ್ನು ಹುಡುಕಿ ಅವುಗಳ ಲಿಪಿ, ಕಾಲ, ಚಾರಿತ್ರಿಕಾಂಶಗಳನ್ನು ವಿಮರ್ಶಿಸುವುದು, ಹಳೆಯ ನಾಣ್ಯಗಳನ್ನು ವಿಮರ್ಶಿಸುವುದು. ಈ ಪ್ರಾಕ್ತನ ಆಧಾರಗಳು ಶಿಲಾಯುಗದಿಂದ ಕ್ರಿ.ಶ.12ನೇ ಶತಮಾನದ ಶಿಲಾಸ್ಮಾರಕಗಳವರೆಗೆ ವ್ಯಾಪಿಸಿವೆ. ಪುರಾತತ್ವ ಸಂಶೋಧನೆಯಿಂದ ವ್ಯಕ್ತವಾಗುವ ವಿಷಯಗಳಿಗೆ ಸಾಹಿತ್ಯಕ್ಕಿಂತಲೂ ಹೆಚ್ಚು ಪ್ರಾಧಾನ್ಯವಿದೆ. ಏಕೆಂದರೆ ನಮ್ಮ ದೇಶದ ಅನೇಕ ಗ್ರಂಥಗಳ ಕರ್ತೃತ್ವವನ್ನು, ಕಾಲವನ್ನು ನಿರ್ಧರಿಸುವುದು ಕಷ್ಟವಾಗಿದೆ. ಉದಾಹರಣೆಗೆ ಭಾರತೀಯ ಸಂಸ್ಕೃತಿಯಲ್ಲಿ ಕಾಳಿದಾಸ ಮತ್ತು ಭಾರವಿಗಳಿಗೆ ಅಗ್ರಸ್ಥಾನವಿದೆ. ಆದರೆ ಇವರು ಯಾವ ಕಾಲದಲ್ಲಿದ್ದರು ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಇಮ್ಮಡಿ ಪುಲಿಕೇಶಿಯ ಐಹೊಳೆ ಶಾಸನದಲ್ಲಿ ಆ ಶಾಶನದ ಕರ್ತೃವಾದ ರವಿಕೀರ್ತಿ ತಾನು ಕಾಳಿದಾಸ, ಭಾರವಿಗಳಿಗೆ ಸಮಾನನೆಂದು ಹೇಳಿಕೊಂಡಿರುವುದರಿಂದ ಆ ಶಾಸನದ ಕಾಲಕ್ಕೆ ಕ್ರಿ.ಶ.634ಕ್ಕೆ ಹಿಂದೆಯೇ ಈ ಕವಿಗಳಿದ್ದಿರಬೇಕೆಂದು ನಿರ್ಧರಿಸಬಹುದು. ಆದ್ದರಿಂದಲೇ "ಪ್ರಾಚ್ಯ ಸಂಶೋಧನವು ಪ್ರಾಚೀನ ಇತಿಹಾಸದ ಬಿರುಕುಗಳನ್ನು ತುಂಬಲು ಸಹಕಾರಿಯಾಗಿರುತ್ತದೆ" ಎಂಬುದಾಗಿ ರೋಮಿಲಾ ಥಾಪರ್ ಅಭಿಪ್ರಾಯ ಪಟ್ಟಿದ್ದಾರೆ.

ಭಾರತೀಯ ಪುರಾತತ್ವ ಇಲಾಖೆ ಇತ್ತೀಚೆಗೆ ಬೆಳೆಯುತ್ತಿರುವ ಸುಮಾರು ನೂರು ವರ್ಷಗಳ ವಿಜ್ಞಾನವಾಗಿದೆ. ಯೂರೋಪಿನ ವಿದ್ವಾಂಸರೇ ಅದರ ಮೂಲ ಪುರುಷರು. ಅವರು ಭಾರತದ ಭೂತಕಾಲದ ಇತಿಹಾಸವನ್ನು ಶೋಧಿಸಲು ಮತ್ತು ಬೆಳಕಿಗೆ ತರಲು ಪ್ರಾಮಾಣಿಕವಾಗಿ ಪ್ರಯತ್ನಿಸಿದರು. ಇಂಗ್ಲೆಂಡಿನ ಪ್ರಧಾನಿ ವಿಲಿಯಂ ಪಿಟ್‌ನ ಕಾಲದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಅಧಿಕಾರಿಯಾಗಿದ್ದ "ಸರ್ ವಿಲಿಯಂ ಜೋನ್ಸ್" ಕ್ರಿ.ಶ.1784ರಲ್ಲಿ "ಏಷ್ಯಾಟಿಕ್ ಸೊಸೈಟಿ ಆಫ್ ಬೆಂಗಾಲ್" ಎಂಬ ವಿದ್ವತ್ ಸಂಸ್ಥೆಯನ್ನು ಸ್ಥಾಪಿಸಿದನು. ಇದರಿಂದ ಬಂಗಾಳದಲ್ಲಿ ಭಾರತೀಯ ಪುರಾತನ ಅವಶೇಷಗಳ ಅಧ್ಯಯನವು ಪ್ರಾರಂಭವಾಯಿತು. ಕ್ರಿ.ಶ.1785ರಲ್ಲಿ ಚಾರ್ಲ್ಸ್ ವಿಲ್ಕಿನ್ಸ್‌ನು ಭಗವದ್ಗೀತೆ ಮತ್ತು ಹಿತೋಪದೇಶ ಗ್ರಂಥಗಳನ್ನು ಇಂಗ್ಲೀಷ್ ಭಾಷೆಗೆ ತರ್ಜುಮೆ ಮಾಡಿದನು. ಕ್ರಿ.ಶ.1789ರಲ್ಲಿ ವಿಲಿಯಂ ಜೋನ್ಸ್ ಕಾಳಿದಾಸನ ಅಭಿಜ್ಞಾನ ಶಾಕುಂತಲವನ್ನು ಇಂಗ್ಲೀಷಿಗೆ ತರ್ಜುಮೆ ಮಾಡಿದನು. ಕ್ರಿ.ಶ.1789ರಲ್ಲಿ ವಿಲಿಯಂ ಜೋನ್ಸ್ ಕಾಳಿದಾಸನ ಅಭಿಜ್ಞಾನ ಶಾಕುಂತಲವನ್ನು ಇಂಗ್ಲೀಷಿಗೆ ಅನುವಾದ ಮಾಡಿದನು. ಕ್ರಿ.ಶ.1801ರ ವೇಳೆಗೆ 50 ಉಪನಿಷತ್ತುಗಳು ಫ್ರೆಂಚ್ ಭಾಷೆಗೆ ತರ್ಜುಮೆಯಾದವು. ಕ್ರಿ.ಶ.1804ರಲ್ಲಿ ಬೊಂಬಾಯಿಯಲ್ಲಿ ಮತ್ತು ಕ್ರಿ.ಶ.1823ರಲ್ಲಿ ಲಂಡನ್ನಿನಲ್ಲಿ "ಏಷ್ಯಾಟಿಕ್ ಸೊಸೈಟಿಗಳು" ಸ್ಥಾಪನೆಯಾದವು. ಏಷ್ಯಾಟಿಕ್ ಸೊಸೈಟಿ ಆಫ್ ಬೆಂಗಾಲ್‌ನ ಕಾರ್ಯದರ್ಶಿಯಾಗಿದ್ದ ಜೇಮ್ಸ್‌ಪ್ರಿನ್ಸ್‌ಪ್ ಕ್ರಿ.ಶ.1837ರಲ್ಲಿ ಬ್ರಾಹ್ಮಿಲಿಪಿಯಲ್ಲಿದ್ದ ಅಶೋಕನ ಶಾಸನಗಳನ್ನು ಓದಿ ಏಷ್ಯಾಟಿಕ್ ಸೊಸೈಟಿಯ ಪತ್ರಿಕೆಯಲ್ಲಿ ಪ್ರಕಟಿಸಿದರು. ಪ್ರಿನ್ಸ್‌ಪ್‌ನ ಈ ಮಹತ್ತರವಾದ ಕೊಡುಗೆಯು ತೆರೆಯಿಂದ ಮುಚ್ಚಿಹೋಗಿದ್ದ ಪ್ರಾಚೀನ ಶಾಸನಗಳ ಅಧ್ಯಯನದಲ್ಲಿ ಒಂದು ನೂತನ ಯುಗವನ್ನು ಕಾಣುವಂತೆ ಮಾಡಿತು. ಮುಂದೆ ಡಾ.ಕನಿಂಗ್‌ಹ್ಯಾಂ, ಡಾ.ಭವುದಾಜಿ ಮತ್ತು ರಾಜೇಂದ್ರಲಾಲ್ ಮಿತ್ರ, ಭಗವಾನ್‌ಲಾಲ್ ಇಂದ್ರಾಜಿ, ರಾಮಕೃಷ್ಣ ಗೋಪಾಲ,

ಬಂಡಾರ್ಕರ್, ವಿಶ್ವನಾಥಕಾಶಿನಾಥ ರಾಜವಾಡೆ, ಆರ್.ಜಿ.ಭಂಡಾರ್‌ಕರ್, ಪ್ರಿನ್ಸ್‌ಪ್ ಬೆಳಗಿಸಿದ ಈ ಜ್ಞಾನಜ್ಯೋತಿಯನ್ನು ಮತ್ತಷ್ಟು ಬೆಳಗುವಂತೆ ಮಾಡಿದರು.

ಕ್ರಿ.ಶ.1857ರ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಬ್ರಿಟಿಷರ ಕಣ್ಣನ್ನು ತೆರೆಸಿ ಬ್ರಿಟಿಷರು ಭಾರತೀಯ ಚರಿತ್ರೆಯ ಬಗ್ಗೆ ಮತ್ತಷ್ಟು ಆಸಕ್ತಿ ವಹಿಸುವಂತೆ ಮಾಡಿತು. ಕ್ರಿ.ಶ.1862ರಲ್ಲಿ ಜನರಲ್ ಅಲೆಗ್ಸಾಂಡರ್ ಕನಿಂಗ್‌ಹ್ಯಾಂನನ್ನು ಸರ್ಕಾರದ ಪುರಾತತ್ವ ಸರ್ವೆಯರ್ ಆಗಿ ನೇಮಕ ಮಾಡಲಾಯಿತು. ಇದು ಭಾರತ ಸರ್ಕಾರವು ಕೈಗೊಂಡ ಮೊದಲನೆಯ ಅಧಿಕೃತ ನಿರ್ಧಾರವಾಗಿತ್ತು ಮತ್ತು ಭಾರತದ ಪ್ರಾಚೀನ ಪರಂಪರೆಯನ್ನು ನಾಶವಾಗದಂತೆ ಕಾಪಾಡಿಕೊಂಡು ಬರುವುದು ಬ್ರಿಟಿಷ್ ಸರ್ಕಾರದ ಕರ್ತವ್ಯವೆಂದು ತಿಳಿದಿದ್ದ ಕ್ಯಾನಿಂಗನ ಮೊದಲ ಹೆಜ್ಜೆಯೂ ಇದಾಗಿತ್ತು. ಡಾ.ಕನಿಂಗ್‌ಹ್ಯಾಂ ಕ್ರಿ.ಶ.1885ರಲ್ಲಿ ನಿವೃತ್ತವಾದ ಮೇಲೆ ಬರ್ಗೆಸ್, ಫ್ಲೀಟ್, ರೈಸ್, ಹುಲ್ಷ್, ಕೀಲ್‌ಹಾರನ್, ಬರ್ನಾಫ್, ಮ್ಯಾಕ್ಸ್‌ಮುಲ್ಲರ್, ಲಾಸೆನ್, ವೀಬರ್ ಫರ್‌ಗುಸನ್, ಮ್ಯಾಕ್‌ಡೋನೆಲ್, ರೈಸ್‌ಡೇವಿಡ್ಸ್, ಬ್ಲೂಮ್‌ಫೀಲ್ಡ್, ಬುಹ್ಲರ್ ಪಶ್ಚಿಮ ಭಾರತ ಮತ್ತು ದಕ್ಷಿಣ ಭಾರತದ ಗುಹಾಲಯಗಳನ್ನು ಪರಿಶೋಧಿಸಿ ಅವುಗಳ ಫಲಿತಾಂಶವನ್ನು ಉತ್ತಮವಾದ ಸಂಪುಟಗಳಲ್ಲಿ ಪ್ರಕಟಿಸಿದರು. ಕ್ರಿ.ಶ.1899ರಲ್ಲಿ ಲಾರ್ಡ್ ಕರ್ಜನ್ನನು ವೈಸ್‌ರಾಯಿಯಾದುದು ಭಾರತೀಯ ಪುರಾತತ್ವ ಚರಿತ್ರೆಯಲ್ಲಿ ಒಂದು ನೂತನ ಯುಗಾರಂಭಕ್ಕೆ ನಾಂದಿಯಾಯಿತು. ಕ್ರಿ.ಶ.1906ರಲ್ಲಿ ಬ್ರಿಟಿಷ್ ಸರ್ಕಾರ "ಕೇಂದ್ರ ಪುರಾತತ್ವ ಇಲಾಖೆ"ಯನ್ನು ಸ್ಥಾಪಿಸಿ ಸರ್ ಜಾನ್‌ಮಾರ್ಷೆಲ್‌ರವರನ್ನು ಅದರ ಮುಖ್ಯಸ್ಥನನ್ನಾಗಿ ನೇಮಿಸಿತು. ಅನಂತರ ದೇಶದ ವಿವಿಧ ಐತಿಹಾಸಿಕ ನಿವೇಶನಗಳಲ್ಲಿ ಭೂಸಂಶೋಧನಾ ಕಾರ್ಯ ಜರುಗಿತು.

ಪುರಾತತ್ವ ಆಧಾರಗಳನ್ನು ಅಧ್ಯಯನದ ದೃಷ್ಟಿಯಿಂದ 4 ಭಾಗಗಳನ್ನಾಗಿ ವಿಭಜಿಸಲಾಗಿದೆ. ಅವು ಯಾವುವೆಂದರೆ:

1) ಭೂ ಉತ್ಖನನ
2) ಶಾಸನಗಳು
3) ನಾಣ್ಯಗಳು
4) ಸ್ಮಾರಕಗಳು

## 1.15.1 ಭೂಉತ್ಖನನ

ದಕ್ಷಿಣ ಭಾರತದ ಇತಿಹಾಸದ ರಚನೆಗೆ ಭೂ ಸಂಶೋಧನೆಗಳು ಬಹು ಉಪಯುಕ್ತವಾದ ಮಾಹಿತಿಯನ್ನು ಒದಗಿಸುತ್ತವೆ. ಭಾರತೀಯರ ಬಹುಪಾಲು ಅವಶೇಷಗಳು ದಿಬ್ಬಗಳಲ್ಲಿ ಹೂತು ಹೋಗಿವೆ. ದಿಬ್ಬಗಳನ್ನು ಲಂಬವಾಗಿ ಬಾವಿಯಂತೆ ಆಳವಾಗಿ ಅಥವಾ ಮಟ್ಟವಾಗಿ ಸಮತಲದಲ್ಲಿ ಅಗೆಯಬಹುದು. ಇದನ್ನು "ಉತ್ಖನನ" ಎನ್ನುವರು. ಅಂದರೆ ಭೂಮಿಯನ್ನು ಅಗೆದು ಅದರಲ್ಲಿ ಅಡಗಿರುವ ಅವಶೇಷಗಳನ್ನು ಹೊರತೆಗೆದು ವೈಜ್ಞಾನಿಕವಾಗಿ ಪ್ರಯೋಗಗಳಿಗೆ ಒಳಪಡಿಸಿ ಅವುಗಳ ಕಾಲವನ್ನು ನಿರ್ಣಯಿಸುವುದೆ ಭೂಸಂಶೋಧನೆ. ಲಂಬ ಉತ್ಖನನ ಹಲವು ಸಂಸ್ಕೃತಿಗಳ ಕಾಲಾನುಕ್ರಮ ಸರಣಿಯನ್ನು ತೋರಿಸಿದರೆ, ಸಮತಲ ಉತ್ಖನನವು ಒಂದೇ ಕಾಲಕ್ಕೆ ಸೇರಿದಂತೆ ಆ ನಿವೇಶನದ ಸಂಸ್ಕೃತಿಯನ್ನು ತೋರಿಸುತ್ತದೆ. ಸಮತಲ ಉತ್ಖನನ ಬಹಳ ದುಬಾರಿಯಾದುದರಿಂದ ಬಹುಮಟ್ಟಿಗೆ ದಿಬ್ಬಗಳು ಲಂಬ ಉತ್ಖನನಕ್ಕೆ ಒಳಗಾಗಿವೆ. ಭೂ ಸಂಶೋಧನೆಯಿಂದ ದೊರೆತ ಅವಶೇಷಗಳ ಕಾಲಮಾನವನ್ನು ಕಾರ್ಬನ್ 14 (ಸಿ–14) ಮತ್ತು ಪೊಟಾಷಿಯಂ ವಿಧಾನಗಳ ಮೂಲಕ ನಿರ್ಧರಿಸಲಾಗುತ್ತದೆ. ಭೂ ಸಂಶೋಧನೆಗಳಿಂದ ಅನೇಕ ಅನುಕೂಲಗಳಿವೆ.

- ದಕ್ಷಿಣ ಭಾರತದಲ್ಲಿನ ಜನರ ಶಿಲಾಯುಧಗಳನ್ನು ತೋರಿಸಿಕೊಟ್ಟಿವೆ.

- ದಕ್ಷಿಣ ಭಾರತ ಅತ್ಯಂತ ಪ್ರಾಚೀನ ಕಾಲದಿಂದಲೂ ಮಾನವನ ವಾಸಸ್ಥಳವಾಗಿತ್ತೆಂಬುದನ್ನು ತೋರಿಸಿಕೊಟ್ಟಿವೆ.
- ಶಿಲಾಯುಗ, ಮಧ್ಯ ಶಿಲಾಯುಗ ಮತ್ತು ನವ ಶಿಲಾಯುಗ ಹಾಗೂ ತಾಮ್ರ ಶಿಲಾಯುಗಗಳ ನಾಗರೀಕತೆಯ ಕುರುಹುಳನ್ನು ತೋರಿಸಿಕೊಟ್ಟಿವೆ.
- ದಕ್ಷಿಣ ಭಾರತದ ಜನರು ಬಳಸುತ್ತಿದ್ದ ಮಡಿಕೆ, ಕುಡಿಕೆಗಳು, ವಾಸದ ಮನೆಮಠಗಳ ಆಕಾರ, ಆಹಾರ ಧಾನ್ಯಗಳ ಮತ್ತು ಉಪಕರಣಗಳನ್ನು ತೋರಿಸಿಕೊಟ್ಟಿವೆ.
- ಅನೇಕ ದೇಶೀಯ ಮತ್ತು ವಿದೇಶಗಳ ನಾಣ್ಯಗಳನ್ನು ಬೆಳಕಿಗೆ ತಂದಿವೆ.
- ದಕ್ಷಿನ ಭಾರತ ಮತ್ತು ರೋಮ್ ಮತ್ತಿತರ ದೇಶಗಳೊಡನೆ ಇದ್ದ ನಿಕಟ ವ್ಯಾಪಾರ ಬಾಂಧವ್ಯವನ್ನುಯ ತೋರಿಸಿಕೊಟ್ಟಿವೆ.

ಉತ್ತರ ಭಾರತದಲ್ಲಿ ಪ್ರಾಚೀನ ನಿವೇಶನಗಳ ಸಂಶೋಧನ ಕಾರ್ಯಗಳು ನಡೆದ ರೀತಿಯಲ್ಲೇ, ದಕ್ಷಿಣ ಭಾರತದಲ್ಲೂ ಅನೇಕ ಐತಿಹಾಸಿಕ ನಿವೇಶನಗಳ ಸಂಶೋಧನೆ ನಡೆದಿದೆ. ದಖನ್ ಪ್ರಸ್ಥಭೂಮಿಯು ಪ್ರಾಚೀನ ಮಾನವನನ್ನು ತನ್ನೆಡೆಗೆ ಆಕರ್ಷಿಸಿ, ಅಲ್ಲಿಯೇ ನೆಲೆಸುವಂತೆ ಮಾಡಿ ತನ್ನ ಸಂಸ್ಕೃತಿಯನ್ನು ಹರಡಲು ಅವಕಾಶ ಮಾಡಿಕೊಟ್ಟಿದೆ. ಹೀಗಾಗಿ ದಕ್ಷಿಣ ಭಾರತದ ದಖನ್ ಭೂಭಾಗವು ಮಾನವನ ಅತ್ಯಂತ ಪ್ರಾಚೀನ ನಿವಾಸವಾಗಿರಬೇಕೆಂದು ಅಭಿಪ್ರಾಯ ಪಡಲಾಗಿದೆ. ಈ ಅಂಶವನ್ನು ಪುಷ್ಟೀಕರಿಸಲು ದಕ್ಷಿಣ ಭಾರತದ ಹಲವು ಭಾಗಗಳಲ್ಲಿ ಭೂಉತ್ಖನನಗಳು ನಡೆದಿವೆ. "ಆರ್ಕಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾ" ಇಲಾಖೆ, ಕರ್ನಾಟಕ ರಾಜ್ಯ ಪುರಾತತ್ವ ಇಲಾಖೆ, ಪುಣೆಯ ಡೆಕ್ಕನ್ ಕಾಲೇಜಿನ ಪುರಾತತ್ವ ಇಲಾಖೆ ಹಾಗೂ ತಿರುವಾಂಕೂರು, ಕೊಚ್ಚಿನ್ ಮತ್ತು ಪುದುಕೋಟೆಯ ಪುರಾತತ್ವ ಇಲಾಖೆಯವರು ಉತ್ಖನನಗಳನ್ನು ಮಾಡಿ ಹಲವಾರು ಶೋಧನೆಗಳನ್ನು ಬೆಳಖಿಗೆ ತಂದಿದ್ದಾರೆ. ಈ ನಿಟ್ಟಿನಲ್ಲಿ 'ರಾಬರ್ಟ್ ಬ್ರೂಸ್‌ಫುಟ್, ಬಿ.ಎಲ್.ರೈಸ್, ಮೆಡೋಸ್ ಟೇಲರ್, ಡಾ.ಎಂ.ಎಚ್.ಕೃಷ್ಣ, ಮಾರ್ಟಿಮರ್ ವ್ಹೀಲರ್, ಆರ್.ವಿ.ಜೋಷಿ, ಡಾ.ಎಂ.ಶೇಷಾದ್ರಿ, ಡಾ.ಬಿ.ಸುಬ್ಬರಾವ್, ಸಂಪತ ಐಯ್ಯಂಗಾರ್, ಡಾ.ಕೆ.ಪಡ್ಡಯ್ಯ ಮತ್ತು ಇತ್ತೀಚೆಗೆ ತಲಕಾಡಿನ ಭೂಸಂಶೋಧನೆಯಲ್ಲಿ ನಿರತರಾಗಿರುವ ಡಾ.ರಂಗರಾಜು'ರವರ ಸೇವೆ ಶ್ಲಾಘನೀಯವಾದುದು.

### 1.15.2 ಶಾಸನಗಳು

ದಕ್ಷಿಣ ಭಾರತದ ಚರಿತ್ರೆಯ ರಚನೆಗೆ ಶಾಸನಗಳು ಅಮೂಲ್ಯವಾದ ಆಕಾರಗಳಾಗಿವೆ ಹಾಗೂ ವಿಶಾಲವಾದ ಮಾಹಿತಿಗಳನ್ನು ಒದಗಿಸುವ ನಿಧಿಗಳಾಗಿವೆ ಮತ್ತು ಜೀವಂತ ಜೀವಾಳವಾಗಿವೆ. ಶಾಸನಗಳ ಅಧ್ಯಯನವನ್ನು ಶಾಸನಶಾಸ್ತ್ರ ಎಂತಲೂ, ಶಾಸನಗಳು ಹಾಗೂ ಹಳೆಯ ದಾಖಲೆಗಳ ಬರವಣಿಗೆಯ ಅಧ್ಯಯನವನ್ನು ಲಿಪಿಶಾಸ್ತ್ರ ಅಥವಾ ಪ್ಯಾಲಿಯೋಗ್ರಫಿ ಎಂತಲೂ ಕರೆಯುತ್ತಾರೆ. ನಮ್ಮ ಪೂರ್ವಜರು ಶಾಸನಗಳನ್ನು ಕಲ್ಲುಬಂಡೆಗಳು, ದೇವಾಲಯಗಳ ಗೋಡೆಗಳು, ವಿಗ್ರಹಗಳು, ಸುಟ್ಟ ಮಣ್ಣಿನ ಮುದ್ರೆಗಳು ಮತ್ತು ತಾಮ್ರದ ತಟ್ಟೆಗಳ ಮೇಲೆ ಕೊರೆದಿದ್ದಾರೆ. ಸುಮಾರು 50 ಸಾವಿರಕ್ಕಿಂತ ಹೆಚ್ಚು ಶಾಸನಗಳು ದಕ್ಷಿಣ ಭಾರತದಲ್ಲಿ ದೊರಕಿರುವುದಾಗಿ ಅಂದಾಜು ಮಾಡಲಾಗಿದೆ. ಇವುಗಳಲ್ಲಿ ರಾಜರ ಅಧಿಕೃತ ಶಾಸನಗಳೂ, ದಾನ ಶಾಸನಗಳೂ, ವೀರರ ಸ್ಮರಣೆಗಾಗಿ ಸ್ಥಾಪಿಸಿದ ವೀರಕಲ್ಲುಗಳೂ ಸೇರಿವೆ. ದೇಶದ ಅನೇಕ ಮ್ಯೂಸಿಯಂಗಳಲ್ಲಿ ಇವುಗಳನ್ನು ರಕ್ಷಿಸಿಟ್ಟಿದ್ದಾರೆ. ದಕ್ಷಿಣ ಭಾರತದ ಶಾಸನಗಳು ಕನ್ನಡ, ತೆಲುಗು, ತಮಿಳು, ಪ್ರಾಕೃತ, ಸಂಸ್ಕೃತ, ಮಲಯಾಳಂ, ಮರಾಠಿ ಮತ್ತು ಪರ್ಶಿಯನ್ ಹಾಗೂ ಅರೇಬಿಕ್ ಭಾಷೆಗಳಲ್ಲಿವೆ. ಕರ್ನಲ್ ಮೆಕೆಂಜಿ ಪ್ರಥಮ ಬಾರಿಗೆ ದಕ್ಷಿಣ ಭಾರತದ ವಿವಿಧ ಭಾಷೆಗಳ ಶಾಸನಗಳನ್ನು ಕ್ರಿ.ಶ.1783 ರಿಂದ 1821 ರವರೆಗೆ ಪ್ರಕಟಿಸುತ್ತಾ ಬಂದರು. ದಕ್ಷಿಣ

ಭಾರತಕ್ಕೆ ಸಂಬಂಧಿಸಿದ ಸುಮಾರು 9000 ಶಾಸನಗಳನ್ನು ಮೆಕೆಂಝಿ ಸಂಗ್ರಹಿಸಿದ್ದಾರೆ. ನಂತರ ವಾಲ್ಟರ್ ಈಲಿಯಟ್ ಹೆಸರಿನಲ್ಲಿ ಅನೇಕ ಶಾಸನಗಳನ್ನು ಪ್ರಕಟಿಸಿದರು. ಈಲಿಯಟ್ ಒಟ್ಟು ಸುಮಾರು 600 ಶಾಸನಗಳನ್ನು ಸಂಗ್ರಹಿಸಿದ್ದಾರೆ. ಶಾಸನಗಳಲ್ಲಿ ಎರಡು ವಿಧ.

1) ಶಿಲಾಶಾಸನಗಳು 2) ತಾಮ್ರ ಶಾಸನಗಳು

## ಐಹೊಳೆ ಶಾಸನ

ಐಹೊಳೆ ಶಾಸನ ಕ್ರಿ.ಶ.634ರಲ್ಲಿ ರಚಿತವಾಯಿತು. ರವಿಕೀರ್ತಿ ಈ ಶಾಸನದ ಕರ್ತೃ. ಈತ ಇಮ್ಮಡಿ ಪುಲಿಕೇಶಿಯ ದಂಡನಾಯಕನೂ, ಅಮಾತ್ಯನೂ ಮತ್ತು ಆಸ್ಥಾನಕವಿಯೂ ಆಗಿದದ್ದು. ಜೈನ ವಿದ್ವಾಂಸನಾಗಿದದ ರವಿಕೀರ್ತಿ ಈ ಐಹೊಳೆ ಶಾಸನವನ್ನು ಮೇಗುತಿ ಜಿನಾಲಯವು ಗೋಡೆಯ ಮೇಲೆ ಕೊರೆದಿದ್ದಾನೆ. ಸಂಸ್ಕೃತ ಭಾಷೆ ಹಾಗೂ ಕನ್ನಡ ಲಿಪಿಯಲ್ಲಿರುವ ಈ ಶಾಸನವು 18 ಸಾಲುಗಳನ್ನು ಹೊಂದಿದೆ. ಜಿನೇಂದ್ರನ ಸ್ತುತಿಯಿಂದ ಆರಂಭವಾಗಿರುವ ಈ ಶಾಸನವು ಬಾದಾಮಿ ಚಾಲುಕ್ಯರ ವಂಶಾವಳಿ ಮತ್ತು ಇಮ್ಮಡಿ ಪುಲಿಕೇಶಿಯ ದಿಗ್ವಿಜಯಗಳು, ಘನತೆ ಹಾಗೂ ಸಾಧನೆಗಳ ಬಗ್ಗೆ ವಿವರಣೆ ನೀಡುತ್ತದೆ. ವೈಷ್ಣವ ಮತಾವಲಂಬಿಯಾಗಿದ್ದ ಚಾಲುಕ್ಯ ಚಕ್ರೇಶ್ವರನು ಜೈನ ಕವಿಗೂ ಜಿನಾಲಯಗಳಿಗೂ ನೀಡಿದ್ದ ಪ್ರೋತ್ಸಾಹ ಮತ್ತು ವಿವಿಧ ಪಂಥಗಳ ಪರಸ್ಪರ ಮೈತ್ರಿಯ ಈ ಶಾಸನದಿಂದ ಮನವರಿಕೆಯಾಗುತ್ತದೆ. ಸಮುದ್ರಗುಪ್ತನ ಅಲಹಬಾದ್ ಸ್ತಂಭ ಶಾಸನದಂತೆ ರವಿಕೀರ್ತಿಯ ಐಹೊಳೆ ಶಾಸನ ಅಮೂಲ್ಯವಾದ ಐತಿಹಾಸಿಕ ದಾಖಲೆಯಾಗಿದೆ. ಕೀರ್ತಿವರ್ಮನು "ನಳ–ಮೌರ್ಯ ಕದಂಬ ಕಾಳರಾತ್ರಿ"ಯೆಂದು ಐಹೊಳೆ ಶಾಸನದಲ್ಲಿ ವರ್ಣಿತವಾಗಿದ್ದಾನೆ. ಚಾಲುಕ್ಯರ ರಾಜರಿಗೆಲ್ಲ 'ಪೃಥ್ವೀವಲ್ಲಭ' ಎಂಬ ಬಿರುದಿತ್ತೆಂದು ತಿಳಿಸುತ್ತದೆ. ಐಹೊಳೆ ಶಾಸನದ ಪ್ರಕಾರ ಇಮ್ಮಡಿ ಪುಲಿಕೇಶಿ ರಾಷ್ಟ್ರಕೂಟರ ವಂಶಜರಾದ ಗೋವಿಂದ ಮತ್ತು ಅಪ್ಪಾಯಕನಿಂದ ಉಂಟಾಗಿದ್ದ ಸಮಸ್ಯೆಯನ್ನು ಬಗೆಹರಿಸಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡನು. ನಂತರ ಸಾಮ್ರಾಜ್ಯದ ವಿಸ್ತರಣಾ ದೃಷ್ಟಿಯಿಂದ ಆಕ್ರಮಣಗಳನ್ನು ಆರಂಭಿಸಿದನು. ಇವನ ಆಕ್ರಮಣಕ್ಕೆ ಗಂಗರು, ಕದಂಬರು ಮತ್ತು ಶಿವಮೊಗ್ಗ ಜಿಲ್ಲೆಯ ಹುಂಚದ ಆಳುಪರು ಬಲಿಯಾಗಿ ಶರಣಾಗತರಾದರು. ಉತ್ತರ ಪಥೇಶ್ವರನಾದ ಹರ್ಷನಿಗೂ ಮತ್ತು ದಕ್ಷಿಣ ಪಥೇಶ್ವರನಾದ ಇಮ್ಮಡಿ ಪುಲಿಕೇಶಿಗೂ ಕ್ರಿ.ಶ.634ರಲ್ಲಿ ನರ್ಮದ ನದಿ ತೀರದಲ್ಲಿ ನಡೆದ ಯುದ್ಧದ ಬಗ್ಗೆ ಈ ಶಾಸನ ಮಾಹಿತಿ ನೀಡುತ್ತದೆ. "ಪುಲಿಕೇಶಿಯೊಡನೆ ಯುದ್ಧದಲ್ಲಿ ಹರ್ಷವರ್ಧನನು ತನ್ನ ಹರ್ಷವನ್ನು ಕಳೆದುಕೊಂಡ"ನೆಂದು ತಿಳಿಸುತ್ತದೆ. ಹಾಗೆಯೆ ನರ್ಮದಾ ನದಿ ಚಾಲುಕ್ಯರ ಸಾಮ್ರಾಜ್ಯದ ಗಡಿಯಾಯಿತೆಂಬ ವಿಚಾರವನ್ನೂ ಮತ್ತು ಹರ್ಷನ ಮೇಲಿನ ವಿಜಯದ ಸಂಕೇತವಾಗಿ ಇಮ್ಮಡಿ ಪುಲಕೇಶಿ "ಪರಮೇಶ್ವರ" ಎಂಬ ಬಿರುದನ್ನು ಧರಿಸಿದನೆಂಬ ವಿಚಾರವನ್ನು ತಿಳಿಸುತ್ತದೆ. ಅಲ್ಲದೆ ಐಹೊಳೆ ಶಾಸನವು ಪುರಿ ಬಂದರನ್ನು ಪಶ್ಚಿಮ ಕರಾವಳಿಯ 'ಲಕ್ಷ್ಮಿ'ಯೆಂದು ವಿವರಿಸುತ್ತದೆ ಮತ್ತು ಚತುರ್ವೇದಿ ಘನ ಸಂಸ್ಥೆಯ ಸದಸ್ಯರೆನಿಸಿದ್ದ 'ಐನೂರ್ವರ್'ಗಳಿಗೆ ದತ್ತಿಬಿಟ್ಟ ವಿಚಾರವನ್ನು ತಿಳಿಸುತ್ತದೆ. ರವಿಕೀರ್ತಿ ಈ ಶಾಸನದಲ್ಲಿ ತಾನು ಭಾರವಿ ಮತ್ತು ಕಾಳಿದಾಸನಿಗೆ ಸಮಾನನೆಂದು ಹೇಳಿಕೊಂಡಿರುವುದರಿಂದ ಕ್ರಿ.ಶ.634ಕ್ಕೆ ಹಿಂದೆಯೇ ಭಾರವಿ ಮತ್ತು ಕಾಳಿದಾಸರು ಇದ್ದಿರಬಹುದೆಂದು ಈ ಶಾಸನದಿಂದ ನಿರ್ಧರಿಸಬಹುದು. ರವಿಕೀರ್ತಿಯನ್ನು ಬಾಣನಿಗೆ ಹೋಲಿಸಲಾಗಿದೆ.

ಕ್ರಿ.ಶ.630ರ ಲೋಹನೇರ ಶಾಸನ ಇಮ್ಮಡಿ ಪುಲಿಕೇಶಿಯನ್ನು "ಪರಮ ಭಾಗವತನೆಂದು ಮತ್ತು ಪೂರ್ವಾಪರ ಸಮುದ್ರಾಧಪತಿ" ಎಂದು ವರ್ಣಿಸುತ್ತದೆ. ನೆರೂರು ದತ್ತಿ ಶಾಸನವು ಒಂದನೇ ವಿಕ್ರಮಾದಿತ್ಯ ಮತ್ತು ಅವನ ಹಿರಿಯಣ್ಣನಾದ ಚಂದ್ರಾದಿತ್ಯನ ಬಗ್ಗೆ ತಿಳಿಸುತ್ತದೆ. ಉಲಚಾಲ ಶಾಸನವು ವಿಜಯಾದಿತ್ಯನು ಶಾಂತಿಪ್ರಿಯನಾಗಿದ್ದರೂ ಪಲ್ಲವರೊಡನೆ ಯುದ್ಧಕ್ಕಿಳಿದನೆಂದು ತಿಳಿಸುತ್ತದೆ. ಇಮ್ಮಡಿ ವಿಕ್ರಮಾದಿತ್ಯನ ಕಂಚಿ ಶಾಸನವು ಸಾಮ್ರಾಟನು ಪಲ್ಲವ ಅರಸನಾದ ಪರಮೇಶ್ವರ ವರ್ಮನನ್ನು ಸೋಲಿಸಿ ಕಂಚಿಯನ್ನು ವಶಪಡಿಸಿಕೊಂಡ ಘಟನೆಯನ್ನೂ ಹಾಗೂ ತಾನು ವಶಪಡಿಸಿಕೊಂಡ ಐಶ್ವರ್ಯವನ್ನೆಲ್ಲಾ ರಾಜಸಿಂಹೇಶ್ವರ

ದೇವಾಲಯಕ್ಕೆ ದಾನವಾಗಿ ನೀಡಿದ ಸಂಗತಿಯನ್ನು ವಿವರಿಸುತ್ತದೆ. ಲೋಕ ಮಹಾದೇವಿಯು ಪಟ್ಟದಕಲ್ಲಿನಲ್ಲಿ ಬರೆಯಿಸಿದ ಶಾಸನ ಇಮ್ಮಡಿ ವಿಕ್ರಮಾದಿತ್ಯನು ಕಂಚಿಯನ್ನು 3 ಬಾರಿ ಜಯಿಸಿದನೆಂದು ತಿಳಿಸುತ್ತದೆ. ಲಕ್ಷ್ಮೀಶ್ವರ ಶಾಸನವು ಬಾದಾಮಿ ಚಾಲುಕ್ಯರ ರಾಜ್ಯಧಿಕಾರಿಗಳ ಮತ್ತು ಮಹಾಜನ ಹಾಗೂ ನಖರರ ಕರ್ತವ್ಯ ಹೊಣೆಗಾರಿಕೆಯನ್ನು ವಿವರಿಸುತ್ತದೆ. ಈ ಶಾಸನದಲ್ಲಿ ಕಂಚುಗಾರರ ಮತ್ತು ತೆಲ್ಲಿಗರ ಶ್ರೇಣಿಗಳ ಬಗ್ಗೆಯೂ ಉಲ್ಲೇಖವಿದೆ. ಕ್ರಿ.ಶ.7ನೇ ಶತಮಾನದ ಆರ್ಯಭಟನ ಶಾಸನ, ಕ್ರಿ.ಶ.613 ಹೈದರಾಬಾದ್ ದಾಖಲೆ, ಕಪ್ಪರಂ ಶಾಸನ, ಕರ್ನೂಲ್ ಶಾಸನ ಮತ್ತು ಗದ್ವಾಲ ಶಾಸನಗಳು ಕೂಡ ಚಾಲುಕ್ಯರ ಬಗ್ಗೆ ಮಾಹಿತಿ ನೀಡುತ್ತವೆ.

ರಾಷ್ಟ್ರಕೂಟರ ಹೆಚ್ಚಿನ ಶಾಸನಗಳು ತಾಮ್ರ ಶಾಸನಗಳಾಗಿವೆ. ಇವರ ಶಾಸನಗಳು ವಿಷ್ಣು ಮತ್ತು ಶಿವನ ಸ್ತುತಿಯಿಂದ ಆರಂಭವಾಗುತ್ತವೆ. ಕ್ರಿ.ಶ.1954ರಲ್ಲಿ ದೊರೆತ ದಂತಿದುರ್ಗನ ಸಮನಗಡ ತಾಮ್ರ ಶಾಸನ ಮತ್ತು ಎಲ್ಲೋರ ತಾಮ್ರ ಶಾಸನ ದಂತಿದುರ್ಗನ ಬಗ್ಗೆ ತಿಳಿಸುತ್ತವೆ. ಒಂದನೇ ಕೃಷ್ಣನ ತಳೇಗಾಂವ್ ತಾಮ್ರ ಶಾಸನ, ಧ್ರುವನ ಜೆಟ್ಟಾಯಿ ಶಾಸನ, ಅಮೋಘವರ್ಷ ನೃಪತುಂಗನ ಸಂಜಾನ್ ತಾಮ್ರಪಟ ಶಾಸನಗಳು, ಭಾಂಡರ್ ಶಾಸನ, ಸಿರೂರು ಶಾಸನ, ನೀಲಗುಂದದ ಶಾಶನ, ನವಸಾರಿ ಶಾಸನ, ಬರೋಡ ಶಾಸನಗಳು, ವರ್ಧಾಶಾಶನ, ಕ್ರಿ.ಶ.914ರ ಬೆಗುಮ್ರ ತಾಮ್ರಪಟಗಳು ರಾಷ್ಟ್ರಕೂಟರ ಚರಿತ್ರೆಯ ಬಗ್ಗೆ ಬೆಳಕನ್ನು ಚೆಲ್ಲುತ್ತವೆ. ಅದರಲ್ಲೂ ಸಂಜಾನ್ ತಾಮ್ರಪಟ ಶಾಸನಗಳು ಪ್ರಜೆಗಳ ಯೋಗಕ್ಷೇಮಕ್ಕಾಗಿ ರಾಷ್ಟ್ರಕೂಟರ ಅರಸ ನೃಪತುಂಗ ತನ್ನ ಹೆಬ್ಬೆರಳನ್ನು ಕೊಲ್ಲೂರು ಮಹಾಲಕ್ಷ್ಮಿಗೆ ಅರ್ಪಿಸಿದ ಸಂಗತಿಯನ್ನು ತಿಳಿಸುತ್ತವೆ. ಅಲ್ಲದೆ ಮುಮ್ಮಡಿ ಗೋವಿಂದನ ಉತ್ತರ ಭಾರತದ ವಿಜಯ ಯಾತ್ರೆಯ ವರ್ಣನೆ ಇದೆ. ಅವನು ಗೂರ್ಜರ ಪ್ರತಿಹಾರರು, ಬಂಗಾಳದ ಪಾಲರು ಹಾಗೂ ಇತರ ಅನೇಕ ಉತ್ತರ ಭಾರತದ ರಾಜರನ್ನು ಸದೆಬಡಿದು ವಿಜಯೋನ್ಮುಖವಾಗಿ ಹಿಂದುಗುರಿದ ಸಂಗತಿಯನ್ನು ಸಂಜಾನ್ ತಾಮ್ರ ಶಾಸನಗಳಲ್ಲಿ ಯಥಾವತ್ತಾಗಿ ಚಿತ್ರಿಸಲಾಗಿದೆ. ಹಾಗೆಯೇ ಮೂರನೇ ಗೋವಿಂದನ ಅಶ್ವಗಳು ಮತ್ತು ಗಜಗಳು ಹಿಮಾಲಯದ ತೊರೆಗಳಲ್ಲಿ ಗುಳುಗುಳು ಎಂದು ಶಬ್ಧ ಮಾಡುತ್ತಾ ಹರಿದು ಬರುತ್ತಿದ್ದ ಗಂಗಾ ನದಿಯ ಪುಣ್ಯತೀರ್ಥವನ್ನು ಕುಡಿದವೆಂದೂ ಹಾಗೂ ಮೂರನೇ ಗೋವಿಂದನ ರಣ ಕಹಳೆಗಳು ಗಿರಿಕಂದರಗಳಲ್ಲಿ ಮಾರ್ದನಿಗುಟ್ಟಿದವೆಂದೂ ಸಂಜಾನ್ ತಾಮ್ರಶಾಸನಗಳಲ್ಲಿ ವರ್ಣಿಸ–ಲಾಗಿತ್ತು.

ರಾಷ್ಟ್ರಕೂಟ ಸಾಮ್ರಾಟ ಮೂರನೇ ಕೃಷ್ಣನು ಮಧ್ಯಪ್ರದೇಶದ ಜೂರಾ ಎಂಬಹಲ್ಲಿ ಬರೆಯಿಸಿದ ಶಾಸನವು ಐತಿಹಾಸಿಕ ಮಹತ್ವವನ್ನು ಪಡೆದಿವೆ. ಈ ಶಾಸನವು ಕನ್ನಡ ಕಾವ್ಯ ಶೈಲಿಯಲ್ಲಿದ್ದು 37 ಸಾಲುಗಳನ್ನು ಹೊಂದಿದೆ. ತುಯ್ಯಾಳ ಚಂದ್ರಯ್ಯ ಈ ಜೂರಾ ಶಾಸನದ ಕವಿಯಾಗಿದ್ದರೆ, ಚಿಮ್ಮಯ್ಯನು ಶಿಲ್ಪಿಯಾಗಿದ್ದಾನೆ. ಈ ಶಾಸನ ಮೂರನೇ ಕೃಷ್ಣನ ಸಾಧನೆ, ದಿಗ್ವಿಜಯ ಮತ್ತು ಅವನು ಧರಿಸಿದ ಬಿರುದುಗಳ ಬಗ್ಗೆ ವಿವರಣೆ ನೀಡುತ್ತದೆ.

ಮೊದಲನೇ ಅಮೋಘವರ್ಷನ ಕನ್ಹೇರಿ ಶಾಸನ ಬಂಗಾರದ ಡ್ರಮ್ಮದ ನಾಣ್ಯದ ಬಗ್ಗೆ, 4ನೇ ಗೋವಿಂದನ ಕ್ಯಾಂಬೆ ಶಾಶನ ಸುವರ್ಣ ನಾಣ್ಯವು ಸುಮಾರು 146 ಗ್ರೇನ್ ತೂಕವಿತ್ತೆಂಬುದರ ಬಗ್ಗೆ ತಿಳಿಸುತ್ತದೆ. ಕ್ರಿ.ಶ.880ರ ಮುಳುಗುಂದದ ಶಾಸನ ರಾಷ್ಟ್ರಕೂಟರ ಕಾಲದಲ್ಲಿ ಹಣಕಾಸಿನ ಸಂಘದ 4 ಜನ ಮುಖ್ಯಸ್ಥರು ಸುಮಾರು ಎರಡು ಸಾವಿರ ಬ್ರಾಹ್ಮಣ ವ್ಯಾಪಾರಿಗಳಿಗೆ ಉಡುಗೊರೆ ಕೊಟ್ಟಿದ್ದರೆಂದೂ, ಕ್ರಮೇಣ ಆ ಎಲ್ಲಾ ವ್ಯಾಪಾರಿಗಳು ಸಂಸ್ಥೆಯ ಸದಸ್ಯತ್ವ ಹೊಂದಿದರೆಂದೂ ತಿಳಿಸುತ್ತದೆ. ಮೂರನೇ ಕೃಷ್ಣನ ತಿರುವರೂರು ಶಾಸನ ಬಡ್ಡಿದರ ಶೇ.15 ರಷ್ಟಿತ್ತೆಂಬುದನ್ನು ತಿಳಿಸುತ್ತದೆ. ತಂಜಾವೂರಿನ ಚೋಳರ ಇತಿಹಾಸದ ರಚನೆಗೆ ಅನೇಕ ಶಾಸನಗಳು ಸಹಕಾರಿಯಾಗಿವೆ. ಅವುಗಳಲ್ಲಿ ಮುಖ್ಯವಾದವು.

## ಉತ್ತರ ಮೇರೂರು ಶಾಸನ

ಉತ್ತರ ಮೇರೂರು ಶಾಸನವನ್ನು ತಮಿಳುನಾಡಿನ ಚೆಂಗಲ್‌ಪೇಟೆ ಜಿಲ್ಲೆಯ ವೈಕುಂಠ ದೇವಸ್ಥಾನದ ಗೋಡೆಯ ಮೇಲೆ ಕೊರೆಯಲಾಗಿದೆ. ಇದು ಎರಡು ಶಾಸನಗಳಲ್ಲಿ ಅಡಕಗೊಂಡಿದೆ. ಈ ಶಾಸನ ಒಂದನೇ ಪರಾಂತಕನ ಕಾಲದಲ್ಲಿ ಕೆತ್ತಲ್ಪಟ್ಟಿತು. ಆದ್ದರಿಂದಲೇ ಇದನ್ನು ಒಂದನೇ ಪರಾಂತಕನ ಉತ್ತರ ಮೇರೂರು ಶಾಸನ ಎಂದು ಕರೆಯಲಾಗಿದೆ. ಇದು ಚೋಳರ ಸ್ಥಳೀಯ ಆಡಳಿತದ ಬಗ್ಗೆ ಸುದೀರ್ಘ ಮಾಹಿತಿಯನ್ನು ನೀಡುತ್ತದೆ. ಈ ಶಾಸನಗಳ ಪ್ರಕಾರ ಗ್ರಾಮ ಆಡಳಿತದಲ್ಲಿ ಉರ್ ಮತ್ತು ಸಭಾ ಎಂಬ 2 ರೀತಿಯ ಸಭೆಗಳಿದ್ದವು. ಈ ಉತ್ತರ ಮೇರೂರು ಶಾಸನ ಸಭಾದ ಬಗ್ಗೆ ಹೇಳುತ್ತಾ ಜ್ಞಾನ ಮತ್ತು ಗುಣಗಳಲ್ಲಿ ಉತ್ತಮರಾದವರು ಸಭಾದ ಸದಸ್ಯತ್ವ ಪಡೆದಿದ್ದರು ಎಂದು ಹೇಳುತ್ತದೆ ಹಾಗೂ ಸಂವತ್ಸರ ವರಿಯಮ್ (ವಾರ್ಷಿಕ ಸಮಿತಿ), ತೋಟ್ಟವರಿಯಮ್ (ಉದ್ಯಾನವನ ಸಮಿತಿ), ಪಂಚವರಿಯಮ್ (ಸ್ಥಾಯಿಸಮಿತಿ), ಏರಿವರಿಯಮ್ (ಕೆರೆ ಸಮಿತಿ) ಮತ್ತು ಪೊನ್ ವರಿಯಮ್ (ಚಿನ್ನದ ಸಮಿತಿ) ಎಂಬ ಗ್ರಾಮ ಸಮಿತಿಗಳ ಬಗ್ಗೆ ವಿವರಣೆ ನೀಡುತ್ತದೆ. ಉತ್ತರ ಮೇರೂರು ಶಾಸನದ ಪ್ರಕಾರ ಗ್ರಾಮಸಭೆಗೆ ಪ್ರತಿ ವಾರ್ಡ್‌ನಿಂದ ಒಬ್ಬ ಅಭ್ಯರ್ಥಿಯನ್ನು ಚುನಾವಣೆಯ ಮೂಲಕ ಆರಿಸಲಾಗುತ್ತಿತ್ತು. ಚುನಾವಣೆಯಲ್ಲಿ ಸ್ಪರ್ಧೆಗಿಳಿಯುತ್ತಿದ್ದ ವ್ಯಕ್ತಿಗಳ ಹೆಸರುಗಳನ್ನು ತಾಳೆಗರಿಯಲ್ಲಿ ಬರೆದು ಒಂದು ಪಾತ್ರೆಯಲ್ಲಿ ಹಾಕುತ್ತಿದ್ದರು. ನಂತರ ಸರ್ವಸದಸ್ಯರ ಮಹಾಸಭೆಯಲ್ಲಿ ಮಗುವಿನಿಂದ ಚೀಟಿಯೊಂದನ್ನು (ಲಾಟರಿ ವ್ಯವಸ್ಥೆ) ಪಾತ್ರೆಯಿಂದ ಎತ್ತುವುದರ ಮೂಲಕ ವಾರ್ಡಿನ ಪ್ರತಿನಿಧಿ ಯಾರೆಂದು ನಿರ್ಧರಿಸುತ್ತಿದ್ದರು. ಈ ಶಾಸನ ಗ್ರಾಮಸಭೆಯ ಅಭ್ಯರ್ಥಿಗಳ ಅರ್ಹತೆಯ ಬಗ್ಗೆ ಮಾಹಿತಿ ನೀಡುತ್ತದೆ. ಉದಾ: ಕನಿಷ್ಠ ಒಂದೂವರೆ ಎಕರೆ ಜಮೀನಿನ ಒಡೆಯನಾಗಿರಬೇಕು, ಸ್ವಂತ ಮನೆಯಲ್ಲಿ ವಾಸವಾಗಿರಬೇಕು, ವಯಸ್ಸು 35 ರಿಂದ 70 ವರ್ಷದ ಒಳಗಿರಬೇಕು ಇತ್ಯಾದಿ. ಹಾಗೆಯೇ ಉತ್ತರ ಮೇರೂರು ಶಾಸನ ಅಭ್ಯರ್ಥಿಗಳ ಕರ್ತವ್ಯಗಳು ಮತ್ತು ಗ್ರಾಮಸಭೆಗಳ ಕರ್ತವ್ಯಗಳ ಬಗ್ಗೆ ಉಲ್ಲೇಖಗಳನ್ನು ಒಳಗೊಂಡಿದೆ.

ಒಂದನೇ ರಾಜರಾಜಚೋಳನ ತಂಜಾವೂರು ಶಾಸನಗಳು ಚೋಳರ ವಂಶಾವಳಿ, ಉನ್ನತ ಅಧಿಕಾರಿಗಳು, ರಾಣಿಯರು, ದಾನದತ್ತಿ, ಭೂಮಿಗಳು, ದೇವದಾಸಿಯರು, ಅರ್ಚಕರು, ಸಂಗೀತಗಾರರು ಮುಂತಾದವುಗಳ ಬಗ್ಗೆ ವಿವರಣೆ ನೀಡುತ್ತದೆ. ವೀರ ರಾಜೇಂದ್ರನ ತಿರುಮಕೂಡಲು ಶಾಶನವು ವೈದ್ಯಶಾಲೆ ಮತ್ತು ಔಷಧಿಗಳಿಗೆ ಸಂಬಂಧಿಸಿದ ಉಪಯುಕ್ತ ಮಾಹಿತಿಯನ್ನು ನೀಡುತ್ತವೆ. ಅಟ್ಟೂರು ಶಾಸನ ಧಾರ್ಮಿಕ ಆಚಾರ–ವಿಚಾರಗಳ ಬಗ್ಗೆ ಬೆಳಕನ್ನು ಚೆಲ್ಲುತ್ತದೆ. ತಿರುವುಡೈ ಮರದೂರು ಶಾಶನ ರಾಜ ರಾಜ ಚೋಳನ ಕಾಲದ ದೇವಾಲಯಗಳ ಆಡಳಿತ ಮತ್ತು ನ್ಯಾಯ ವಿತರಣೆಯ ಬಗ್ಗೆ ಮಾಹಿತಿ ನೀಡುತ್ತದೆ.

ಕಲ್ಯಾಣಿ ಚಾಲುಕ್ಯರ ಶಾಸನಗಳಲ್ಲಿ ಆರನೇ ವಿಕ್ರಮಾದಿತ್ಯನ ಶಾಸನಗಳೇ ಅಧಿಕವಾಗಿವೆ. ಆರನೇ ವಿಕ್ರಮಾದಿತ್ಯನ ಕಾಲದ ಸುಮಾರು 300 ಶಾಸನಗಳು ಅವನ ಬಗ್ಗೆ ವಿವರಣೆ ನೀಡುತ್ತವೆ. ಅವುಗಳಲ್ಲಿ ವಡಗೇರಿ ಮತ್ತು ಹೈದರಾಬಾದ್ ಶಾಸನಗಳು ಆರನೇ ವಿಕ್ರಮಾದಿತ್ಯನ ವಿಕ್ರಮ ಶಕೆಯು ಕ್ರಿ.ಶ.1076ರಲ್ಲಿ ಪ್ರಾರಂಭವಾಯಿತೆಂದು ತಿಳಿಸುತ್ತವೆ. ಕ್ರಿ.ಶ.1074ರ ನೀಲಗಿರಿ ಶಾಸನ, ಹೈದರಾಬಾದ್ ಶಾಸನಗಳು ಕೂಡ ವಿಕ್ರಮಾದಿತ್ಯನ ಬಗ್ಗೆ ತಿಳಿಸುತ್ತವೆ. ಅತ್ತಿಮಬ್ಬೆಯ ಲಕ್ಕುಂಡಿ ಶಾಸನದಲ್ಲಿ ಲಕ್ಕುಂಡಿಯ ಮಹಾಜನರು "ವೈಷ್ಣವ ಗೀತಿ ಮನೋಹರರ್" ಎಂದು ಸ್ತುತಿತರಾಗಿದ್ದಾರೆ. ಕ್ರಿ.ಶ.1083ರ ಬೆಳ್ಳಿಗಾವೆ ಶಾಸನ ವಾಣಿಜ್ಯ ಸಂಘವೊಂದು 18 ಪಟ್ಟಣಗಳಲ್ಲಿ ತನ್ನ ಕಾರ್ಯಾಲಯಗಳನ್ನು ಪಡೆದಿತ್ತೆಂದು ತಿಳಿಸುತ್ತವೆ. ಮನಗೋಳಿಯ ಶಾಸನ ಕ್ರಿ.ಶ.1116ರಲ್ಲಿ ತೆಲ್ಲಿಗರು, ನೇಯ್ಗೆಕಾರರು, ಪಾಂಚಾಳರು, ಮೇದರು, ಚಾಪೆ ಎಣೆಯುವವರು, ಹಣ್ಣು ಮಾರುವವರು ಈ ಹಲವರು ಸಂಘಗಳವರು ನೀಡಿದ ದತ್ತಿಯನ್ನು ತಿಳಿಸುತ್ತವೆ. ಡಂಬಳ ಮತ್ತು ಕೊಲ್ಲಾಪುರದ ಶಾಸನಗಳು ವೀರ ಬಣಜಿಗಳನ್ನು ಮಹೋಗ್ರ ಧೈರ್ಯ ದೇವಿಯು ಆಲಂಗಿಸಿದ ವಕ್ಷಸ್ಥಳದವರೆಂದು ವಿವರಿಸುತ್ತವೆ. ಕ್ರಿ.ಶ.1092ರ

ಕಟಿಗೇರಿ ಶಾಸನವು 5 ಮಹಾಜನರು ತಮಗೆ ಸಲ್ಲಬೇಕಾದ ಸುಂಕವನ್ನು ದೇವಾಲಯವೊಂದಕ್ಕೆ ಒಪ್ಪಿಸಿದರೆಂಬುದನ್ನು ತಿಳಿಸುತ್ತದೆ.

ಕಳಚೂರಿ ಅರಸರ ಶಾಸನಗಳಲ್ಲಿ ಬಲ್ಲೇರಿ ಮತ್ತು ತಂಬೂರು ಶಾಸನಗಳು ಪ್ರಮುಖವಾಗಿದೆ. ಈ ಶಾಸನಗಳು ಬಿಜ್ಜಳನ ವ್ಯಕ್ತಿತ್ವ, ಸಾಧನೆ ಮತ್ತು ಅವನ ಉತ್ತರಾಧಿಕಾರಿಗಳ ಆಡಳಿತದ ಬಗ್ಗೆ ಮಾಹಿತಿ ನೀಡುತ್ತವೆ. ಕ್ರಿ.ಶ.1142ರ ಬಿಜಾಪುರದ ಶಾಸನ "ಬಿಜ್ಜಳ ಕ್ಷೋಣಿಪಾಲ" ಎಂದು ಸೂಚಿಸಿದೆ. ವಳಸಂಗದ ಶಾಸನ ವಿಕ್ರಮಾದಿತ್ಯನ ರಾಣಿ ಚಂದಲಾದೇವಿಯು ಬಿಜ್ಜಳನ ಮುತ್ತಬ್ಬೆಯೆಂದು ತಿಳಿಸುತ್ತದೆ. ಮರಡೀಪುರ, ಕಣ್ಣನ್ನೂರು, ಅರ್ಜುನಗಿ, ಹಿರಿಯೂರು ಮತ್ತು ಚೌಡದಾನಪುರ ಶಾಸನಗಳು ಭಕ್ತಿ ಭಂಡಾರಿ ಬಸವೇಶ್ವರರ ಜೀವನ ಮತ್ತು ಸಾಧನೆಗಳ ಬಗ್ಗೆ ಬೆಳಕನ್ನು ಚೆಲ್ಲುತ್ತವೆ. ಸಂಗಮನೇರ್, ಅಂಜನೇರಿ, ಸಂಗಂ, ಕಲಕೇರಿ, ಹಿಪ್ಪರಗಿ, ಕಲ್ಲೂರು ಕಡ್ಲೆವಾಡ ಮುಂತಾದ ಕಡೆಗಳಲ್ಲಿರುವ ಸೇವುಣರ ಎಂಟು ಶಾಸನಗಳು ದಕ್ಷಿಣ ಭಾರತದ ಚರಿತ್ರೆ ರಚನೆಗೆ ಉಪಯುಕ್ತವಾಗಿವೆ.

ವೈಭವಯುತವಾದ ದ್ವಾರಸಮುದ್ರದ ಹೊಯ್ಸಳರ ಶಾಸನಗಳು ಸಂಸ್ಕೃತ ಮತ್ತು ಕನ್ನಡ ಭಾಷೆಯಲ್ಲಿ ರಚಿತಗೊಂಡಿವೆ. ಕ್ರಿ.ಶ.11.17ರ ಬೇಲೂರು ಶಾಸನವು ವಿಷ್ಣುವರ್ಧನನ ಸಾಧನೆಗಳನ್ನು ಮತ್ತು ಹೊಯ್ಸಳ ವಂಶದ ಪ್ರಾರಂಭದ ರಾಜರುಗಳನ್ನು ತಿಳಿಸುತ್ತದೆ. ತಲಕಾಡು ಯುದ್ಧದಲ್ಲಿ ಚೋಳರನ್ನು ಸೋಲಿಸಿ ಅವನು ಗಂಗವಾಡಿ, ನೊಳಂಬವಾಡಿ ಹಾಗೂ ಕೊಂಗು ಪ್ರದೇಶಗಳ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸಿದ ಸಂಗತಿ ಈ ಶಾಸನದಿಂದ ತಿಳಿದುಬರುತ್ತದೆ. ಅಲ್ಲದೆ ಈ ಶಾಸನ ಬೇಲೂರು ಚೆನ್ನಕೇಶವ ದೇವಾಲಯದ ನಿರ್ಮಾಣ ಹಾಗೂ ಅದರ ದತ್ತಿಯ ವಿಚಾರವನ್ನು ಸಹ ಒಳಗೊಂಡಿದೆ. ಕಣ್ಣೇಗಾಲ ಶಾಸನ ವಿಷ್ಣುವರ್ಧನನ ಬಗ್ಗೆ ಬೆಳಕನ್ನು ಚೆಲ್ಲುತ್ತದೆ.

ಇಮ್ಮಡಿ ವೀರಬಲ್ಲಾಳನ ಗದಗ್ ಶಾಸನ ಅವನು ಕ್ರಿ.ಶ.1192ರವರೆಗೆ ಸೋಲಿಸಿದ ಶತ್ರುಗಳನ್ನು ಹಾಗೂ ಸೊರಟೂರು ಕದನದಲ್ಲಿ ಸೇವುಣರನ್ನು ಸಂಪೂರ್ಣವಾಗಿ ಸೋಲಿಸಿ ಕೃಷ್ಣಾನದಿಯವರೆಗೆ ರಾಜ್ಯ ವಿಸ್ತರಿಸಿ ಕರ್ನಾಟಕದ ಹೆಚ್ಚಿನ ಭಾಗದ ಮೇಲೆ ತನ್ನ ಸಾರ್ವಭೌಮತ್ವವನ್ನು ಸ್ಥಾಪಿಸಿದ ವಿಚಾರವನ್ನು ತಿಳಿಸುತ್ತದೆ. ಕೊಯಮತ್ತೂರು, ಮಧುರೈ ಮತ್ತು ಸೇಲಂ ಜಿಲ್ಲೆಗಳಲ್ಲಿ ಹಲವಾರು ಹೊಯ್ಸಳರ ಶಾಸನಗಳು ದೊರತಿವೆ. ಈ ದಾಖಲೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಎರಡನೇ ಬಲ್ಲಾಳನು ತಮಿಳು ದೇಶದ ಮೇಲೆ ಒಂದು ಬಗೆಯ ರಾಜಕೀಯ ಆಧಿಪತ್ಯವನ್ನು ಸ್ಥಾಪಿಸಿದುದಲ್ಲದೆ ಅಲ್ಲಿನ ಜನರ ಸಾಂಸ್ಕೃತಿಕ ಪ್ರಗತಿಗೂ ಗಮನವಿತ್ತಿದ್ದನೆಂದು ಕಂಡುಬರುತ್ತದೆ. ಲಾಲನಕೆರೆ ದಾನ ಶಾಸನ ಚೋಳ ರಾಜ ವಂಶದ ಚಿರಶತ್ರು ಪಾಂಡ್ಯ ರಾಜನು ದಾಳಿ ಮಾಡಿದಾಗ ಹೊಯ್ಸಳ ಸೈನ್ಯವು ಚೋಳರಾಜನ ಸಹಾಯಕ್ಕೆ ದಾವಿಸಿ ತನ್ನ ಶತ್ರುಗಳನ್ನು ಸೋಲಿಸಿತೆಂದು ತಿಳಿಸುತ್ತದೆ. ಅಲ್ಲದೆ ಹೊಯ್ಸಳ ಅರಸ ಎರಡನೇ ವೀರಬಲ್ಲಾಳ "ಚೋಳ ರಾಜ್ಯ ಪ್ರತಿಷ್ಠಾಪನಾಚಾರ್ಯ" ಮತ್ತು "ಪಾಂಡ್ಯ ಗಜಕೇಸರಿ" ಎಂಬುದಾಗಿಯೂ, ಅವನ ಮಗ ನರಸಿಂಹನು "ಚೋಳ ಕುಲೈಕ ರಕ್ಷಕ" ಎಂಬುದಾಗಿಯೂ ಬಿರುದುಗಳನ್ನು ಪಡೆದ ವಿಚಾರವನ್ನು ತಿಳಿಸುತ್ತದೆ.

ಹಳೇಬೀಡಿನ ದೇವಸ್ಥಾನದಲ್ಲಿರುವ ಶಾಸನ ಇಮ್ಮಡಿ ಬಲ್ಲಾಳ ಯುದ್ಧದಲ್ಲಿ ಮಡಿದ ಸುದ್ದಿ ಕೇಳಿದ ಸೇನಾಪತಿ ಕುವರಲಕ್ಷ್ಮ ಚಮೂಪನ ತನ್ನ ಒಂದು ಸಾವಿರ ಅನುಯಾಯಿಗಳೊಡನೆ ಪ್ರಾಣತ್ಯಾಗ ಮಾಡಿದನೆಂದು ತಿಳಿಸುತ್ತದೆ. ಲಕ್ಕುಂಡಿ ಶಾಸನ ಮೂರನೇ ವೀರಬಲ್ಲಾಳನ ಬಗ್ಗೆ ತಿಳಿಸುತ್ತದೆ. ದಾವಣಗೆರೆ ಶಾಸನ ಸಾಮಾಜಿಕ ಸೇವೆಯಲ್ಲಿ ಮೂರನೇ ಬಲ್ಲಾಳನ ಕಿರಿಯರಾಣಿ ಅಭಿವನ ಕೇತಲದೇವಿಯು ಕೊಂಡ ಮಡದಲ್ಲಿ ಪ್ರತಿ ಬುಧವಾರವೂ ಸಂತೆಯನ್ನು ನಡೆಸುವಂತೆ ಅಲ್ಲಿನ ಗೌಡರಿಗೂ ಮತ್ತು ಶೆಟ್ಟಿಗಳಿಗೂ ಆದೇಶವಿತ್ತಿದ್ದನ್ನು ವಿವರಿಸುತ್ತದೆ. ಯಳಂದೂರಿನ ಶಾಸನ ಮೂರನೇ ನರಸಿಂಹನ ಕಾಲದಲ್ಲಿ ಹುಲಿಯೊಂದನ್ನು ಧೈರ್ಯವಾಗಿ ಎದುರಿಸಿ ಅದನ್ನು ಕೊಂದು ಹಾಕಿದ "ಕಾಟೆಲ್" ಎಂಬ ಹಜಾಮನಿಗೆ ದತ್ತಿಯೊಂದನ್ನು ನೀಡಿದ ವಿಚಾರದ ಬಗ್ಗೆ

ಬೆಳಕನ್ನು ಚೆಲ್ಲುತ್ತದೆ. ಚಿಕ್ಕಮಗಳೂರಿನ ಶಾಸನ ಹೊಯ್ಸಳರ ಕಾಲದ ಕೆಲವು ಆಟಗಳ ಬಗ್ಗೆ ಮಾಹಿತಿ ನೀಡುತ್ತವೆ. ಒಟ್ಟಿನಲ್ಲಿ ಹೊಯ್ಸಳರ ಶಾಸನಗಳಲ್ಲಿ ಆಡಳಿತ ವ್ಯವಸ್ಥೆ, ಹೊಯ್ಸಳರು ಚೋಳ ಮತ್ತು ಪಾಂಡ್ಯರ ನಡುವಿನ ರಾಜಕೀಯ ಬಾಂಧವ್ಯ, ವ್ಯವಸಾಯಕ್ಕಾಗಿ ಕಟ್ಟಿಸಿದ ಕೆರೆಕಟ್ಟೆ ಮತ್ತು ಕಾಲುವೆಗಳ ವಿವರ, ವ್ಯಾಪಾರ, ಕೈಗಾರಿಕೆಗಳು ಹಾಗೂ ಸಂಘ ಸಂಸ್ಥೆಗಳ ವರ್ಣನೆಗಳು ದೊರೆಯುತ್ತವೆ.

ವಿಜಯನಗರಕ್ಕೆ ಸಂಬಂಧಿಸಿದಂತೆ ಸುಮಾರು ಏಳು ಸಾವಿರಕ್ಕಿಂತ ಅಧಿಕ ಶಾಸನಗಳು ಬೆಳಕಿಗೆ ಬಂದಿವೆ. ಕ್ರಿ.ಶ.1346ರ ಶೃಂಗೇರಿ ಶಾಸನ ವಿಜಯನಗರದ ಸಂಗಮ ಸಂತತಿಯ ಸಹೋದರರಾದ ಹರಿಹರ ಬುಕ್ಕ, ಮುದ್ದಪ್ಪ, ಮಾರಪ್ಪ ಮತ್ತು ಕಂಪಣ್ಣ ಶ್ರಂಗೇರಿ ಶಾರದ ಪೀಠಕ್ಕೆ ಭೇಟಿ ನೀಡಿದ ವಿಚಾರದ ಬಗ್ಗೆ ತಿಳಿಸುತ್ತದೆ.

ಈ ಮೇಲ್ಕಂಡ ಶಾಸನಗಳ ಜೊತೆಗೆ ವೀರಗಲ್ಲು ಮತ್ತು ಮಾಸ್ತಿಕಲ್ಲುಗಳು ಕೂಡ ಚರಿತ್ರೆಯ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿವೆ. ಒಟ್ಟಿನಲ್ಲಿ ಶಾಸನಗಳು ಎಂಬ ಬೇರುಗಳಿಂದ ಚರಿತ್ರೆಯೆಂಬ ಪುಷ್ಪ ಅರಳಿದೆ ಎಂದು ಭಾವಿಸಿದರೂ ಕೂಡ ಶಾಶನಗಳಲ್ಲಿ ನ್ಯೂನತೆಗಳು ಇಲ್ಲ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಕವಿಗಳು ಶಾಸನಗಳನ್ನು ರಚಿಸುವಾಗ ಉತ್ಪ್ರೇಕ್ಷೆಯಿರುತ್ತಿತ್ತೆಂಬುದರಲ್ಲಿ ಅನುಮಾನವಿಲ್ಲ. ಅನೇಕ ಶಾಸನಗಳನ್ನು ಅವುಗಳ ಮೂಲಸ್ಥಾನದಿಂದ ವರ್ಗಾಯಿಸಲಾಗಿದೆ. ಹೀಗಿರುವಾಗ ಚರಿತ್ರಕಾರ ಶಾಸನಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ತುಲನೆ ಮಾಡಿ, ವಿಮರ್ಶಿಸಿ ತರುವಾಯ ಚರಿತ್ರೆಯ ರಚನೆಯ ಕಾರ್ಯಕ್ಕೆ ಕೈಹಾಕಬೇಕು.

### 1.15.3 ನಾಣ್ಯಗಳು

ನಾಣ್ಯಗಳು ಒಂದು ದೇಶದ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ವಿಷಯಗಳನ್ನು ಪ್ರತಿಬಿಂಬಿಸುತ್ತವೆ. ಆದುದರಿಂದಲೇ ನಾಣ್ಯಶಾಸ್ತ್ರವನ್ನು ಪ್ರಾಚೀನ ಭಾರತೀಯ ಇತಿಹಾಸ ರಚನೆಗೆ ಉಪಯುಕ್ತವಾದ ಆಕರಗಳಲ್ಲಿ ಒಂದೆಂದು ಭಾವಿಸಲಾಗಿದೆ. ದಕ್ಷಿಣ ಭಾರತದ ಚರಿತ್ರೆಯ ರಚನೆಯಲ್ಲಿ ನಾಣ್ಯಗಳ ಪಾತ್ರ ಶಾಸನಗಳಷ್ಟೇ ಮಹತ್ತರವಾಗಿದೆ. ನಾಣ್ಯಗಳ ಅಧ್ಯಯನವನ್ನು ನಾಣ್ಯಶಾಸ್ತ್ರ ಎಂದು ಕರೆಯುತ್ತೇವೆ. ನಮ್ಮ ಪೂರ್ವಜರು ನಾಣ್ಯಗಳನ್ನು ಅಚ್ಚು ಹಾಕಿಸುವಾಗ ಚಿನ್ನ, ಬೆಳ್ಳಿ, ತಾಮ್ರ, ಸೀಸ, ಪೋಟನ್ ಮುಂತಾದ ಮಿಶ್ರಲೋಹಗಳನ್ನು ಬಳಸಿ ನಾಣ್ಯಗಳನ್ನು ತಯಾರಿಸಿದ್ದಾರೆ. ಆಧುನಿಕ ಕಾಲದಲ್ಲಿ ಬ್ಯಾಂಕಿಂಗ್ ವ್ಯವಸ್ಥೆ ಇರುವಂತೆ ಪ್ರಾಚೀನ ಕಾಲದಲ್ಲಿ ಇಲ್ಲದ ಕಾರಣ ನಮ್ಮ ಪೂರ್ವಜರು ನಾಣ್ಯಗಳನ್ನು ಮಡಿಕೆ ಮತ್ತು ಬಿಂದಿಗೆಗಳಲ್ಲಿ ಸಂಗ್ರಹಿಸಿ ಹೂಳುತ್ತಿದುದು ಒಂದು ವೈಶಿಷ್ಟವಾಗಿತ್ತು. ದಕ್ಷಿಣ ಭಾರತದ ನಾನಾಕಡೆ ಭಾರತೀಯ ನಾಣ್ಯಗಳ ಜೊತೆಗೆ ಗ್ರೀಕ್ ನಾಣ್ಯಗಳು, ರೋಮನ್ ನಾಣ್ಯಗಳು, ಚೀನೀ ನಾಣ್ಯಗಳು, ಪೋರ್ಚುಗೀಸ್, ಡಚ್, ಡೇನಿಷ್, ವೆನೀಷಿಯನ್ ಮತ್ತು ಬ್ರಿಟಿಷ್ ನಾಣ್ಯಗಳು ದೊರೆತಿವೆ. ಈಗ ಅವುಗಳನ್ನು ದೆಹಲಿ, ಮುಂಬಯಿ, ಲಕ್ನೊ, ಕಲ್ಕತ್ತಾ, ಪಾಟ್ನಾ, ಜಯಪುರ, ಮದ್ರಾಸ್ ಇತ್ಯಾದಿ ನಗರಗಳ ಮ್ಯೂಸಿಯಂಗಳಲ್ಲಿ ರಕ್ಷಿಸಿ ಇಟ್ಟಿದ್ದಾರೆ. ಪ್ರಮುಖ ರಾಜವಂಶಗಳ ನಾಣ್ಯಗಳನ್ನು ಪಟ್ಟಿಮಾಡಿ ಪ್ರಕಟಿಸಲಾಗಿದೆ.

### 1.15.4 ಸ್ಮಾರಕಗಳು

ಸ್ಮಾರಕಗಳು ಭಾರತದ ಸಂಸ್ಕೃತಿಯ ಸಂಕೇತಗಳು. ಇವುಗಳನ್ನು ಚರಿತ್ರಕಾರರು "ಮೂಕ ಪ್ರೇಕ್ಷಕರೆಂದು" ಉಲ್ಲೇಖಿಸಿದ್ದಾರೆ. ಒಂದು ದೇಶದ ಕಲೆಯನ್ನು ಆ ದೇಶದ ಮಾರ್ಗದರ್ಶಕವೆಂದು ಹೇಳಬಹುದು. ನಮ್ಮ ಪೂರ್ವಜರು ಸಾವಿರಾರು ದೇವಾಲಯಗಳನ್ನು ಕಟ್ಟಿಸಿದ್ದಾರೆ. ಇವು ಚರಿತ್ರೆಯ ರಚನೆಗೆ ಉಪಯುಕ್ತವಾದ ಮಾಹಿತಿಯನ್ನು ಒದಗಿಸುತ್ತವೆ. ಹರಪ್ಪ ಮತ್ತು ಮಹೆಂಜೋದಾರೊಗಳ ಅವಶೇಷಗಳನ್ನು ಬಿಟ್ಟರೆ ದೇಶದ ವಿವಿಧ ಭಾಗಗಳಲ್ಲಿ ಅನೇಕ ಸ್ಮಾರಕಗಳು ಕಂಡುಬರುತ್ತವೆ.

ದಕ್ಷಿಣ ಭಾರತ ಪ್ರಾಚೀನ ಕಾಲದಿಂದಲೂ ಕಲೆ ಮತ್ತು ವಾಸ್ತುಶಿಲ್ಪದ ತವರೂರಾಗಿದೆ. ಕಲೆಯ ಸೊಬಗಿನ ಸ್ಮಾರಕಗಳನ್ನು ಬೇಲೂರು, ಹಳೆಬೀಡು, ಸೋಮನಾಥಪುರ, ಐಹೊಳೆ, ಬಾದಾಮಿ, ಪಟ್ಟದಕಲ್ಲು, ಹಂಪಿ, ಬಿಜಾಪುರ, ತಲಕಾಡು, ಶ್ರವಣಬೆಳಗೊಳ, ಮಧುರೈ, ಕಂಚಿ, ಶ್ರೀರಂಗಂ, ಮಹಾಬಲಿಪುರಂ, ಮುಂತಾದ ಕಡೆ ಕಾಣಬಹುದಾಗಿದೆ. ಹೊಯ್ಸಳರ ಕಲೆಯನ್ನು ಕಲೆಯ ಖಜಾನೆ ಎಂದು ಕರೆಯಲಾಗಿದೆ. ಶ್ರವಣಬೆಳಗೊಳದ ಬಾಹುಬಲಿ ವಿಗ್ರಹವು ವಿಶ್ವ ವಿಖ್ಯಾತವಾಗಿದೆ.ಎಲ್ಲಕ್ಕಿಂತ ಮಿಗಿಲಾಗಿ ಅಜಂತಾ ಮತ್ತು ಎಲ್ಲೋರದಲ್ಲಿರುವ ಬಣ್ಣದ ಬಿತ್ತಿ ಚಿತ್ರಗಳು ಆಧುನಿಕ ಶಿಲ್ಪಿಗೆ ಆಶ್ಚರ್ಯಕರವಾದ ಸವಾಲನ್ನು ಉಂಟುಮಾಡುತ್ತವೆ. ಇಂತಹ ಸೊಬಗಿನ ಸ್ಮಾಋಕಗಳನ್ನು ರಕ್ಷಿಸಲು ಬ್ರಿಟಿಷ್ ವೈಸ್‌ರಾಯ್ ಲಾರ್ಡ್‌ಕರ್ಜನ್ ಕ್ರಿ.ಶ.1906ರಲ್ಲಿ ಪ್ರಾಚೀನ ಸ್ಮಾರಕಗಳ ರಕ್ಷಣಾ ಕಾಯ್ದೆ () ಯನ್ನು ಜಾರಿಗೆ ತಂದನು. ಒಟ್ಟಿನಲ್ಲಿ ಸ್ಮಾರಕಗಳು ಮಾನವನ ಜೀವನದ ಪ್ರತಿಯೊಂದು ರಂಗದ ಮೇಲೆ ಬೆಳಕನ್ನು ಚೆಲ್ಲುವುದರ ಮೂಲಕ ಚರಿತ್ರೆಯ ರಚನೆಗೆ ಸಹಕಾರಿಯಾಗಿವೆ.

## 1.16ಸಾರಾಂಶ

- ದಕ್ಷಿಣ ಭಾರತದ ಇತಿಹಾಸವನ್ನು ಪರಿಚಯಿಸಿಕೊಳ್ಳಲು ನಮಗೆ ಹಲವಾರು ಆಧಾರಗಳ ಬಗ್ಗೆ ತಿಳಿದುಕೊಂಡಿದ್ದೀರಿ.
- ದಕ್ಷಿಣ ಭಾರತಕ್ಕೆ ಭೇಟಿ ನೀಡಿದ ವಿದೇಶಿ ಯಾತ್ರಿಕರ ಬಗ್ಗೆ ಹಾಗೂ ಅವರ ಬರವಣಿಗೆಯಿಂದ ಆಧಾರಗಳ ಬಗ್ಗೆ ಸಾಕಷ್ಟು ಮಾಹಿತಿಯನ್ನು ಅರಿತ್ತಿದ್ದಿರಿ.
- ದಕ್ಷಿಣ ಭಾರತದಲ್ಲಿ ಆಳ್ವಿಕೆ ಮಾಡಿದಂತ ರಾಜಮನೆತನಗಳ ಬಗ್ಗೆ ಹಾಗೂ ಅವರ ಆಡಳಿತ. ಕಲೆ, ವಾಸ್ತುಶಿಲ್ಪ ಹಾಗೂ ಅವರ ಮಾಡಿದ ಕೆಲಸಗಳು ದಏವಾಲಯಗಳ ನಿರ್ಮಾಣದ ಬಗ್ಗೆ ತಿಳಿದಿದ್ದೀರಿ.
- ದಕ್ಷಿಣ ಭಾರತದಲ್ಲಿ ಇತಿಹಾಸಕ್ಕೆ, ಶಾಸನಗಳು, ನಾಣ್ಯಗಳು, ಸಾಹಿತ್ಯ ಆಧಾರಗಳ ಬಗ್ಗೆ ಅರಿತುಕೊಂಡಿದ್ದಿರಿ.

## 1.17 ಸ್ವಪರೀಕ್ಷೆ ಪ್ರಶ್ನೆಗಳು

1) ದಕ್ಷಿಣ ಭಾರತದ ಇತಿಹಾಸಕ್ಕೆ ಸಾಹಿತ್ಯ ಆಧಾರಗಳನ್ನು ವಿವರಿಸಿ
2) ದಕ್ಷಿಣ ಭಾರತದ ಇತಿಹಾಸಕ್ಕೆ ಪುರಾತತ್ವ ಆಧಾರಗಳನ್ನು ವಿವರಿಸಿ.

## 1.18 ಮಾದರಿ ಪ್ರಶ್ನೆಗಳಿಗೆ ಉತ್ತರ

1) 1.2 ಯಿಂದ 1.13
2) 1.15 ಯಿಂದ 1.15,4

## 1.19 ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು


1) ಎಸ್.ಎನ್.ಶಿವರುದ್ರಪ್ಪಸ್ವಾಮಿ : ಕರ್ನಾಟಕ ಪ್ರೌಢ ಇತಿಹಾಸ ಮತ್ತು ಸಂಸ್ಕೃತಿ
2) ಜಿ.ಆರ್.ರಂಗಸ್ವಾಮಯ್ಯ : ಪ್ರಾಚೀನ ಭಾರತ
3) ಎ.ಸುಂದರ (ಇಡಿ) : ಕರ್ನಾಟಕ ಚರಿತ್ರೆ ಪ್ರಸಾರಾಂಗ – ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

4) Chattopadyaya B.O : Indian Archaeology and the Epic Tradition.
5) Sundra A : The Early Chamber Tombs of South India
6) Allchin B (Ed) : Living Tradition: Studies in the Ethno-Archaeology of South Asia
7) Romila Thappor : Enterpreting Early India.

## 1.20 ಪ್ರಮುಖ ಪದಗಳು

Archaeology – ಗತಕಾಲದ ಅವಶೇಷಗಳು

Eppsrophy – ಶಿಲಾಶಾಸನಗಳ ಅಧ್ಯಯನ ಶಾಸ್ತ್ರ

Numsmatics – ನಾಣ್ಯಗಳ ಅಧ್ಯಯನ ಶಾಸ್ತ್ರ

**ಪ್ರೊ.ಎನ್.ಸರಸ್ವತಿ**
ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು

## ಘಟಕ–2: ದಕ್ಷಿಣ ಭಾರತದಲ್ಲಿ ಮೌರ್ಯರು

2.0 ಉದ್ದೇಶಗಳು
2.1 ಪೀಠಿಕೆ
2.2 ಚಂದ್ರಗುಪ್ತ ಮೌರ್ಯ ಮತ್ತು ದಕ್ಷಿಣ ಭಾರತ
2.3 ಅಶೋಕ ಚಕ್ರವರ್ತಿ ಮತ್ತು ದಕ್ಷಿಣ ಭಾರತ
2.4 ದಕ್ಷಿಣ ಭಾರತದಲ್ಲಿನ ಮೌರ್ಯರ ಶಾಸನಗಳು
2.5 ಸಾರಾಂಶ
2.6 ಸ್ವಪರೀಕ್ಷೆ ಪ್ರಶ್ನೆಗಳು
2.7 ಮಾದರಿ ಪ್ರಶ್ನೆಗಳಿಗೆ ಉತ್ತರ
2.8 ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು
2.9 ಪ್ರಮುಖ ಪದಗಳು

## ಘಟಕ-2: ದಕ್ಷಿಣ ಭಾರತದಲ್ಲಿ ಮೌರ್ಯರು

### 2.0 ಉದ್ದೇಶಗಳು

- ದಕ್ಷಿಣ ಭಾರತದಲ್ಲಿ ಮೌರ್ಯರ ಬಗ್ಗೆ ತಿಳಿದುಕೊಳ್ಳುವಿರಿ
- ಚಂದ್ರಗುಪ್ತ ಮೌರ್ಯ, ಅಶೋಕ ಚಕ್ರವರ್ತಿ ಮತ್ತು ದಕ್ಷಿಣ ಭಾರತದ ಬಗ್ಗೆ ತಿಳಿದುಕೊಳ್ಳುವಿರಿ.
- ದಕ್ಷಿಣ ಭಾರತದಲ್ಲಿನ ಮೌರ್ಯರ ಶಾಸನಗಳ ಬಗ್ಗೆ ತಿಳಿದುಕೊಳ್ಳುವಿರಿ.

### 2.1 ಪೀಠಿಕೆ

ನವ ಶಿಲಾಯುಗದ ಕೊನೆ ಹಂತದ ವೇಳೆಗೆ ಮತ್ತು ಮೌರ್ಯರ ಆಳ್ವಿಕೆ ಸ್ಥಾಪನೆಯಾಗುವ ಪೂರ್ವದಲ್ಲಿ ದಖನ್ ಮತ್ತು ದಕ್ಷಿಣ ಭಾರತದ ಇತರ ಕಡೆ ಜನಜೀವನ ವ್ಯವಸ್ಥಿತವಾಗಿ ರೂಪುಗೊಂಡಿತ್ತೆಂದು ತಿಳಿದುಬರುತ್ತದೆ. ಆದರೆ ಮೌರ್ಯಯುಗದ ಪೂರ್ವ ಇತಿಹಾಸದ ರೂಪರೇಖೆಗಳನ್ನು ತಿಳಿಯಲು ಲಿಖಿತ ದಾಖಲೆಗಳು ದೊರೆಯುವುದಿಲ್ಲ. ಮೌರ್ಯರ ಕಾಲದಿಂದ ದೊರೆಯುವ ಮೂಲಾಧಾರಗಳಿಂದ ಕರ್ನಾಟಕ ಒಳಗೊಂಡಂತೆ ದಖ್ಖನ್ ಪ್ರಸ್ಥಭೂಮಿಯು ಭಾರತದ ಇತರ ಪ್ರದೇಶಗಳೊಡನೆ ಸಂಪರ್ಕ ಪಡೆದಿತ್ತೆಂದು ತಿಳಿದುಬರುತ್ತದೆ. ಬೌದ್ಧ ಮತ್ತು ಜೈನ ಧರ್ಮಗಳು ಉದಯವಾದ ನಂತರ ಸಾಮ್ರಾಜ್ಯ ಸ್ಥಾಪಿಸಿದ ನಂದರು ಮತ್ತು ಮೌರ್ಯರು ದಕ್ಷಿಣ ಭೂಭಾಗದತ್ತ ಸಾಮ್ರಾಜ್ಯ ವಿಸ್ತರಿಸಿರಬೇಕೆಂದು ಐತಿಹಾಸಿಕ ದಿಕ್‌ಸೂಚಿ ತೋರುತ್ತದೆ. ನಂದರು ಮಗಧ ರಾಜ್ಯವನ್ನು ಎಲ್ಲಾ ದಿಕ್ಕುಗಳಿಗೂ ವಿಸ್ತರಿಸಿ ದೊಡ್ಡ ಸಾಮ್ರಾಜ್ಯ ಸ್ಥಾಪಿಸಿದರು. ದಖನ್ ಭೂಪ್ರದೇಶವು ನಂದರ ಆಳ್ವಿಕೆಗೊಳಪಟ್ಟಿತ್ತೆಂಬ ಅಂಶವು ಹಲವು ನಿದರ್ಶನಗಳಿಂದ ತಿಳಿದುಬರುತ್ತದೆ. ಗೋದಾವರಿ ದಂಡೆಯಲ್ಲಿರುವ ನಂದಗೇಹ ಎಂಬ ಗ್ರಾಮವು ನಂದರ ಆಳ್ವಿಕೆಯನ್ನು ಸೂಚಿಸುತ್ತದೆ ಎಂದು ಹೇಳಲಾಗಿದೆ. ನಂದರು ಕರ್ನಾಟಕ (ಕುಂತಲ) ವನ್ನು ಆಳಿದರೆಂಬ ಅಂಶ ಶಿವಮೊಗ್ಗ ಜಿಲ್ಲೆಯಲ್ಲಿ (ಎಪಿಗ್ರಾಫಿಯಾ ಕರ್ನಾಟಕ, ಸಂಪುಟ 7, ಶಿಕಾರಿಪುರ 225) ದೊರೆತ ಕ್ರಿ.ಶ.12 ಮತ್ತು 13ನೇ ಶತಮಾನಗಳ ಕೆಲವು ಕನ್ನಡ ಶಾಸನಗಳಿಂದ ತಿಳಿದುಬರುತ್ತದೆ. ಚಿತ್ರದುರ್ಗ ಜಿಲ್ಲೆಯಲ್ಲಿ ದೊರೆತಿರುವ ಒಂದೆರಡು ಶಾಸನಗಳಲ್ಲಿ ನಂದರ ಆಳ್ವಿಕೆಯನ್ನು ಕರಾರುವಕ್ಕಾಗಿ ಉಲ್ಲೇಖಿಸಲಾಗಿದೆ.

### 2.2 ಚಂದ್ರಗುಪ್ತ ಮೌರ್ಯ ಮತ್ತು ದಕ್ಷಿಣ ಭಾರತ

ಚಂದ್ರಗುಪ್ತ ಮೌರ್ಯ ಕ್ರಿ.ಪೂ.324ರಲ್ಲಿ ನಂದರ ಕೊನೆಯ ಅರಸ ಧನನಂದನನ್ನು ಸೋಲಿಸಿ ಮಗಧದ ಸಾರ್ವಭೌಮನಾದನು. ಅಂದಿನಿಂದ ನಂದರ ಆಳ್ವಿಕೆಗೆ ಒಳಪಟ್ಟಿದ್ದ ದಕ್ಷಿಣ ಭಾರತದ ಕರ್ನಾಟಕದ ಭಾಗಗಳು ಸ್ವಾಭಾವಿಕವಾಗಿ ಚಂದ್ರಗುಪ್ತ ಮೌರ್ಯನ ಆಳ್ವಿಕೆಗೆ ಒಳಪಟ್ಟವು. ನಂದರನ್ನು ನಿರ್ಮೂಲನೆ ಮಾಡಿದ ಮೌರ್ಯರು ಅನುಕ್ರಮವಾಗಿ ದಕ್ಷಿಣದವರೆಗೂ ವಿಸ್ತಾರವಾಗಿ ವ್ಯಾಪಿಸಿದ್ದ ಮಗಧ ರಾಜ್ಯಕ್ಕೆ ಒಡೆಯರಾದರು ಎಂಬುದಾಗಿ ಪ್ರೊ.ಕೆ.ಎ.ನೀಲಕಂಠಶಾಸ್ತ್ರಿ ಅಭಿಪ್ರಾಯಪಟ್ಟಿದ್ದಾರೆ. ಸಂಗಂ ಸಾಹಿತ್ಯದಲ್ಲಿ ಮೌರ್ಯ ಸೈನ್ಯಗಳು ದಕ್ಷಿಣ ಭಾರತದ ಮಧುರೆ ಮತ್ತು ತಿನ್ನವೇಲಿಯವರೆಗೆ ದಂಡೆತ್ತಿ ಬಂದಿದ್ದ ಉಲ್ಲೇಖಗಳಿವೆ. ಚಂದ್ರಗುಪ್ತಮೌರ್ಯ ಅಧಿಕಾರಕ್ಕೆ ಬಂದ ಮೇಲೆ ದಖನ್ನಿನ ಪ್ರದೇಶಗಳ ಮೇಲೆ ತನ್ನ ಆಡಳಿತ ಸ್ಥಾಪಿಸಿದುದಲ್ಲದೆ ಗಡಿಗಳನ್ನು ವಿಸ್ತರಿಸದನೆಂದು ಊಹಿಸಬಹುದು. ಚಂದ್ರಗುಪ್ತಮೌರ್ಯ ತನ್ನ ಆಳ್ವಿಕೆಯ ಕೊನೆಯ ಕಾಲದಲ್ಲಿ ಸಿಂಹಾಸನ ತ್ಯಾಗ ಮಾಡಿ ಜೈನ ಮತಾವಲಂಬಿಯಾಗಿ ತನ್ನ ಗುರುವಾದ ಭದ್ರಬಾಹುವಿನೊಡನೆ ಪ್ರಸಿದ್ಧ ಜೈನಕ್ಷೇತ್ರವಾದ ದಕ್ಷಿಣ ಭಾರತದ ಕಳ್ವಪ್ಪು ಅಥವಾ ಶ್ರವಣಬೆಳಗೊಳಕ್ಕೆ ಬಂದು ಕೊನೆಯುಸಿರೆಳೆದನೆಂದು ಕ್ರಿ.ಶ.7ನೇ ಶತಮಾನದ ಶ್ರವಣ

ಬೆಳಗೊಳ ಶಾಸನಗಳಿಂದ ತಿಳಿದುಬರುತ್ತದೆ. ಚಂದ್ರಗುಪ್ತನು ಸಿಂಹಾಸನ ತ್ಯಾಗ ಮಾಡಲು ಜೈನ ಸನ್ಯಾಸಿಗಳು ತಿಳಿಸಿದ ಮುಂಬರಲಿದ್ದ 12 ವರ್ಷಗಳ ದೀರ್ಘಕಾಲದ ಕ್ಷಾಮವು ಕಾರಣವೆಂದು ಹೇಳಲಾಗಿದೆ. ಆದರೆ ಶ್ರವಣಬೆಳಗೊಳಕ್ಕೆ ಬಂದು ಅಲ್ಲಿ ಸಲ್ಲೇಖನ ವ್ರತದಿಂದ ಅಸುನೀಗಿದ ಮೌರ್ಯ ಚಕ್ರವರ್ತಿಯು ಅಶೋಕನ ಮೊಮ್ಮಗ ಸಂಪ್ರತಿ ಚಂದ್ರಗುಪ್ತನೆಂಬುದಾಗಿ ಶ್ಯಾಮಶಾಸ್ತ್ರಿ ಮತ್ತು ಫ್ಲೀಟ್ ಸವಾಲು ಹಾಕಿದ್ದಾರೆ. ಆರ್.ನರಸಿಂಹಾಚಾರ್ ಮತ್ತು ರೈಸ್‌ರವರು ಅನುಮೋದಿಸಿರುವ ಈ ಆಧಾರವನ್ನು ನಂಬದೆ ಹೋದ ಡಾ.ವಿ.ಎ.ಸ್ಮಿತ್‌ರವರು ತನ್ನ 'ಪ್ರಾಚೀನ ಭಾರತದ ಇತಿಹಾಸ' ಎಂಬ ಪುಸ್ತಕದ ನಾಲ್ಕನೆಯ ಮುದ್ರಣದಲ್ಲಿ ಮತ್ತೆ ಅದರ ಚಾರಿತ್ರಿಕೆಯನ್ನು ಸ್ಥೂಲವಾಗಿ ಬರೆದಿದ್ದಾರೆ. ಇದಕ್ಕೆ ಸಾಕ್ಷಿಯಾಗಿ ಕ್ರಿ.ಶ.912ರ ಶಾಸನ, 1129ರ ಶ್ರವಣಬೆಳಗೊಳ ಶಾಶನ, ಕಲ್ಪಸೂತ್ರ ಮತ್ತು ಹರಿಸೇನನ ಬೃಹತ್ ಕಥಾಕೋಶ ಚಂದ್ರಗುಪ್ತಮೌರ್ಯ ಮತ್ತು ಭದ್ರಬಾಹು ಶ್ರವಣಬೆಳಗೊಳದಲ್ಲಿದ್ದರೆಂಬುದನ್ನು ಸಾಬೀತು ಪಡಿಸುತ್ತವೆ. ಅಲ್ಲದೆ ಚಂದ್ರಗಿರಿಯ ಮೇಲೆ ನಿರ್ಮಿಸಿರುವ ಚಂದ್ರಗುಪ್ತ ಬಸದಿ, ಭದ್ರಬಾಹು ಬಸದಿ, ಪಾರ್ಶ್ವನಾಥ ಬಸದಿ ಹಾಗೂ ಶಾಂತಿನಾಥ ಬಸದಿಗಳು ಇದಕ್ಕೆ ಸಾಕ್ಷಿಯಾಗಿವೆ. ಚಂದ್ರಗುಪ್ತ ಮೌರ್ಯನ ನಂತರ ಅಧಿಕಾರಕ್ಕೆ ಬಂದ ಅವನ ಮಗ ಬಿಂದುಸಾರನು ಅನೇಕ ಯುದ್ಧಗಳ ಮೂಲಕ ಮೈಸೂರು ಮತ್ತು ಕೊಡಗಿನ ಹಲವು ಪ್ರದೇಶಗಳ ಮೇಲೆ ತನ್ನ ಹತೋಟಿ ಹೊಂದಿ ಆಳ್ವಿಕೆ ನಡೆಸಿದ್ದನು. ಓಬೇಟಿನ ಇತಿಹಾಸಕಾರ ತಾರನಾಥ ಮತ್ತು ತಮಿಳು ಕವಿ ಮಾಮೂಲಾರ್ ಅವರ ಬರಹದ ಪ್ರಕಾರ ದಕ್ಷಿಣ ಭಾರತದ ಕರ್ನಾಟಕ ಬಿಂದುಸಾರನ ಆಡಳಿತಕ್ಕೆ ಒಳಪಟ್ಟಿದ್ದಿತು.

## 2.3 ಅಶೋಕ ಚಕ್ರವರ್ತಿ ಮತ್ತು ದಕ್ಷಿಣ ಭಾರತ

ಅಶೋಕನ ದಕ್ಷಿಣ ಭಾರತದ ಪ್ರವೇಶ ಕ್ರಿ.ಪೂ.261ರಲ್ಲಿ ನಡೆದ ಕಳಿಂಗ ಯುದ್ಧದೊಂದಿಗೆ ಪ್ರಾರಂಭವಾಯಿತು. ಈ ಯುದ್ಧದ ನಂತರ ಹಿಂಸೆಯನ್ನು ತ್ಯಜಿಸಿ ಮಾನವೀಯ ಮೌಲ್ಯಗಳನ್ನು ಬೋಧಿಸುವ ಧಾರ್ಮಿಕ ಆಂದೋಲನದಲ್ಲಿ ತೊಡಗಿದನು. ಸಿಂಹಳದ ಬೌದ್ಧ ಗ್ರಂಥ ಮಹಾವಂಶದ ಪ್ರಕಾರ ಅಶೋಕ ಬೌದ್ಧ ಧರ್ಮದ ಪ್ರಚಾರಕ್ಕಾಗಿ ಮಹಾದೇವ ಎಂಬ ಭಿಕ್ಷುವನ್ನು ಮಹಿಷ ಮಂಡಲಕ್ಕೂ, ರಕ್ಷಿತ ಎಂಬ ಬೌದ್ಧ ಭಿಕ್ಷುವನ್ನು ಬನವಾಸಿಗೂ ಕಳಿಸಿದನೆಂದು ತಿಳಿದುಬರುತ್ತದೆ. ಮಹಾದೇವ ಏಷ್ಯಾದ ಜ್ಯೋತಿಯಾದ ಗೌತಮಬುದ್ಧನ ತತ್ವಗಳನ್ನು ಮಹಿಷಮಂಡಲದಲ್ಲಿ ಪ್ರಚಾರ ಮಾಡಿದನು. ಇದರ ಪರಿಣಾಮವಾಗಿ 40 ಸಾವಿರ ಜನರು ಬೌದ್ಧಧರ್ಮದ ಅನುಯಾಯಿಗಳಾದರೆಂದೂ ಹಾಗೂ ಸುಮಾರು 40 ಸಾವಿರ ಜನ ಬೌದ್ಧ ಭಿಕ್ಷುಗಳಾಗಿದ್ದರೆಂದೂ ತಿಳಿದುಬರುತ್ತದೆ. ಹಾಗೆಯೇ ರಕ್ಷಿತನ ಧರ್ಮ ಪ್ರಚಾರದ ಪರಿಣಾಮವಾಗಿ ಬನವಾಸಿಯಲ್ಲಿ ಸುಮಾರು 60 ಸಾವಿರ ಜನ ಬೌದ್ಧಧರ್ಮ ಸ್ವೀಕರಿಸಿದರೆಂದೂ ಮತ್ತು 37 ಸಾವಿರ ಜನ ಬೌದ್ಧ ಭಿಕ್ಷುಗಳಾದರೆಂದೂ ಹಾಗೂ ರಕ್ಷಿತ ಈ ಭಾಗದಲ್ಲಿ ಸುಮಾರು 500 ವಿಹಾರಗಳನ್ನು ಕಟ್ಟಿಸಿದನೆಂದೂ ತಿಳಿದುಬರುತ್ತದೆ. ಇದರಿಂದ ದಕ್ಷಿಣ ಭಾರತದ ಕರ್ನಾಟಕವೂ ಕೂಡ ಅಶೋಕನ ಧಾರ್ಮಿಕ ಆಂದೋಲನಕ್ಕೆ ಸೇರ್ಪಡೆಯಾಯಿತು. ಇದಕ್ಕೆ ಕರ್ನಾಟಕದ ಚಿತ್ರದುರ್ಗ, ರಾಯಚೂರು, ಕೊಪ್ಪಳ, ಬಳ್ಳಾರಿ ಮತ್ತು ಗುಲ್ಬರ್ಗ ಜಿಲ್ಲೆಯ ಸನ್ನತಿಗಳಲ್ಲಿ ದೊರೆತಿರುವ ಶಾಸನಗಳೇ ಜೀವಂತ ಸಾಕ್ಷಿಯಾಗಿವೆ. ಸುವರ್ಣಗಿರಿ, ಸೊಸಲಿ, ಇಸಿಲ ಮತ್ತು ಸಂಪಾ ಅಶೋಕನ 4 ದಕ್ಷಿಣ ಪ್ರಾಂತ್ಯಗಳಾಗಿದ್ದವು. ಶಾಸನಗಳ ಪ್ರಕಾರ ಸುವರ್ಣಗಿರಿ ಅಥವಾ ಕನಕಗಿರಿ ಮೌರ್ಯ ಸಾಮ್ರಾಜ್ಯದ ದಕ್ಷಿಣ ಪ್ರಾಂತ್ಯದ ರಾಜಧಾನಿಯಾಗಿತ್ತೆಂದೂ ಈ ಪ್ರಾಂತ್ಯವನ್ನು ಮಹಾಮಾತ್ರ ಎಂಬ ಅಧಿಕಾರಿಗಳು ಆಳುತ್ತಿದ್ದರೆಂದೂ ತಿಳಿದುಬರುತ್ತದೆ. ಸುವರ್ಣಗಿರಿ ಆರ್ಯಪುತ್ರ ಎಂಬ ಪ್ರಾಂತ್ಯಾಧಿಕಾರಿಯ ಅಧೀನದಲ್ಲಿತ್ತು. ಮೌರ್ಯ ಸಾಮ್ರಾಜ್ಯದ ಹಿರಿಯ ಅಧಿಕಾರಿಗಳನ್ನು ಧರ್ಮ ಮಹಾಮಾತ್ರರು ಎಂದು ಕರೆಯಲಾಗುತ್ತಿತ್ತು. ಅವರು ತಮ್ಮ ಪ್ರದೇಶಗಳಲ್ಲಿ ಜನೋಪಕಾರಿ ಕೆಲಸಗಳನ್ನು ಮಾಡುತ್ತಿದ್ದರು. ಚಿತ್ರದುರ್ಗ ಜಿಲ್ಲೆಯಲ್ಲಿ ಬ್ರಹ್ಮಗಿರಿ, ಸಿದ್ದಾಪುರ, ಜಟಿಂಗ ರಾಮೇಶ್ವರಗಳಲ್ಲಿ ದೊರೆತಿರುವ ಶಾಸನಗಳ ಪರಕಾರ ಸುವರ್ಣಗಿರಿಯ ಪ್ರಾಂತ್ಯಾಧಿಕಾರಿ ಇಸಿಲದಲ್ಲಿರುವ ಧರ್ಮ ಮಹಾಮಾತ್ರರೆಂಬ ಅಧಿಕಾರಿಗಳಿಗೆ ಆಡಳಿತದ ಬಗ್ಗೆ

ಕುರಿತು ಆದೇಶಗಳನ್ನು ನೀಡುತ್ತಿದ್ದ ಉಲ್ಲೇಖಗಳಿವೆ. ಮೊರೇರ ಅಂಗಡಿ ಎಂಬ ಹೆಸರಿನಿಂದ ಕರೆಯಲ್ಪಟ್ಟಿರುವ ಶಿಲಾಸ್ಮಾರಕಗಳು ಮೌರ್ಯರ ಆಳ್ವಿಕೆಯ ಸಂಕೇತ ಸೂಚಕಗಳೆಂದು ತಿಳಿಯಲಾಗಿದೆ.

ಅಶೋಕನ ಕಾಲದಲ್ಲಿ ಕಳಿಂಗ ಮತ್ತು ಆಂಧ್ರ ಪ್ರದೇಶದ ಹಲವು ಭಾಗಗಳು ಕೂಡ ಮೌರ್ಯರ ಆಳ್ವಿಕೆಗೆ ಒಳಪಟ್ಟಿದ್ದವು. ಹೀಗಾಗಿ ಆಂಧ್ರದ ಆಂಧ್ರಬೃತ್ಯರು, ಕಳಿಂಗದವರು, ಮಹಾರಾಷ್ಟ್ರದ ರಟ್ಟಕರೂ, ಭೋಜರೂ, ಪುಳಿಂದರೂ ಮೌರ್ಯರ ಸಾರ್ವಭೌಮತ್ವವನ್ನು ಅಂಗೀಕರಿಸಿದ್ದರು. ಅಲ್ಲದೆ ಅಶೋಕ ಚೇರ, ಚೋಳ, ಪಾಂಡ್ಯ, ಸತ್ಯಪುತ್ರ ಮುಂತಾದ ರಾಜ್ಯಗಳ ಮೇಲೆ ಧರ್ಮ ವಿಜಯವನ್ನು ಸಾಧಿಸಿದ್ದನು. ಈ ಮೇಲ್ಕಂಡ ಸಾಹಿತ್ಯ ಮತ್ತು ಶಾಸನಗಳ ಆಧಾರಗಳಿಂದ ದಕ್ಷಿಣ ಭಾರತದ ದಖನ್ ಪ್ರದೇಶದ ಬಹುಭಾಗವು ಮೌರ್ಯ ಸಾಮ್ರಾಜ್ಯದ ಭಾಗವಾಗಿತ್ತೆಂದು ನಮಗೆ ಮನವರಿಕೆಯಾಗುತ್ತದೆ. ಅಶೋಕ ಚಕ್ರವರ್ತಿಯ ಸುಖೀರಾಜ್ಯ ಕಲ್ಪನೆಗಳ ಕಾರ್ಯಕ್ರಮಗಳು ಈ ಭಾಗದಲ್ಲಿ ಜಾರಿಗೆ ಬಂದಿರಬಹುದೆಂದು ಅಭಿಪ್ರಾಯಪಡಲಾಗಿದೆ. ಅಶೋಕ ಸಾಮ್ರಾಟ ಮರಣ ಹೊಂದಿದ ಕೇವಲ 50 ವರ್ಷಗಳಲ್ಲಿ ಮೌರ್ಯ ಸಾಮ್ರಾಜ್ಯ ಪತನವಾಯಿತು. ಆದರೆ ಮೌರ್ಯ ಸಂತತಿಯ ಉಪಶಾಖೆ–ಯೊಂದು ದಕ್ಷಿಣದ ಕೊಂಕಣ ಪ್ರದೇಶದಲ್ಲಿ ರಾಜ್ಯ ಸ್ಥಾಪಿಸಿ ಕ್ರಿ.ಶ.6ನೇ ಶತಮಾನದ ಕೊನೆಯವರೆಗೂ ಆಳ್ವಿಕೆ ಮಾಡಿತ್ತು.

ಒಟ್ಟಿನಲ್ಲಿ ಮೌರ್ಯರ ಆಳ್ವಿಕೆ ದಕ್ಷಿಣ ಭಾರತದ ಮೇಲೆ ತನ್ನದೇ ಆದ ಪ್ರಭಾವ ಬೀರಿತು. ಚಂದ್ರಗುಪ್ತಮೌರ್ಯ ಮತ್ತು ಅಶೋಕ ಚಕ್ರವರ್ತಿಯಿಂದ ಕ್ರಮವಾಗಿ ಜೈನ ಮತ್ತು ಬೌದ್ಧ ಧರ್ಮಗಳು ದಕ್ಷಿಣ ಭಾರತದಲ್ಲಿ ಪ್ರಚಾರವಾದವು. ಆಡಳಿತವು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ನಮೂದಿಸಿರುವ ತತ್ವಗಳಂತೆ ನಡೆಯುತ್ತಿತ್ತು. ಮೌರ್ಯರ ನಂತರ ದಖನ್ನಿನಲ್ಲಿ ಅಧಿಕಾರಕ್ಕೆ ಬಂದ ಶಾತವಾಹನರು ಮತ್ತು ಇತರ ರಾಜಮನೆತನಗಳು ಮೌರ್ಯರ ಆಡಳಿತದ ವೈಖರಿಯನ್ನು ಮುಂದುವರಿಸಿದವು. "ಅರಸನ ಸುಖವು ಪ್ರಜೆಗಳ ಸುಖದಲ್ಲಿ ಅಡಗಿದೆ" ಎಂದು ಹೇಳಿದ್ದ ಅಶೋಕನ ತತ್ವವನ್ನು ಮುಂದೆ ಅಧಿಕಾರಕ್ಕೆ ಬಂದ ದಕ್ಷಿಣ ಭಾರತದ ಅರಸರು ಅನುಸರಿಸಿದರು. ಒಟ್ಟಿನಲ್ಲಿ ಮೌರ್ಯರ ಆಡಳಿತ ಪದ್ಧತಿ ಅನೇಕ ಶತಮಾನಗಳವರೆಗೂ ದಕ್ಷಿಣ ಭಾರತದಲ್ಲಿ ಮುಂದುವರೆಯಿತು.

## 2.4 ದಕ್ಷಿಣ ಭಾರತದಲ್ಲಿನ ಮೌರ್ಯರ ಶಾಸನಗಳು

ಭಾರತದಲ್ಲಿ ಪ್ರಥಮ ಬಾರಿಗೆ ಶಾಸನಗಳನ್ನು ಜಾರಿಗೆ ತಂದ ಕೀರ್ತಿ ಅಶೋಕನಿಗೆ ಸಲ್ಲುತ್ತದೆ. ಆದುದರಿಂದಲೇ ಅಶೋಕನನ್ನು "ಶಾಸನಗಳ ಜನಕ ಅಥವಾ ಸ್ವಕಥನಕಾರ" ಎಂದು ಕರೆಯಲಾಗಿದೆ. ಭಾರತೀಯ ಶಾಸನ ಪರಂಪರೆಗೆ ಅಶೋಕನ ಸುಪ್ರಸಿದ್ಧ ರಾಜಾಜ್ಞೆಗಳ ನಾಂದಿಯಾಗಿವೆ. ಭರತಖಂಡದ ಉದ್ದಗಲಕ್ಕೂ ಈತನು ಬಂಡೆಕಲ್ಲುಗಳ ಮೇಲೆ ಕೆತ್ತಿಸಿರುವ ಶಾಸನಗಳು ಹರಡಿವೆ. ಅವು ಕಳೆದ 23 ಶತಮಾನಗಳಿಂದ ಮಹಾಪುರುಷನೊಬ್ಬನ ವ್ಯಕ್ತಿ ಮಹಿಮೆಯನ್ನು ಮತ್ತು ಜೀವನ ಸಂದೇಶವನ್ನು ಜಗತ್ತಿಗೆ ಸಾರುತ್ತಿವೆ. ಈಸ್ಟ್ ಇಂಡಿಯಾ ಕಂಪನಿಯ ನೌಕರನಾಗಿದ್ದ ಜೇಮ್ಸ್ ಪ್ರಿನ್ಸೆಪ್ ಎಂಬಾತ ಕ್ರಿ.ಶ.1837ರಲ್ಲಿ ಬ್ರಾಹ್ಮಿ ಲಿಪಿಯಲ್ಲಿದ್ದ ಅಶೋಕನ ಶಾಸನಗಳನ್ನು ಮೊದಲ ಬಾರಿಗೆ ಓದಿ ಅರ್ಥೈಸಿ ವಿವರನೆ ನೀಡಿದರು. ದಕ್ಷಿಣ ಭಾರತದಲ್ಲಿ ವಿಶೇಷವಾಗಿ ಕರ್ನಾಟಕದಲ್ಲಿ ದೊರೆತಿರುವ ಶಾಸನಗಳಲ್ಲಿ ಅಶೋಕ ಚಕ್ರವರ್ತಿಯು ಬ್ರಾಹ್ಮಿ ಲಿಪಿಯಲ್ಲಿ ಕೆತ್ತಿಸಿರುವ ಬಂಡೆಗಲ್ಲು ಶಾಸನಗಳೇ ಪ್ರಪ್ರಥಮವಾದವು. ದಕ್ಷಿಣ ಭಾರತದ ಅನೇಕ ಕಡೆ ಮೌರ್ಯರ ಶಾಸನಗಳು ದೊರಕಿವೆ. ದಕ್ಷಿಣ ಭಾರತದ ಕರ್ನಾಟಕ ಅಶೋಕನ ಧರ್ಮಾಂದೋಲನದ ಕೇಂದ್ರಗಳಲ್ಲಿ ಒಂದಾಗಿದ್ದು, ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನ ಬ್ರಹ್ಮಗಿರಿ, ಜಟಿಂಗರಾಮೇಶ್ವರ ಮತ್ತು ಸಿದ್ದಾಪುರ, ರಾಯಚೂರು ಜಿಲ್ಲೆಯ ಮಾಸ್ಕಿ, ಕೊಪ್ಪಳ, ಗವಿಮಠ ಮತ್ತು ಪಾಲ್ಕಿಗೊಂಡು, ಬಳ್ಳಾರಿ ಜಿಲ್ಲೆಯ ನಿಟ್ಟೂರು ಮತ್ತು ಉದೇಗೋಳಂ, ಗುಲ್ಬರ್ಗ ಜಿಲ್ಲೆಯ ಸನ್ನತಿಗಳಲ್ಲಿ ಅಶೋಕನ ಒಟ್ಟು 13 ಶಾಸನಗಳು ಲಭ್ಯವಾಗಿವೆ. (ಇತ್ತೀಚಿನ ವರದಿಯ ಪ್ರಕಾರ 17 ಶಾಸನಗಳು ಕರ್ನಾಟಕದಲ್ಲಿ ದೊರೆತಿವೆ). ಹೀಗೆ ದೊರೆತಿರುವ ಒಟ್ಟು 13 ಶಾಸನಗಳ ಪೈಕಿ ಎರಡರಲ್ಲಿ ಅಶೋಕನ

ಹೆಸರಿರುವುದು ಗಮನಾರ್ಹ. ಈ ಶಾಸನಗಳಲ್ಲಿ ಕ್ರಿ.ಶ.1915ರಲ್ಲಿ ದೊರಕಿದ ರಾಯಚೂರು ಜಿಲ್ಲೆಯ ಮಾಸ್ಕಿ ಶಾಸನ ಅತ್ಯಂತ ಮಹತ್ವದ್ದಾಗಿದ್ದು, "ದೇವನಾಂಪ್ರಿಯ ಅಶೋಕ" ಎಂಬ ಅಶೋಕನ ಹೆಸರನ್ನು ಒಳಗೊಂಡಿದೆ. ಮಾಸ್ಕಿ ಶಾಸನವು ದೊರತ ಮೇಲೆ ಅಶೋಕನ ಬಿರುದುಗಳಿರುವ ಎಲ್ಲಾ ಶಾಸನಗಳೂ ಅವನಿಂದಲೇ ಸ್ಥಾಪಿಸಲ್ಪಟ್ಟವೆಂಬ ಸಂಗತಿಯು ನಿಖರವಾಗಿ ತಿಳಿದುಬಂದಿತು. ಈ ಶಾಸನಗಳು ಕರ್ನಾಟಕದ ಮೌರ್ಯರ ಆಳ್ವಿಕೆಗೆ ಒಳಪಟ್ಟಿತ್ತೆಂಬ ವಿಚಾರವನ್ನು, ಗುರುಹಿರಿಯರಿಗೆ ಗೌರವ ತೋರಬೇಕೆಂಬ ವಿಷಯವನ್ನು ಹಾಗೂ ಪ್ರಜೆಗಳು ನೀತಿ ಮತ್ತು ಧರ್ಮ ಮಾರ್ಗದಲ್ಲಿ ನಡೆಯಬೇಕೆಂಬ ವಿಚಾರಗಳನ್ನು ತಿಳಿಸುತ್ತವೆ. ಅಲ್ಲದೆ ಅಶೋಕನು ತನ್ನ ಪ್ರಾಂತೀಯ ರಾಜಧಾನಿಗಳಾಗಿದ್ದ ರಾಯಚೂರು ಜಿಲ್ಲೆಯ ಕನಕಗಿರಿ ಅಥವಾ ಸುವರ್ಣಗಿರಿ ಮತ್ತು ಚಿತ್ರದುರ್ಗ ಜಿಲ್ಲೆಯ ಇಸಿಲ (ಬ್ರಹ್ಮಗಿರಿ) ನಗರಗಳಲ್ಲಿದ್ದ ಮಹಾಮಾತ್ರರಿಗೆ ತನ್ನ ರಾಜಾಜ್ಞೆಗಳನ್ನು ಕಳುಹಿಸಿದ್ದುದು ಕಂಡುಬರುತ್ತದೆ. ಕರ್ನಾಟಕದಲ್ಲಿ ದೊರಕಿರುವ ಅಶೋಕನ ಶಾಸನಗಳನ್ನು ಬಿ.ಎಲ್.ರೈಸ್ ಕಲೆ ಹಾಕಿದರು. ಶಾಸನಶಾಸ್ತ್ರಕ್ಕೆ ಸಂಬಂಧಿಸಿಂತೆ ಬಿ.ಎಲ್.ರೈಸ್ ಎಫಿಗ್ರಾಪಿ ಆಫ್ ಕರ್ನಾಟಕ, ಎಫಿಗ್ರಫಿ ಆಫ್ ಇಂಡಿಯ ಮತ್ತು ಬಾಂಬೆ ಕರ್ನಾಟಕ ಇನ್‌ಸ್ಕ್ರಿಪ್ಷನ್ ಎಂಬ ಕೃತಿಗಳನ್ನು ಪ್ರಕಟಿಸಿದ್ದಾರೆ. ಆಂಗ್ಲರಾದ ಇವರು ಸಂಸ್ಕೃತ ಮತ್ತು ಕನ್ನಡ ಶಾಸನಗಳನ್ನು ಅಧ್ಯಯನ ಮಾಡಿ ಅನೇಕ ಲೇಖನಗಳನ್ನು ಬರೆದು "ಇಂಡಿಯನ್ ಆಂಟಿಕ್ವೇರಿ"ಯಲ್ಲಿ ಪ್ರಥಮ ಬಾರಿಗೆ ಪ್ರಕಟಿಸಿದರು. ಬಾಂಬೆ ಗೆಜೆಟಿಯರ್‌ನ ಮೊದಲ ಹಾಗೂ ಎರಡನೇ ಸಂಪುಟದಲ್ಲಿ ಪ್ರಕಟವಾದ ಇವರ ಮೊದಲ ಪ್ರಕಟಣೆಯಲ್ಲಿ "ಡೈನಾಸ್ಟೀಸ್ ಆಫ್ ಕೇನರೀಸ್ ಡಿಸ್ಟ್ರಿಕ್ಟ್" ಅತಿ ಮುಖ್ಯವಾದುದು. ಬಿ.ಎಲ್.ರೈಸ್ ಒಟ್ಟು ಹನ್ನೆರಡು ಸಂಪುಟಗಳನ್ನು ಪ್ರಕಟಿಸಿದ್ದಾರೆ.

ಅಶೋಕನ ಶಾಸನಗಳು ಮಹಾರಾಷ್ಟ್ರದ ಸೊಪಾರ ಮತ್ತು ಆಂಧ್ರದ ಎರ್ರಗುಡಿ, ರಾಜಲ ಮಂದಗಿರಿಗಳಲ್ಲಿ ದೊರೆತಿವೆ. ಇವು ಅಶೋಕನ ರಾಜ್ಯಭಾರ ಕ್ರಮ ಮತ್ತು ಜನೋಪಯೋಗಿ ಕಾರ್ಯಗಳನ್ನು ತಿಳಿಸುತ್ತವೆ. ದಕ್ಷಿಣ ಭಾರತದ ಡೌಲಿ ಮತ್ತು ಜೌಗುಡಗಳಲ್ಲಿ ಅಶೋಕನ ಶಾಸನಗಳು ದೊರೆತಿವೆ. ಇವುಗಳನ್ನು ಕಳಿಂಗ 12 ಮತ್ತು 13ನೇ ಶಾಸನಗಳೆಂದು ಹೆಸರಿಸಲಾಗಿದೆ. ಇವು ಕಳಿಂಗ ಯುದ್ಧದ ವಿವರಗಳನ್ನು, ಅಶೋಕನ ಪರಿವರ್ತನೆಯನ್ನು ಮತ್ತು ಗಡಿನಾಡುಗಳ ಬುಡಕಟ್ಟುಗಳ ಬಗೆಗಿನ ನಡವಳಿಕೆಯ ವಿವರಗಳನ್ನು ಹೊಂದಿವೆ. ಮೌರ್ಯ ಸಾಮ್ರಾಜ್ಯದ ಸಂಸ್ಥಾಪಕನಾದ ಚಂದ್ರಗುಪ್ತ ಮೌರ್ಯನಿಗೆ ಸಂಬಂಧಪಟ್ಟ ಶಾಸನಗಳು ಶ್ರೀರಂಗಪಟ್ಟಣ ಮತ್ತು ಶ್ರವಣಬೆಳಗೊಳಗಳಲ್ಲಿ (1129) ದೊರೆತಿವೆ. ಇವು ಚಂದ್ರಗುಪ್ತಮೌರ್ಯ ಮತ್ತು ಭದ್ರಬಾಹು ಶ್ರವಣಬೆಳಗೊಳದಲ್ಲಿದ್ದರೆಂಬುದನ್ನು ಸಾಬೀತುಪಡಿಸುತ್ತವೆ.

## 2.5 ಸಾರಾಂಶ

ಭಾರತದಲ್ಲಿ ಪ್ರಥಮ ಬಾರಿಗೆ ಶಾಸನಗಳನ್ನು ಜಾರಿಗೆ ತಂದ ಕೀರ್ತಿ ಅಶೋಕನಿಗೆ ಸಲ್ಲುತ್ತದೆ. ಒಟ್ಟಿನಲ್ಲಿ ಮೌರ್ಯರ ಆಳ್ವಿಕೆ ದಕ್ಷಿಣ ಭಾರತದ ಮೇಲೆ ತನ್ನದೇ ಆದ ಪ್ರಭಾವ ಬೀರಿತು. ಚಂದ್ರಗುಪ್ತ ಮೌರ್ಯ ಮತ್ತು ಅಶೋಕ ಚಕ್ರವರ್ತಿಯಿಂದ ಜೈನ ಮತ್ತು ಬೌದ್ಧ ಧರ್ಮಗಳು ದಕ್ಷಣ ಭಾರತದಲ್ಲಿ ಪ್ರಚಾರವಾದವು.

## 2.6 ಸ್ವಪರೀಕ್ಷೆ ಪ್ರಶ್ನೆಗಳು

1) ಮೌರ್ಯರು ದಕ್ಷಿಣ ಭಾರತದಲ್ಲಿ ಅವರ ಪ್ರಭಾವವನ್ನು ವಿವರಿಸಿ.

## 2.7 ಮಾದರಿ ಪ್ರಶ್ನೆಗಳಿಗೆ ಉತ್ತರ

1) ಉತ್ತರ 2.1 ಯಿಂದ 2.3

## 2.8 ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು


1) ಭಾರತದ ಪ್ರೌಢ ಇತಿಹಾಸ – ಅನುವಾದ: ಎನ್.ಎಸ್.ಶಾರದಾ ಪ್ರಸಾದ್

2) G.R.Ranga swamaiah - Pracheena Bharatha

3) T.V.Mahalingam - South Indian History

4) ಅ.ಸುಂದರ್ (ಸಂ) – ಕರ್ನಾಟಕ ಚರಿತ್ರೆ ಸಂ.1, ಕ.ವಿ.ಹಂಪಿ

5) Romila Thappar - Ashoka and Decline of the Mouryas


## 2.9 ಪ್ರಮುಖ ಪದಗಳು

Commander – ಸೇನಾಪತಿ

Upsasaka – ಲೇ ಫ್ಯೇಲೋಡ್


**ಪ್ರೊ.ಎನ್.ಸರಸ್ವತಿ**

ಇತಿಹಾಸ ವಿಭಾಗ

ಮಾನಸಗಂಗೋತ್ರಿ,ಮೈಸೂರು

## ಘಟಕ–3: ಶಾತವಾಹನರು ಮತ್ತು ಕ್ಷತ್ರಪರು


3.0 ಉದ್ದೇಶಗಳು

3.1 ಪೀಠಿಕೆ

3.2 ಶಾತವಾಹನರ ಏಳಿಗೆ

3.3 ಆಧಾರಗಳು

3.4 ಮೂಲ

3.5 ರಾಜಕೀಯ ಇತಿಹಾಸ

3.6 ಶಾತವಾಹನರ ಪತನಕ್ಕೆ ಕಾರಣಗಳು

3.7 ಶಾತವಾಹನರ ಆಡಳಿತ

3.8 ಮಂತ್ರಿ ಪರಿಷತ್ ಮತ್ತು ಮಂತ್ರಾಲೋಚನೆ ಸಭೆ

3.9 ಇಲಾಖೆಗಳು

3.10 ಪ್ರಾಂತ್ಯಾಡಳಿತ

3.11 ಪ್ರಾಂತ್ಯಾಧಿಕಾರಿಗಳ ಕರ್ತವ್ಯಗಳು

3.12 ಸಾಮಾಜಿಕ ಪದ್ಧತಿ

3.13 ಆರ್ಥಿಕ ಪರಿಸ್ಥಿತಿ

3.14 ವ್ಯಾಪಾರ ಮತ್ತು ವಾಣಿಜ್ಯ

3.15 ವ್ಯಾಪಾರ ಕೇಂದ್ರಗಳು

3.16 ಶಾತವಾಹನರ ಸಾಂಸ್ಕೃತಿಕ ಕೇಂದ್ರಗಳು

3.17 ವೈದಿಕ ಧರ್ಮ

3.18 ಉಪಸಂಹಾರ

3.19 ಕ್ಷತ್ರಪರು

3.19.1 ಮೂಲ

3.19.2 ರಾಜಕೀಯ ಬೆಳವಣಿಗೆ

3.20 ಕ್ಷತ್ರಪರ ಕೊಡುಗೆಗಳು

3.20.1 ಆಡಳಿತ

3.21 ಆರ್ಥಿಕತೆ

3.22 ಸಮಾಜ

3.23 ಧರ್ಮ

3.24 ಕಲೆ ಮತ್ತು ವಾಸ್ತುಶಿಲ್ಪ

3.25 ಸಾಹಿತ್ಯ

3.26 ಉಪಸಂಹಾರ

3.27 ಸ್ವಪರೀಕ್ಷೆಗಳ ಪ್ರಶ್ನೆಗಳು

3.28 ಸ್ವಪರೀಕ್ಷೆಗಳ ಪ್ರಶ್ನೆಗಳಿಗೆ ಉತ್ತರ

3.29 ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು

3.30 ಪ್ರಮುಖ ಪದಗಳು

## ಘಟಕ–3 ಶಾತವಾಹನರು ಮತ್ತು ಕ್ಷತ್ರಪರು

### 3.0 ಉದ್ದೇಶಗಳು

ಘಟಕದ ಉದ್ದೇಶಗಳು

ಈ ಘಟಕದಲ್ಲಿ ಶಾತವಾಹನರು ಮತ್ತು ಕ್ಷತ್ರಪರ ಆಳ್ವಿಕೆಯ ಬಗ್ಗೆ ತಿಳಿಯುವಿರಿ

ಶಾತವಾಹನರ ಮತ್ತು ಕ್ಷತ್ರಪ ಮೂಲದ ಬಗ್ಗೆ ತಿಳಿಯುವಿರಿ

ಶಾತವಾಹನರ ಮತ್ತು ಕ್ಷತ್ರಪರ ಕೊಡುಗೆಗಳನ್ನು ತಿಳಿಯುವಿರಿ

### 3.1 ಪೀಠಿಕೆ

ಮೌರ್ಯಸಾಮ್ರಾಜ್ಯದ ಪತನದ ನಂತರ ದಖನ್ ಪ್ರಸ್ಥಭೂಮಿಯಲ್ಲಿ ಶಾತವಾಹನರು ಪ್ರಪ್ರಥಮ ಐತಿಹಾಸಿಕ ಹಿರಿಯ ಸಾಮ್ರಾಜ್ಯವನ್ನು ಸ್ಥಾಪಿಸಿದರು ಮತ್ತು ದಕ್ಷಿಣ ಭಾರತದ ಮಹತ್ವವನ್ನು ಹೆಚ್ಚಿಸಿದರು. ಶಾತವಾಹನರನ್ನು "ಮೂರು ಸಾಗರದ ಒಡೆಯರು" ಎಂಬುದಾಗಿ ಕರೆಯಲಾಗಿದೆ. ಡಾ.ಕೆ.ರಾಜ–ಗೋಪಾಲಾಚಾರಿರವರ ಪ್ರಕಾರ "ಶಾತವಾಹನರ ಕಾಲ ದಕ್ಷಿಣ ಭಾರತದಲ್ಲಿ ಸ್ಥಗಿತಗೊಂಡ ಕಾಲವಾಗಿರದೆ ಸದಾ ಚಟುವಟಿಕೆಯಿಂದ ಮುಂದುವರಿದ ಕಾಲವಾಗಿತ್ತು." ವಿಂದ್ಯಪರ್ವತಗಳ ದಕ್ಷಿಣ ಭಾಗದ ಪರ್ಯಾಯ ದ್ವೀಪವನ್ನು ವೈದಿಕ ಸಾಹಿತ್ಯದಲ್ಲಿ "ದಕ್ಷಿಣ ಪಥ" ಎಂದು ನಿರ್ದೇಶಿಸಲಾಗಿದೆ. ಒಂದನೇ ಶಾತಕರ್ಣಿಯು 'ದಕ್ಷಿಣ ಪಥೇಶ್ವರ' ಎಂಬ ಬಿರುದನ್ನು ಹೊಂದಿದ್ದನು. ಹೀಗಾಗಿ ಅಶೋಕ ಚಕ್ರವರ್ತಿಯ ಮರಣದ ತರುವಾಯ ದಕ್ಷಿಣ ಭಾರತದ ಮೌರ್ಯರ ಪ್ರಾಂತ್ಯಗಳು ಶಾತವಾಹನರ ಪ್ರಭುತ್ವಕ್ಕೆ ಒಳಪಟ್ಟವು. ಮೌರ್ಯರ ಸಾಮಂತರಾಗಿದ್ದ ಶಾತವಾಹನರು ಮೌರ್ಯರ ರಾಜಕೀಯ ಉತ್ತರಾಧಿಕಾರಿಗಳಾದರು. ಮೌರ್ಯರ ನಂತರ ದಕ್ಷಿಣದಲ್ಲಿ ಮೊದಲಿಗೆ ರಾಜಕೀಯ ಸಂಘಟನೆ ಮಾಡಿ ಸುಭದ್ರ ಸರ್ಕಾರ ಸ್ಥಾಪಿಸಿ ಏಕತೆಯನ್ನು ತಂದರು. ಉತ್ತರ ಮತ್ತು ದಕ್ಷಿಣ ಸಂಸ್ಕೃತಿಗಳ ನಡುವಣ ಕೊಂಡಿಯಾದರು. ಕಂದಾಯ ಬರುವ ಭೂಮಿಯನ್ನು ಧಾರ್ಮಿಕ ವ್ಯಕ್ತಿಗಳಿಗೆ ದಾನ ನೀಡುವ ವ್ಯವಸ್ಥೆಯನ್ನು ಪ್ರಥಮ ಬಾರಿಗೆ ತಂದರು. ವಾಯುಪುರಾಣದ ಪ್ರಕಾರ 17 ಶಾತವಾಹನ ರಾಜರು 300 ವರ್ಷಗಳ ಕಾಲ ರಾಜ್ಯಭಾರ ಮಾಡಿದರೆಂದು ತಿಳಿದುಬರುತ್ತದೆ. ಆದರೆ ಮತ್ಸ್ಯ ಪುರಾಣದ ಪ್ರಕಾರ ಶಾತವಾಹನ ವಂಶಕ್ಕೆ ಸೇರಿದ 30 ಅರಸರು ಒಟ್ಟು 460 ವರ್ಷಗಳು ರಾಜ್ಯಭಾರ ಮಾಡಿದರೆಂದು ತಿಳಿದುಬರುತ್ತದೆ. ಆ ಮೂವತ್ತು ಅರಸರೆಂದರೆ.....

| ಕ್ರ. ಸಂ. | ಹೆಸರು | ಅಧಿಕಾರವಧಿ | ಕ್ರ.ಸಂ. | ಹೆಸರು | ಅಧಿಕಾರವಧಿ |
|---|---|---|---|---|---|
| 1 | ಸಿಮುಖ | 23 ವರ್ಷ | 16 | ಅರಿಷ್ಟಕರ್ಮ | 25 ವರ್ಷ |
| 2 | ಕೃಷ್ಣ | 10 ವರ್ಷ | 17 | ಹಾಲ | 5 ವರ್ಷ |
| 3 | ಶಾತಕರ್ಣಿ | 10 ವರ್ಷ | 18 | ಮಂತಾಲಕ | 5 ವರ್ಷ |
| 4 | ಪೂರ್ಣೋತ್ಸಗ | 18 ವರ್ಷ | 19 | ಪುರಿಕಷೇಣ | 21 ವರ್ಷ |
| 5 | ಸ್ಕಂದ ಸ್ತಂಭಿ | 18 ವರ್ಷ | 20 | ಸುಂದರ ಶಾತಕರ್ಣಿ | 1 ವರ್ಷ |
| 6 | ಶಾತಕರ್ಣಿ | 56 ವರ್ಷ | 21 | ಚಕೋರ ಶಾತಕರ್ಣಿ | 12 ವರ್ಷ |
| 7 | ಲಂಬೋದರ | 18 ವರ್ಷ | 22 | ಶಿವಸ್ವಾತಿ | 28 ವರ್ಷ |
| 8 | ಆಪಿಲಕ | 12 ವರ್ಷ | 23 | ಗೌತಮಿ ಪುತ್ರ ಶಾತಕರ್ಣಿ | 21 ವರ್ಷ |

| | | | | | |
|---|---|---|---|---|---|
| 9 | ಮಾಘಸ್ವಾತಿ | 18 ವರ್ಷ | 24 | ಪುಲಮಾಯಿ | 28 ವರ್ಷ |
| 10 | ಸ್ವಾತಿ | 18 ವರ್ಷ | 25 | (ಅ) ಶಾತಕರ್ಣಿ | (ಇವನ ಉಲ್ಲೇಖ–ವಿರುವುದು ವಾಯುಪುರಾಣದ ಒಂದು ವಾರಾಂತರದಲ್ಲಿ ಮಾತ್ರ) |
| 11 | ಸ್ಕಂದಸ್ವಾತಿ | 7 ವರ್ಷ | 26 | ಶಿವಶ್ರೀ ಪುಲಮಾಯಿ | 7 ವರ್ಷ |
| 12 | ಮೃಗೇಂದ್ರ ಸ್ವಾತಿಕರ್ಣ | 3 ವರ್ಷ | 27 | ಶಿವಸ್ಕಂದ ಶಾತಕರ್ಣಿ | 13 ವರ್ಷ |
| 13 | ಕುಂತಳ ಸ್ವಾತಿಕರ್ಣ | 8 ವರ್ಷ | 28 | ಯಜ್ಞಶ್ರೀ ಶಾತಕರ್ಣಿ | 29 ವರ್ಷ |
| 14 | ಸ್ವಾತಿಕರ್ಣ | 1 ವರ್ಷ | 29 | ವಿಜಯಶ್ರೀ | 10 ವರ್ಷ |
| 15 | ಪುಲಮಾಯಿ (1) | 36 ವರ್ಷ | 30 | ಚಂಡ ಶ್ರೀ ಶಾತಕರ್ಣಿ | 10 ವರ್ಷ |
| | | | 31 | ಪುಲಮಾಯಿ | 7 ವರ್ಷ |

ಕ್ರಿ.ಪೂ.235 ರಿಂದ ಕ್ರಿ.ಶ.220 ರವರೆಗೆ ರಾಜ್ಯಭಾರ ಮಾಡಿದ ಶಾತವಾಹನರು ದಕ್ಷಿಣ ಭಾರತದ ಸಂಸ್ಕೃತಿಗೆ ವಿವಿಧ ಕ್ಷೇತ್ರಗಳಲ್ಲಿ ವಿಫುಲವಾದ ಕೊಡುಗೆಯನ್ನು ಸಲ್ಲಿಸಿದ್ದಾರೆ. ದಕ್ಷಿಣ ಭಾರತದ ಸಂಸ್ಕೃತಿಯ ಹಿರಿಮೆ ವಿದೇಶಗಳಲ್ಲಿ ಪ್ರಚಾರವಾಗಲು ಶಾತವಾಹನರು ಕಾರಣರಾಗಿದ್ದಾರೆ. ಶಾತವಾಹನರ ಸಾಮ್ರಾಜ್ಯ ಉತ್ತರದಲ್ಲಿ ಸಾಂಚಿಯಿಂದ ಹಿಡಿದು ದಕ್ಷಿಣದಲ್ಲಿ ಕೊಂಕಣದವರೆಗೂ ಮತ್ತು ಪಶ್ಚಿಮದಲ್ಲಿ ಮಾಳ್ವದಿಂದ ಹಿಡಿದು ಪೂರ್ವದಲ್ಲಿ ಒರಿಸ್ಸಾ ಮತ್ತು ಆಂಧ್ರದ ಕರಾವಳಿಯವರೆಗೂ ವಿಸ್ತರಿಸಿದ್ದಿತು. ಮಹಾರಾಷ್ಟ್ರದ ಪ್ರತಿಷ್ಠಾನ ಅಥವಾ ಪೈಥಾನ್ ಇವರ ರಾಜಧಾನಿಯಾಗಿತ್ತು. (ಎಲ್.ಡಿ.ಬಾರ್ನೆಟ್ ಪ್ರಕಾರ ಶಾತವಾಹನರ ಮೊದಲ ರಾಜಧಾನಿ ಶ್ರೀಕಾಕುಲಂ ಆಗಿದ್ದರೆ ನಂತರ ಧನ್ಯಕಟಕವಾಗಿತ್ತು). ಕುದುರೆ ಇವರ ಲಾಂಛನವಾಗಿತ್ತು. ಒಟ್ಟಿನಲ್ಲಿ ಶಾತವಾಹನರು ಕ್ರಿ.ಶ.78ರಲ್ಲಿ ಶಾಲಿವಾಹನ ಶಕೆಯನ್ನು ಆರಂಭಿಸಿ ಎಲ್ಲಾ ವಲಯಗಳಲ್ಲೂ ಹೊಸ ಶಕೆಗೆ ನಾಂದಿ ಹಾಡಿದರು.

## 3.2 ಶಾತವಾಹನರ ಏಳಿಗೆಗೆ ಕಾರಣಗಳು

1) ಮೌರ್ಯ ಸಾಮ್ರಾಜ್ಯದ ಪತನ
2) ದಖನ್ನಿನಲ್ಲಿ ಉಂಟಾದ ಆರ್ಥಿಕ ಸಾಮಾಜಿಕ ಬದಲಾವಣೆಗಳು
3) ಉತ್ತರದ ಮೌರ್ಯರ ಸಂಬಂಧದಿಂದಾಗಿ ಉಂಟಾದ ಕಬ್ಬಿಣದ ಪರಿಚಯ ಮತ್ತು ಕಬ್ಬಿಣದ ಬಳಕೆ
4) ದಖನ್ನಿನಲ್ಲಿ ಉಂಟಾದ ಕೃಷಿ ವಿಸ್ತರಣೆ, ಗೋದಾವರಿ ಮತ್ತು ಕೃಷ್ಣ ನದಿಯ ತೀರದಲ್ಲಿ ಭತ್ತದ ಬೆಳೆ ಹೆಚ್ಚುತ್ತಾ ಹೋದ ಹಾಗೆ ಶಾತವಾಹನರ ಪ್ರಭಾವವು ವಿಸ್ತರಿಸುತ್ತಾ ಹೋಯಿತು.

## 3.3 ಆಧಾರಗಳು

ಶಾತವಾಹನರ ಇತಿಹಾಸವನ್ನು ತಿಳಿಯಲು ಅನೇಕ ಆಕರಗಳು ಲಭ್ಯವಾಗಿವೆ. ಅವುಗಳಲ್ಲಿ ಅತ್ಯಂತ ಮುಖ್ಯವಾದವು. ಯಾವುವೆಂದರೆ:

| | | | |
|---|---|---|---|
| 1 | ಹಾಲನ ಗಾಥಾಸಪ್ತಶತಿ | 14 | ಹೀರೆಹಡಗಲಿ ಶಾಸನ |
| 2 | ಗುಣಾಢ್ಯನ ಬೃಹತ್‌ಕಥಾ | 15 | ನಾನಾಘಟ್ ಶಾಸನ |

| | | | |
|---|---|---|---|
| 3 | ಲಿಲಾವೈ ಗ್ರಂಥ | 16 | ತಾಳಗುಂದ ಶಾಸನ |
| 4 | ಕುಂದ ಕುಮದಾಚಾರ್ಯನ ಕೃತಿಗಳು | 17 | ಸನ್ನತಿ ಶಾಸನ |
| 5 | ಐತ್ತರೇಯ ಬ್ರಾಹ್ಮಣ | 18 | ವಡಗಾಂವ್ ಶಾಸನ |
| 6 | ವಾತ್ಸಾಯನನ ಕಾಮಸೂತ್ರ | 19 | ಮಾಧೋಪುರ ಶಾಸನ |
| 7 | ರಾಜಶೇಖರನ ಕಾವ್ಯಮೀಮಾಂಸೆ | 20 | ಗಿರ್ನಾರ್ ಶಾಸನ |
| 8 | ಮತ್ಸ್ಯ ಮತ್ತು ವಾಯು ಪುರಾಣಗಳು | 21 | ಅಶೋಕನ ಶಾಸನಗಳು |
| 9 | ಕಾರ್ಲೆ ಶಾಸನ | 22 | ಚಂದ್ರವಳ್ಳಿ, ಬ್ರಹ್ಮಗಿರಿ ಮತ್ತು ಅಮರಾವತಿಗಳಲ್ಲಿ ದೊರೆತಿರುವ ನಾಣ್ಯಗಳು |
| 10 | ಕನ್ಹೇರಿ ಶಾಸನ | 23 | ಪೆರಿಪ್ಲಸ್–ಆಫ್–ದಿ ಎರಿತ್ರಿಯನ್–ಸಿ |
| 11 | ನಾಸಿಕ್ ಶಾಸನ | 24 | ಸ್ಟ್ರಾಭೋ ಮತ್ತು ಪ್ಲಿನಿಯ ಬರವಣಿಗೆಗಳು |
| 12 | ಬನವಾಸಿ ಶಾಸನ | 25 | ಟಾಲೆಮಿಯ ಭೂಗೋಳಶಾಸ್ತ್ರ |
| 13 | ಮಾಯಕಡೋನಿ ಶಾಸನ | | |

## 3.4 ಶಾತವಾಹನರ ಮೂಲ

ಶಾತವಾಹನರ ಮೂಲದ ಬಗ್ಗೆ ಚರಿತ್ರಕಾರರಲ್ಲಿ ಭಿನ್ನಾಭಿಪ್ರಾಯಗಳಿದ್ದು ಅದು ಇನ್ನೂ ಬಿಡಿಸಲಾರದ ಒಗಟಾಗಿದೆ. ಏಕೆಂದರೆ ಶಾತವಾಹನರ ಸಾಮ್ರಾಜ್ಯವು ಆಂಧ್ರಪ್ರದೇಶ, ಮಹಾರಾಷ್ಟ್ರ ಹಾಗೂ ಕರ್ನಾಟಕದ ಬಹುಭಾಗಗಳನ್ನು ಆವರಿಸಿಕೊಂಡಿದ್ದರಿಂದ ಶಾತವಾಹನರ ಮೂಲವನ್ನು ಈ ತ್ರಿರಾಜ್ಯಗಳಲ್ಲಿ ಹುಡುಕುವ ಪ್ರಯತ್ನ ಮಾಡಿ ಚರಿತ್ರಕಾರರು ಅವರವರ ವಾದಗಳನ್ನು ವಿವಿಧ ರೀತಿಯಲ್ಲಿ ಸಮರ್ಥಿಸಿಕೊಂಡಿದ್ದಾರೆ.

1) ಶಾಸನಗಳು ಮತ್ತು ಪುರಾಣಗಳು ಶಾತವಾಹನರನ್ನು ಆಂಧ್ರರೆಂದೂ, ಆಂಧ್ರಭೃತ್ಯರೆಂದೂ ಮತ್ತು ಆಂಧ್ರ ಶಾತವಾಹನರೆಂದೂ ಸಂಬೋಧಿಸಿವೆ. ಪ್ರೊ.ರ್‍ಯಾಪ್ಸನ್, ಆರ್.ಜಿ.ಭಂಡಾರ್ಕರ್, ಡಾ.ವಿ.ಎ.ಸ್ಮಿತ್‌ರವರು ಶಾತವಾಹನರನ್ನು ಆಂಧ್ರಪ್ರದೇಶದವರೆಂದು ವಾದಿಸಿದ್ದಾರೆ. ಶಾತವಾಹನರ ಮೂಲಸ್ಥಾನ ತೆಲುಗುನಾಡಾದ ಆಂಧ್ರವಾಗಿತ್ತೆಂದು ಮೆಗಾಸ್ತನೀಸನ ಬರವಣಿಗೆಯಿಂದಲೂ ತಿಳಿದುಬರುತ್ತದೆ. ಅಶೋಕನ 12ನೇ ಶಾಸನದಲ್ಲಿ ಶಾತವಾಹನರನ್ನು ಆಂಧ್ರಭೃತ್ಯರೆಂದು, ಸ್ವಲ್ಪಮಟ್ಟಿಗೆ ಸ್ವತಂತ್ರರೆಂದೂ, ಬೌದ್ಧ ಮತಾವಲಂಬಿಗಳೆಂದೂ ಪ್ರಸ್ತಾಪಿಸಿರುವುದು ಅವರ ವಾದವನ್ನು ಸಮರ್ಥಿಸುತ್ತದೆ. ಶಾತವಾಹನರ ಅತಿ ಹೆಚ್ಚು ಸ್ಥಳಗಳನ್ನು ಹೊಂದಿರುವ ಹಾಗೂ ಪತ್ತೆಹಚ್ಚಿರುವ ಕೀರ್ತಿ ಆಂಧ್ರಪ್ರದೇಶಕ್ಕೆ ಸೇರುತ್ತದೆಂದು ಡಾ.ವಿ.ಕೃಷ್ಣಶಾಸ್ತ್ರಿ ಹೇಳಿರುವುದು ಮೇಲಿನ ಅಭಿಪ್ರಾಯವನ್ನು ಸಮರ್ಥಿಸುತ್ತದೆ. (ಆಂಧ್ರಪ್ರದೇಶದ ತೆಲಂಗಾಣ ಪ್ರಾಂತ್ಯದ ನಿಜಾಮಬಾದ್, ಕರೀಮ್‌ನಗರ, ವಾರಂಗಲ್, ಮೆಹಬೂಬ್ ನಗರಗಳಲ್ಲಿ ಶಾತವಾಹನರ ಅನೇಕ ಗ್ರಾಮೀಣ ಹಾಗೂ ನಗರ ವಾಸಸ್ಥಾನಗಳು ದೊರೆತಿವೆ). ಕ್ರಿ.ಪೂ.500ಕ್ಕೂ ಹಿಂದಿನದಾದ ಐತ್ತರೇಯ ಬ್ರಾಹ್ಮಣದಲ್ಲೂ ಆಂಧ್ರದ ಉಲ್ಲೇಖವಿದೆ. ಆದರೆ ಕೆ.ಪಿ.ಯಸ್ವಾಲ್, ಡಾ.ಗೋಪಾಲಚಾರಿ, ಹೆಚ್.ಸಿ.ರಾಯ್‌ಚೌಧರಿ ಮುಂತಾದವರು ಶಾತವಾಹನರನ್ನು ಆಂಧ್ರರೆಂದು ತೀರ್ಮಾನಿಸಿರುವುದನ್ನು ಪ್ರಶ್ನಿಸಿದ್ದಾರೆ. ಮೂಲತಃ ಪಶ್ಚಿಮ ಭಾರತೀಯರಾದ (ಔರಂಗಬಾದ್ ಜಿಲ್ಲೆ) ಶಾತವಾಹನರು ತಮ್ಮ ಸಾರ್ವಭೌಮತ್ವವನ್ನು ಪೂರ್ವದ ತಿರದವರೆಗೂ ವಿಸ್ತರಿಸಿದರೆಂದು ಈ ವಿದ್ವಾಂಸರ ಅಭಿಪ್ರಾಯವಾಗಿದೆ.

2) ಪುರಾಣಗಳು ಶಾತವಾಹನರನ್ನು "ಆಂಧ್ರಭೃತ್ಯ"ರೆಂದು ಹೆಸರಿಸಿವೆ. ಈ ಮನೆತನದ ರಾಜರು ತಮ್ಮ ಶಾಸನಗಳಲ್ಲಿ ಶಾತವಾಹನ ಕುಲದವರೆವಂದೂ, ದಕ್ಷಿಣಪಥದ ಸ್ವಾಮಿಗಳೆಂದೂ ಕರೆದು ಕೊಂಡಿದ್ದಾರೆ. ಉದಾಹರಣೆಗೆ: ಗೌತಮಿ ಪುತ್ರ ಶಾತಕರ್ಣಿಯು 'ದಕ್ಷಿಣ ಪಥ' ಎಂಬ ಬಿರುದನ್ನು ಹೊಂದಿದ್ದನು. ಪುರಾಣಗಳ ಹೇಳಿಕೆಯ ಪ್ರಕಾರ ಶಾತವಾಹನರು ಆಂಧ್ರದಲ್ಲಿ ಆಳುತ್ತಿದ್ದ ರಾಜ ಮನೆತನವೊಂದರ ಸೇವಕರಾಗಿದ್ದಿರಬಹುದೆಂದು ಹಲವು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಈ ಅಭಿಪ್ರಾಯ ಸಾಧುವಾದುದಲ್ಲವೆಂದೂ ಅವರು ಮೌರ್ಯ ಸಂತತಿಯ ಅಧೀನರಾಗಿದ್ದುದರ ಸಂಕೇತವಾಗಿ ಪುರಾಣಗಳು ಆಂಧ್ರಭೃತ್ಯರೆಂದು ಕರೆದಿವೆಯೆಂದೂ ಕೆಲವು ವಿದ್ವಾಂಸರ ವಾದವಾಗಿದೆ.
3) ಶಾತವಾಹನ ಎಂಬ ಪದವು ಆಸ್ಟ್ರೋಏಷ್ಯಾಟಿಕ್ ಭಾಷೆಯ ಪದವೆಂದೂ, (ಪರ್ಶಿಯ) ಸಾತ ಎಂದರೆ ಕಉದುರೆಯೆಂದೂ, ಆದ್ದರಿಂದ ಅವರು ಅದನ್ನೇ ವಾಹನವಾಗುಳ್ಳವರೆಂದೂ ಒಬ್ಬ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಶಾತವಾಹನ ಎಂಬ ಪದ ಕುಲಸೂಚಕವೆಂದೂ, ಈ ಕುಲದ ಮುಖ್ಯನಿಂದ ಈ ಹೆಸರು ಬಂದಿತೆಂದೂ, ಆಂಧ್ರ ಎಂಬ ಪದ ಜಾತಿಸೂಚಕವೆಂದೂ ಹಾಗೂ ಶಾತವಾಹನ ಮತ್ತು ಶಾತಕರ್ಣಿ ಎಂಬುದು ದ್ರಾವಿಡ ಸಂಕೇತವಾದ ಹೆಸರುಗಳೆಂದು ಪ್ರಚಲಿತವಾಗಿದೆ. ಶತ ಮತ್ತು ಶದ ಪದಗಳು ಕುದುರೆಗೆ ಸಂಬಂಧಿಸಿದೆ ಎಂದು ಅಜಯ ಮತ್ತು ಶಾಸ್ತ್ರೀ ಹೇಳುತ್ತಾರೆ. ಜುನ್ನಾರ ಶಾಸನ ಇವರ ಅತ್ಯಂತ ಹಳೆಯ ಶಾಸನವಾಗಿದ್ದು, ಅದರಲ್ಲಿ ಶಾತವಾಹನ ಎಂಬ ಪದ ಬಳಕೆ ಇವರನ್ನು ಸೂಚಿಸುತ್ತದೆ. ದಕ್ಷಿಣದ ಬೃಹತ್ ಶಿಲೋಗೋರಿಗಳಲ್ಲಿ ಕುದುರೆಗಳ ಅಸ್ಥಿಗಳು ದೊರೆತಿವೆ. ಈ ಗೋರಿಗಳ ಮಾಲೀಕರು ಅಶ್ವಾರೋಹಿಗಳಾಗಿರಲು ಸಾಧ್ಯ ಎಂದು ಭಾವಿಸಬಹುದು.
4) ಶಾತವಾಹನರು ಸೂರ್ಯ ಆರಾಧಕರೆಂದೂ, ಸೂರ್ಯಪೂಜೆ ಮಾಡುತ್ತಿದ್ದ ಪರ್ಶಿಯ ದೇಶದ ಜರಾತುಷ್ಟ್ರ ಧರ್ಮಕ್ಕೆ ಸೇರಿದವರೆಂದು ಹಲವು ವಿದ್ವಾಂಸರ ವಾದವಾಗಿದೆ.
5) ಕರ್ನಾಟಕದ ಮಾಯಕಡೋನಿ ಮತ್ತು ಹಿರೇಹಡಹಲಿ ಶಾಶನಗಳು ಶಾತವಾಹನ ಮೂಲ ನೆಲೆ ಸಾತನೀಹಾರವಾಗಿದ್ದಿತ್ತೆಂಬ ವಿಚಾರವನ್ನು ಬೆಳಕಿಗೆ ತಂದಿವೆ. ಆದ್ದರಿಂದ ಶಾತವಾಹನರು ಆಂಧ್ರರಲ್ಲವೆಂದು ಮತ್ತು ಗೌತಮಿಪುತ್ರ ಶಾತಕರ್ಣಿಯ ಕಾಲದಲ್ಲಿ ಆಂಧ್ರಪ್ರದೇಶವನ್ನು ಗೆದ್ದರೆಂದು ನಂಬಲಾಗಿದೆ. ಒಟ್ಟಿನಲ್ಲಿ ಶಾತವಾಹನರ ಮೂಲಕ ಬಗ್ಗೆ ಚರಿತ್ರಕಾರರಲ್ಲಿ ಭಿನ್ನಾಭಿಪ್ರಾಯವಿದೆ.

## 3.5 ಶಾತವಾಹನ ರಾಜಕೀಯ ಇತಿಹಾಸ

**ಸಿಮುಖ**

ಸಿಮುಕ ಶಾತವಾಹನರ ಸಂತತಿಯ ಸಂಸ್ಥಾಪಕ. ಇವನು ಭೋಜರು ಹಾಗೂ ರಥಿಕರ ಸಹಾಯದಿಂದ ಮೌರ್ಯರ ಪ್ರಭುತ್ವವನ್ನು ಕಿತ್ತುಹಾಕಿ ಪಶ್ಚಿಮ ದಖನ್ನಿನಲ್ಲಿ ಸ್ವತಂತ್ರ ರಾಜಸಂತತಿಯನ್ನು ಸ್ಥಾಪಿಸಿದನು. ನಾನಾಘಾಟ್ ಬಳಿ ದೊರೆತಿರುವ ಶಾಸನವೊಂದು ಈತನನ್ನು 'ರಾಜ ಸಿಮುಖ ಶಾತವಾಹನ' ಎಂಬುದಾಗಿ ಹೆಸರಿಸುತ್ತದೆ. ಇದರಿಂದ ಶಾತವಾಹನ ಎನ್ನುವುದು ಆತನ ಎರಡನೆಯ ಹೆಸರು ಎಂದು ಗೊತ್ತಾಗುತ್ತದೆ.

ಮಹಾರಾಷ್ಟ್ರದ ಪೈಥಾನ್ ಇವನ ರಾಜಧಾನಿಯಾಗಿತ್ತು. ಜೈನ ಬರವಣಿಗೆಗಳ ಪ್ರಕಾರ ಸಿಮುಖನು 23 ವರ್ಷಗಳ ಕಲ ರಾಜ್ಯಭಾರ ಮಾಡಿದನು. ಪುರಾಣಗಳಲ್ಲಿ ಸಿಮುಖನನ್ನು ವೃಷಲ ಎಂದು ಕರೆದರೆ, ನಾಸಿಕ್ ಶಾಸನದಲ್ಲಿ ಇವನನ್ನು "ಏಕ ಬ್ರಾಹ್ಮಣ" ಎಂದು ಕರೆಯಲಾಗಿದೆ. ಈ ಏಕ ಶಬ್ಧಕ್ಕೆ ಅದ್ವಿತೀಯವಾದವನು ಎಂಬ ಅರ್ಥ ನೀಡಲಾಗಿದೆ. ಇದರಿಂದ ಶಾತವಾಹನರು ಸಾಮಾಜಿಕವಾಗಿ ಬ್ರಹ್ಮಣರ ಅಂತಸ್ತನ್ನು ಪಡೆದಿದ್ದರು ಎಂದು ತೋರುತ್ತದೆ. ಹಾಗೆಯೇ ಸಿಮುಖನನ್ನು "ಕ್ಷತ್ರಿಯರ ದರ್ಪ ಮುರಿದವನು" ಎಂತಲೂ ಕೂಡ ಕರೆಯಲಾಗಿದೆ. ಸಿಮುಖ ಪಲ್ಲವರೊಡನೆ ಮತ್ತು ಕುಂತಲದ ಚುಟುಗಳೊಡನೆ ವೈವಾಹಿಕ ಸಂಬಂಧವನ್ನು ಹೊಂದಿದ್ದನು. ಬೌದ್ಧ ಧರ್ಮದ ಸಂರಕ್ಷಕನಾಗಿದ್ದ ಸಿಮುಖ ಅನೇಕ ಜೈನ ಮತ್ತು ಬೌದ್ಧ ದೇವಾಲಯಗಳನ್ನು ನಿರ್ಮಿಸಿದನು. ಸಿಮುಖ

ತನ್ನ ಆಳ್ವಿಕೆಯ ಕೊನೆಯಲ್ಲಿ ದುಷ್ಟಪ್ರವೃತ್ತಿಯವನಾದನೆಂದು ಅವನನ್ನು ಅಧಿಕಾರದಿಂದ ಕೆಳಗಿಳಿಸಿ ಕೊಲ್ಲಲಾಯಿತೆಂದು ಜೈನ ಸಾಹಿತ್ಯದಿಂದ ತಿಳಿದುಬರುತ್ತದೆ. ಸಿಮುಖನ ನಂತರ ಅವನ ಸಹೋದರನಾದ ಕೃಷ್ಣ ಅಧಿಕಾರಕ್ಕೆ ಬಂದನು.

## ಕೃಷ್ಣ

ಕೃಷ್ಣ 18 ವರ್ಷಗಳ ಕಾಲ ರಾಜ್ಯಭಾರ ಮಾಡಿದನು. ಈತನ ಕಾಲದಲ್ಲಿ ಶಾತವಾಹನರ ಸಾಮ್ರಾಜ್ಯವು ಪಶ್ಚಿಮದಲ್ಲಿ ನಾಸಿಕ್‌ವರೆಗೂ ವಿಸ್ತರಿಸಿತ್ತು. ಬೌದ್ಧ ಧರ್ಮದಲ್ಲಿ ಅಪಾರ ಒಲವು ಹೊಂದಿದ್ದ ಕೃಷ್ಣ ನಾಸಿಕ್ ಬಳಿ ಬಂದು ಬೌದ್ಧ ಗುಹಾಲಯವನ್ನು ನಿರ್ಮಿಸಿದನು. ಕೃಷ್ಣನ ನಂತರ ಶಾತಕರ್ಣಿ ಅಧಿಕಾರಕ್ಕೆ ಬಂದನು.

## ಒಂದನೇ ಶಾತಕರ್ಣಿ

ಒಂದನೇ ಶಾತಕರ್ಣಿ ಶಾತವಾಹನ ಸಾಮ್ರಾಜ್ಯದ ಪ್ರಸಿದ್ಧ ಅರಸರಲ್ಲೊಬ್ಬನಾಗಿದ್ದಾನೆ. ಕ್ರಿ.ಪೂ.202 ರಿಂದ 196 ರವರೆಗೆ ರಾಜ್ಯಭಾರ ಮಾಡಿದ ಶಾತಕರ್ಣಿ ವಿಂಧ್ಯಪರ್ವತ ಮತ್ತು ಕೊಂಕಣದವರೆಗೂ ರಾಜ್ಯವನ್ನು ವಿಸ್ತರಿಸಿದನು. ಬ್ಯಾಕ್ಟ್ರಿಯನ್ ಗ್ರೀಕರ ಆಕ್ರಮಣಗಲನ್ನು ಸದುಪಯೋಗಪಡಿಸಿಕೊಂಡು ಪಶ್ಚಿಮ ಮಾಳ್ವ, ಅನುಪ ಹಾಗೂ ವಿದರ್ಭಗಳ ಆಕ್ರಮಣಗಳ ಮೂಲಕ ಇಡೀ ಭಾರತವನ್ನು ವಿಸ್ಮಯಗೊಳಿಸಿದನು. ವಿಸ್ತಾರ ಮತ್ತು ಶಕ್ತಿಗಳಲ್ಲಿ ಗಂಗಾ ಕಣಿವೆಯ ಶುಂಗ ಸಾಮ್ರಾಜ್ಯಕ್ಕೆ ಹಾಗೂ ಪಂಚನದಿಗಳಲ್ಲಿನ ಸಾಮ್ರಾಜ್ಯಕ್ಕೆ ಪ್ರತಿಸ್ಪರ್ಧಿಯಾಗಿ ಗೋದಾವರಿ ಕಣಿವೆಯಲ್ಲಿ ಪ್ರಥಮ ಸಾಮ್ರಾಜ್ಯ ಒಂದನೇ ಶಾತಕರ್ಣಿಯ ನಾಯಕತ್ವದಲ್ಲಿ ತಲೆಯೆತ್ತಿತು. ಅಂಗಿಕ ವಂಶದ ನಯನಿಕಳನ್ನು ಮದುವೆಯಾಗುವುದರ ಮೂಲಕ ತನ್ನ ಶಕ್ತಿಯನ್ನು ವೃದ್ಧಿಸಿಕೊಂಡನು. ಈಕೆ ನಾನಾಘಾಟ್ ಗುಹಾಂತರ ದೇವಾಲಯದಲ್ಲಿ ಒಂದು ಶಾಸನವನ್ನು ಕೆತ್ತಿಸಿದ್ದು ಅದರಲ್ಲಿ ಕನ್ಹ, ಶಾತಕರ್ಣಿ ಹಾಗೂ ನಯನಿಕಳ ಹೆಸರುಗಳು ಮತ್ತು ಚಿತ್ರಗಳಿವೆ. ಉಪಲಬ್ಧವಿರುವ ಐತಿಹ್ಯಗಳ ಪ್ರಕಾರ ಈತ ಶಕರನ್ನು ಸೋಲಿಸಿ ಶಾಲಿವಾಹನ ಶಕೆಯನ್ನು ಸ್ಥಾಪಿಸಿದನು. ಈತನ ಮರಾಠಿ ಪತ್ನಿ ನಯನಿಕಳ ನಾನಾಘಾಟ್ ಶಾಸನದ ಪ್ರಕಾರ ಶಾತಕರ್ಣಿ ಎರಡು ಅಶ್ವಮೇಧ ಯಾಗಗಳು ಮತ್ತು ಒಂದು ರಾಜಸೂಯ ಯಾಗವನ್ನು ಮಾಡಿದನು. ಈ ಯಾಗಗಳಲ್ಲಿ ಇಂದ್ರ, ವರುಣ, ಕುಬೇರ, ಯಮ ಮುಂತಾದ ದೇವರುಗಳನ್ನು ಸ್ತುತಿಸಲಾಗಿದೆ. ಒಂದನೇ ಶಾತಕರ್ಣಿ ಬ್ರಾಹ್ಮಣರಿಗೆ ಭೂಮಿಯನ್ನೂ, 1100 ಹಸುಗಳನ್ನೂ, 22,400 ನಾಣ್ಯಗಳನ್ನೂ, ಗ್ರಾಮಗಳನ್ನೂ, ವಸ್ತ್ರಗಳನ್ನೂ ಹೇರಳವಾಗಿ ದಾನ ಮಾಡಿದನು. ಅಶ್ವಮೇಧ ಯಾಗಗಳಲ್ಲಿ ಒಂದನ್ನು ಚಕ್ರವರ್ತಿತ್ವದ ಸ್ಮರಣಾರ್ಥ ಆಚರಿಸಬಹುದು. ಇನ್ನೊಂದನ್ನು ಬದುಕಿನ ಇಳಿಗಾಲದಲ್ಲಿ ತನ್ನದೇ ಸಾಧನೆಗಳ ಸಂತೋಷವನ್ನು ಆಚರಿಸುವುದಕ್ಕಾಗಿ ಮಾಡಿರಬಹುದು. ದಕ್ಷಿಣ ಪಥೇಶ್ವರ ಎಂಬ ಬಿರುದನ್ನು ತನ್ನ ಪ್ರಭುತ್ವದ ಸಂಕೇತವಾಗಿ ಧರಿಸಿದ್ದನು. ಇವನ ಕಾಲದಲ್ಲಿ ಬ್ರಾಹ್ಮಣೀಯಧರ್ಮ ದಖನ್ನಿನಲ್ಲಿ ಸುಧಾರಿಸಲ್ಪಟ್ಟಿತು.

ಒಂದನೇ ಶಾತಕರ್ಣಿಯ ನಂತರ ಸ್ವಲ್ಪ ಕಾಲದವರೆಗೆ ಶಾತವಾಹನರು ಅಷ್ಟು ಪ್ರಬಲರಾಗಿರಲಿಲ್ಲವೆಂದು ತಿಳಿದುಬರುತ್ತದೆ. ಬಹುಶಃ ಶಕ ಕ್ಷತ್ರಪರ ಪ್ರಾಬಲ್ಯದಿಂದ ಶಾತವಾಹನರ ಅಧಿಕಾರ ಕ್ಷೀಣಿಸಿದಂತೆ ತೋರುತ್ತದೆ. ಆ ಕಾಲದಲ್ಲಿ ಆಳಿದ ಹಲವಾರು ಶಾತವಾಹನರ ರಾಜರ ಹೆಸರುಗಳು ತಿಳಿದುಬರುವುದಿಲ್ಲ. ಆದರೂ ಕೂಡ ಎರಡನೇ ಶಾತಕರ್ಣಿ ಕ್ರಿ.ಪೂ.156 ರಿಂದ ಕ್ರಿ.ಪೂ.100 ರವರೆಗೆ ಆಳಿದನೆಂದು ತಿಳಿದುಬರುತ್ತದೆ. ಈತ ಮಧ್ಯಪ್ರದೇಶದಲ್ಲಿ ಶಾತವಾಹನರ ಸಂತತಿಯನ್ನು ವಿಸ್ತರಿಸಿದನು. ಯೋಗಪುರಾಣದ ಪ್ರಕಾರ ಈತ ಕಳಿಂಗ ರಾಜ್ಯವನ್ನು ಶಾತವಾಹನರ ಸಾಮ್ರಾಜ್ಯಕ್ಕೆ ಸೇರಿಸಿಕೊಂಡನೆಂದು ತಿಳಿದುಬರುತ್ತದೆ. ಶಾತವಾಹನ ವಂಶದ ಒಂದನೇ ಪುಲಮಾಯಿ ಕಣ್ವ ವಂಶದ ಆಳ್ವಿಕೆಯನ್ನು ಕೊನೆಗಾಣಿಸಿ ಪಾಟಲಿಪುತ್ರವನ್ನು ಕೆಲಕಾಲ ಆಕ್ರಮಿಸಿದನೆಂದು

ತಿಳಿದುಬರುತ್ತದೆ. ಶಕಕ್ಷತ್ರಪರ ಮೇಲೆ ದಂಡೆತ್ತಿ ಹೋಗಿ ಅವರ ಪ್ರಾಬಲ್ಯವನ್ನು ಅಡಗಿಸಿದನು. ಅವಂತಿ ಮತ್ತು ಅಕರ ಮೊದಲಾದ ರಾಜ್ಯಗಳ ಮೇಲೆ ಶಾತವಾಹನರ ಅಧಿಕಾರವನ್ನು ಸ್ಥಾಪಿಸಿದನು. ಆದರೆ ಈತನ ನಂತರ ಪುನಃ ಶಾತವಾಹನ ಸಾಮ್ರಾಜ್ಯ ಸಮಸ್ಯೆಗಳ ಸುಳಿಗೆ ಸಿಕ್ಕಿತು. ಮಾಳವ ಕೈಬಿಟ್ಟುಹೋಯಿತು. ಇದರಿಂದ ಶಕಕ್ಷತ್ರಪರಂ ಪ್ರಬಲರಾದರು. ಶಾತವಾಹನರ ರಾಜ್ಯಭಾರ ಕಾಲದಲ್ಲಿ ಶಕಕ್ಷತ್ರಪರು, ಇತರ ಸ್ಥಳೀಯ ರಾಜರುಗಳು ಶಾತವಾಹನರ ವಿರುದ್ಧ ನಿರಂತರ ದಂಡೆಯಾತ್ರೆ ಮಾಡಿರುವುದನ್ನು ಕಾಣುತ್ತೇವೆ. ಇದರಿಂದ ಇವರ ರಾಜಕೀಯ ಚರಿತ್ರೆಯಲ್ಲಿ ನಿರಂತರ ಏಕರೂಪತೆ ಕಂಡುಬರುವುದಿಲ್ಲ. ಶಕರ ರಾಜ್ಯ ವಿಸ್ತರಣೆಯಾಗುತ್ತಾ ಬಂದಂತೆ ಶಾತವಾಹನರು ತಮ್ಮ ಪ್ರಾಮುಖ್ಯತೆಯನ್ನು ಕಳೆದುಕೊಂಡರು.

## ಹಾಲ

ಹಾಲ ಶಾತವಾಹನ ಸಾಮ್ರಾಜ್ಯದ 17ನೇ ದೊರೆಯಾಗಿದ್ದನು. ಈತ ಶಾಂತಿಗೆ ಪ್ರಖ್ಯಾತನಾಗಿದ್ದನು. ಆದರೂ ಪೂರ್ವ ದಖನ್ ಹಾಗೂ ಸಿಲೋನಿನ ಮೇಲೆ ಆಕ್ರಮಣಗಳನ್ನು ಯೋಜಿಸಿದ್ದನೆಂದು ತಿಳಿದುಬರುತ್ತದೆ. ಹಾಲನ ದಂಡನಾಯಕ ವಿಜಯನಂದ ಸಿಂಹಳದ ವಿರುದ್ಧ ದಂಡಯಾತ್ರೆಯನ್ನು ಕೈಗೊಂಡು ಸಿಂಹಳವನ್ನು ಗೆದ್ದನು. ನಂತರ ಹಾಲ ಸಿಂಹಳದ ರಾಜಕುಮಾರಿ ಲೀಲಾವತಿಯನ್ನು ವಿವಾಹವಾದನು. ಹಾಲನ ಕಾಲ ಪ್ರಾಕೃತ ಭಾಷಾ ಸಾಹಿತ್ಯಕ್ಕೆ ಹೆಸರಾಗಿತ್ತು. ಸ್ವತಃ ಕವಿಯಾಗಿದ್ದ ಈತ "ಗಾಥಾಸಪ್ತಶತಿ" ಎಂಬ ಕೃತಿಯನ್ನು ರಚಿಸಿದ್ದಾನೆ. ಇದು 700 ಶೃಂಗಾರ ಕಾವ್ಯಗಳನ್ನೊಳಗೊಂಡಿರುವ ಮೇರು ಕೃತಿಯಾಗಿದೆ. ಹಾಲನ ನಂತರ ಶಕರು, ಪಹ್ಲವರು ಮತ್ತು ಯವನರು ಪ್ರಬಲರಾದ್ದರಿಂದ ಶಾತವಾಹನರ ವಿಸ್ತರಣೆಗೆ ತಡೆಯುಂಟಾಯಿತು. ಶಕರು ಶಾತವಾಹನರಿಂದ ಮಾಳವ, ಉತ್ತರಕೊಂಕಣ ಮತ್ತು ಮಹಾರಾಷ್ಟ್ರಗಳನ್ನು ಆಕ್ರಮಿಸಿದರು. ಹೀಗಾಗಿ ಶಾತವಾಹನರ ಪ್ರಭುತ್ವ ಇಳಿಮುಖವಾಗತೊಡಗಿತು. ನಂತರ ಅಧಿಕಾರಕ್ಕೆ ಬಂದ ಗೌತಮಿಪುತ್ರ ಶಾತಕರ್ಣಿ ಶಾತವಾಹನರ ಕೀರ್ತಿಯನ್ನು ಪುನರ್ ಸ್ಥಾಪಿಸಿದನು.

## ಗೌತಮಿಪುತ್ರ ಶಾತಕರ್ಣಿ (ಕ್ರಿ.ಶ.106–130)

ಗೌತಮಿಪುತ್ರ ಶಾತಕರ್ಣಿ ಶಾತವಾಹನ ಅರಸರಲ್ಲೆ ಅತ್ಯಂತ ಪ್ರಬಲ ಅರಸನಾಗಿದ್ದಾನೆ. ಈತ ಕ್ರಿ.ಶ.106–130ರವರೆಗೆ ರಾಜ್ಯಭಾರ ಮಾಡಿದನು. ಈ ಅವಧಿಯಲ್ಲಿ ಶಾತವಾಹನರು ಕಳೆದುಕೊಂಡಿದ್ದ ಗೌರವ ಪ್ರತಿಷ್ಠೆಗಳನ್ನು ಪುನರ್ ಸ್ಥಾಪಿಸಿದನು. ಅವನು ತಾನೊಬ್ಬನೇ ಬ್ರಾಹ್ಮಣ ಎಂದು ಹೇಳಿಕೊಂಡಿದ್ದಾನೆ. ಗೌತಮಿ ಪುತ್ರ ಶಾತಕರ್ಣಿ ಮರಣ ಹೊಂದಿದ 23 ವರ್ಷಗಳ ನಂತರ ಅವನ ತಾಯಿಯಾದ ದೇವಿ ಗೌತಮಿ ಬಾಲಶ್ರೀ ಕೆತ್ತಿಸಿದ ನಾಸಿಕ್ ಶಾಸನ ಈತನ ಸಾಧನೆಗಳ ಬಗ್ಗೆ ಸುದೀರ್ಘವಾದ ಮಾಹಿತಿ ನೀಡುತ್ತದೆ. ಕ್ರಿ.ಶ.124ರಲ್ಲಿ ಗೌತಮಿಪುತ್ರ ಶಾತಕರ್ಣಿ ಶಕರ ಅರಸ ನಹಪಾಣನನ್ನು ಸೋಲಿಸಿದನು. ನಂತರ ನಹಪಾಣ ಮತ್ತು ಅವನ ಅಳಿಯನಾದ ಉಷವದತ್ತನನ್ನು ಸಂಹರಿಸುವುದರ ಮೂಲಕ ಕ್ಷಹರಾಟ್ ವಂಶವನ್ನು ನಾಶಗೊಳಿಸಿದನು. ನಹಪಾಣನ ಅನೇಕ ನಾಣ್ಯಗಳನ್ನು ತನ್ನ ಹೆಸರಿನಲ್ಲಿ ಮುದ್ರಿಸಿ ಚಲಾವಣೆಗೆ ತಂದನು. ನಾಸಿಕ್ ಬಳಿ ದೊರೆತಿರುವ (ಜೋಗಲ್‌ಥಂಬಿ) 8000 ಬೆಳ್ಳಿ ನಾಣ್ಯಗಳ ಮೇಲೆ ಶಾತವಾಹನರ ಪುನರ್ಮುದ್ರೆ ಕಂಡುಬರುವುದರಿಂದ ಈ ಹೇಳಿಕೆ ವಾಸ್ತವವಾದುದು.

ಗೌತಮಿಪುತ್ರ ಶಾತಕರ್ಣಿ ಯವನರು (ಗ್ರೀಕರು) ಮತ್ತು ಪಹ್ಲವರನ್ನು ಸೋಲಿಸಿ ಹೊಡೆದೋಡಿಸಿದನು. ಆದ್ದರಿಂದಲೆ ಗೌತಮಿಪುತ್ರ ಶಾತಕರ್ಣಿಯನ್ನು ಶಕರ, ಯವನರ ಮತ್ತು ಪಹ್ಲವರ ನಾಶಕನೆಂದು ನಾಸಿಕ್ ಪ್ರಶಸ್ತಿಯಲ್ಲಿ ಉಲ್ಲೇಖಿಸಲಾಗಿದೆ. ಗುಜರಾತ್, ಸೌರಾಷ್ಟ್ರ, ಮಾಳವ, ಬಿರಾರ್ ಹಾಗೂ ಉತ್ತರ ಕೊಂಕಣದಲ್ಲಿದ್ದ ಶಕಸಾಮ್ರಾಜ್ಯವನ್ನು ನಾಶಗೊಳಿಸಿದ್ದರಿಂದ ಶಾತವಾಹನರು ದಕ್ಷಿಣದಲ್ಲಿ ತಡೆರಹಿತ ಶಕ್ತಿಗಳಾಗಿ ಪರಿವರ್ತಿತರಾದರು.

ಗೌತಮಿಪುತ್ರ ಶಾತಕರ್ಣಿ ಕೊಂಕಣ, ಮಹಾರಾಷ್ಟ್ರ, ಸೌರಾಷ್ಟ್ರ ಮತ್ತು ಮಾಳ್ವದ ಮೇಲೆ ತನ್ನ ಪ್ರಭುತ್ವವನ್ನು ಸ್ಥಾಪಿಸಿದನು. ನಂತರ ಗೌತಮಿಪುತ್ರ ಶಾತಕರ್ಣಿ ಕೊಲ್ಲಾಪುರ ಮತ್ತು ಬನವಾಸಿಗಳನ್ನು ಗೆದ್ದುಕೊಂಡನು. ಈ ಎಲ್ಲಾ ದಿಗ್ವಿಜಯಗಳ ಪರಿಣಾಮವಾಗಿ ಈತನ ಸಾಮ್ರಾಜ್ಯವು ಉತ್ತರದಲ್ಲಿ ಮಾಳ್ವದಿಂದ ದಕ್ಷಿಣದಲ್ಲಿ ಕರ್ನಾಟಕದವರೆಗೂ, ಪೂರ್ವದಲ್ಲಿ ಬಿರಾರ್‌ನಿಂದ ಪಶ್ಚಿಮದಲ್ಲಿ ಕೊಂಕಣದವರೆಗೂ ಹಬ್ಬಿತ್ತು. ಗೌತಮಿಪುತ್ರ ಶಾತಕರ್ಣಿ ಒಂದು ರೀತಿಯಲ್ಲಿ ವಿಂಧ್ಯೋತ್ತರ ಸಮಗ್ರ ಭಾರತದ ಮೇಲೆ ತನ್ನ ಚಕ್ರವರ್ತಿತ್ವವನ್ನು ಸಾರಿದನು. ಆದ್ದರಿಂದಲೇ ಅವನನ್ನು ವಿಂಧ್ಯ, ಋಕ್ಷವತ್, ಪಾರಿಯಾತ್ರ, ಪಶ್ಚಿಮಘಟ್ಟಗಳು, ತಿರುವಾಂಕೂರು ಬೆಟ್ಟಗಳು, ಪೂರ್ವಘಟ್ಟಗಳು ಮತ್ತು ದಕ್ಷಿಣ ಭಾರತ ಪರ್ಯಾಯ ದ್ವೀಪವನ್ನು ಸುತ್ತುಗಟ್ಟಿರುವ ಇತರ ಪರ್ವತಶ್ರೇಣಿಗಳು ಇವುಗಳ ಪ್ರಭು ಎಂದು ವರ್ಣಿಸಲಾಗಿದೆ. ಗೌತಮಿಪುತ್ರ ಶಾತಕರ್ಣಿ ಚತುರನಾದ ಬಿಲ್ಲುಗಾರನಾಗಿದ್ದನೆಂದೂ, ಯುದ್ಧಗಳಲ್ಲಿ ಅವನು ಒಂದು ಸಾರಿಯೂ ಸೋಲನ್ನನುಭವಿಸಲಿಲ್ಲವೆಂದೂ, ಅಲ್ಲದೆ ಸೋತ ಶತ್ರುಗಳಿಗೆ ಚಿತ್ರಹಿಂಸೆ ಕೊಡುತ್ತಿರಲಿಲ್ಲ–ವೆಂದೂ ನಾಸಿಕ್ ಶಾಸನದಿಂದ ತಿಳಿದು ಬರುತ್ತದೆ. ಈತ ಪಶ್ಚಿಮದ ಪ್ರಭು, ಪ್ರತಿಷ್ಠಾನದ ಪ್ರಭು ಮತ್ತು ತ್ರಿಸಮುದ್ರ ತೋಯಪೀತವಾಹನ (ಇವನ ಸೇನೆ ಅರಬ್ಬೀ ಸಮುದ್ರ, ಹಿಂದೂಮಹಾಸಾಗರ ಮತ್ತು ಬಂಗಾಳಕೊಲ್ಲಿಯ ನೀರನ್ನು ಕುಡಿದವು) ಎಂಬ ಬಿರುದುಗಳನ್ನು ಹೊಂದಿದ್ದನು. ಈ ಅಂಶವನ್ನು ವಶಿಷ್ಟಪುತ್ರ ಪುಲಮಾಯಿಯ ಸನ್ನತಿ ಶಾಸನವು ಪುಷ್ಟೀಕರಿಸುತ್ತದೆ. ಆದರೆ ಗೌತಮಿಪುತ್ರ ಶಾತಕರ್ಣಿಯ ಆಳ್ವಿಕೆಯ ಕೊನೆಗಾಲದಲ್ಲಿ ಶಕವಂಶಕ್ಕೆ ಸೇರಿದ್ದ ಕಾಥೆವಾರ್ ಪ್ರದೇಶದ ಪ್ರಾಂತ್ಯಾಧಿಕಾರಿ ಮಹಾಕ್ಷತ್ರಪ ರುದ್ರದಾಮನು ಶಾತವಾಹನರ ಭಾಗಗಳನ್ನು ಆಕ್ರಮಿಸಿದನೆಂದು ತಿಳಿದು ಬರುತ್ತದೆ.

ಗೌತಮಿಪುತ್ರ ಶಾತಕರ್ಣಿ ಕೇವಲ ದಿಗ್ವಿಜಯಿ ಮಾತ್ರವಲ್ಲ, ಉತ್ತಮ ಆಡಳಿತಗಾರನೂ ಕೂಡ ಆಗಿದ್ದನು. ತಾನು ಆಕ್ರಮಿಸಿದ ಭೂಭಾಗಗಳಲ್ಲಿ ಕೃಷಿ ವಿಸ್ತರಣೆಗೆ ಪೂರಕವಾದ ಕ್ರಮ ಕೈಗೊಂಡನು. ಕೃಷ್ಣ ಗೋದಾವರಿ ಜಲಾವೃತ ಭೂಭಾಗಗಳ ಕೃಷಿ ಹೆಚ್ಚಳಕ್ಕೆ ಕಾರಣನಾದ ಗೌತಮಿಪುತ್ರ ಶಾತಕರ್ಣಿ ಶಾತವಾಹನರ ರಾಜ್ಯ ಪ್ರತಿಷ್ಠೆಯ ಹೆಚ್ಚಳಕ್ಕೆ ಮತ್ತು ಶಾತವಾಹನ ವಿಜಯಗಳಿಗೆ ಕಾರಣೀಭೂತನಾದನು. ಈತ ಪ್ರಜೆಗಳ ಯೋಗಕ್ಷೇಮಕ್ಕಾಗಿ ಸಾಕಷ್ಟು ಶ್ರಮಿಸಿದನು. ದೀನದಲಿತರ ಆಶ್ರಯದಾತನಾಗಿದ್ದನು. ನ್ಯಾಯಬದ್ಧವಾದ ತೆರಿಗೆಯನ್ನು ವಿಧಿಸಿದನು. ವೈದಿಕ ಧರ್ಮದ ಸಂಪ್ರದಾಯಗಳನ್ನು ಪುನರುಜ್ಜೀವನ–ಗೊಳಿಸಿದನು. ಸಹಿಷ್ಣುತಾ ಧೋರಣೆಯನ್ನು ಗೌತಮಿಪುತ್ರ ಶಾತಕರ್ಣಿ ಬ್ರಾಹ್ಮಣರಿಗೆ ಮತ್ತು ಬೌದ್ಧ ಸನ್ಯಾಸಿಗಳಿಗೆ ಭೂಮಿಯನ್ನು ದಾನ ಮಾಡಿದನು ಮತ್ತು ಭೂದತ್ತಿಯನ್ನಿತ್ತ ಸಂದರ್ಭದಲ್ಲಿ ಆಡಳಿತಾತ್ಮಕ ಹಕ್ಕುಗಳನ್ನು ಬ್ರಾಹ್ಮಣರಿಗೆ ಮತ್ತು ಬೌದ್ಧ ಭಿಕ್ಷುಗಳಿಗೆ ಬಿಟ್ಟುಕೊಟ್ಟನು. ಆಗ ಸರ್ಕಾರ ಯಾವುದೇ ಅಧಿಕಾರಿ ದತ್ತಿಬಿಟ್ಟ ಪ್ರದೇಶದಲ್ಲಿ ಹಸ್ತಕ್ಷೇಪ ಮಾಡಲು ಅವಕಾಶವಿರಲಿಲ್ಲ. ಭೂಮಿಯನ್ನು ದಾನವಾಗಿ ನೀಡುವ ರೂಢಿಯು ಮೊದಲಿಗೆ ಶಾತವಾಹನರಿಂದ ದಖನ್ನಿನಲ್ಲಿ ಬಳಕೆಗೆ ಬಂದಿತು. ವರ್ಣಾಶ್ರಮ ಧರ್ಮದ ರಕ್ಷಕನಾಗಿದ್ದ ಈತ ವರ್ಣಸಂಕರವನ್ನು ತಡೆಹಿಡಿದನು. ಈತನ ಕಾಲದಲ್ಲಿ ಪ್ರಾಕೃತ ಭಾಷೆ ಹಾಗೂ ಸಾಹಿತ್ಯ ಸಾಕಷ್ಟು ಬೆಳವಣಿಗೆಯಾಯಿತು. ಅಲ್ಲದೆ ಕಲೆ ಮತ್ತು ವಾಸ್ತುಶಿಲ್ಪವೂ ಸಾಕಷ್ಟು ಉನ್ನತಿಯನ್ನು ಕಂಡಿತು. ಗೋವರ್ಧನ ಜಿಲ್ಲೆಯಲ್ಲಿ ಬೆನಕಟಕ ಎಂಬ ಪಟ್ಟಣಕ್ಕೆ ತಳಹದಿಯನ್ನು ಹಾಕಿದನು. ಒಟ್ಟಿನಲ್ಲಿ ಗೌತಮಿಪುತ್ರ ಶಾತಕರ್ಣಿ ಪ್ರಜಾಪರಿಪಾಲಕನಾಗಿದ್ದು ದಕ್ಷಿಣ ಭಾರತದ ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನಮಾನ ಪಡೆದಿದ್ದಾನೆ.

## ಎರಡನೆಯ ಪುಲಮಾಯಿ

ಗೌತಮಿಪುತ್ರ ಶಾತಕರ್ಣಿಯ ನಂತರ ಅವನ ಮಗ ಎರಡನೆಯ ಪುಲಮಾಯಿ ಸುಮಾರು 29 ವರ್ಷಗಳ ಕಾಲ ರಾಜ್ಯವಾಳಿದನು. ಆಂಧ್ರಪ್ರದೇಶದಲ್ಲಿ ಪ್ರಭುತ್ವ ಸ್ಥಾಪಿಸಿದ ಶಾತವಾಹನ ಅರಸರಲ್ಲಿ ಎರಡನೇ ಪುಲಮಾಯಿ ಮೊದಲಿಗ. ಪುಲಮಾಯಿಯ ಆಡಳಿತ ಕಾಲದಲ್ಲೇ ಬಳ್ಳಾರಿ ಜಿಲ್ಲೆಯೂ ಶಾತಹನ ಸಾಮ್ರಾಜ್ಯಕ್ಕೆ ಸೇರ್ಪಡೆಯಾಯಿತು. ಈತನ ಶಾಸನಗಳು ನಾಸಿಕ್, ಕಾರ್ಲೆ ಮತ್ತು ಕೃಷ್ಣ ಜಿಲ್ಲೆಯ ಅಮರಾವತಿಯಲ್ಲಿ ಕಂಡುಬಂದಿವೆ. ಎರಡನೇ ಪುಲಮಾಯಿ ಪೂರ್ವ ಪ್ರಾಂತ್ಯಗಳತ್ತ ಹೆಚ್ಚಿನ ಒಲವನ್ನು ನೀಡಿದ್ದರಿಂದ ಶಕಕ್ಷತ್ರಪರು

ಪಶ್ಚಿಮ ಭಾರತದ ಭೂಭಾಗಗಳಲ್ಲಿ ತಮ್ಮ ನಿಯಂತ್ರಣ ಸ್ಥಾಪಿಸಲು ಸಾಧ್ಯವಾಯಿತು. ಶಕರ ರಾಜ ರುದ್ರದಾಮ ಎರಡು ಬಾರಿ ಎರಡನೇ ಪುಲಮಾಯಿಯನ್ನು ಸೋಲಿಸಿದನೆಂದು ಸತ್ಯನಾಥ ಅಯ್ಯರ್ ಹೇಳಿದ್ದಾರೆ. ಗಿರ್ನಾರ್ ಶಾಸನವು ಕೂಡ ರುದ್ರದಾಮನು ಎರಡು ಬಾರಿ ಪುಲಮಾಯಿಯನ್ನು ಸೋಲಿಸಿದುದಾಗಿಯೂ ಆದರೆ ರಕ್ತಸಂಬಂಧವಿದ್ದುದರಿಂದ ನಾಶ ಮಾಡಲಿಲ್ಲವೆಂದು ತಿಳಿಸುತ್ತದೆ. ಆದರೆ ರುದ್ರದಾಮನಿಂದ ಸೋತವನು ಈತನಲ್ಲ ವಶಿಷ್ಠಪುತ್ರ ಶಾತಕರ್ಣಿ ಎಂಬುದಾಗಿ ಆರ್.ಜಿ.ಭಂಡಾರ್ಕರ್ ಅಭಿಪ್ರಾಯ ಪಟ್ಟಿದ್ದಾರೆ. ಶಕಕ್ಷತ್ರಪರು ಹಾಗೂ ಶಾತವಾಹನರು ತಮ್ಮ ನಡುವಿನ ಪರಸ್ಪರ ಹೋರಾಟಗಳನ್ನು ಕೊನೆಗೊಳಿಸಲು ವೈವಾಹಿಕ ಸಂಬಂಧಗಳನ್ನು ಮಾಡಿರುವುದನ್ನು ನಾವು ಕಾಣುತ್ತೇವೆ. ಟಾಲೆಮಿ ತನ್ನ ---- ಎಂಬ ಗ್ರಂಥದಲ್ಲಿ ಶೀ ಪೋಲೆಮೋಯೀ ಎಂದು ಈತನನ್ನು ಗುರುತಿಸುತ್ತಾನೆ. ಈತನ ಕಾಲದಲ್ಲಿ ನೌಕಾವ್ಯವಸ್ಥೆ ಅಭಿವೃದ್ಧಿಯಾಗಿ ವ್ಯಾಪಾರ ವಿಸ್ತರಣೆ ಮತ್ತು ಜಲಮಾರ್ಗಗಳ ಗುರುತಿಸುವಿಕೆ ಉಂಟಾಯಿತು. ಕಲಾಪ್ರಿಯನಾಗಿದ್ದ ಎರಡನೇ ಪುಲಮಾಯಿ ನವನಗರ ಎಂಬ ಪಟ್ಟಣವನ್ನು ಕಟ್ಟಿಸಿದನು ಹಾಗೂ ನವನಗರಸ್ವಾಮಿ ಎಂಬ ಬಿರುದನ್ನು ಪಡೆದನು.

## ಯಜ್ಞಶ್ರೀ ಶಾತಕರ್ಣಿ

ಈತ ಶತವಾಹನ ವಂಶದ ಕೊನೆಯ ಪ್ರಮುಖ ದೊರೆ. ಯಜ್ಞ ಶ್ರೀ ಶಾತಕರ್ಣಿಯು ಶಕಕ್ಷತ್ರಪರನ್ನು ಸೋಲಿಸಿ ಅವರ ನಾಣ್ಯಗಳ ಮೇಲೆ ತನ್ನ ರಾಜ ಚಿನ್ಹೆಯನ್ನು ಮುದ್ರಿಸಿದನು. ಇವನ ನಾಣ್ಯಗಳು ಮಧ್ಯಪ್ರದೇಶ ಮತ್ತು ಆಂಧ್ರದಲ್ಲಿ ದೊರೆತಿವೆ. ಯಜ್ಞಶ್ರೀ ಶಾತಕರ್ಣಿಯ ಕೆಲವು ನಾಣ್ಯಗಳಲ್ಲಿ ಹಡಗಿನ, ಮೀನಿನ ಚಿತ್ರಗಳಿವೆ. ಇವು ಶಾತವಾಹನರ ಕಾಲದ ಜಲವ್ಯಾಪಾರದ ಬಗ್ಗೆ ಮಾಹಿತಿ ನೀಡುತ್ತವೆ. ಈತನ ಕಾಲದಲ್ಲಿ ಶಾತವಾಹನ ಸಾಮ್ರಾಜ್ಯ ಬಂಗಾಳಕೊಲ್ಲಿಯಿಂದ ಅರಬ್ಬಿ ಸಮುದ್ರದವರೆಗೆ ವ್ಯಾಪಿಸಿತ್ತು. ನಂತರ ವಿಜಯ, ಚಂಡಶ್ರೀ ಪುಲಮಾಯಿ ಮೊದಲಾದ ದುರ್ಬಲ ರಾಜರು ಆಳ್ವಿಕೆ ಮಾಡಿದರು. ಇದರಿಂದ ಶಾತವಾಹನರ ರಾಜ್ಯದ ಶಕ್ತಿ ಕುಸಿಯಿತು. ಕೆಲವು ಉಪಶಾಖೆಗಳು ಸ್ವತಂತ್ರವಾಗಿ ಆಳಲಾರಂಭಿಸಿದುದರಿಂದ ದಕ್ಷಿಣ ಭಾರತದ ಮೇಲೆ ಹತೋಟಿ ತಪ್ಪಿತು. ಅಭೀರರು, ಚಟರು, ಇಕ್ಷ್ವಾಕುಗಳು, ಕದಂಬರು, ಗಂಗರು, ವಾಕಾಟಕರು ಮತ್ತು ಪಲ್ಲವರು ಪ್ರಬಲರಾಗುತ್ತಾ ಬಂದ ಹಾಗೆ ಶಾತವಾಹನ ಸಾಮ್ರಾಜ್ಯವು ವಿನಾಶದ ಹಾದಿಯನ್ನು ಹಿಡಿಯಿತು. ಒಟ್ಟಿನಲ್ಲಿ ಕ್ರಿ.ಶ.3ನೇ ಶತಮಾನದ ಮಧ್ಯಭಾಗದವರೆಗೂ ಮುಂದುವರಿದ ಶಾತವಾಹನರ ಆಳ್ವಿಕೆ ವಾಕಾಟಕರು ಹಾಗೂ ಪಹ್ಲವರ ಏಟಿಗೆ ಬಲಿಯಾಗಬೇಕಾಯಿತು.

## 3.6 ಶಾತವಾಹನರ ಪತನಕ್ಕೆ ಕಾರಣಗಳು

1) ಶಕರದಾಳಿ
2) ಮಿಲಿಟರಿ ವೈಸ್‌ರಾಯ್‌ಗಳು ಸ್ವಾತಂತ್ರ್ಯ ಘೋಷಿಸಿಕೊಂಡಿದ್ದುದು
3) ಬುಡಕಟ್ಟಿನವರಿಂದ ಶಾತವಾಹನ ಪ್ರದೇಶಗಳ ಆಕ್ರಮಣ
4) ನಾಗಾಗಲ ದಾಳಿ
5) ಪಹ್ಲವರು ಮತ್ತು ವಾಕಾಟಕರ ಪ್ರಬಲತೆ

## 3.7 ಶಾತವಾಹನರ ಆಡಳಿತ

ಶಾತವಾಹನರು ವಿಶಾಲವಾದ ಸಾಮ್ರಾಜ್ಯದಲ್ಲಿ ಸರಳವಾದ ಮತ್ತು ವಿಕೇಂದ್ರೀಕೃತವಾದ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತಂದರು. ಇವರ ಆಡಳಿತ ಪದ್ಧತಿ ಮೌರ್ಯರ ಆಡಳಿತ ಪದ್ಧತಿಯನ್ನು ಹೋಲುತ್ತಿತ್ತು.

ಮೌರ್ಯರ ಆಡಳಿತ ಕ್ರಮದಲ್ಲಿದ್ದಂತೆ ಶಾತವಾಹನರ ಆಡಳಿತದಲ್ಲೂ ಮಂತ್ರಿಗಲು, ದಂಡನಾಯಕರೂ, ನ್ಯಾಯಾಧಿಪತಿಗಳೂ, ಮಹಾಮಾತ್ರ ಇತ್ಯಾದಿ ಅಧಿಕಾರವರ್ಗವಿತ್ತು. ಹೀಗಾಗಿ ಅಶೋಕ ಚಕ್ರವರ್ತಿ ಮೌರ್ಯರ ಆಡಳಿತ ಪದ್ಧತಿಗಳಲ್ಲಿ ಬಳಸಿದ್ದ ಪರಿಕಲ್ಪನೆಗಳನ್ನೇ ದಖನ್ನಿನಲ್ಲಿ ಶಾತವಾಹನರು ತಮ್ಮ ರಾಜ ನಿಯಂತ್ರಣದ ಸಾಧನಗಳನ್ನಾಗಿ ಉಪಯೋಗಿಸಿರುವುದನ್ನು ನಾವು ಕಾಣಬಹುದಾಗಿದೆ.

## ರಾಜ

ರಾಜ ಆಡಳಿತದ ಕೇಂದ್ರಬಿಂದುವಾಗಿದ್ದನು. ಸಾಮ್ರಾಜ್ಯದ ಒಡೆಯನಾಗಿ ಶಾಸನೀಯ, ಕಾರ್ಯಕಾರಿ, ನ್ಯಾಯಿಕ ಹಾಗೂ ಸೈನಿಕ ಅಧಿಕಾರಗಳನ್ನು ಚಲಾಯಿಸುತ್ತಿದ್ದನು. ರಾಜಧರ್ಮ ಮತ್ತು ಸಂಪ್ರದಾಯಗಳ ಚೌಕಟ್ಟಿನಲ್ಲಿಯೇ ಆಡಳಿತ ನಡೆಸುತ್ತಿದ್ದು, ಆತನನ್ನು "ಧರ್ಮಪಾಲಕ" ಎಂದು ಭಾವಿಸಲಾಗಿತ್ತು. ಹೀಗಾಗಿ ರಾಜ ನಿರಂಖುಶನಾಗಿರಲಿಲ್ಲ. ಶಾತವಾಹನ ಅರಸರು ರಾಜ ಎಂಬ ಅಶೋಕನ ಬಿರುದನ್ನೇ ಇಟ್ಟುಕೊಂಡಿದ್ದರು. ಹಲವು ರಾಜರು ರಾಜಾಧಿರಾಜ, ದಕ್ಷಿಣ ಪಥೇಶ್ವರ ಮೊದಲಾದ ಬಿರುದುಗಳನ್ನು ಹೊಂದಿದ್ದರು. ಅರಸರು ವರ್ಣಾಶ್ರಮದ ಬೆಳವಣಿಗೆಯಿಂದ ರಾಜ್ಯದ ಹಿತಾಸಕ್ತಿಗೆ ಪೂರಕವಾಗಿ ಶ್ರಮಿಸಿದರು.

**ರಾಜನ ಕರ್ತವ್ಯಗಳು**

- ಪ್ರಜೆಗಳು ಮತ್ತು ಸಾಮ್ರಾಜ್ಯದ ರಕ್ಷಣೆ
- ಸಾಮಾಜಿಕ ಪದ್ಧತಿಗಳ ರಕ್ಷಣೆ
- ಆಸ್ತಿರಕ್ಷಣೆ
- ತೆರಿಗೆ ವಿಧಿಸುವುದು
- ಯಜ್ಞಯಾಗಗಳ ಆಚರಣೆ
- ಸಾಮಾಜಿಕ ಶಾಂತಿಪಾಲನೆ
- ನಿಷ್ಪಕ್ಷಪಾತವಾದ ನ್ಯಾಯ ವಿತರಣೆ
- ಅಧಿಕಾರಿ ವರ್ಗದ ನೇಮಕ ಮೊದಲಾದವು ರಾಜನ ಕರ್ತವ್ಯಗಳಾಗಿದ್ದವು.

## ರಾಜತ್ವ

ರಾಜತ್ವವು ವಂಶಪಾರಂಪರ್ಯವಾಗಿತ್ತು. ಸಿಂಹಾಸನದ ಅಧಿಕಾರ ಹಿರಿಯ ಮಗನಿಗೆ ಮೀಸಲಾಗಿತ್ತು. ಆದರೆ ಮಂತ್ರಿ ಸ್ಥಾನಗಳು, ಅಮಾತ್ಯ ಹುದ್ದೆಗಳು ವಂಶಪಾರಂಪರ್ಯವಾಗಿರಲಿಲ್ಲ.

## ರಾಣಿಯರು

ರಾಣಿಯರು ಆಡಳಿತದಲ್ಲಿ ಭಾಗವಹಿಸುತ್ತಿದ್ದುದು ಶಾತವಾಹನರ ಆಡಳಿತದ ಪ್ರಮುಖ ಲಕ್ಷಣವಾಗಿತ್ತು. ರಾಣಿಯರಾದ ನಯನಿಕ ಮತ್ತು ಗೌತಮಿ ಬಾಲಶ್ರೀರವರು ತಮ್ಮ ಅಪ್ರಾಪ್ತ ವಯಸ್ಸಿನ ಮಕ್ಕಳ ಪರವಾಗಿ ಆಡಳಿತ ನಡೆಸಿದ ನಿದರ್ಶನಗಳಿವೆ. ಉದಾ: ಒಂದನೇ ಶಾತಕರ್ಣಿ ಮರಣ ಹೊಂದಿದಾಗ ಅವನ ಅಪ್ರಾಪ್ತ ವಯಸ್ಸಿನ ಮಕ್ಕಳಾದ ವೇದಶ್ರೀ ಮತ್ತು ಶತಶ್ರೀಗಳಿಗೆ ಸಿಂಹಾಸನ ಪ್ರಾಪ್ತವಾಯಿತು. ಅಂತಹ ಸಂದರ್ಭದಲ್ಲಿ ನಯನಿಕ ಆಡಳಿತ ಸೂತ್ರವನ್ನು ವಹಿಸಿಕೊಂಡಿದ್ದಳು.

## 3.8 ಮಂತ್ರಿ ಪರಿಷತ್ ಮತ್ತು ಮಂತ್ರಾಲೋಚನೆ ಸಭೆ

ಆಡಳಿತದಲ್ಲಿ ರಾಜನಿಗೆ ಸಲಹೆ ಮತ್ತು ಸಹಕಾರ ನೀಡಲು ಮಂತ್ರಿ ಪರಿಷತ್ ಇತ್ತು. ಇದರ ಜೊತೆಗೆ ಮಂತ್ರಾಲೋಚನ ಸಭೆಯೂ ಕೂಡ ಇತ್ತು. ಇದನ್ನು ರಆಜಾಮಾತ್ಯರ ಸಭೆ ಎಂದು ಕರೆಯುತ್ತಿದ್ದರು. ಈ ಕೆಳಕಂಡ ಅಧಿಕಾರಿ ವರ್ಗ ರಾಜನಿಗೆ ಆಡಳಿತದಲ್ಲಿ ನೆರವಾಗುತ್ತಿತ್ತು.

- ಅಮಾತ್ಯ – ಅಹರಗಳ ಗೌರ್ನರ್ (ಮಂತ್ರಿ)
- ರಾಜಾಮಾತ್ಯ – ರಾಜನ ಸಂಗಡ ಇರುತ್ತಿದ್ದವನು
- ಮಹಾಮಾತ್ರ – ಭಿಕ್ಷುಗಳ ಆಹಾರ, ವಸತಿ ವ್ಯವಸ್ಥಾಪಕ
- ಭಂಡಾರಿಕ – ಉಗ್ರಣಾಧಿಕಾರಿ
- ಹೇರಣಿಕ – ಹಣಕಾಸು ಅಧಿಕಾರಿ ಅಥವಾ ಕೋಶಾಧಿಕಾರಿ
- ಮಹಾ ಸೇನಾಪತಿ – ಸೇನಾ ಮುಖ್ಯಸ್ಥ
- ಲೇಖಕ – ರಾಜ್ಯದ ಮುಖ್ಯ ಕಾರ್ಯದರ್ಶಿ
- ನಿಬಂಧಕಾರ – ಲೇಖಕ ಸಿದ್ಧಪಡಿಸಿದ ದಾಖಲೆ ವ್ಯವಸ್ಥಿತವಾಗಿಡುವವನು ಅಥವಾ ಪಂಜೀಕರಣಾಧಿಕಾರಿ
- ಪ್ರತಿಹಾರ ಮತ್ತು ದೂತಕ – ರಾಜಾಜ್ಞೆಗಳನ್ನು ರವಾನಿಸುವ ಅಧಿಕಾರಿಗಳು
- ಪಟ್ಟಿಪಾಲಕ – ಶಾಸನಗಳ ಸಂರಕ್ಷಕ
- ನಾಣ್ಯಮುದ್ರಕ – ನಾಣ್ಯಗಳನ್ನು ಮುದ್ರಿಸುವವನು
- ದ್ವಾರಪಾಲಕ – ಕಾವಲುಗಾರ

ವ್ಯಾಪಾರ ಮತ್ತು ಕೃಷಿಯ ವಿಸ್ತರಣೆಯು ಕ್ರಮೇಣ ವಿವಿಧ ಅಧಿಕಾರಿಗಳನ್ನುಳ್ಳ ಅಧಿಕಾರ ಮಂಡಳಿ ಬೆಳೆಯಲು ಕಾರಣವಾಯಿತು.

## 3.9 ಇಲಾಖೆಗಳು

ಶಾತವಾಹನರ ಆಡಳಿತ ಕ್ಷೇತ್ರದಲ್ಲಿ ಅನೇಕ ಇಲಾಖೆಗಳಿದ್ದವು. ಅವುಗಳಲ್ಲಿ ಪ್ರಮುಖವಾದವು ಈ ಕೆಳಕಂಡಂತಿವೆ.

| | |
|---|---|
| • ಪೊಲೀಸ್ ಇಲಾಖೆ | • ನ್ಯಾಯಾಂಗ ಇಲಾಖೆ |
| • ಹಣಕಾಸು ಇಲಾಖೆ | • ಸೇನಾ ಇಲಾಖೆ |
| • ಮೋತಿಖಾನೆ ಇಲಾಖೆ | • ಕೃಷಿ ಇಲಾಖೆ |
| • ಕೈಗಾರಿಕಾ ಇಲಾಖೆ ಇತ್ಯಾದಿ | |

## 3.10 ಪ್ರಾಂತ್ಯಾಡಳಿತ

ಆಡಳಿತದ ಅನುಕೂಲಕ್ಕಾಗಿ ಸಾಮ್ರಾಜ್ಯವನ್ನು ಅನೇಕ ಪ್ರಾಂತ್ಯಗಳನ್ನಾಗಿ ವಿಂಗಡಿಸಲಾಗಿತ್ತು. ಪ್ರಾಂತ್ಯಗಳನ್ನು ಅಹರಗಳು ಎಂದು ಕರೆಯಲಾಗುತ್ತಿತ್ತು. ಗೋವರ್ಧನ, ಸೋಪಾರ, ಮಮಲ, ಸಾತನಿಹಾರ ಇತ್ಯಾದಿ ಅಹರಗಳ ಹೆಸರುಗಳು ಶಾಸನಗಳಿಂದ ತಿಳಿದುಬರುತ್ತದೆ. ಪ್ರತಿ ಅಹರಕ್ಕೂ ಅಮಾತ್ಯ (ಮಂತ್ರಿ) ಮುಖ್ಯ ಅಧಿಕಾರಿಯಾಗಿದ್ದರು. ಉದಾ: ವಿಷ್ಣುಪಾಲಿತ ಮತ್ತು ಶಿವಸ್ಕಂದದತ್ತ ನಾಸಿಕ್‌ನ ಅಮಾತ್ಯರಾಗಿ ಸೇವೆ ಸಲ್ಲಿಸುತ್ತಿದ್ದರು. ಅಮಾತ್ಯರುಗಳು ರಾಜನ ಸಲಹೆಗಾರರಾಗಿಯೂ, ಮಂತ್ರಿಗಳಾಗಿಯೂ, ಪ್ರಾಂತ್ಯಗಳ ರಾಜ್ಯಪಾಲರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದರು. ಅಮಾತ್ಯರಲ್ಲದೆ ರಾಜಕುಮಾರರು ಕೂಡ ಪ್ರಾಂತ್ಯ ಅಥವಾ ಅಹರಗಳ ಮುಖ್ಯಸ್ಥರಾಗಿದ್ದರು. ಕೆಲವೊಮ್ಮೆ ಮಹಾಸೇನಾಪತಿ ಅಹರಗಳ ಗೌರ್ನರ್ ಆಗಿ ಕಾರ್ಯನಿರ್ವಹಿಸುತ್ತಿದ್ದನು. ಉದಾ: ಮಯಡೋನಿ ಅಥವಾ ಮ್ಯಾಕೆದೋನಿ ಶಾಸನದಲ್ಲಿ ಖಂಡಕನು ಸಾತನಿಹಾರದ ಅಧಿಪತಿಯಾಗಿದ್ದನೆಂದು ಹೇಳಿದೆ.

## 3.11 ಪ್ರಾಂತ್ಯಾಧಿಕಾರಿಗಳ ಕರ್ತವ್ಯಗಳು

- ತೆರಿಗೆ ವಸೂಲಿ
- ನ್ಯಾಯ ವಿತರಣೆ
- ಪ್ರಾಂತ್ಯದಲ್ಲಿ ಶಾಂತಿ ಮತ್ತು ನೆಮ್ಮದಿ ಸ್ಥಾಪನೆ ಇತ್ಯಾದಿ

## ಪಟ್ಟಣ ಅಥವಾ ನಿಗಮ

ಆಹಾರಗಳನ್ನು ಆಡಳಿತದ ಹಿತದೃಷ್ಟಿಯಿಂದ ನಿಗಮ ಅಥವಾ ಪಟ್ಟಣ ಹಾಗೂ ಗ್ರಾಮಗಳಾಗಿ ವಿಭಜಿಸಲಾಗಿತ್ತು. ಪ್ರಾಂತ್ಯದ ಆಡಳಿತ ಕೇಂದ್ರಗಳಿಗೆ ನಿಗಮ ಎಂದು ಕರೆಯುತ್ತಿದ್ದರು. ಬ್ರೂಚ್, ಸೋಪಾರ, ಕಲ್ಯಾಣ, ಕನ್ನೇರಿ, ತುಗಾರ, ಜುನ್ನಾರ, ಕಾರ್ಲಿ, ಗೋವರ್ಧನ ಪಟ್ಟಣಗಳ ಆಡಳಿತಕ್ಕಾಗಿ ನಿಗಮ ಸಭೆಗಳಿದ್ದವು. ನಿಗಮ ಸಭೆಗಳು ಪ್ರಜಾಪ್ರತಿನಿಧಿಗಳನ್ನೊಳಗೊಂಡಿದ್ದು, ಸ್ವತಂತ್ರವಾಗಿ ಆಡಳಿತವನ್ನು ನಿರ್ವಹಿಸುತ್ತಿದ್ದವು.

## ಗ್ರಾಮಾಡಳಿತ

ಗ್ರಾಮ ಅತ್ಯಂತ ಕಿರು ಆಡಳಿತ ಘಟಕವಾಗಿತ್ತು. ಇದನ್ನು ಗ್ರಾಮಿಕ ನೋಡಿಕೊಳ್ಳುತ್ತಿದ್ದನು. ವೇಮರಕ ಎಂಬುವನು ಗ್ರಾನದ ಗ್ರಾಮಿಕನಾಗಿದ್ದನೆಂದೂ ಮ್ಯಾಕೆದೋನಿ ಶಾಸನದಲ್ಲಿ ಪ್ರಸ್ತಾಪವಿದೆ. ಅಹರ ಮತ್ತು ಗ್ರಾಮಗಳ ನಡುವೆ ಮಹಾಭೋಗ, ಭೋಗ ಎಂಬ ವಿಭಾಗಗಳಿದ್ದವು. ಗ್ರಾಮಿಕ 9 ರಥಗಳು, 9 ಆನೆಗಳು, 25 ರಾಹುತರು ಮತ್ತು 45 ಕಾಲಾಳುಗಳಿಂದ ಕೂಡಿದ್ದ ಸೇನಾಪಡೆಯನ್ನು ಹೊಂದಿರುತ್ತಿದ್ದನು. ಆದ್ದರಿಂದಲೇ ಆರ್.ಎಸ್.ಶರ್ಮರವರು "ಶಾತವಾಹನರ ಆಡಳಿತದಲ್ಲಿ ಕೆಲವೊಂದು ಸೈನಿಕ ಮತ್ತು ಸಾಮಂತಶಾಹಿ ಲಕ್ಷಣಗಳು" ಕಂಡುಬರುತ್ತವೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಸ್ವಯಣ ನಿರ್ಣಯ ಕೈಗೊಳ್ಳಲು ಗ್ರಾಮದ ಮುಖ್ಯಸ್ಥರಿಗೆ ಅವಕಾಶವಿತ್ತು. ದತ್ತಿಗಳು ಗ್ರಾಮದ ವಿಶಿಷ್ಟ ಲಕ್ಷಣಗಳಾಗಿದ್ದವು. ಏಕೆಂದರೆ ದಖನ್ನಿನಲ್ಲಿ ಪ್ರಥಮ ಬಾರಿಗೆ ದತ್ತಿಗಳನ್ನು ಪ್ರಾರಂಭಿಸಿದವರೇ ಶಾತವಾಹನರು. ಗೌತಮಿಪುತ್ರ ಶಾತಕರ್ಣಿ ಅನೇಕ ಬ್ರಾಹ್ಮಣರಿಗೆ ಮತ್ತು ಬೌದ್ಧರಿಗೆ ದತ್ತಿಗಳನ್ನು ನೀಡಿದನು. ದತ್ತಿಗಳನ್ನು ದಾನವಾಗಿ ಪಡೆದ ಬ್ರಾಹ್ಮಣರು ಮತ್ತು ಬೌದ್ಧರು ಆರ್ಥಿಕವಾಗಿ ಮತ್ತು ಆಡಳಿತದಲ್ಲಿ ವಿನಾಯಿತಿ ಪಡೆದಿದ್ದರು.

## ಸಾಮಂತರು

ಶಾತವಾಹನರ ಸಾಮ್ರಾಜ್ಯದಲ್ಲಿ ರಾಜರು, ಮಹಾಭೋಜರು ಮತ್ತು ಮಹಾರಥಿಗಳು ಎಂಬ ಮೂರು ವರ್ಗದ ಸಾಮಂತರಿದ್ದರು. ಮೊದಲೆರಡು ವರ್ಗದ ಸಾಮಂತರು ತಮ್ಮ ಹೆಸರಿನಲ್ಲಿ ನಾಣ್ಯಗಲನ್ನು ಅಚ್ಚು ಹಾಕಿಸಿಕೊಳ್ಳುತ್ತಿದ್ದರು ಮತ್ತು ಅವರು ಒಳಾಡಳಿತಕ್ಕೆ ಸಂಬಂಧಿಸಿದಂತೆ ಸ್ವತಂತ್ರರಾಗಿದ್ದರು. ಮೂರನೇ ವರ್ಗದ ಸಾಮಂತರು ಕೇಂದ್ರದಿಂದ ನೇಮಿಸಲ್ಪಟ್ಟ ಅಧಿಕಾರಿಯ ಹತೋಟಿಗೊಳಗಾಗಿದ್ದರು. ರಾಜನು ಕೆಲವು ಪ್ರದೇಶಗಳ ಆಡಳಿತವನ್ನು ಮಹಾಭೋಜ ಮತ್ತು ಮಹಾರಥಿ ಎಂಬ ಸಾಮಂತರ ಅಧೀನಕ್ಕೊಪ್ಪಿಸಿದ್ದನು. ಉದಾ: ಪಶ್ಚಿಮ ಘಟ್ಟಗಳು ಮತ್ತು ಉತ್ತರದ ಕೊಂಕಣಗಳಲ್ಲಿ ಇವರು ಆಡಳಿತಾಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಮಹಾರಥಿ ಮತ್ತು ಮಹಾಭೋಜರು ಭೂಧಾರಕರಾಗಿ ತಮ್ಮ ಭೂಮಿಯನ್ನು ಪರಂಪರಾಗತವಾಗಿ ಆಳುತ್ತಿದ್ದ ಸಾಮಂತರಾಗಿದ್ದರು.

## ಸೇನಾಡಳಿತ

ಶಾತವಾಹನರು ಪ್ರಬಲವಾದ ಸೇನಾಪಡೆ ಮತ್ತು ನೌಕಾಪಡೆಯನ್ನು ಹೊಂದಿದ್ದರು. ಪ್ಲಿನಿಯ ಪ್ರಕಾರ ಶಾತವಾಹನರ ಸೈನಿಕ ರಂಗದಲ್ಲಿ ಒಂದು ಲಕ್ಷ ಕಾಲ್ದಳ, ಎರಡು ಸಾವಿರ ಅಶ್ವದಳ ಮತ್ತು ಮೂರು ಸಾವಿರ ಗಜದಳವಿತ್ತೆಂದು ತಿಳಿದುಬರುತ್ತದೆ. ಹಲವು ಶಾತವಾಹನ ಅರಸರು ಧನುರ್ವಿದ್ಯೆಯಲ್ಲಿ ಅತ್ಯಂತ ಚತುರರಾಗಿದ್ದರೆಂದು ಶಾಸನಗಳಿಂದ ತಿಳಿದುಬರುತ್ತದೆ. ಸೈನ್ಯದ ಅವಶ್ಯಕತೆಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಭಂಡಗಾರಿಕ ಎಂಬ ಉನ್ನತ ಅಧಿಕಾರಿಯಿರುತ್ತಿದ್ದನು. ಸೈನ್ಯದ ಮುಖ್ಯಾಧಿಕಾರಿಗೆ ಮಹಾಸೇನಾಧಪತಿ ಎಂಬ ಹೆಸರಿದ್ದಿತು. ಕಟಕ, ಸ್ಕಂದಾವರಗಳೆಂಬ ಸೇನಾಡಳಿತ ಕೇಂದ್ರಗಳು ಜನರ ಮೇಲೆ ನಿಯಂತ್ರಣ ಹೊಂದಿರುತ್ತಿದ್ದವು. "ಗೌಲಮೆಯ" ಎನ್ನುವ ಸೇನಾ ನಿಯಂತ್ರಣ ವ್ಯವಸ್ಥೆ ಹೆಚ್ಚು ಪ್ರಚಲಿತದಲ್ಲಿತ್ತು. ಶಾತವಾಹನರು ನೌಕಾಬಲವನ್ನು ಹೊಂದಿದ್ದರು ಎಂಬುದಕ್ಕೆ ನಾಣ್ಯದ ಮೇಲಿರುವ ಹಡಗಿನ ಮುದ್ರೆಯೇ ಸಾಕ್ಷಿಯಾಗಿದೆ. ಬಾಣ, ಭರ್ಜಿ, ಖಡ್ಗ, ಬಿಲ್ಲು ಇತ್ಯಾದಿ ಸೈನಿಕರ ಪ್ರಧಾನ ಆಯುಧಗಳಾಗಿದ್ದವು.

## ಕಂದಾಯಾಡಳಿತ

ಆರನೇ ಒಂದು ಭಾಗ ಭೂಕಂದಾಯ ರಾಜ್ಯದ ಮುಖ್ಯ ಆದಾಯದ ಬಾಬ್ತಾಗಿದ್ದಿತು. ಕ್ರಿ.ಶ. ಒಂದು ಮತ್ತು ಎರಡನೇ ಶತಮಾನಗಳಲ್ಲಿ ದಕ್ಷಿಣ ಪಥ ಹಾಗೂ ಕರ್ನಾಟಕ ಪ್ರದೇಶಗಳು ಶಾತವಾಹನರ ರಾಜ್ಯಕ್ಕೆ ಒಳಪಟ್ಟಾಗ ರಜ್ಜುಕರ ಆಡಳಿತವು ಜನಪ್ರಿಯವಾಗಿದ್ದು, ಅಶೋಕನ ಶಾಸನಗಳಲ್ಲೂ ಈ ಅಧಿಕಾರಿಗಳ ಉಲ್ಲೇಖವನ್ನು ಕಾಣಬಹುದು. ಭೂಮಿಯನ್ನು ಅಳತೆ ಮಾಡಿ ಕಂದಾಯವನ್ನು ನಿರ್ಣಯಿಸುವುದೇ ರಜ್ಜುಕರ ಕರ್ತವ್ಯವಾಗಿತ್ತು. ರಜ್ಜುಕ ಎಂದರೆ ರಜ್ಜುವನ್ನು (ಸರಪಣಿಯನ್ನು) ಹಿಡಿದವನು ಎಂಬ ಅರ್ಥ ಕೊಡುತ್ತದೆ. ಹೀಗಾಗಿ ಶಾತವಾಹನ ಆಡಳಿತವು ಕಂದಾಯ ವ್ಯವಸ್ಥೆ, ಕಂದಾಯ ಅಂದಾಜು ಮತ್ತು ವಸೂಲಿಗಳಿಗೆ ಹೆಚ್ಚು ಮಹತ್ವವನ್ನು ನೀಡುತ್ತಿತ್ತು. ದೆಯ, ಮೆಯ, ಭಾಗ, ಕರ ಮುಂತಾದ ತೆರಿಗೆಗಳಿದ್ದವು. ಆದಾಯ ವ್ಯಯಗಳ ಏರ್ಪಾಟನ್ನು ನೋಡಿಕೊಳ್ಳಲು ನೇಮಿತವಾಗಿದ್ದ ಅಧಿಕಾರಿ ವರ್ಗದ ಮುಖ್ಯಸ್ಥನನ್ನು 'ನಿಬಂಧಕಾಧಿಕಾರಿ' ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು.

## 3.12 ಸಾಮಾಜಿಕ ಪದ್ಧತಿ

ಕಾರ್ಲೆ, ನಾಗಾರ್ಜುನಕೊಂಡ ಶಾಸನಗಳು, ಅಮರಾವತಿ ಶಿಲ್ಪಗಳು, ಬಟ್ಟಿಪ್ರೋಲು ಸಂಶೋಧನೆ ಮತ್ತು ಸಾಹಿತ್ಯ ಗ್ರಂಥಗಳು ಶಾತವಾಹನರ ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ಬೆಳಕನ್ನು ಚೆಲ್ಲುತ್ತವೆ. ವೈದಿಕ ಧರ್ಮದ ಚಾತುರ್ವರ್ಣ ಪದ್ಧತಿಯು ಬೇರೂರಿತ್ತು. ಹೀಗಾಗಿ ಶಾತವಾಹನರ ಕಾಲದಲ್ಲಿ ವರ್ಣಾಶ್ರಮ ಧರ್ಮದ ಪುನರ್ ಸ್ಥಾಪನೆಯನ್ನು ನಾವು ಕಾಣಬಹುದಾಗಿದೆ.

### ವರ್ಣಾಶ್ರಮ ಧರ್ಮ

ಈ ಕಾಲದಲ್ಲಿ ವರ್ಣ ಹಾಗೂ ಆಶ್ರಮ ವ್ಯವಸ್ಥೆಗಳು ಸಮಾಜವನ್ನು ಮುನ್ನಡೆಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದವು. ಸಮಾಜದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂಬ ನಾಲ್ಕು ವರ್ಣಗಳಿದ್ದವು. ಈ ವರ್ಣೀಯರು ಆಚರಿಸಬೇಕಾಗಿದ್ದ ಕರ್ತವ್ಯಗಳು, ಅಂತಸ್ತು ಮತ್ತು ಉದ್ಯೋಗಗಳ ಬಗ್ಗೆ ಧರ್ಮಶಾಸ್ತ್ರಗಳಲ್ಲಿ ಲಿಖಿತಗೊಂಡಿತ್ತು. ಆದ್ದರಿಂದ ಈ ಚತುರ್ವರ್ಣೀಯರು ತಂತಮ್ಮ ರೂಢಿಗತ ಕರ್ತವ್ಯಗಳನ್ನು ನಿರ್ವಹಿಸುತ್ತ ತಮತಮಗೆ ಮೀಸಲಾಗಿದ್ದ ಹಕ್ಕುಬಾಧ್ಯತೆಗಳನ್ನು ಅನುಭವಿಸುತ್ತಿದ್ದರು. ಈ ವರ್ಣಪದ್ಧತಿಯ ಮುಖ್ಯ ಬದಲಾವಣೆಯೆಂದರೆ ಮಿಶ್ರ ಜಾತೀಯರ ಸಂಖ್ಯೆ ಹೆಚ್ಚಾದುದು. ಮನುಸ್ಮೃತಿಯಂತೆ ವಿವಿಧ ವರ್ಣೀಯರೊಂದಿಗೆ ವಿವಾಹಗಳು ನಡೆದಿದ್ದೇ ವರ್ಣಸಂಕರಣಕ್ಕೆ ಮೂಲವಾಯಿತು.

ಭಾರತೀಯ ಸಮಾಜದಲ್ಲಿ ನಾಲ್ಕು ವರ್ಣಗಳಿದ್ದಂತೆ ಪ್ರತಿ ವ್ಯಕ್ತಿಯ ಜೀವನದಲ್ಲಿ ನಾಲ್ಕು ಬಗೆಯ ಆಶ್ರಮಗಳನ್ನು ಗುರ್ತಿಸಲಾಯಿತು. ಸಾಮಾನ್ಯವಾಗಿ ಒಬ್ಬ ವ್ಯಕ್ತಿಯ ಜೀವಾವಧಿಯ ಕಾಲವನ್ನು ತಲಾ 25 ವರ್ಷಗಳಂತೆ 4 ಭಾಗಗಳನ್ನಾಗಿ ವಿಂಗಡಿಸಲಾಗಿತ್ತು. ಜೀವನದ ಈ ನಾಲ್ಕು ಘಟ್ಟಗಳ ವಿಚಾರವನ್ನು ವೇದಗಳ ಕಾಲದಲ್ಲೇ ಗುರ್ತಿಸಲಾಗಿದ್ದು ಧರ್ಮಸೂತ್ರಗಳಲ್ಲೂ ಈ ಬಗ್ಗೆ ಸ್ವಲ್ಪಮಟ್ಟಿಗೆ ಉಲ್ಲೇಖವಿದೆ. ವ್ಯಕ್ತಿಯ ಜೀವನದ ಈ ನಾಲ್ಕು ಘಟ್ಟಗಳೆಂದರೆ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಹಾಗೂ ಸನ್ಯಾಸ.

### ಬ್ರಹ್ಮಚರ್ಯ

ಈ ಆಶ್ರಮದಲ್ಲಿ ಪವಿತ್ರವಾದ ಯಜ್ಞೋಪವೀತ ಧಾರಣೆಯ ನಂತರ ವಿದ್ಯಾರ್ಥಿಯು ತನ್ನ ಗುರುಗಳ ಆಶ್ರಮದಲ್ಲಿ ಸಂಯಮದ ಜೀವನವನ್ನು ನಡೆಸಬೇಕಾಗಿದ್ದಿತು.

### ಗೃಹಸ್ಥ

ವೇದ ವಿದ್ಯೆಯನ್ನು ಗುರು ಮುಖೇನ ಅಭ್ಯಾಸ ಮಾಡಿದ ವಿದ್ಯಾರ್ಥಿಯು ತನ್ನ ಮಾತಾಪಿತೃಗಳ ಮನೆಗೆ ಬಂದು ವಂಶಾಭಿವೃದ್ಧಿಗಾಗಿ ವಿವಾಹವಾಗಿ, ಸಂಸಾರಸ್ಥನಾಗುವ ಘಟ್ಟವೇ ಗೃಹಸ್ಥಾಶ್ರಮದ ವಿಶೇಷ. ಗೃಹಸ್ಥಾಶ್ರಮವನ್ನು ಸ್ವೀಕರಿಸಿದ ವ್ಯಕ್ತಿ ಹಲವಾರು ಕರ್ತವ್ಯಗಳನ್ನು ಪಾಲಿಸಬೇಕಾಗುತ್ತದೆ. ಅವುಗಳೆಂದರೆ: ಯಜ್ಞ ಮಾಡುವುದು, ಅಧ್ಯಯನ ಮಾಡುವುದು, ದಾನ ಮಾಡುವುದು. ಇವಲ್ಲದೆ ಆತನು ಮೂವರ ಋಣದಿಂದ ಮುಕ್ತನಾಗಬೇಕು. ಅಂದರೆ ದೇವ ಋಣ, ಪಿತೃಋಣ ಹಾಗೂ ಋಷಿ ಅಥವಾ ಗುರು ಋಣಗಳನ್ನು ತೀರಿಸಬೇಕಾಗುವುದು. ಯಜ್ಞ, ಯಾಗಗಳಿಂದ ದೇವಋಣವನ್ನೂ, ವಂಶಾಭಿವೃದ್ಧಿಯಿಂದ ಪಿತೃಋಣವನ್ನೂ, ನಿರಂತರ ಅಧ್ಯಯನದಿಂದ ಹಾಗೂ ಸಾತ್ವಿಕ ಜೀವನದಿಂದ ಗುರು ಋಣವನ್ನೂ ತೀರಿಸಬೇಕು.

## ವಾನಪ್ರಸ್ಥಾಶ್ರಮ

ವಂಶಾಭಿವೃದ್ಧಿಯಾದ ನಂತರ ತನ್ನ ಮೊಮ್ಮಕ್ಕಳನ್ನು ಕಂಡ ಮಧ್ಯವಯಸ್ಕ ವ್ಯಕ್ತಿಯು, ತನ್ನ ಗೃಹವನ್ನು ತೊರೆದು ಕಾಡಿನಲ್ಲಿ ಆಶ್ರಮ ಜೀವನವನ್ನು ನಡೆಸುವುದು ವಾನಪ್ರಸ್ಥಾಶ್ರಮದ ವಿಶೇಷ. ಈ ಘಟ್ಟದಲ್ಲಿ ಮಾಡಬೇಕಾದ ಕರ್ತವ್ಯಗಳೆಂದರೆ:

- ಈತನಿಗೆ ಯಾವುದೇ ರೀತಿಯ ಬಂಧನಗಳಿರಕೂಡದು.
- ಮಳೆಯಲ್ಲಿ ನೆನೆಯಬಾರದು.
- ಪ್ರತಿದಿನದ ಭಿಕ್ಷೆಗಾಗಿ ಹಳ್ಳಿಗಳಿಗೆ ಹೋಗಬೇಕು.
- ಶುಚಿಮಾಡಿದ ಹಳೆದ ಹರಿದ ಬಟ್ಟೆ ಅಥವಾ ಕೌಪೀನವನ್ನಷ್ಟೇ ಧರಿಸಬೇಕು.
- ಭಿಕ್ಷೆಗೆ ಹೋದ ಗ್ರಾಮದಲ್ಲಿ ಒಂದು ರಾತ್ರಿಗಿಂತ ಹೆಚ್ಚುಕಾಲ ಇರಕೂಡದು.
- ಧಾನ್ಯಗಳನ್ನು ಹಾಳುಮಾಡದೆ (ಉದಾಹರಣೆಗೆ ಅಕ್ಕಿಯನ್ನು ಕುಟ್ಟಿ ಪುಡಿಮಾಡದೆ) ಭಿಕ್ಷೆಯಿಂದ ಬಂದ ಪದಾರ್ಥಗಳಿಂದ ತಾನೇ ಅಡಿಗೆ ಮಾಡಿ ತಿನ್ನುವುದು.

## ಸನ್ಯಾಸಾಶ್ರಮ

ಈ ಆಶ್ರಮದಲ್ಲಿ ಧ್ಯಾನ ಹಾಗೂ ತಪಸ್ಸಿನಿಂದ, ಇಹಲೋಕದ ಆಸೆಗಳನ್ನು ತ್ಯಜಿಸಿ ಎಲ್ಲೂ ನಿಲ್ಲದೆ ನಿತ್ಯ ಸಂಚಾರಿಯಾಗಿ ಬೈರಾಗಿಯ ಜೀವನ ನಡೆಸುತ್ತಾ ಮೋಕ್ಷ ಸಿದ್ಧಿ ಮಾಡಿಕೊಳ್ಳಬೇಕಾಗುತ್ತದೆ. ಸನ್ಯಾಸಾಶ್ರಮವನ್ನು ಸ್ವೀಕರಿಸಿದಾತನು ಸತ್ಯಾಸತ್ಯತೆಗಳನ್ನು, ಸುಖದುಃಖಗಳನ್ನು ವೇದಶಾಸ್ತ್ರಗಳನ್ನು ಮೀರಿ ಆತ್ಮ ಸಾಕ್ಷಾತ್ಕಾರಕ್ಕಾಗಿ ಚಿಂತನೆ ಮಾಡಬೇಕಾಗುವುದು.

ವ್ಯಕ್ತಿಯ ಜೀವನದಲ್ಲಿನ ಸಾರ್ಥಕತೆಗೆ ವಿಶಾಲ ಸ್ವರೂಪ ನೀಡಿ, ತನ್ನ ಬೌದ್ಧಿಕ ಬೆಳವಣಿಗೆ, ಮಾನಸಿಕ ಚಿಂತನೆಗಳಿಗೆ ಸೂಕ್ತ ಸ್ಥಾನಮಾನಗಳನ್ನು ದೊರಕಿಸಿಕೊಡುವ ಉದ್ದೇಶವೇ ಈ ನಾಲ್ಕು ಆಶ್ರಮಗಳ ಮುಖ್ಯ ಉದ್ದೇಶ ಹಾಗೂ ಗುರಿ. ಒಟ್ಟಿನಲ್ಲಿ ಈ ಹಂತಗಳನ್ನು ಜೀವನದ ಆದರ್ಶ ಮಾರ್ಗವೆಂದು ಪರಿಗಣಿಸಲಾಗುತ್ತಿತ್ತು. ಸಮತೂಕ ಜೀವನ ನಡೆಸುವುದೇ ಆಶ್ರಮ ಧರ್ಮದ ಸಾರವಾಗಿತ್ತು. ಅಂದ ಮಾತ್ರಕ್ಕೇ ಪ್ರತಿಯೊಬ್ಬ ವ್ಯಕ್ತಿಯೂ ಕ್ರಮವಾಗಿ ಈ ಆಶ್ರಮಗಳನ್ನು ನಿಷ್ಠೆಯಿಂದ ಪಾಲಿಸಬೇಕೆಂದೇನೂ ಇಲ್ಲ. ಅನುಸರಿಸುವ ಆಯ್ಕೆ ಪ್ರತಿ ವ್ಯಕ್ತಿಗೂ ಇರುತ್ತದೆ. ಶಾತವಾಹನರ ಕಾಲದಲ್ಲಿ ಉತ್ತರ ಭಾರತದಲ್ಲಿ ಆಚರಣೆಯಲ್ಲಿದ್ದ ಚತುರ್ವರ್ಣ ಮತ್ತು ಆಶ್ರಮ ಪದ್ಧತಿ ಯಥಾವತ್ತಾಗಿ ದಖನ್ ಮತ್ತು ದಕ್ಷಿಣ ಭಾರತದ ಸಮಾಜದಲ್ಲಿ ಆಚರಣೆಗೆ ಬಂದಿತು ಎಂಬ ಪರಿಪಾಟವನ್ನು ಇತ್ತೀಚಿನ ಸಂಶೋಧನೆಗಳಿಂದ ನಿರಾಕರಿಸಲಾಗಿದೆ. ವೈದಿಕ ಬ್ರಾಹ್ಮಣ ವರ್ಗ ಮತ್ತು ಬಹುಸಂಖ್ಯಾತ ಶೂದ್ರವರ್ಗದ ದ್ರುವೀಕರಣವಾಗಿರುವುದು ತೋರಿಬರುತ್ತದೆ. ಉತ್ತರ ಭಾರತದ ಸಮಾಜದಲ್ಲಿದ್ದಂತಹ ಅನುವಂಶಿಕ ಕ್ಷತ್ರಿವರ್ಣ ರೂಪುಗೊಳ್ಳಲಿಲ್ಲ. ಆದರೆ ಶೂದ್ರ ವರ್ಣಕ್ಕೆ ಸೇರಿದ ಬಲಿಷ್ಠ ವ್ಯಕ್ತಿಗಳು ಅಥವಾ ಕೆಲವು ಕುಟುಂಬಗಳು ಕೆಲವು ಸಂದರ್ಭದಲ್ಲಿ ಬೇರೆ ಜಾತಿ ಅಥವಾ ಬುಡಕಟ್ಟಿಗೆ ಸೇರಿದವರು ವೈದಿಕ ಸಂಸ್ಕಾರ ಪ್ರಕ್ರಿಯೆ ಪಡೆದು ಆಳುವ ವರ್ಗವಾಗಿ ರೂಪುಗೊಂಡಿರುವುದು ಕಂಡುಬರುತ್ತದೆ.

ವರ್ಣಧರ್ಮ ಆಚರಣೆಯಲ್ಲಿದ್ದರೂ ಕೆಲವು ಸಾಮಾಜಿಕ ವರ್ಗಗಳು ಅವಲಂಬಿಸಿದ್ದ ಕಸುಬುಗಳನ್ನು ಶಾಸನಗಳಲ್ಲಿ ಹೆಸರಿಸಲಾಗಿದೆ. ಉದಾ: ವ್ಯಾಪಾರಿಗಳೂ, ಲಿಪಿಗಾರರು, ವೈದ್ಯರು, ಕೃಷಿಕರು, ಅಕ್ಕಸಾಲಿಗರು, ಬಡಗಿ, ತೋಟಿಗ, ಕಮ್ಮಾರ, ಬೆಸ್ತ, ಕೋಲಿಕ, ಕಾಸಕಾರ, ಸೆಲವಧ, ಇತ್ಯಾದಿ. ವಿದೇಶಿಯರಾದ ಶಕರು, ಗ್ರೀಕರು,

ಹೂಣರು ಸಂಪೂರ್ಣವಾಗಿ ಭಾರತೀಕರಣಗೊಂಡು ಹಿಂದೂ ಸಮಾಜದ ಅವಿಭಾಜ್ಯ ಅಂಗವಾಗಿ ಮಾರ್ಪಾಡಾದುದು ಶಾತವಾಹನರ ಕಾಲದ ಸಾಮಾಜಿಕ ಜೀವನದ ಪ್ರಮುಖ ವೈಶಿಷ್ಟ್ಯವಾಗಿದೆ. ಶಾತವಾಹನರ ರಾಜ್ಯದ ಉತ್ತರ ಭಾಗಗಳಲ್ಲಿ ನೆಲಸಿದ್ದ ಇವರು ಬೌದ್ಧ ಇಲ್ಲವೆ ಬ್ರಾಹ್ಮಣ ಧರ್ಮವನ್ನು ಅನುಸರಿಸಿ, ಆಯಾ ಧರ್ಮೀಯರ ರೂಢಿ ಸಂಪ್ರದಾಯಗಳನ್ನು ಅಳವಡಿಸಿಕೊಂಡರು. ಭಾರತೀಯ ದೇವದೇವಿಯರ ನಾಮಧೇಯಗಳನ್ನಿಟ್ಟುಕೊಂಡಿದ್ದರು. ವಿದೇಶಿಯರ ವಿಲೀನ ಜಾತಿ ಉಪಜಾತಿಗಳ ಏಳಿಗೆಗೆ ಕಾರಣವಾಯಿತು. ಅವಿಭಕ್ತ ಕುಟುಂಬ ಪದ್ಧತಿ ಆಚರಣೆಯಲ್ಲಿತ್ತು. ಉದಾ. ಅಮರಾವತಿಯ ಅನೇಕ ದಾನ ಶಾಸನಗಳಲ್ಲಿ ಕುಟುಂಬದ ಒಡೆಯನಾದ ದಾನಿ ಅಣ್ಣತಮ್ಮಂದಿರು ಹಾಗೂ ಮೊಮ್ಮಕ್ಕಳ ಜೊತೆ ಸೇರಿ ದಾನ ಮಾಡಿದ ಉಲ್ಲೇಖಗಳಿವೆ. ಸ್ತ್ರೀಯರು ಸಮಾಜದಲ್ಲಿ ಪ್ರಮುಖ ಪಾತ್ರಧಾರಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಉತ್ತಮ ಸ್ಥಾನ ಹೊಂದಿದ್ದರು. ಸ್ತ್ರೀಯರು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ಉತ್ತಮ ಸ್ಥಾನ ಹೊಂದಿದ್ದರು. ಸ್ತ್ರೀಯರು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ಬ್ರಾಹ್ಮಣರು ಜೈನರು ಮತ್ತು ಬೌದ್ಧರಿಗೆ ಉದಾರ ದಾನ ನೀಡುತ್ತಿದ್ದರು. ಸ್ತ್ರೀಯರು ಮತ್ತು ಪುರುಷರು ಆಭರಣಪ್ರಿಯರಾಗಿದ್ದರು. ಹೆಂಗಸರು ಓಲೆ, ಬಳೆ, ಕಡಗ, ಕಾಲಂದಿಗೆ, ಮೂಗುತಿ, ಕಂಠಿಹಾರ, ಚಿನ್ನದ ಹೂ, ಹವಳ ಮುಂತಾದವುಗಳನ್ನು ಧರಿಸುತ್ತಿದ್ದರು. ಗಂಡಸರು ತಲೆಗೆ ರುಮಾಲಿನಂತೆ ಬಟ್ಟೆ ಸುತ್ತಿಕೊಳ್ಳುತ್ತಿದ್ದರು. ಬಟ್ಟಿಪ್ರೋಲು ಸಂಶೋಧನೆಯಿಂದ ಆಭರಣಗಳ ತಯಾರಿಕೆಗೆ ಶಾತವಾಹನರು ಮಣಿ, ಮುತ್ತು ಹಾಗೂ ಚಿನ್ನವನ್ನು ಉಪಯೋಗಿಸುತ್ತಿದ್ದ–ರೆಂದು ತಿಳಿದುಬರುತ್ತದೆ. ಹಾಗೆಯೇ ಅಮರಾವತಿ ಶಿಲ್ಪಗಳಿಂದ ಶಾತವಾಹನರ ವೇಷಭೂಷಣಗಳ ಬಗ್ಗೆ ತಿಳಿಯಬಹುದಾಗಿದೆ. ಕೆಲವು ಸ್ತ್ರೀಯರಿಗೆ ಕುಶಲಕಲೆಯಲ್ಲಿ ಅಭಿರುಚಿ ಇತ್ತು. ಶಾತವಾಹನರಲ್ಲಿ ತಾಯಿಕಟ್ಟಿನ ಸಮಾಜ ರಚನೆಯ ಕುರುಹುಗಳು ಕಂಡುಬರುತ್ತವೆ. ರಾಜನನ್ನು ತಾಯಿಯ ಹೆಸರಿನಲ್ಲಿಯೇ ಕರೆಯುವ ವಾಡಿಕೆ ಇತ್ತು. ಉದಾ: ಗೌತಮಿಪುತ್ರ ಮತ್ತು ವಶಿಷ್ಟಪುತ್ರ, ಇಂತಹ ಹೆಸರುಗಳು ತಾಯಿಯು ಸಾಕಷ್ಟು ಪ್ರಾಮುಖ್ಯತೆ ಪಡೆದಿದ್ದ ಸಮಾಜವನ್ನು ಸೂಚಿಸುತ್ತವೆ. ಆದ್ದರಿಂದಲೇ ಆರ್.ಎಸ್.ಶರ್ಮರವರು "ಶಾತವಾಹನರ ಸಮಾಜ ಮಾತೃಪ್ರಧಾನ ಕೌಟುಂಬಿಕ ವ್ಯವಸ್ಥೆಯನ್ನು ಅಭಿವ್ಯಕ್ತಗೊಳಿಸುತ್ತದೆ" ಎಂದು ಅಭಿಪ್ರಾಯ ಪಟ್ಟಿದ್ದಾರೆ.

## 3.13 ಆರ್ಥಿಕ ಪರಿಸ್ಥಿತಿ

ಶಾತವಾಹನರ ಆರ್ಥಿಕ ಕ್ಷೇತ್ರದಲ್ಲಿ ಸಮೃದ್ಧತೆ ನೆಲೆಯೂರಿತ್ತು. ಸ್ಟ್ರಾಬೊ, ಟಾಲೆಮಿ, ಪ್ಲೀನಿರವರ ಬರವಣಿಗೆಗಳು, ಅನಾಮಧೇಯನ 'ಪೆರಿಪ್ಲಸ್ ಆಫ್ ದಿ ಎರಿತ್ರಿಯನ್ ಸಿ', ಶಾಸನಗಳು ಮತ್ತು ನಾಣ್ಯಗಳು ಶಾತವಾಹನರ ಆರ್ಥಿಕ ವಿಷಯವನ್ನು ತಿಳಿಸುತ್ತವೆ.

## ಕೃಷಿ

ಕೃಷಿ ರಾಜ್ಯದ ಅರ್ಥವ್ಯವಸ್ಥೆಯ ತಳಹದಿಯಾಗಿತ್ತು. ದೇಶದ ಬಹುಪಾಲು ಜನರು ಕೃಷಿಯನ್ನವಲಂಬಿಸಿದ್ದರು. ಗ್ರಮಗಳ ಹೊರಭಾಗದಲ್ಲಿ ಕೃಷಿಯೋಗ್ಯ ಜಮೀನು ಇರುತ್ತಿದ್ದವು. ಅಲ್ಲದೆ ನದಿತೀರ, ಸಮುದ್ರದಡ ಹಾಗೂ ಬಯಲು ಪ್ರದೇಶಗಳಲ್ಲಿ ಅನೇಕ ಜಮೀನುಗಳು ಸ್ಥಾಪನೆಯಾದವು. ಜಮೀನುಗಳ ಒಡೆತನ ವ್ಯಕ್ತಿಗತವಾಗಿಯಲ್ಲದೆ ಸರ್ಕಾರದ ವಶದಲ್ಲೂ ಇತ್ತು. ಕೆಲವೊಮ್ಮೆ ವ್ಯಕ್ತಿಗತ ಒಡೆತನ ಸಾವಿರ ಎಕರೆ ಪ್ರದೇಶದವರೆಗೂ ಇರುತ್ತಿತ್ತು. ಫಲವತ್ತತೆಯಿಂದ ಕುಡಿದ ಭೂಮಿ ಉಳ್ಳ ಮನೆತನಗಳು ಇತರ ಕಡಿಮೆ ಫಲವತ್ತು ಭೂಮಿಯುಳ್ಳ ಮನೆತನಗಳು ಹಾಗೂ ಭೂರಹಿತರನ್ನು ತಮ್ಮ ನಿಯಂತ್ರಣದಲ್ಲಿಟ್ಟಿದ್ದವು. ಗ್ರಾಮದ ಜಮೀನುಗಳನ್ನು ಸಾಗುವಳಿ ಜಮೀನು, ತೆಕ್ಕಲು ಜಮೀನು, ತೋಪುಕಾಡು ಹಾಗೂ ಗೋಮಾಳಗಳೆಂದು ವಿಭಾಗ ಮಾಡಲಾಗಿತ್ತು. ಜಮೀನುಗಳ ಗಡಿ ಪ್ರದೇಶದಲ್ಲಿ ಸಾಮಾನ್ಯವಾಗಿ ಅರಣ್ಯ ಪ್ರದೇಶವಿರುತ್ತಿತ್ತು. ಗೋದಾವರಿ ನದಿ ತೀರದಲ್ಲಿ

ವಾಸಿಸುತ್ತಿದ್ದ ಶಾತವಾಹನರಿಗೆ ನೊಗ, ಕೊಡಲಿ, ಹಾರೆ, ಕತ್ತಿ, ಬಿಲ್ಲು, ಬಾಣ ಮತ್ತು ಕಬ್ಬಿಣದ ಗುಳ ಬಳಸಿದ ನೇಗಿಲುಗಳಿಂದ ದೊಡ್ಡ ಪ್ರಮಾಣದಲ್ಲಿ ಭೂಮಿಯನ್ನು ಕೃಷಿ ಮಾಡುವುದು ಸಾಧ್ಯವಾಯಿತು. ವಾರಂಗಲ್ ಮತ್ತು ಕರೀಮ್ ನಗರಗಳಲ್ಲಿ ಹೇರಳವಾಗಿ ಕಬ್ಬಿಣದ ಅದಿರು ದೊರಕಿದ್ದುದು ಕೃಷಿಯಲ್ಲಿ ಕಬ್ಬಿಣದ ಬಳಕೆಗೆ ಮುಖ್ಯ ಕಾರಣ. ಕಬ್ಬಿಣದ ಬಳಕೆಯಿಂದ ಶಾತವಾಹನರ ಕಾಲದಲ್ಲಿ ದಖಿನ್ ಪ್ರಸ್ಥಭೂಮಿಯ ಕೃಷಿ ಹೆಚ್ಚು ಲಾಭದಾಯಕವಾಗಿತ್ತು. ಪೆರಿಪ್ಲಸ್ ಆಫ್ ದಿ ಎರಿತ್ರಿಯನ್-ಸಿ ಗ್ರಂಥದ ಪ್ರಕಾರ ಶಾತವಾಹನರು ತಮ್ಮ ಕೃಷಿ ಚಟುವಟಿಕೆಗಳಿಗೆ ಅರೇಬಿಯಾದಿಂದ ಗುಲಾಮರನ್ನು ತರಿಸಿಕೊಳ್ಳುತ್ತಿದ್ದರೆಂದು ತಿಳಿದುಬರುತ್ತದೆ. ಇದರಿಂದ ವಿಸ್ತೃತ ಗುಲಾಮಗಿರಿ ಪದ್ಧತಿ ಈ ಕಾಲದಲ್ಲಿ ಬೆಳೆಯುತ್ತಾ ಬಂದಿತು. ರಾಜರು ಕೃಷಿಗೆ ಅನುಕೂಲವಾಗುವ ಹಾಗೆ ಬಾವಿ, ಕೆರೆ, ಕಾಲುವೆಗಳನ್ನು ತೋಡಿಸಿ ನೀರಾವರಿ ಸೌಕರ್ಯವನ್ನು ಕಲ್ಪಿಸಿಕೊಟ್ಟರು. ಹಾಲನ ಗಾಥಾಸಪ್ತಶತಿ ಕೃಷಿ, ನೀರಾವರಿ, ನೀರೆತ್ತುವ ವಿಧಾನ, ಬಾವಿಗಳಿಂದ ನೀರೆತ್ತುವುದಕ್ಕಾಗಿ ಬಳಸುತ್ತಿದ್ದ ರಾಟೆಗಳ ಬಗ್ಗೆ ತಿಳಿಸುತ್ತದೆ. ಹಾಗೆಯೇ ಜನರು ತಿರುಗುವ ಚಕ್ರಕ್ಕೆ ಹಗ್ಗವನ್ನು ಹಾಕಿ ಅದಕ್ಕೆ ಮಡಿಕೆಯನ್ನು ಕಟ್ಟಿ ಬಾವಿಗಳಿಗೆ ಇಳಿಬಿಟ್ಟು ರಾಟೆಯ ಸಹಾಯದಿಂದ ನೀರನ್ನು ಮೊಗೆದು ಹೊಲಗದ್ದೆಗಳಿಗೆ ಹಾಯಿಸುತ್ತಿದ್ದ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಬಂಗಾರದ ಉಪಯೋಗದಿಂದ ಲಾಭ ಪಡೆದ ಜನರು, ಧನಿಕರು ಕೂಡ ಕೃಷಿಗೆ ಕೆರೆ ಕಾಲುವೆಗಳನ್ನು ನಿರ್ಮಿಸಿದರು. ಶಾತವಾಹನ ಅರಸರು ಭೂಮಿಗಳನ್ನು ಬ್ರಾಹ್ಮಣರಿಗೆ ಮತ್ತು ಬೌದ್ಧರಿಗೆ ದಾನವಾಗಿ ಕೊಡುತ್ತಿದ್ದರು. ಇದರಿಂದ ಧಾರ್ಮಿಕ ಮುಖಂಡರು ಪ್ರಭಾವಶಾಲಿಗಳಾದರು. ಇವರು ಹೊಲಗದ್ದೆಗಳಲ್ಲಿ ಕೆಲಸ ಮಾಡದೆ ತಮ್ಮ ಜಮೀನುಗಳಲ್ಲಿ ಕೆಲಸ ಮಾಡಲು ಇತರರನ್ನು ನೇಮಿಸಲು ಆರಂಭಿಸಿದರು. ಧಾರ್ಮಿಕ ನಿಯಂತ್ರಣದ ಭಯಕ್ಕೆ ಬಿದ್ದ ಜನರು ತಮ್ಮ ಒಡೆಯರಿಗಾಗಿ ಹೆಚ್ಚೆಚ್ಚು ಕೃಷಿ ಉತ್ಪಾದನೆ ಮಾಡಿದ್ದರಿಂದ ಕೃಷಿ ವಿಸ್ತರಣೆ ಅಧಿಕವಾಯಿತು. ಗೋಧಿ, ಅಕ್ಕಿ, ಮಸಾಲೆಗಳು ಹೆಚ್ಚು ರಫ್ತಾಗಿ ಕೃಷಿ ಹೆಚ್ಚಳಕ್ಕೆ ಕಾರಣವಾದವು. ಒಟ್ಟಿನಲ್ಲಿ ಶಾತವಾಹನರ ಕಾಲದ ಶಾಸನಗಳು ದಖಿನ್ ಪ್ರಾಂತ್ಯಗಳಲ್ಲಿ ಭೂದಾನ ವ್ಯಕ್ತಿಗಳಿಂದ ಹೊಸ ಪ್ರದೇಶಗಳು ಕೃಷೀಕರಣಗೊಂಡಿದ್ದಾಗಿ ತಿಳಿಸುತ್ತವೆ. ಹೀಗಾಗಿ ಈ ಕಾಲದಲ್ಲಿ ಕೃಷಿ ಕ್ಷೇತ್ರದಲ್ಲಿ ಸರ್ವಾಂಗೀಣ ಪ್ರಗತಿಯಾಯಿತೆನ್ನಬಹುದು.

## ಬೆಳೆಗಳು

ಭೂಕಂದಾಯ ರಾಜ್ಯದ ಪ್ರಮುಖ ಆದಾಯವಾಗಿತ್ತು. ಉತ್ಪಾದನೆಯ ಆರನೇ ಒಂದು ಭಾಗವನ್ನು ಕೃಷಿ ಕಂದಾಯವಾಗಿ ರಾಜ್ಯದ ಖಜಾನೆಗೆ ಕೊಡಬೇಕಿತ್ತು. ಉಪ್ಪಿನ ಉತ್ಪತ್ತಿ ಮಾತ್ರ ಸರ್ಕಾರದ ಏಕಸ್ವಮ್ಯಕ್ಕೊಳಪಟ್ಟಿತ್ತು. ಶಾತವಾಹನರ ಕಾಲದಲ್ಲಿ ಕರ, ದೆಯ, ಮೆಯ ಮತ್ತು ಭಾಗವೆಂಬ ಅನೇಕ ರೀತಿಯ ತೆರಿಗೆಗಳಿದ್ದವು ಎಂದು ಶಾಸನಗಳು ತಿಳಿಸುತ್ತವೆ. ಆದರೆ ತೆರಿಗೆಗಳ ಪ್ರಮಾಣವೆಷ್ಟು ಎಂಬುದರ ಬಗ್ಗೆ ಮಾಹಿತಿ ಇಲ್ಲ. ಗ್ರಾಮೀಣ ಪ್ರದೇಶವನ್ನು ನೋಡಿಕೊಳ್ಳುತ್ತಿದ್ದ ಗೌಲೆಮಿಕ ಎಂಬ ಸೈನ್ಯಾಧಿಕಾರಿ ಗ್ರಾಮದ ಜನರಿಂದ ತೆರಿಗೆಗಳನ್ನು ವಸೂಲಿ ಮಾಡಿ ರಾಜ್ಯದ ಖಜಾನೆಗೆ ಸಲ್ಲಿಸುತ್ತಿದ್ದನು.

## ಶ್ರೇಣಿಗಳು

ಶಾತವಾಹನರ ಆರ್ಥಿಕ ಕ್ಷೇತ್ರದಲ್ಲಿ ಕೈಗಾರಿಕೆಗಳು ಮತ್ತು ವ್ಯಾಪಾರ ಅಭಿವೃದ್ಧಿಯಾದಂತೆ ಅನೇಕ ನಗರ ಪಟ್ಟಣಗಳು ತಲೆಯೆತ್ತಿದವು. ನಗರಗಳಲ್ಲಿ ವ್ಯಾಪಾರಿಗಳು ವಿವಿಧ ಕಸುಬುಗಳ ಜನರು ತಮ್ಮ ತಮ್ಮ ಸ್ವಹಿತ ದೃಷ್ಟಿಯಿಂದ ಕೂಟ ಅಥವಾ ವೃತ್ತಿ ಸಂಘಗಳನ್ನು ಸ್ಥಾಪಿಸಿಕೊಂಡಿದ್ದರು. ಉದಾ: ಕಂಬಾರರು, ತೈಲೋತ್ಪಾದಕರು, ಒಡವೆ ತಯಾರಕರು, ಬಡಗಿಗಳು, ನೇಕಾರರು, ಬಿದಿರು ಕೆಲಸಗಾರರು, ಕಂಚುಗಾರರು, ಹಸ್ತಿದಂತ ಕೆಲಸಗಾರರು, ಧಾನ್ಯ ವ್ಯಾಪಾರಿಗಳು, ಹೂವಾಡಿಗರು, ಸುಗಂಧಕಾರರು, ಅಕ್ಕಸಾಲಿಗರು, ಹರಳು ಹೊಳಪುಕಾರರು, ನೀರಿನ ಯಂತ್ರಕಾರರು, ಬೆಸ್ತರು, ಕಲ್ಲುಕುಟಿಗರು ತಮ್ಮದೆಯಾದ ವೃತ್ತಿಸಂಘಗಳನ್ನು ಸ್ಥಾಪಿಸಿಕೊಂಡಿದ್ದರು. ಈ ವೃತ್ತಿ

ಸಂಘಗಳನ್ನು ಶಾಸನಗಳಲ್ಲಿ ಶ್ರೇಣಿ, ನಿಕಾಯ ಮತ್ತು ನಿಗಮಗಳೆಂದು ಕರೆಯುತ್ತಿದ್ದರು. ಶ್ರೇಣಿಯ ವ್ಯವಹಾರಗಳು ನಡೆಯುವ ಸ್ಥಳಕ್ಕೆ 'ನಿಗಮ ಸಭಾ' ಎನ್ನುತ್ತಿದ್ದರು. ಪ್ರತಿಯೊಂದು ವೃತ್ತಿ ಸಂಘವು 'ನಿಗಮ ಸಭಾ'ಗಳಲ್ಲಿ ತನ್ನ ಕಛೇರಿಗಳನ್ನಿಟ್ಟುಕೊಂಡಿದ್ದವು. ಇಂತಹ ಕಛೇರಿಗಳ ಮುಖ್ಯಸ್ಥನಿಗೆ ಶ್ರೇಷ್ಠಿ, ಸೆಟ್ಟಿ ಎಂದು ಕರೆಯಲಾಗುತ್ತಿತ್ತು. ನಗರಗಳಲ್ಲಿ ನಿಗಮಗಳು ಮತ್ತು ಶ್ರೇಣಿಗಳೆಂದು ಕರೆಯಲ್ಪಡುತ್ತಿದ್ದ ವೃತ್ತಿ ಸಂಘಗಳು ಮತ್ತು ವ್ಯಾಪಾರಿ ಸಂಘಗಳು ಅಂದಿನ ಆರ್ಥಿಕ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದವು. ವೃತ್ತಿ ಸಂಘಗಳು ಅಥವಾ ಶ್ರೇಣಿಗಳು ಸ್ವಾಯತ್ತ ಅಧಿಕಾರ ಪಡೆದಿದ್ದು 'ಶ್ರೇಣಿ ಧರ್ಮ' ಎಂಬ ತಮ್ಮದೆಯಾದ ಕಾನೂನು ರಚಿಸಿಕೊಂಡಿದ್ದವು. ಈ ವೃತ್ತಿ ಸಂಘಗಳಿಂದಾಗಿ ಉತ್ಪಾದಿಸಿದ ವಸ್ತುಗಳ ಗುಣಮಟ್ಟ ಹೆಚ್ಚಿತಲ್ಲದೆ ರೈತನಿಗೂ, ಗ್ರಾಹಕನಿಗೂ ಸರಿಯಾದ ಮೌಲ್ಯ ನಿಗದಿಯಾಗಿ ಈರ್ವರೂ ಸಮಾಧಾನ ಪಡುವಂತಾಯಿತು. ಈ ಸಂಘಟನೆಗಳ ಮೇಲ್ವಿಚಾರಣೆಗೆಂದೇ ನ್ಯಾಯಾಲಯವೊಂದು ಇರುತ್ತಿತ್ತು. ಶ್ರೇಣಿಗಳು ತೋಪುಗಳನ್ನು, ಸಾಲುಮರಗಳನ್ನು ಬೆಳೆಸುತ್ತಿದ್ದವು. ರಸ್ತೆಗಳನ್ನು ನಿರ್ಮಿಸಿ ಜನೋಪಯೋಗಿ ಕೆಲಸ ಮಾಡುತ್ತಿದ್ದವು. ಬೌದ್ಧ ಭಿಕ್ಷುಗಳಿಗೂ ಶ್ರವಣರಿಗೂ ಗುಹಾಲಯಗಳನ್ನು ನಿರ್ಮಿಸಿಕೊಡುತ್ತಿದ್ದವು. ಅನಾಥರಿಗೆ, ದಾರಿಹೋಕರಿಗೆ ಉಚಿತ ಊಟ, ವಸತಿ ನೀಡುತ್ತಿದ್ದವು. ಶ್ರೇಣಿಗಳು ಆಧುನಿಕ ಬ್ಯಾಂಕುಗಳಂತೆ ದತ್ತಿಗಳನ್ನು ಅಥವಾ ಠೇವಣಿಗಳನ್ನು ಸ್ವೀಕರಿಸಿ ಬಡ್ಡಿ ಹಣದಿಂದ ದಾನ ಕಾರ್ಯಗಳನ್ನು ಮಾಡುತ್ತಿದ್ದವು. ವಿವಿಧ ಸಂಸ್ಥೆಗಳಿಗೆ ವಿಧಿಸಲಾಗುತ್ತಿದ್ದ ಬಡ್ಡಿಯ ದರಗಳ ಬಗ್ಗೆ ನಾಸಿಕ್ ಶಾಸನದಲ್ಲಿ ಉಲ್ಲೇಖವಿದೆ. ವರ್ಷಕ್ಕೆ ಶೇ.12ರ ಬಡ್ಡಿ ದರದಲ್ಲಿ ಮತ್ತು ಶೇ.9ರ ದರದಲ್ಲಿ ಸಾಲವನ್ನು ಕೊಡುತ್ತಿದ್ದದ್ದು, ನಾಸಿಕ್ ಶಾಸನದ ಪ್ರಕಾರ ಉಷವದತ್ತನೆಂಬುವನು ನೇಕಾರರ ಎರಡು ಸಂಘಗಳಲ್ಲಿ 3000 ಕರ್ಷಪಣಗಳನ್ನು ಶಾಶ್ವತ ಠೇವಣಿ ಇಟ್ಟಿದ್ದು ಅದರಿಂದ ಬಂದ ಹಣದಿಂದ ಸನ್ಯಾಸಿಗಳ ಖರ್ಚನ್ನು ಭರಿಸುತ್ತಿದ್ದನು. ರಾಜವರ್ಗದವರೂ ಸಹ ಈ ಸಂಘಗಳಲ್ಲಿ ಹಣ ತೊಡಗಿಸುತ್ತಿದ್ದರು. ಆರ್.ಸಿ.ಮಜುಂದಾರ್‌ರವರು "ಸಂಘಗಳು ದೀರ್ಘಕಾಲವಾಗಿದ್ದು ಅವುಗಳ ವ್ಯವಹಾರಗಳು ಪ್ರಾಮಾಣಿಕತೆಯಿಂದ ಕೂಡಿದ್ದಿರಬಹುದು. ಇಲ್ಲದಿದ್ದರೆ ಜನರು ಈ ಸಂಘಗಳಲ್ಲಿ ಬಂಡವಾಳ ತೊಡಗಿಸುತ್ತಿರಲಿಲ್ಲ" ಎಂಬುದಾಗಿ ಅಭಿಪ್ರಾಯ ಪಟ್ಟಿದ್ದಾರೆ. ಇದು ಶಾತವಾಹನರ ಶ್ರೇಣಿಗಳ ಮಹತ್ವದ ಬಗ್ಗೆ ತಿಳಿಸುತ್ತದೆ. ಒಟ್ಟಿನಲ್ಲಿ ಶ್ರೇಣಿಗಳು ಠೇವಣಿ ಪಡೆದು ಸಾಲ ನೀಡಿ ಬಡ್ಡಿ ಪಡೆಯುತ್ತಿದ್ದರಿಂದ ವ್ಯಾಪಾರ, ವಾಣಿಜ್ಯ ಮತ್ತು ಕೈಗಾರಿಕೆಗಳಿಗೆ ಬೆಂಬಲ ಸಿಗುತ್ತಿತ್ತು.

## 3.14 ವ್ಯಾಪಾರ ಮತ್ತು ವಾಣಿಜ್ಯ

ಶಾತವಾಹನರ ದೊರೆಗಳನ್ನು "ಮೂರು ಸಾಗರದ ಒಡೆಯರು" ಎಂದು ಕರೆದಿರುವ ಅನೇಕ ಉಲ್ಲೇಖಗಳು ಆ ಕಾಲದ ವ್ಯಾಪಾರ ಚಟುವಟಿಕೆಯನ್ನು ತೋರಿಸುತ್ತವೆ. ಅನೇಕ ಪಟ್ಟಣ ಹಾಗೂ ನಗರಗಳ ಬೆಳವಣಿಗೆ, ಕೈಗಾರಿಕಾ ಅಭಿವೃದ್ಧಿ ಮತ್ತು ವಿವಿಧ ಶ್ರೇಣಿಗಳನ್ನು ನೋಡಿದರೆ ವ್ಯಾಪಾರ ಚಟುವಟಿಕೆಗಳ ಪಾತ್ರ ಅರಿವಾಗುತ್ತದೆ. ಹೀಗಾಗಿ ವ್ಯಾಪಾರ ಕ್ಷೇತ್ರದಲ್ಲಿ ಗಮನಾರ್ಹ ಪ್ರಗತಿ ಈ ಕಾಲದಲ್ಲಿ ಕಂಡಿತೆನ್ನಬಹುದು. ಶಾತವಾಹನರು ದಕ್ಷಿಣದಲ್ಲಿ ಸ್ಥಾಪಿಸಿದ ಶಾಂತಿ ಅಭಿವೃದ್ಧಿಗಳ ಪರಿಣಾಮವಾಗಿ ಹೊರದೇಶಗಳೊಡನೆ ವ್ಯಾಪಾರವು ಪ್ರಮುಖ ಸ್ಥಾನ ಪಡೆಯಿತು. ರೋಮ ಮತ್ತು ದೂರ ಪ್ರಾಚ್ಯದ ಸಂಗಡ ವ್ಯಾಪಾರ ಮತ್ತು ವಾಣಿಜ್ಯ ಚುರುಕಿನಿಂದ ನಡೆಯುತ್ತಿತ್ತು. ಕ್ರಿ.ಶ.ಎರಡನೇ ಶತಮಾನಕ್ಕೆ ಸೇರಿದ ಗ್ರೀಕ್ ನಾಟಕದ ಮಾಹಿತಿಯೊಂದು ದೊರಕಿದ್ದು, ಮಲ್ಪೆಯಲ್ಲಿ ಗ್ರೀಸಿನ ಹಡಗುಗಳು ವಿರಮಿಸುತ್ತಿದ್ದ ಬಗ್ಗೆ ವಿವರಗಳು ಇವೆ. ಕ್ರಿ.ಶ.45ರಲ್ಲಿ ಹಿಪ್ಪಾಲಸ್ ಎಮಬುವರು ಅರಬ್ಬೀ ಸಮುದ್ರದಲ್ಲಿ ಬೀಸುವ ಗಾಳಿಗಳ ಋತುಮಾನವನ್ನು ಕಂಡುಹಿಡಿದನು. ಇದರಿಂದ ಸಮುದ್ರಯಾನಕ್ಕೆ ಉತ್ತೇಜನ ದೊರೆಯಿತು ಮತ್ತು ರೋಂ ಮತ್ತು ಭಾರತದ ನಡುವಿನ ವ್ಯಾಪಾರವು ಹನ್ನೆರಡು ಪಟ್ಟು ಹೆಚ್ಚಾಗಲು ಕಾರಣವಾಯಿತೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಅಂತರ ರಾಷ್ಟ್ರೀಯ ವ್ಯಾಪಾರ ಗುಜರಾತ್ ಮತ್ತು ದಖನ್ ಬಂದರುಗಲು, ದಕ್ಷಿಣದ ಉಭಯ ತೀರಗಳ ಬಂದರುಗಳು ಮತ್ತು ಬಂಗಾಳ ಹಾಗೂ ಆಂಧ್ರಪ್ರದೇಶದ ಬಂದರುಗಳು ಎಮಬ ಮೂರು ವಲಯಗಳಲ್ಲಿ ಹಂಚಿಹೋಗಿತ್ತು. ಪೆರಿಪ್ಲಸ್ ಆಫ್ ದಿ ಎರಿತ್ರಿಯನ್ ಸಿ ಗ್ರಂಥವು ಶಾತವಾಹನರ ವಿದೇಶಿ ವ್ಯಾಪಾರದ ಬಗ್ಗೆ ಬೆಳಕನ್ನು ಚೆಲ್ಲುತ್ತಿದೆ. ಗೋದಾವರಿ ಮತ್ತು ಕೃಷ್ಣನದಿ ತೀರದ

ಪ್ರದೇಶಗಳಲ್ಲಿನ ರೇವು ಪಟ್ಟಣಗಳು ಮಲಯ ಹಾಗೂ ಪೂರ್ವ ಇಂಡೀಸ್ ದೇಶಗಳೊಡನೆ ವ್ಯಾಪಾರ ಮಾಡುತ್ತಿದ್ದವೆಂದು ಟಾಲೆಮಿ ತಿಳಿಸುತ್ತಾನೆ. ಶಾತವಾಹನರು ತಮ್ಮದೆಯಾದ ವ್ಯಾಪಾರದ ಹಡಗುಗಳನ್ನು ಹೊಂದಿದ್ದು ವಿದೇಶಿ ವ್ಯಾಪಾರ ಮಾಡುತ್ತಿದ್ದರೆಂಬುದನ್ನು ಶಾತಕರ್ಣಿಯ ನಾಣ್ಯದ ಮೇಲೆ ಪಟಸ್ತಂಭವುಳ್ಳ ಹಡಗಿನ ಚಿತ್ರವಿರುವುದೇ ಸಾಕ್ಷಿ. ಇದರಿಂದ ಶಾತವಾಹನರು ವಿದೇಶಿಗಳೊಡನೆ ವ್ಯಾಪಾರ ಸಂಪರ್ಕ ಇಟ್ಟುಕೊಂಡಿದ್ದರೆಂದು ತಿಳಿದುಬರುತ್ತದೆ. ಒಟ್ಟಿನಲ್ಲಿ ಶಾತವಾಹನರು ರೋಮನ್ ಸಾಮ್ರಾಜ್ಯದ ಜೊತೆ ನಿರಂತರ ವ್ಯಾಪಾರ ಸಂಬಂಧ ಹೊಂದಿದ್ದರು. ದಖಿನ್ ಪ್ರದೇಶದಲ್ಲಿ ಶೇಖರಿಸಿದ್ದ ನಾಣ್ಯರಾಶಿಯನ್ನು ಗಮನಿಸಿದಲ್ಲಿ ಅಂದಿನ ವ್ಯಾಪಾರದ ಅಗಾಧತೆಯನ್ನು ಗುರುತಿಸಬಹುದಾಗಿದೆ. ಪ್ರತಿ ವರ್ಷವು ಸುಮಾರು 500 ಮಿಲಿಯನ್ ರೋಂ ನಾಣ್ಯಗಳು ಭೋಗ ವಸ್ತುಗಳಿಗಾಗಿ ಬರುತ್ತಿದ್ದ ಕಾರಣ ರೋಂ ನಗರಕ್ಕೆ ಅಪಾರವಾದ ಧನಹಾನಿಯಾಗುತ್ತಿತ್ತೆಂದು ರೋಂ ಚರಿತ್ರಕಾರ ಪ್ಲೀನಿ ತನ್ನ ವ್ಯಥೆಯನ್ನು ತೋಡಿಕೊಂಡಿದ್ದಾನೆ. ಈ ವಾಣಿಜ್ಯ ವ್ಯವಹಾರಗಳಿಂದ ಉಂಟಾದ ಪರಿಣಾಮಗಳ ಬಗ್ಗೆ ರೋಮನ್ನರ ಕಾಲದ ಅನೇಕ ಗ್ರಂಥಗಳಲ್ಲಿ ವಿಶದವಾಗಿ ಪ್ರಸ್ತಾಪಿಸಲಾಗಿದೆ. ಆದ್ದರಿಂದಲೇ "ಶಾತವಾಹನರು ರೋಮನ್ ಸಾಮ್ರಾಜ್ಯದ ವ್ಯಾಪಾರದಿಂದ ಆರ್ಥಿಕ ಸಮೃದ್ಧತೆಯನ್ನು ಕೊಡುವಲ್ಲಿ ಯಶಸ್ವಿಯಾದರು" ಎಂಬುದಾಗಿ ಡಾ.ಆರ್.ಎಸ್.ಶರ್ಮ ಅಭಿಪ್ರಾಯ ಪಟ್ಟಿದ್ದಾರೆ. ರೋಂ ಮತ್ತು ಭಾರತದ ನಡುವೆ ಸ್ವತಂತ್ರವಾಗಿ ವ್ಯಾಪಾರ ಸಂಬಂಧವಿದ್ದಿತು ಎಂಬುದಾಗಿ ಸಿವೆಲ್ ತೀರ್ಮಾನಿಸಿದ್ದಾರೆ.

## 3.15 ವ್ಯಾಪಾರ ಕೇಂದ್ರಗಳು

ಶಾತವಾಹನರ ಕಾಲದಲ್ಲಿ ಆಶ್ಚರ್ಯಕರವಾದ ರೀತಿಯಲ್ಲಿ ನಗರ ಜೀವನ ಬೆಳೆದು ಹಳೆಯ ಪಟ್ಟಣ ನಗರಗಳು ವಿಸ್ತರಿಸಲ್ಪಟ್ಟು ಹೊಸ ಪಟ್ಟಣ ನಗರಗಳು ನಿರ್ಮಿತವಾದವು. ಶಾತವಾಹನರ ಕಾಲದಲ್ಲಿ 30 ದೊಡ್ಡ ನಗರಗಳಿದ್ದು ಅವುಗಳು ವ್ಯಾಪಾರ ಕೇಂದ್ರಗಳಾಗಿದ್ದವೆಂದು ತಿಳಿದುಬರುತ್ತದೆ. ಉದಾ: ಪ್ರತಿಷ್ಠಾನ, ಜುನ್ನಾರ್, ಕರಾಡ್, ನಾಸಿಕ್, ಸನ್ನತಿ, ಠಣಕ, ವಡಗಾಂವ್, ಗೋವರ್ಧನ, ಧಾನ್ಯ ಕಟಕ, ವೈಜಯಂತಿ, ಚಂದ್ರವಳ್ಳಿ, ಅಮರಾವತಿ ಮುಂತಾದವುಗಳು ಒಳನಾಡ ವಾಣಿಜ್ಯ ಕೇಂದ್ರಗಳಾಗಿದ್ದವು. ಇವುಗಳ ಮೂಲಕ ವ್ಯಾಪಾರ ನಡೆಯುತ್ತಿತ್ತು.

## ಬಂದರುಗಳು

ಸೋಪಾರ, ಬ್ರೂಚ್, ಕಲ್ಯಾಣ, ಚಂಪಾವತಿ, ಹೊನ್ನಾವರ ಮುಖ್ಯ ಬಂದರುಗಳಾಗಿದ್ದವು. ಕಲ್ಯಾಣವು ಶಾತಕರ್ಣಿಯ ಕಾಲದಲ್ಲಿ ಅತ್ಯಂತ ಉತ್ತಮಸ್ಥಿತಿಯಲ್ಲಿದ್ದ ಬಂದರಾಗಿದ್ದು ಹೆಚ್ಚಿನ ವ್ಯಾಪಾರ ವಹಿವಾಟು ಈ ಬಂದರಿನ ಮೂಲಕ ನಡೆಯುತ್ತಿತ್ತು. ಈ ಬಂದರುಗಳ ಉಲ್ಲೇಖ ಅನಾಮಧೇಯನ ಪೆರಿಪ್ಲಸ್ ಆಫ್ ದಿ ಎರಿತ್ರಿಯನ್ ಸೀ ಮತ್ತು ಟಾಲೆಮಿಯ ಜಿಯಾಗ್ರಫಿ ಕೃತಿಗಳಲ್ಲಿವೆ.

## ವ್ಯಾಪಾರಿ ಮಾರ್ಗಗಳು

ನಗರಗಳಿಗೂ, ಬಂದರುಗಳಿಗೂ ಪರಸ್ಪರ ಉತ್ತಮ ಮಾರ್ಗಸಂಪರ್ಕಗಳಿದ್ದವು. ಶಾತವಾಹನರ ಕಾಲದಲ್ಲಿ ಪ್ರತಿಷ್ಠಾನದಿಂದ ಹೊರಟ ವ್ಯಾಪಾರ ಮಾರ್ಗ ಕೊಲ್ಲಾಪುರ, ಕೊಪ್ಪಳ, ಮಸ್ಕಿ, ಚಂದ್ರವಳ್ಳಿ, ಕನಕಗಿರಿ ಇನ್ನೂ ಮೊದಲಾದ ಪಟ್ಟಣಗಳಿಗೆ ಸಂಪರ್ಕವನ್ನು ಕಲ್ಪಿಸುತ್ತಿತ್ತು. 'ಪೆರಿಪ್ಲಸ್ ಆಫ್ ದಿ ಎರಿತ್ರಿಯನ್ ಸಿ' ಕೃತಿಯ ಪ್ರಕಾರ ಪೌರ್ವಾತ್ಯ ದೇಶಗಳ ಹಡಗುಗಳು ಕೆಂಪುಸಮುದ್ರ, ಅರೇಬಿಯನ್ ತೀರಪ್ರದೇಶ, ಕಣಿವೆ ಮಾರ್ಗಗಳ ಮೂಲಕ ಬ್ರೂಚ್ ಮತ್ತು ಮಲಬಾರಿನ ಬಂದರುಗಳಿಗೆ ತಲುಪುತ್ತಿದ್ದವು. ಅಮರಾವತಿಯಲ್ಲಿ ದೊರೆತಿರುವ ಶಾಸನಗಳು

ದಖನ್ನಿನ ಗೂಡೂರು, ಕಾವೇರಿ ಪಟ್ಟಣ ಮೊದಲಾದ ಬಂದರುಗಳ ಮೂಲಕ ಪ್ರಾಚ್ಯ ದೇಶಗಳಿಗೆ ಹಡಗುಗಳು ಹೋಗಿ ಬರುತ್ತಿದ್ದವೆಂದು ತಿಳಿದುಬರುತ್ತದೆ. ವರ್ತಕರು ಮತ್ತು ಭಿಕ್ಷುಗಳು ಮಲಯ ಪರ್ಯಾಯ ದ್ವೀಪಗಳಿಗೆ ಹೋಗಿ ಬರುತ್ತಿದ್ದರಿಂದ ಮಲಯ ಪರ್ಯಾಯ ದ್ವೀಪದ ಬೇರೆ ಬೇರೆ ಪ್ರದೇಶಗಳಲ್ಲಿ ಶಾತವಾಹನರ ಕಾಲದಲ್ಲಿ ಭಾರತದ ಸಾಂಸ್ಕೃತಿಕ ನೆಲೆಗಳು ಸ್ಥಾಪಿತವಾದವು.

## ರಫ್ತು

ಶಾತವಾಹನರು ಪಶ್ಚಿಮ ತೀರದ ರೇವುಪಟ್ಟಣಗಳಿಂದ ಹತ್ತಿಬಟ್ಟೆ, ಮಸ್ಲಿನ್‌ಬಟ್ಟೆ, ಅಕ್ಕಿ, ದಂತ, ವಜ್ರಗಳು, ನೀಲಿ, ಮಣಿಗಳು, ಹರಳುಗಳು, ಆಮೆ ಕವಚಗಳು, ಸುಗಂಧ ದ್ರವ್ಯಗಳು, ಮ್ಯಾಲ ಬ್ಯಾಥ್ರಮ್, ಮೆಣಸು ಮುಂತಾದ ಸಾಂಬಾರ ಪದಾರ್ಥಗಳನ್ನು ರೋಂ ಮತ್ತು ಇತರ ದೇಶಗಳಿಗೆ ರಫ್ತು ಮಾಡುತ್ತಿದ್ದರು. ಕಡಲತೀರದಲ್ಲಿದ್ದ ಹಡಗುಕಟ್ಟೆಗಳು ಸದಾಕಾಲದಲ್ಲಿಯೂ ಕಾರ್ಯನಿರತವಾಗಿದ್ದವು.

## ಆಮದು

ತಾಮ್ರ, ಸೀಸ, ಮಧ್ಯ, ಕುದುರೆ, ಗಾಜು, ಚಿನ್ನ, ಹವಳ, ತೆಳುವಾದ ಬಟ್ಟೆ, ಬಣ್ಣಬಣ್ಣದ ನಡುಪಟ್ಟಿಗಳು, ಸುವಾ, ಚಕಮಕಿ ಕಲ್ಲು, ಅಂಜನಕಲ್ಲು, ಗೋಮೇದಿಕ, ಗುಗ್ಗಳ, ಕುದುರೆ, ಮಾವು, ಹರಿದಳ, ಆಂಟಿಮನಿ, ವಿವಿಧ ಔಷಧದ ಮುಲಾಮುಗಳು ಮುಂತಾದವುಗಳನ್ನು ಗ್ರೀಕ್, ಇಟಲಿ ಮತ್ತು ಅರಬ್ ದೇಶಗಳಿಂದ ಆಮದು ಮಾಡಿಕೊಳ್ಳುತ್ತಿದ್ದರು. ಒಟ್ಟಿನಲ್ಲಿ ಬ್ರೂಚ್, ಸೋಪಾರ, ಕಲ್ಯಾಣ ಮೊದಲಾದ ಬಂದರುಗಳ ಮೂಲಕ ರಫ್ತು ಆಮದುಗಳ ವಹಿವಾಟು ಎಡಬಿಡದೆ ನಡೆಯುತ್ತಿತ್ತು.

## ನಾಣ್ಯಗಳು

ಶಾತವಾಹನರು ದಕ್ಷಿಣದಲ್ಲಿ ಪ್ರಪ್ರಥಮವಾಗಿ ನಾಣ್ಯಗಳನ್ನು ಅಚ್ಚು ಹಾಕಿಸಿದ್ದು, ಅವರ ನಾಣ್ಯಗಳ ಮೇಲೆ ರಾಜರ ಹೆಸರುಗಳನ್ನು ಕೆತ್ತಲಾಗಿದೆ. ಶಾತವಾಹನರು ತವರ, ತಾಮ್ರ ಮತ್ತು ಬೆಳ್ಳಿ ನಾಣ್ಯಗಳನ್ನು ಅಚ್ಚು ಹಾಕಿಸಿದರು. ಗ್ರೀಕರು ಮತ್ತು ಶಕರಿಂದ ಪ್ರಭಾವಿತರಾದ ಶಾತವಾಹನರು "ಕಾರ್ಷಪಣ" ಎಂಬ ಬೆಳ್ಳಿಯ ನಾಣ್ಯವನ್ನು ಹೆಚ್ಚು ಸಂಖ್ಯೆಯಲ್ಲಿ ಟಂಕಿಸುತ್ತಿದ್ದರು. ವಿಶೇಷವಾಗಿ ವಿಶಾಲವಾದ ಶಾತವಾಹನ ಸಾಮ್ರಾಜ್ಯದಲ್ಲಿ ಆಗ ಚಲಾವಣೆಯಲ್ಲಿದ್ದ ಸೀಸದ ನಾಣ್ಯಗಳು. ಹೀಗಾಗಿ ಸೀಸದ ನಾಣ್ಯಗಳು ಅಧಿಕ ಸಂಖ್ಯೆಯಲ್ಲಿ ದೊರೆತಿವೆ. ಕ್ರಿ.ಶ.1939ರಲ್ಲಿ ಬೀರಾರಿನ ಅಂಕೋಲಾ ಜಿಲ್ಲೆಯ ಮಂಗ್ರೂಲ್ ಬಳಿ ತುರ್ಹಲಾದಲ್ಲಿ ಶಾತವಾಹನ ಕುಟುಂಬದ ಸದಸ್ಯರಿಗೆ ಸೇರಿದ 1525 ನಾಣ್ಯಗಳ ಒಂದು ರಾಶಿಯು ದೊರಕಿದೆ. ಕ್ರಿ.ಶ.1947ರಲ್ಲಿ ವ್ಹೀಲರ್‌ರವರು ಚಂದ್ರವಳ್ಳಿಯಲ್ಲಿ ಉತ್ಖನನ ಮಾಡಿದಾಗ 55 ನಾಣ್ಯಗಳು ದೊರೆತಿವೆ. ಅವುಗಳಲ್ಲಿ 3 ನಾಣ್ಯಗಳು ಶಾತವಾಹನರ ಕಾಲಕ್ಕೆ ಸೇರಿದವು 15 ನಾಣ್ಯಗಲು ಅವರ ಸಾಮಂತರ ರಾಜರದು. ಶಾತವಾಹನರ 3 ನಾಣ್ಯಗಳನ್ನು ಒಂದು ಪುಲುಮಾಯಿಗೂ ಮತ್ತೆರಡು ನಾಣ್ಯಗಳು ಯಜ್ಞಶ್ರೀ ಶಾತಕರ್ಣಿಗೂ ಸೇರಿದವು. ಇತ್ತೀಚೆಗೆ ಬನವಾಸಿಯಲ್ಲಿ ಉತ್ಖನನ ನಡೆಸಿದಾಗ ಗೌತಮೀಪುತ್ರ ಶಾತಕರ್ಣಿ ಮತ್ತು ಯಜ್ಞಶ್ರೀ ಶಾತಕರ್ಣಿ ಇವರ ನಾಣ್ಯಗಳು ದೊರತಿವೆ. "ಸುವರ್ಣ" ಎಂಬ ಚಿನ್ನದ ನಾಣ್ಯಗಳು ಚಲಾವಣೆಯಲ್ಲಿದ್ದು ಒಂದು ಚಿನ್ನದ ನಾಣ್ಯ 35 ಬೆಳ್ಳಿಯ ನಾಣ್ಯಗಳಿಗೆ ಸಮವಾಗಿತ್ತು. ಒಂದು ಕಾರ್ಷಪಣವು 146.4 ಗ್ರೈನ್ ಮತ್ತು ಒಂದು ರಟ್ಟಿ ಎಂಬುದು 1.83 ಗ್ರೈನ್‌ಗೆ ಸಮವಾಗಿತ್ತು. ಶಾತವಾಹನರ ಅನೇಕ ನಾಣ್ಯಗಳ ಮೇಲೆ ಹಡಗಿನ ಗುರುತುಗಳನ್ನು ಮುದ್ರಿಸಲಾಗಿದೆ. ಶಾತಕರ್ಣಿಯ ನಾಣ್ಯದ ಮೇಲೆ ಪಟಸ್ತಂಭವುಳ್ಳ ಹಡಗಿನ ಚಿತ್ರವನ್ನು ನಾವು ಕಾಣಬಹುದಾಗಿದೆ. ಹಲವು

ನಾಣ್ಯಗಳ ಮೇಲೆ ರಾಜರ ಹೆಸರುಗಳೂ ಇವೆ. ದಕ್ಷಿಣ ಭಾರತ ಮತ್ತು ರೋಮನ್ ಸಾಮ್ರಾಜ್ಯದೊಡನೆ ಸ್ಥಾಪಿತವಾಗಿದ್ದ ಸಮುದ್ರ ವ್ಯಾಪಾರ ಸಂಪರ್ಕವನ್ನು ಗ್ರಹಿಸಲು ಹಡಗಿನ ಮುದ್ರೆಯ ನಾಣ್ಯಗಳು ಸಹಕಾರಿಯಾಗಿವೆ.

ಒಟ್ಟಿನಲ್ಲಿ ಶಾತವಾಹನರ ಕಾಲದಲ್ಲಿ ಆರ್ಥಿಕ ಸಮೃದ್ಧಿ ನೆಲೆಯೂರಿತ್ತು ಎಂಬುದಾಗಿ ನಿಸ್ಸಂದೇಹವಾಗಿ ಹೇಳಬಹುದು. "ಒಮ್ಮೆ ಹೆಣ್ಣು ಮಗಳೊಬ್ಬಳು ಭತ್ತವನ್ನು ಹಸನು ಮಾಡುತ್ತಿದ್ದ ಸಂದರ್ಭದಲ್ಲಿ ಪಕ್ಷಿಯೊಂದು ಆ ದವಸವನ್ನು ತಿನ್ನಲು ಬಂದಿತ್ತು. ಅದನ್ನು ಓಡಿಸಲು ಅವಳ ಕೈಯಲ್ಲಿ ಏನೂ ಇರಲಿಲ್ಲ. ಆಗ ಆಕೆ ತನ್ನ ಕಿವಿಯಲ್ಲಿನ ಆಭರಣವನ್ನೇ ತೆಗೆದುಕೊಂಡು ಬೀಸಿ ಹೊಡೆದು ಪಕ್ಷಿಯನ್ನು ಓಡಿಸಿದಳು. ಬೀಸಿ ಹೊಡೆದ ಆಭರಣವನ್ನು ಆಕೆ ಪುನಃ ತೆಗೆದುಕೊಳ್ಳುವ ಗೋಜಿಗೆ ಹೋಗಲಿಲ್ಲ." ಈ ಒಂದು ಉದಾಹರಣೆಯಿಂದಲೇ ನಾವು ಶಾತವಾಹನರ ಕಾಲದ ಆರ್ಥಿಕ ಸಮೃದ್ಧಿಯನ್ನು ಗುರುತಿಸಬಹುದಾಗಿದೆ ಹಾಗೂ ವಿಜಯನಗರ ಸಾಮ್ರಾಜ್ಯದ ಕಾಲದ ಆರ್ಥಿಕ ಸಮೃದ್ಧಿಯಷ್ಟೇ ಶಾತವಾಹನರ ಕಾಲದಲ್ಲಿ ಆರ್ಥಿಕ ಸಮೃದ್ಧಿಯು ಅಸ್ತಿತ್ವದಲ್ಲಿತ್ತು ಎಂಬುದು ವೇದ್ಯವಾಗುತ್ತದೆ.

## 3.16 ಶಾತವಾಹನರ ಸಾಂಸ್ಕೃತಿಕ ಕೊಡುಗೆಗಳು

ಸುಮಾರು ಮೂರು ಶತಮಾನಗಳಿಗಿಂತ ಹೆಚ್ಚು ಕಾಲ ದಕ್ಷಿಣ ಭಾರತದಲ್ಲಿ ಆಳ್ವಿಕೆ ನಡೆಸಿದ ಶಾತವಾಹನರು ಧರ್ಮ, ಸಾಹಿತ್ಯ ಹಾಗೂ ಕಲೆ ಮತ್ತು ವಾಸ್ತುಶಿಲ್ಪ ಭಂಡಾರಕ್ಕೆ ಅಮೋಘ ಕಾಣಿಕೆ ನೀಡಿದ್ದಾರೆ.

**ಧರ್ಮ**

ಶಾತವಾಹನ ಸಾಮ್ರಾಜ್ಯ ಸ್ಥಾಪನೆಗೆ ಮೊದಲು ದಖನ್ನಿನ ನಿವಾಸಿಗಳು ಗ್ರಾಮದೇವತೆ, ಶಕ್ತಿಪೂಜೆ ಮತ್ತು ಹಲವು ವೃಕ್ಷಗಳನ್ನು ಪೂಜಿಸುವ ಪದ್ಧತಿಯನ್ನು ಅನುಸರಿಸುತ್ತಿದ್ದರು. ಕ್ರಮೇಣ ವೈದಿಕ, ಜೈನ ಮತ್ತು ಬೌದ್ಧ ಮತಗಳು ಪ್ರಸಾರವಾಗಿ ಜನಪ್ರಿಯವಾಗತೊಡಗಿದವು. ಹೀಗಾಗಿ ಶಾತವಾಹನರ ರಾಜ್ಯದಲ್ಲಿ ವೈದಿಕಧರ್ಮ, ಬೌದ್ಧಧರ್ಮ ಮತ್ತು ಜೈನಧರ್ಮಗಳು ಅಸ್ಥಿತ್ವದಲ್ಲಿದ್ದವು. ಆದರೂ ಸ್ಥಳೀಯವಾದ ಪಂಥ ಹೆಚ್ಚು ಪ್ರಚಲಿತವಾಗಿತ್ತು. ನಮಗೆ ಹೇರಳವಾಗಿ ದೊರೆತಿರುವ ಟೆರಾಕೋಟ ಗೊಂಬೆಗಳು ಇದಕ್ಕೆ ಸಾಕ್ಷಿಯಾಗಿವೆ. ಸನ್ನತಿ ಮುಂತಾದೆಡೆ ದೊರೆತಿರುವ ಟೆರಾಕೋಟ ಗೊಂಬೆಗಳಲ್ಲಿ ಎದ್ದು ಕಾಣುವುದು ಮಾತೃದೇವತೆ. ಮಾತೃದೇವತೆಯ ಆರಾಧನೆ ಹೆಚ್ಚು ಪ್ರಚಲಿತವಿತ್ತೆಂದು ಇದರಿಂದ ವಿದಿತವಾಗುತ್ತದೆ.

## 3.17 ವೈದಿಕ ಧರ್ಮ

ಶಾತವಾಹನರು ವೈದಿಕಧರ್ಮದ ಅನುಯಾಯಿಗಳಾಗಿದ್ದು ವರ್ಣಾಶ್ರಮ ಧರ್ಮವನ್ನು ಪಾಲಿಸುತ್ತಿದ್ದರು. ಶಾತವಾಹನರು ತಮ್ಮನ್ನು ಬ್ರಾಹ್ಮಣರೆಂದು ಕರೆದುಕೊಂಡಿದ್ದಾರೆ. ಉದಾ: ನಾಸಿಕ್ ಶಾಸನದಲ್ಲಿ ಸಿಮುಖನನ್ನು 'ಏಕಬ್ರಾಹ್ಮಣ'ನೆಂದು ಉಲ್ಲೇಖಿಸಿರುವುದರಿಂದ ಶಾತವಾಹನರು ಹಿಂದೂ ಧರ್ಮೀಯರಾಗಿದ್ದರೆಂದು ತಿಳಿಯುತ್ತದೆ. ಹಲವು ರಾಜರು ಅಶ್ವಮೇಧ ಮತ್ತು ವಾಜಪೇಯ ಯಾಗಾದಿಗಳನ್ನು ಮಾಡಿದರು. ನಯನಿಕಳ ನಾನಾಘಾಟ್ ಶಾಸನದ ಪ್ರಕಾರ ಒಂದನೇ ಶಾತಕರ್ಣಿ 2 ಅಶ್ವಮೇಧ ಹಾಗೂ ಒಂದು ರಾಜಸೂಯ ಯಾಗವನ್ನು ಮಾಡಿದನು. ಅಲ್ಲದೆ ಬ್ರಾಹ್ಮಣರಿಗೆ ಭೂಮಿಯನ್ನು, ಗ್ರಾಮಗಳನ್ನು, 11,000 ಹಸುಗಳನ್ನು, 22,400 ನಾಣ್ಯಗಳನ್ನು ಮತ್ತು ವಸ್ತ್ರಗಳನ್ನು ಹೇರಳವಾಗಿ ದಾನ ಮಾಡಿದನು. ಈ ಯಾಗಗಳಲ್ಲಿ ಇಂದ್ರ, ವರುಣ, ಕುಬೇರ, ಯಮ ಮುಂತಾದ ದೇವರುಗಳನ್ನು ಸ್ತುತಿಸಲಾಗಿದೆ. ಈತನ ಕಾಲದಲ್ಲಿ ವೈದಿಕಧರ್ಮ ದಖನ್ನಿನಲ್ಲಿ ಸಾಕಷ್ಟು ಸುಧಾರಿಸಿತು. ಗೌತಮಿಪುತ್ರ ಶಾತಕರ್ಣಿ ವೈದಿಕ ಮತ ಸಂಪ್ರದಾಯಗಳನ್ನು ಪುನರುಜ್ಜೀವನಗೊಳಿಸಿದನು. ಈತ ತಾನೊಬ್ಬನೇ ಬ್ರಾಹ್ಮಣ ಎಂದು ಹೇಳಿಕೊಂಡಿದ್ದಾನೆ. ಶಾತಕರ್ಣಿಯ ಮಳವಳ್ಳಿ ಸ್ತಂಭ ಶಾಸನವು ಮಳವಳ್ಳಿ ದೇವರಿಗೆ

ಬ್ರಹ್ಮದೇಯ ದಾನವಾಗಿ ಕೌಂಡಿನ್ಯಗೋತ್ರದ ಕೊಂಡಮಾನ ಎಂಬುವನಿಗೆ ಭೂದಾನ ಮಾಡಿದ ವಿಚಾರವು ಶಾತವಾಹನರ ಕಾಲದಲ್ಲಿ ವೈದಿಕ ಧರ್ಮ ಏಳಿಗೆ ಪಡೆದಿತ್ತು ಎಂಬುದನ್ನು ತೋರಿಸುತ್ತದೆ. ಶಾತವಾಹನರು ವೈದಿಕ ದೇವತೆಗಳಾದ ಇಂದ್ರ, ಚಂದ್ರ, ಸೂರ್ಯ, ಯಮ, ವರುಣ, ಕುಬೇರ, ಸಂಕರ್ಷಣ, ಲಕ್ಷ್ಮಿ ಮುಂತಾದ ದೇವರುಗಳನ್ನು ಪೂಜಿಸುತ್ತಿದ್ದರು. ರಾಮಾಯಣ, ಮಹಾಭಾರತ ಮತ್ತು ಪುರಾಣಗಳು ಶಾತವಾಹನ ನಾಡಿನಲ್ಲಿ ಸಾಕಷ್ಟು ಪ್ರಚುರವಾಗಿದ್ದವು. ಹಾಲನ ಗಾಥಾಸಪ್ತಶತಿ ಕಾವ್ಯವು ಶಿವ ಮತ್ತು ಗೌರಿಯ ಸ್ತೋತ್ರದಿಂದ ಆರಂಭವಾಗುವುದರಿಂದ ಶಾತವಾಹನರ ಕಾಲದಲ್ಲಿ ಶೈವಧರ್ಮ ಆಚರಣೆಯಲ್ಲಿದ್ದುದನ್ನು ತಿಳಿಸುತ್ತದೆ. ಶಿವದತ್ತ, ಶಿವಕದಿಲ, ಕುಮಾರ, ಸ್ಕಂದ ಮುಂತಾದ ಶಾಸನೋಕ್ತ ಹೆಸರುಗಳು ಶಾತವಾಹನರ ಕಾಲದಲ್ಲಿದ್ದ ಶೈವಧರ್ಮವನ್ನು ಸೂಚಿಸುತ್ತವೆ. ಗೌರಿ ದೇವಾಲಯಗಳ ಉಲ್ಲೇಖವಿದ್ದು ಬೂದಿ ಬಳಿದು ಕೊಂಡು ಕಪಾಲಗಳನ್ನು ಹಿಡಿದ ಕಪಾಲೀ ಸ್ತ್ರೀಯರ ವಿಚಾರವು ಆ ಕಾಲದ ಗ್ರಂಥಗಳಲ್ಲಿ ಬಂದಿದೆ. ಹಾಗೆಯೇ ಶಾತವಾಹನರು ಕೃಷ್ಣ ವಾಸುದೇವ ಮೊದಲಾದ ವೈಷ್ಣವ ದೈವಗಳನ್ನು ಸಹ ಆರಾಧಿಸುತ್ತಿದ್ದರು. ನಾನಾಘಾಟ್‌ನಲ್ಲಿನ ಶಾಸನವು ಕ್ರಿ.ಪೂ.ಒಂದನೇ ಶತಮಾನದಲ್ಲಿಯೇ ಕೆಲವು ರಾಜರು ವಾಸುದೇವನನ್ನು ದೇವ ದೇವೋತ್ತಮನೆಂದು ಪರಿಗಣಿಸದಿದ್ದರೂ ಇಂದ್ರ ಮತ್ತು ಇತರ ದೇವರುಗಳಿಗೆ ಸಮಾನನೆಂದು ಭಾವಿಸಿದ್ದರೆಂದೂ ಸಹ ತಿಳಿಸುತ್ತದೆ. ಕ್ರಿ.ಶ.ಎರಡನೇ ಶತಮಾನದ ಶಾತವಾಹನ ದೊರೆಯು ತಾನು ರಾಮ (ಬಲದೇವ ಅಥವ ಸಂಕರ್ಷಣ) ಮತ್ತು ಕೇಶವ (ವಾಸುದೇವಕೃಷ್ಣ)ರಿಗೆ ಸಮಾನನೆಂದು ಹೇಳಿಕೊಂಡಿರುವುದು ಗಮನಾರ್ಹವಾಗಿದೆ.

## 3.18 ಉಪಸಂಹಾರ

ಶಾತವಾಹನರು ವಿಶಾಲವಾದ ಸಾಮ್ರಾಜ್ಯದಲ್ಲಿ ಸರಳವಾದ ಮತ್ತು ವಿಕೇಂದ್ರೀಕೃತವಾದ ಆಡಳಿತ, ಉತ್ತಮವಾದ ಸಾಮಾಜಿಕ ಪದ್ಧತಿ, ಆರ್ಥಿಕ ಕ್ಷೇತ್ರದಲ್ಲಿ ಸಮೃದ್ಧತೆ, ಧರ್ಮ, ಸಾಹಿತ್ಯ ಹಾಗೂ ಕಲೆ ಮತ್ತು ವಾಸ್ತುಶಿಲ್ಪ ಭಂಡಾರಕ್ಕೆ ಅಮೋಘ ಕಾಣಿಕೆ ನೀಡಿದ್ದಾರೆ.

## 3.19 ಕ್ಷತ್ರಪರು

### 3.19.1 ಮೂಲ

ಪಶ್ಚಿಮದ ಸತ್ರಪರು ವಿದೇಶೀ ಮೂಲದವರಾಗಿದ್ದರೆಂಬುದಕ್ಕೆ ಅನೇಕ ಕಾರಣಗಳಿವೆ. ಅವರ ಪ್ರಾಚೀನ ನಾಣ್ಯಗಳ ಮೇಲೆ ಖರೋಷ್ಠಿ ಲಿಪಿಯನ್ನು ಬಳಸಲಾಗಿದೆ. ಅಲ್ಲದೇ, ಕ್ಷತ್ರಪ (ಸತ್ರಪ) ಎಂಬ ಈ ಶಬ್ದವೇ 'ಕ್ಷತ್ರವನ' ಎಂಬ ಪರ್ಶಿ0ಯನ್ ಶಬ್ದದ ಸಂಸ್ಕೃತ ರೂಪ; ಕ್ಷತ್ರವನ ಎಂದರೆ, ಭೂಮಿ0ು ರಕ್ಷಕನೆಂದರ್ಥ. ಅವರು ಶಕರು ಮತ್ತು ಪಹಲವರಾಗಿದ್ದರೆಂದು ಶಿಲಾಶಾಸನಗಳು ಹೇಳುತ್ತದೆ. ಅಲ್ಲದೇ ಟಾಲೆಮಿ0ು ವರ್ಣಿಸಿದ ಇಂಡೋ–ಸ್ಕಿಥಿಯಾವು ಮೊದಲನೇ ರುದ್ರಧಾಮನ್‌ನ ರಾಜ್ಯವೇ ಆಗಿರಬೇಕೆಂದು ಊಹಿಸಲಾಗಿದೆ. ಪಶ್ಚಿಮದ ಸತ್ರಪರಲ್ಲಿ ಎರಡು ವಂಶಗಳಿದ್ದವು; ಭೂಮಕರು ಮತ್ತು ಚಸ್ಟಣ, ಭೂಮಕ ಹಾಗೂ ನಹಪಾನರು ಪಹಲ್ವರಾಗಿದ್ದರೆಂದೂ ಚಸ್ಟಣ ಹಾಗೂ ರುದ್ರಧಾಮನರು ಶಕರಾಗಿದ್ದರೆಂದು ಕೆಲವರು ಪರಿಗಣಿಸಿದ್ದಾರೆ. ನಹಪಾನನ ಹೆಸರು ಪಾರ್ಥಿ0ಯನ್ ಮೂಲದ್ದು ಹಾಗೂ ಚಸ್ಟಣನ ತಂದೆ0ು ಹೆಸರಾದ ಸಮೋತಿಕವು ಶಕ ಮೂಲದ್ದಾಗಿದೆ; ರುದ್ರದಾಮನ ಹಾಗೂ ಅವನ ಉತ್ತರಾಧಿಕಾರಿಗಳ ಹೆಸರಿನ ಅಂತ್ಯವು 'ದಮನ'ವೆಂದಿದೆ; ಇದೂ ಪರ್ಶಿ0ಯನ್ ಶಬ್ದವಾದ 'ಸ್ವಲಗದಮ' ಧರ್ಮವೂ ಒಂದೇ ಆಗಿರಬೇಕು. ಅಲ್ಲದೇ ನಹಪಾನನ ಅಳಿ0ುನಾದ ವಿಷವದಾತನು ಶಕನಾಗಿದ್ದನು. ಭೂಮಕ ಮತ್ತು ನಹಪಾನರಿಗೆ ಕ್ಷತ್ರಾಹರು ಅಥವಾ ಖಹರಾತರು ಎಂಬ ಹೆಸರಿದೆ. ಇದು ಒಂದು ಶಕವಂಶದ ಹೆಸರಾದ 'ಕರತೈ'ಗಿಂತ ವಿಭಿನ್ನವಾಗಿ0ೀನೋ ಇರಲಿಲ್ಲ. ಏಕೆಂದರೆ ಶಕ ಶಬ್ದವೆಂದರೆ

ಸಮ–ಭು=ಭೂಮಿ. ಪಹಲ್ವರು ಗಲ್ಲೀಮೀಸೆ೦ಯುಳ್ಳವರಾಗಿದ್ದರೆಂದು, ಭಾರತೀ೦ಯ ಸಾಹಿತ್ಯ ವರ್ಣಿಸುತ್ತದೆ. ಆದರೆ ನಹಪಾನನ ನಾಣ್ಯಗಳ ಮೇಲೆ, ಅವನ ಚಿತ್ರಗಳಿಗೆ ಗಲ್ಲೀಮೀಸೆ೦ಯುಳ್ಳವರಾಗಿದ್ದರೆಂದು ಭಾರತೀ೦ಯ ಸಾಹಿತ್ಯ ವರ್ಣಿಸುತ್ತದೆ. ಆದರೆ, ನಹಪಾನನ ನಾಣ್ಯಗಳ ಮೇಲೆ, ಅವನ ಚಿತ್ರಗಳಿಗೆ ಗಲ್ಲೀಮೇಸೆ೦ಯೂ ಇರಲಿಲ್ಲ. ಇದು ಇನ್ನೊಂದು ವಾದ. ಆದ್ದರಿಂದ ತಕ್ಷಶಿಲಾ ಹಾಗೂ ಮಥುರಾದ ಕಹರಾತರಂತೆ ಅವನೂ ಸಹ ಒಬ್ಬ ಶಕನಾಗಿದ್ದನು. ಅವರಲ್ಲಿ ಕೆಲವರಿಗೆ ಲಿ೦ಯಾಕಾ, ಪಟಾಕಾ ಹಾಗೂ ಗಟಿಕಾ ಮುಂತಾದ ಕೆಲವು ಪಹಲ್ವ ಹೆಸರುಗಳಿವೆ. ಶಕ ಮತ್ತು ಪಹಲ್ವ ಈ ಎರಡೂ ವಿಭಿನ್ನ ಜನಾಂಗದವರು ಭಾರತದಲ್ಲಿ ಅತ್ಯಂತ ಹೆಚ್ಚು ಸಮ್ಮಿಶ್ರಣಗೊಂಡಿದ್ದರಿಂದ ಅವರ ಮೂಲವು ಬಹಳ ಸ್ಪಷ್ಟವಾಗಿದೆ.

## 3.19.2 ರಾಜಕೀ೦ಯ ಬೆಳವಣಿಗೆ

**ನಹಪಾಣ;**

ಕ್ರಿಪೂ. 2ನೇ ಶತಮಾನದ ಅಂತ್ಯಭಾಗದಲ್ಲಿ ಶಕರು ಭಾರತದ ಮೇಲೆ ಧಾಳಿ ಮಾಡಿದರು. ಕ್ರಮೇಣ ಇದು ಮರಾಠ ರಾಜ್ಯಕ್ಕೂ ಪಸರಿಸಿತು. ಇದು ಕ್ರಿ.ಶ. 1ನೇ ಶತಮಾನದಲ್ಲಿದ್ದ ಶಾತವಾಹನರ ಶಕ್ತಿ೦ಯನ್ನು ಹಸ್ತಂಗತಗೊಳಿಸಿತು. ಭೂಮಕ ಮತ್ತು ನಹಪಾಣರ ಕಾಲದಲ್ಲಿ ಪಶ್ಚಿಮದ ಕ್ಷತ್ರಪರು ತಮ್ಮದೇ ಆದ ನಾಣ್ಯಗಳನ್ನು ಚಲಾವಣೆ೦ಯಲ್ಲಿ ತಂದರು. ಇದು ಬಹುತೇಕ ಅವರ ಸ್ವತಂತ್ರವಾದ ಅಸ್ತಿತ್ವವನ್ನು ಸೂಚಿಸುತ್ತದೆ. ನಹಪಾಣನ ಕಾಲದಲ್ಲಿ ಅವರು ಅತ್ಯಂತ ಬಲಶಾಲಿಗಳಾಗಿದ್ದರು. ಅವನ ಸಾಮ್ರಾಜ್ಯವು ಪೂನದಿಂದ ಅಜ್ಮೀರದವರೆಗೆ, ಕಾಥೇವಾಡಕ್ಕೆ ಮತ್ತು ಮಾಳವಗಳನ್ನು ಸೇರಿಸಿ ಹಬ್ಬಿತ್ತೆಂದು, ಅವನ ನಾಣ್ಯಗಳು ಮತ್ತು ಅಳಿ೦ಯನಾದ ಉಷವದಾತನ ಶಿಲಾಶಾಸನಗಳು ಹೇಳುತ್ತವೆ. ನಹಪಾಣನು ಬ್ರಾಹ್ಮಣರಿಗೆ ಅನೇಕ ದಾನಗಳನ್ನು ಮಾಡಿದರು. ಅಲ್ಲದೇ ಒಂದು ಗುಹೆ೦ಯನ್ನು ಸಹ ೦ಯತಿಗಳಿಗೆ ದಾನವಾಗಿ ಕೊಟ್ಟನು; ಮೇಲಾಗಿ, ಕೆಲವು ಸಂಘಗಳಲ್ಲಿ ತನ್ನ ಹಣವನ್ನು ಭದ್ರತಾ ಠೇವಣಿ೦ಯಾಗಿಟ್ಟು ಅದರ ಬಡ್ಡಿ೦ಯೂ ಅವರಿಗೆ ಸಲ್ಲುವಂತೆ ಮಾಡಿದನು. ಇದನ್ನೆಲ್ಲಾ ಉಷವದಾತನ ನಾಸಿಕ್ ಶಿಲಾಶಾಸನವು ವರ್ಣಿಸುತ್ತದೆ. ನಹಪಾಣನು ಕ್ಷತ್ರಪ ಮತ್ತು ಮಹಾಕ್ಷತ್ರಪನಾಗಿದ್ದನೆಂದು ಉಲ್ಲೇಖಿಸಲಾಗಿದೆ. ನಾಸಿಕ್ ಮತ್ತು ಜುನ್ನಾರ ಶಿಲಾಶಾಸನಗಳಲ್ಲಿ ದೊರೆತ ಕಾಲವು 41 ರಿಂದ 46 ರವರೆಗೆ ಬಹುತೇಕವಾಗಿ ನಾಸಿಕವು ಅವನ ರಾಜಧಾನಿ೦ಯಾಗಿತ್ತು. ಕೆಲವರು ಅವನು ಜುನ್ನಾರ, ಯಿನ್ನಾರ ಅಥವಾ ಬ್ರೋಚ್‌ಗಳಿಂದ ಆಳಿರಬೇಕೆಂದು ಪರಿಗಣಿಸುತ್ತಾರೆ. ಶಾತವಾಹನರಲ್ಲಿ ಅತ್ಯಂತ ಶ್ರೇಷ್ಠನಾದ ಗೌತಮೀಪುತ್ರ ಶಾತಕರ್ಣಿ೦ಯು ಇವನನ್ನು ಸಂಪೂರ್ಣವಾಗಿ ಸೋಲಿಸಿದ್ದರಿಂದ ಇವರ ಆಳ್ವಿಕೆ೦ಯು ತತಕ್ಷಣ ಕೊನೆಗೊಂಡಿತು. ತನ್ನ ೦ಯಶಸ್ಸಿನ ಪ್ರತೀಕವಾಗಿ ಇವನ ನಹಪಾನನ ನಾಣ್ಯಗಳೇ ಚಲಾವಣೆ೦ಯಲ್ಲಿ ತಂದನು.

ನಾಸಿಕ್ ಶಕಕ್ಷತ್ರಪರಲ್ಲಿ ಅತ್ಯಂತ ಪ್ರಬಲ ಅರಸನೆಂದರೆ 'ನಹಪಾಣ'. ಈತ ಕ್ರಿ.ಶ.199 ರಿಂದ 124ರವರೆಗೆ ರಾಜ್ಯಭಾರ ಮಾಡಿದನು. ಈತ ಶಾತವಾಹನರ ಶ್ರೇಷ್ಠ ಅರಸ ಗೌತಮೀಪುತ್ರ ಶಾತಕರ್ಣಿ೦ಯ ಸಮಕಾಲೀನನಾಗಿದ್ದನು. ನಾಣ್ಯಗಳಲ್ಲಿ ನಹಪಾಣನನ್ನು ತಪ್ಪದೇ 'ರಾಜನ್' ಎಂದೇ ಉಲ್ಲೇಖಿಸಲಾಗಿದೆ. ನಹಪಾಣನ ಆಮಾತ್ಯವಾಗಿದ್ದ ಆ೦ರ್ಯವನ್ ಎಂಬಾತನನ್ನು ಒಂದು ಶಾಸನವು ಪೂನ ಜಿಲ್ಲೆ೦ಯ ಜುನ್ನಾರ್‌ನಲ್ಲಿ ದೊರಕಿದೆ. ನಹಪಾಣನ ಮಗಳಾದ ದಕ್ಷಮಿತ್ರೆ೦ಯ ಪತಿ ಉಷವದತ್ತ ದಕ್ಷಿಣ ಪ್ರಾಂತ್ಯಗಳ ರಾಜಪ್ರತಿನಿಧಿ೦ಯಾಗಿದ್ದನು. ಈತ ಅಜ್ಮೀರ ಮತ್ತು ಮಾಳ್ವವನ್ನು ಗೆದ್ದು ತನ್ನ ಮಾವನಾದ ನಹಪಾಣನಿಗೆ ಕೊಟ್ಟನು. ಈತ ತನ್ನ ಹೆಸರಿನಲ್ಲಿ ಅನೇಕ ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ಹೊರಡಿಸಿದನು. ನಹಪಾಣನ ನಾಣ್ಯಗಳು ದೊಡ್ಡರಾಶಿ೦ಯಾರು ನಾಸಿಕ್ ಜಿಲ್ಲೆ೦ಯ ಜೊಗಲ್–ಧಂಬಿ೦ಯಲ್ಲಿ ದೊರೆತಿದೆ. ಹಾಗೆ೦ಯಾ ನಹಪಾಣನ ನಾಣ್ಯಗಳು ರಾಜಾಸ್ತಾನದ ಅಜ್ಮೀರ್ ಪ್ರದೇಶದಲ್ಲಿ೦ಯೂ ದೊರಕಿವೆ. ಬೆಳ್ಳಿ೦ಯ ನಾಣ್ಯಗಳು ಆಕಾರ, ತೂಕ ಮತ್ತು ರಚನೆಗಳಲ್ಲಿ ಗ್ರೀಕ್ ರಾಜರ

ಹೆಮಿದ್ರಕ್ಮಾಗಳನ್ನು ಅನುಸರಿಸಿದರು. ಈತನ ಸಾಮ್ರಾಜ್ಯ ಉತ್ತರದಲ್ಲಿ ಅಜ್ಮೀರ್‌ನಿಂದ ದಕ್ಷಿಣದಲ್ಲಿ ನಾಸಿಕ್‌ನವರೆಗೂ ವಿಸ್ತರಿಸಿತು. ಆದರೆ ಗೌತಮೀಪುತ್ರ ಶಾತಕರ್ಣಿ ಈತನನ್ನು ಸೋಲಿಸಿದನು.

ಕ್ಷತ್ರಪರು ನಾನಾ ಭಾಗಗಳಲ್ಲಿ ನೆಲೆಗೊಂಡರೂ ಸಹ ಪಶ್ಚಿಮ ಭಾರತದಲ್ಲಿ ಮಾತ್ರ 4 ಶಾಸನಗಳಷ್ಟು ಕಾಲ ಆಳಿದರು. ಒಂದನೇ ರುದ್ರದಾಮನ್ ಭಾರತದ ಅತ್ಯಂತ ಪ್ರಸಿದ್ಧ ಶಕರಾಜ ಗುಜರಾತಿನ ಬಹುಭಾಗ, ಕೊಂಕಣ, ನರ್ಮದಾ ಕೊಳ, ಮಾಳ್ವ ಮತ್ತು ಕಾಥೇವಾಡಗಳು ಈತನ ಆಳ್ವಿಕೆಗೆ ಒಳಪಟ್ಟಿದ್ದವು. ಉಜ್ಜೈನಿ೦ಯು ಈತನ ರಾಜಧಾನಿ೦ಯಾಗಿತ್ತು. ರುದ್ರಧಾಮನು ಶಾತವಾಹನರನ್ನು ಸೋಲಿಸಿದನೆಂದು ತಿಳಿದು ಬರುತ್ತದೆ. ದಕ್ಷಿಣ ಪಂಜಾಬ್ ಮತ್ತು ಆಸುಪಾಸಿನಲ್ಲಿದ್ದ ೦ಯೌಧೇ೦ಯ ಜನಾಂಗದ ಮೇಲೆ ೦ಯುದ್ಧ ಮಾಡಿ ರುದ್ರಧಾಮನು ಅವರನ್ನು ಸೋಲಿಸಿದನು. ರೋಗಗಳಾಗಲೀ ದರೋಡೆಗಾರರಾಗಲೀ, ವನ್ಯಮೃಗದಂದೆ೦ಯಾಗಲೀ ಇತರ ಇತರ ಪೀಡೆಗಳಾಗಲೀ ಜನಾಂಗಕ್ಕೆ ತಟ್ಟದಂತೆ ರುದ್ರಧಾಮನು ಉತ್ತಮ ರೀತಿ೦ಯಲ್ಲಿ ಆಡಳಿತವನ್ನು ನಡೆಸಿದನು. ರುದ್ರಧಾಮನು ಕೇವಲ ದಿಗ್ವಿಜಯಿ ಮಾತ್ರವಲ್ಲ, ಸಂಸ್ಕೃತ ಭಾಷೆ೦ಯ ಪೋಷಕನು ಕೂಡ ಆಗಿದ್ದನು. ವ್ಯಾಕರಣ, ರಾಜನೀತಿ, ಸಂಗೀತ, ತರ್ಕಶಾಸ್ತ್ರಗಳಲ್ಲಿ ಪರಿಣಿತನಾಗಿದ್ದ ಈತ ಸಂಸ್ಕೃತ ಗದ್ಯಪದ್ಯ ರಚನೆಗಳನ್ನು ಮಾಡಿ ಒಳ್ಳೆ೦ಯ ಹೆಸರನ್ನು ಪಡೆದಿದ್ದನು. ರುದ್ರಧಾಮನ ಗಿರ್‌ನಾರ್ ಶಾಸನ ಪ್ರಥಮ ಸಂಸ್ಕೃತ ಶಾಸನವಾಗಿದ್ದು, ಅತ್ಯಂತ ಮಹತ್ವದ ಐತಿಹಾಸಿಕ ದಾಖಲೆ೦ಯಾಗಿದೆ. ಕ್ರಿ.ಶ.150–51 ಕ್ಕೆ ಮುಂಚೆ ಭ೦ಯಂಕರವಾದ ಚಂಡಮಾರುತವೊಂದು ಬೀಸಿದ್ದರಿಂದ ಅಣೆಕಟ್ಟೆ೦ಯಲ್ಲಿ ದೊಡ್ಡ ಬಿರುಕು ಉಂಟಾಗಿ ಕ್ರಮೇಣ ಸುದರ್ಶನ ಸರೋವರವು ಬತ್ತಿ ಹೋಗಿತ್ತು. ಬೆಳೆಗಳು ವಿಫಲವಾಗಿ ಹೋದುವಲ್ಲ ಎಂದು ರೈತರು ಕಳವಳ ಪಡುತ್ತಿದ್ದಾಗ, ರುದ್ರಧಾಮನು ಮಂತ್ರಿಗಳನ್ನು ಆಡಳಿತಾಧಿಕಾರಿಗಳನ್ನು ಕಳುಹಿಸಿ ಅಣೆಕಟ್ಟಿನ ದುರಸ್ತಿ ಮಾಡಿಸಿದನು. ಸರೋವರವನ್ನು ಪುನಃ ನಿರ್ಮಿಸಲು ಪ್ರ೦ಯತ್ನಿಸಿದನು. ಆದರೆ ಅದು ವಿಫಲವಾದಾಗ ರುದ್ರಧಾಮನು ಪಹ್ಲವ ಸಲುಶಾಖನನ್ನು ಅನರ್ತ ಹಾಗೂ ಸೌರಾಷ್ಟ್ರಗಳ ರಾಜ್ಯಪಾಲನನ್ನಾಗಿ ನೇಮಿಸಿದನು. ರುದ್ರಧಾಮನ ಆಡಳಿತ ಸೇವೆ೦ಯಲ್ಲಿದ್ದ ಈ ಪಾರ್ಥಿ೦ಯನ್ ಅಧಿಕಾರಿ೦ಯ ಪ್ರ೦ಯತ್ನ ಫಲಿಸಿ ಮತ್ತೆ ಜಲಾಶ೦ಯವು ತುಂಬಿ ತುಳುಕುವಂತಾಯಿತು. ಹೀಗೆ ರುದ್ರಧಾಮನು ಮೌರ್ಯರ ಕಾಲದಲ್ಲಿ ನಿರ್ಮಾಣಗೊಂಡು ಶಿಥಿಲವಾಗಿದ್ದ 'ಸುದರ್ಶನ ಕೆರೆ'೦ಯನ್ನು ಪುನರ್ ನಿರ್ಮಿಸಿದನು. ಈತನ ನಂತರ 17 ಅರಸರು ಸಾಮ್ರಾಜ್ಯವನ್ನು ರಕ್ಷಿಸಲು ಶ್ರಮಿಸಿದರು. ಆದರೆ ಅಂತಿಮವಾಗಿ ಗುಪ್ತರ ಅರಸ 2ನೇ ಚಂದ್ರಗುಪ್ತ ವಿಕ್ರಮಾದಿತ್ಯ ಶಕಕ್ಷತ್ರಪರ ರಾಜ್ಯವನ್ನು ಕ್ರಿ.ಶ.390 ರಲ್ಲಿ ಆಕ್ರಮಿಸಿದನು. ಕೆಲವು ಚರಿತ್ರೆಕಾರರ ಪ್ರಕಾರ ಶಕವರ್ಷ ಶಕರಿಂದಲೇ ಪ್ರಾರಂಭಗೊಂಡಿತು.

## ಚಷ್ಟಣ

ಪಶ್ಚಿಮದ ಸತ್ರಪರ ಎರಡನೇ ವಿಭಾಗದ ಸಂಸ್ಥಾಪಕರು ಚಷ್ಟಣನು. ಇವನ ಬಗ್ಗೆ ನಮಗೆ ಹೆಚ್ಚಿನ ಮಾಹಿತಿ೦ಯು ದೊರೆತಿಲ್ಲ. ಮಾಳ್ವದ ಕುಶಾಣ ಸತ್ರಪನೆಂದು ಇವನು ತನ್ನ ಆಳ್ವಿಕೆ೦ಯನ್ನು ಪ್ರಾರಂಭಿಸಿದನು. ಉಜ್ಜೈನಿ೦ಯು ಅವನ ರಾಜ್ಯದ ರಾಜಧಾನಿ೦ಯಾಗಿತ್ತು. ಕಾನಿಷ್ಕನ ಮರಣಾನಂತರದ ಒಂದು ದಶಕದಲ್ಲಿ, ನಹಪಾಣನು ಉತ್ತರದ ಕಡೆಗೆ ಮುನ್ನಡೆದನು. ಇದರಿಂದಾಗಿ ಚಷ್ಟಣನ ಮೇಲೆ ವಿಪರೀತ ಪರಿಣಾಮವುಂಟಾಯಿತು. ಅವನ ವಂಶದ ಉಲ್ಲೇಖಗಳಲ್ಲಿ ಶಕ ಸಂವತ್ಸರವನ್ನು ಬಳಸಲಾಗಿದೆ೦ಯೆಂಬುದು ಖಚಿತವಾಗಿದೆ. ಆದ್ದರಿಂದ ಅವನ 52 ನೇ೦ಯ ವರ್ಷವನ್ನು 78+52=180ಕ್ಕೆ ಹೊಂದಿಸಬಹುದು. ಅವನು ಈ ಶಕ ಸಂವತ್ಸರವನ್ನು ಪ್ರಾರಂಭಿಸಿದನೆಂದು ಹೇಳಲಿಕ್ಕೆ ಬರುವುದಿಲ್ಲ. ಅವನಿಗೆ ಹಾಗೂ ಅವನ ಜ೦ಯಧಾಮನು, ತಂದೆ೦ಯು ಮರಣಪಟ್ಟಾಗ, ಉತ್ತರಾಧಿಕಾರಿ೦ಯಾಗಲಿಕ್ಕೆ ತೀರಾ ಚಿಕ್ಕವನಾಗಿದ್ದನು. ಅದೇ ವರ್ಷದ ಒಂದು ಅಂದಾ (ಕಚ್ಛ್) ಶಿಲಾಶಾಸನವು ಚಷ್ಟಣನ ರಾಜ್ಯದ ಶಕಗಳನ್ನು ಆ ಪ್ರದೇಶಕ್ಕೆ ಸೀಮಿತಗೊಳಿಸುತ್ತದೆ. ನಹಪಾಣನ ಸಾರ್ವಭೌಮತ್ವವು, ಗೌತಮೀಪುತ ಶಾತಕರ್ಣಿ೦ಯ ನಂತರದಲ್ಲಿ ಇವನ ಮೇಲೆ ೦ಯಾವ ಪ್ರಕಾರವಾಗಿ ಪರಿಣಾಮ

ಬೀರಿತೆಂಬುದನ್ನು ಇದು ವಿವರಿಸುತ್ತದೆ. ರುದ್ರಧಾಮನು ಚಷ್ಟಣ ವಂಶದ ಅತ್ಯಂತ ಶ್ರೇಷ್ಠ ವ್ಯಕ್ತಿಯಾಗಿದ್ದನು. ಅವನು ಶಾತವಾಹನರ ವಿರುದ್ಧ ತನ್ನೆಲ್ಲಾ ಚಟುವಟಿಕೆಗಳನ್ನು ಕೇಂದ್ರೀಕರಿಸಿದನು.

## 3.20 ಕ್ಷತ್ರಪರ ಕೊಡುಗೆಗಳು

**ಕ್ಷತ್ರಪರ ಆಡಳಿತ**

ಶಕರು ಉತ್ತಮವಾದ ಆಡಳಿತವನ್ನು ನೀಡಿದ್ದಾರೆ. ರಾಜರು ಪ್ರಜಾಹಿತಕಾರಿಯಾಗಿದ್ದರು. ಪ್ರಜೆಗಳು ಸಂತೋಷದಿಂದ ಇರಬೇಕೆಂಬುದು ರಾಜರ ಆಶಯವಾಗಿತ್ತು. ಇದಕ್ಕೆ ಉದಾಹರಣೆಯಾಗಿ 1ನೇ ರುದ್ರಧಾಮನ್ ಪ್ರಕೃತಿಯ ವಿಕೋಪದಿಂದ ಪ್ರಜೆಗಳ ಕಷ್ಟ ಕಾರ್ಪಣ್ಯಗಳನ್ನು ಬಗೆಹರಿಸಲು ಅರಸನು ಹೊಸ ಕರವನ್ನು ಅಥವಾ ಉಷ್ಟಿಯನ್ನು ಹೇರದೆ ಇದ್ದದು ಉತ್ತಮ ನಿದರ್ಶನ. ಇಂತಹ ಸಂದರ್ಭಗಳಲ್ಲಿ ರಾಜರು ಗಂಭೀರ ವಿಷಯಗಳ ಬಗ್ಗೆ ಮಂತ್ರಿ ಪರಿಷತ್ತಿನ ಅಭಿಪ್ರಾಯವನ್ನು ಅರಸನು ಪಡೆಯುತ್ತಿದ್ದನು. ಏನಾದರೂ ಭಿನ್ನಾಭಿಪ್ರಾಯಗಳಿದ್ದಾಗ್ಯೂ ಸಹ ಅರಸನು ಜನರ ಕಲ್ಯಾಣವನ್ನು ಗಮನದಲ್ಲಿಟ್ಟುಕೊಂಡು ಕೊನೆಗೆ ತನಗೆ ಸರಿ ತೋಚಿದ್ದನ್ನು ಮಾಡುತ್ತಿದ್ದನೆಂಬುದು ರಾಜರ ಕರ್ತವ್ಯಗಳಾಗಿತ್ತೆಂಬುದನ್ನು ರುದ್ರಧಾಮನ ಶಾಸನದಲ್ಲಿ ಹೇಳಲಾಗಿದೆ. ರಾಜರು ಪ್ರಜೆಗಳ ಹಿತಕ್ಕಾಗಿ ಕೆರೆಗಳನ್ನು ಜೀರ್ಣೋದ್ಧಾರ ಮಾಡಿದ ನಿದರ್ಶನಗಳು ಕೂಡ ಶಕರ ಆಡಳಿತದಿಂದ ತಿಳಿದು ಬರುತ್ತದೆ. ಶಕರ ಆಡಳಿತದಲ್ಲಿ ರಾಜನಿಗೆ ಸಹಾಯ ಮಾಡಲು ಮಂತ್ರಿಗಳಿದ್ದರು. ಮತಿ ಸಚಿವ (ಸೂಕ್ತ ಸಲಹೆಗಾರರು) 'ಕರ್ಮಸಚಿ' (ಕಾರ್ಯಾಧಿಕಾರಿಗಳು) ಇದ್ದರು.

ರುದ್ರಧಾಮನು ಪಹ್ಲವ ಸುವಿಶಾಕವನ್ನು ಅನರ್ತ ಮತ್ತು ಸೌರಾಷ್ಟ್ರಗಳ ರಾಜ್ಯಪಾಲರಾಗಿ ನೇಮಿಸಿದ್ದನು. ಒಟ್ಟಾರೆಯಾಗಿ ಶಕರ ಆಡಳಿತ ಉತ್ತಮ ರೀತಿಯಲ್ಲಿ ಇತ್ತು ಎಂಬುದಾಗಿ ಹೇಳಬಹುದು.

## 3.21 ಆರ್ಥಿಕತೆ

ಶಕರು ಮೂಲತಃ ವಿದೇಶೀಯರಾಗಿದ್ದರು. ಇವರಿಂದ ವ್ಯಾಪಾರ ಚಟುವಟಿಕೆಗಳು ಅನ್ಯರಾಷ್ಟ್ರಗಳೊಡನೆ ನಡೆಯುತ್ತಿತ್ತು. ಶಕರು ಭಾರತವನ್ನು ವಿದೇಶಗಳ ಸಂಪರ್ಕಕ್ಕೆ ತಂದಿದ್ದರಿಂದ ಅದರ ಆಮದು-ರಫ್ತು ವ್ಯಾಪಾರ ವೃದ್ಧಿಸಿತು. ಶಕರ ಕಾಲದಲ್ಲಿ ನಗರಗಳ ಬೆಳವಣಿಗೆಯಾಗಿತ್ತು. ಕ್ಷತ್ರಪರು ರಾಜರುಗಳು ಜನರ ಹಿತಕ್ಕಾಗಿ ಕೆರೆ-ಕಟ್ಟೆಗಳನ್ನು ಅಭಿವೃದ್ಧಿಗೊಳಿಸುತ್ತಿರುವುದನ್ನು ನೋಡಿದರೆ ಇಲ್ಲಿ ವ್ಯವಸಾಯ ಉತ್ತಮ ರೀತಿಯಲ್ಲಿ ಇತ್ತು ಎನ್ನಬಹುದು. ರಾಜರು ತಮ್ಮ ಹೆಸರಿನಲ್ಲಿ ಅನೇಕ ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ಹೊರಡಿಸಿದರು. ನಹಪಾಣನ ಆಳ್ವಿಕೆಯ ಅವಧಿಯಲ್ಲಿ ನಾಣ್ಯಗಳ ದೊಡ್ಡರಾಶಿಯೊಂದು ನಾಸಿಕ್ ಜಿಲ್ಲೆಯ ಜೊಗಲ್‌ಥಂಬಿಯಲ್ಲಿ ಸಿಕ್ಕಿವೆ. ಹಾಗೆಯೇ ನಹಪಾಣನ ನಾಣ್ಯಗಳು ರಾಜಾಸ್ತಾನದ ಅಜ್ಮೀರ್ ಪ್ರದೇಶದಲ್ಲಿ ದೊರಕಿವೆ. ಬೆಳ್ಳಿಯ ನಾಣ್ಯಗಳ ಆಕಾರ, ತೂಕ ಮತ್ತು ರಚನೆಗಳಲ್ಲಿ ಗ್ರೀಕ್ ರಾಜರ ಹೆಮಿದ್ರಾಕ್ಮಾಗಳನ್ನು ಅನುಸರಿಸುತ್ತಿದ್ದರು. ಶಕರ ಸಾಮ್ರಾಜ್ಯದಲ್ಲಿ ತೆರಿಗೆ ಪದ್ಧತಿಯು ಇತ್ತು. ರಾಜ್ಯದಲ್ಲಿ ಸುಭಿಕ್ಷೆಯಾಗಿದ್ದಾಗ ಮಾತ್ರ ಹೊಸಕರವನ್ನು ಮತ್ತು ಉಷ್ಟಿಯನ್ನು ವಿಧಿಸುತ್ತಿದ್ದರು. ಆದರೆ ಪ್ರಕೃತಿಯ ವಿಕೋಪದ ಸಂದರ್ಭದಲ್ಲಿ ತೆರಿಗೆಗಳನ್ನು ವಿಧಿಸುತ್ತಿರಲಿಲ್ಲ. ಇದನ್ನು ನೋಡಿದರೆ ಇಂದಿನ ಪ್ರಕೃತಿ ವಿಕೋಪಗಳ ನೆರವು ನೀಡುವ ಕಾರ್ಯಕ್ರಮಗಳಿಗೆ ಇವರೇ ಬುನಾದಿ ಎಂದರೆ ತಪ್ಪಾಗಲಾರದು.

## 3.22 ಸಮಾಜ

ಕ್ಷತ್ರಪರು ಮೂಲತಃ ಮಧ್ಯ ಏಷ್ಯಾದಿಂದ ಬಂದವರು. ಭಾರತಕ್ಕೆ ಬಂದ ನಂತರ ವಿದೇಶೀ0ಯರು ಇಲ್ಲಿನ ಧರ್ಮಗಳನ್ನೇ ಸ್ವೀಕರಿಸಿ ಭಾರತೀ0ಯರಾಗಿ ಹೋದರು. ಅವರು ತುರ್ಕರಂತೆ ಪ್ರತ್ಯೇಕತೆ0ಯನ್ನು ಉಳಿಸಿಕೊಳ್ಳಲಿಲ್ಲ. ಶಕರ ರಾಜರು ಶಿವ ವಿಷ್ಣು ಹಾಗೂ ಸೂ0ರ್ಯ ಆರಾಧಕರಾಗಿದ್ದರು. ಕ್ಷತ್ರಪರು ಪೇಟ, ಗಿಡ್ಡತೋಳಿನ ಅಂಗಿ, ಷರಾಯಿ ಮತ್ತು ನೀಳವಾದ ಕೋಟುಗಳನ್ನು ಧರಿಸಲಾರಂಭಿಸಿದರು. ಕ್ಷತ್ರಪರಿಂದ ವಿದೇಶೀ ಟೋಪಿ, ಶಿರಸ್ತ್ರಾಣ ಬೂಟುಗಳನ್ನು ಭಾರತಕ್ಕೆ ಪರಿಚಯಿಸಿದರು. ಕ್ಷತ್ರಪರ ಪ್ರಭಾವದಿಂದ ಭಾರತೀ0ಯರು ಅವರ ಉಡುಗೆ–ತೊಡುಗೆಗಳನ್ನು ಕಲಿತರು ಎಂದು ಹೇಳಬಹುದು. ಒಂದು ರೀತಿ0ಯಲ್ಲಿ ಸಂಸ್ಕೃತಿ0ಯ ವರ್ಗಾವಣೆಗೆ ಅವಕಾಶ ಕಲ್ಪಿಸಿತ್ತು ಎಂದು ಹೇಳಿದರೆ ತಪ್ಪಾಗಲಾರದು.

ಶಕರು ಇಲ್ಲಿಗೆ ಬಂದು ಇಲ್ಲಿನ ರೂಢಿ ಸಂಪ್ರದಾ0ಯಗಳನ್ನು ಧರ್ಮ, ಸಂಸ್ಕೃತಿ ಭಾಷೆಗಳನ್ನು ಅನುಸರಿಸಿ ಭಾರತೀ0ಯರಾಗಿ ಹೋದರು. ಇದನ್ನು ಕ್ಷತ್ರಪರ ಭಾರತೀಕರಣ ಎಂದು ಕರೆ0ಯಲಾಗಿದೆ.

## 3.23 ಧರ್ಮ

ಭಾರತಕ್ಕೆ ಬಂದು ಕ್ಷತ್ರಪರು ಇಲ್ಲಿನ ಧರ್ಮಗಳನ್ನು ಸ್ವೀಕರಿಸಿ ಭಾರತೀ0ಯರಾಗಿ ಹೋದರು. ಕ್ಷತ್ರಪರ ರಾಜರು ಶಿವ, ವಿಷ್ಣು ಹಾಗೂ ಸೂ0ರ್ಯನ ಆರಾಧಕರಾಗಿದ್ದರು. ಶಕರು ವೈದಿಕ ಹಾಗೂ ಜೈನ ಧರ್ಮವನ್ನು ಸ್ವೀಕರಿಸಿದನು. ಜೈನಧರ್ಮಕ್ಕೆ ಹೆಚ್ಚಿನ ಮಹತ್ವವನ್ನು ನೀಡಿದ್ದರು. 1ನೇ ರುದ್ರಧಾಮನು ಬ್ರಾಹ್ಮಣರಿಗೆ ಆಶ್ರ0ಯ ನೀಡಿದನು. ಅದನ್ನು ನೋಡಿದರೆ ರುದ್ರಧಾಮನು ವೈದಿಕ ಧರ್ಮವನ್ನು ಪ್ರೋತ್ಸಾಹಿಸುತ್ತಿದ್ದನು. ರಾಜರುಗಳಿಗೆ ಧರ್ಮಗಳ ಬಗೆ ಸಹಿಷ್ಣುತೆ0ಯು ಇತ್ತು ಎಂದು ಹೇಳಬಹುದು. ಒಟ್ಟಾರೆ ಕ್ಷತ್ರಪರು ವಿದೇಶೀ0ಯರಾದರೂ ಕೂಡ ಭಾರತೀ0ಯ ಧರ್ಮವನ್ನು ಪ್ರೀತಿಸುತ್ತಿದ್ದರು.

## 3.24 ಕಲೆ ಮತ್ತು ವಾಸ್ತುಶಿಲ್ಪ

ಶಕರ ಕಲೆ ಮತ್ತು ವಾಸ್ತುಶಿಲ್ಪದ ಬಗ್ಗೆ ನಿಖರವಾದ ಮಾಹಿತಿಗಳ ಕೊರತೆಯಿಂದ ಕ್ಷತ್ರಪರು ಕಲೆ ಮತ್ತು ವಾಸ್ತುಶಿಲ್ಪಕ್ಕೆ ರಾಜರು ಪ್ರೋತ್ಸಾಹವನ್ನು ನೀಡಿದ್ದರು ಎಂಬುದನ್ನು 1ನೇ ರುದ್ರಧಾಮನ ಶಾಸನದಿಂದ ತಿಳಿ0ಯಬಹುದು. ಭಾರತಕ್ಕೆ ಬಂದ ಶಕರಿಂದ ಭಾರತೀ0ಯ ಕಲೆ ಮತ್ತು ವಾಸ್ತುಶಿಲ್ಪದಲ್ಲಿ ಕೆಲವು ಮಾರ್ಪಾಡುಗಳು ಉಂಟಾಯಿತು. ಶಕರ ಗಿರಿನಗರದ ಸಮೀಪದಲ್ಲಿ ಸುದರ್ಶನ ತಟಾಕವಿದೆ. ಅದರ ಅಣೆಕಟ್ಟು ಕಲ್ಲು ಮತ್ತು ಮಣ್ಣಿನಿಂದ ನಿರ್ಮಿಸಲಾಗಿದೆ. ಸುಂದರವಾದ ಹಾಗೂ ಕಲಾತ್ಮಕ ಶೈಲಿ0ಯಲ್ಲಿ ನಾಣ್ಯಗಳನ್ನು ಟಂಕಿಸುವ ಕಲೆ0ಯನ್ನು ಇವರೇ ಪ್ರಾರಂಭ ಮಾಡಿದ್ದರು ಎಂದು ಹೇಳಬಹುದು.

## 3.25 ಸಾಹಿತ್ಯ

ಶಕರು ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದ್ದರು. 1ನೇ ರುದ್ರಧಾಮನ ಕಾಲದಲ್ಲಿ ಸಂಸ್ಕೃತವು ಬಳಕೆ0ಯಲ್ಲಿತ್ತು. ಈತನ ಗಿರ್ನಾರ್ ಶಾಸನವು ಸಂಸ್ಕೃತದಲ್ಲಿರುವ ಒಂದು ಶ್ರೇಷ್ಠ ಹಾಗೂ ಮೊಟ್ಟ ಮೊದಲ ಶಿಲಾಶಾಸನವಾಗಿದೆ. ವ್ಯಾಕರಣ, ರಾಜ್ಯಶಾಸ್ತ್ರ, ಸಂಗೀತ, ತರ್ಕ 0ಯುದ್ಧಕಲೆಗಳ ಸಂಪೂರ್ಣ ಜ್ಞಾನವನ್ನು ಹೊಂದಿದ್ದನು. ರುದ್ರಧಾಮನು

ಗದ್ಯ ಹಾಗೂ ಪದ್ಯಗಳನ್ನು ರಚಿಸಿದನು. ಇವುಗಳು ಸ್ಪಷ್ಟವಾಗಿ, ರಮ್ಯವಾಗಿ, ಸುಮಧುರವಾಗಿ, ಸೊಗಸಾಗಿ, ಸುಂದರವಾಗಿರುತ್ತದೆ.

ಸಾಹಿತ್ಯಿಕ ದೃಷ್ಟಿಯಿಂದ ಕೂಡ ಗಿರ್ನಾರ್ ಶಾಸನವು ಬಹು ಮಹತ್ವದ್ದು. ಶುದ್ಧ ಸಂಸ್ಕೃತದಲ್ಲಿ ರಚಿತವಾಗಿರುವ ಗದ್ಯ ಕಾವ್ಯ ಪ್ರಕಾರದ ಅತಿ ಪ್ರಾಚೀನ ಲಭ್ಯ ಶಾಸನವಿದು. ಅರ್ಥಾಲಂಕಾರಕ್ಕಿಂತ ಮಿಗಿಲಾದ ಶಬ್ದಾಲಂಕಾರವನ್ನೇ ಪ್ರಬುದ್ಧವಾಗಿ ಬಳಸಿರುವ ಉತ್ಕೃಷ್ಟ ಉದಾಹರಣೆ೦ಯನ್ನು ಅದು ಒದಗಿಸುತ್ತದೆ.

ರುದ್ರಧಾಮನು ಕೇವಲ ದಿಗ್ವಿಜಯಿ ಮಾತ್ರವಾಗಿರದೆ ಸಂಸ್ಕೃತ ಭಾಷೆ೦ಯ ಪೋಷಕನೂ ಕೂಡ ಆಗಿದ್ದನು. ಈತನ ಸಂಸ್ಕೃತದಲ್ಲಿರುವ ರುದ್ರಧಾಮನ ಗಿರ್ನಾರ್ ಶಾಸನ ಪ್ರಥಮ ಸಂಸ್ಕೃತವಾಗಿದ್ದು ಅತ್ಯಂತ ಮಹತ್ವದ ಐತಿಹಾಸಿಕ ದಾಖಲೆ೦ಯಾಗಿದೆ.

## 3.26 ಸಾರಂಶ

ಕ್ಷತ್ರಪರು ಭಾರತೀ೦ಯ ಇತಿಹಾಸಕ್ಕೆ ತಮ್ಮದೆ೦ಯಾದ ಕಾಣಿಕೆ೦ಯನ್ನು ನೀಡಿ ಪ್ರಾಚೀನ ಭಾರತದ ಇತಿಹಾಸದಲ್ಲಿ ಮಹತ್ತರವಾದ ಸ್ಥಾನವನ್ನು ಪಡೆದುಕೊಂಡಿದ್ದಾರೆ ಎಂದು ಹೇಳಬಹುದು.

## 3.27 ಮಾದರಿ ಪ್ರಶ್ನೆಗಳು

1. ಶಾತವಾಹನರ ಮೂಲ ಹಾಗೂ ಆಡಳಿತದ ಬಗ್ಗೆ ಚರ್ಚಿಸಿ.
2. ಶಾತವಾಹನರು ಸಾಂಸ್ಕೃತಿಕ ಕೊಡುಗೆಗಳಿಗೆ ನೀಡಿದ ಹೆಚ್ಚಿನ ಪ್ರೋತ್ಸಾಹವನ್ನು ಕುರಿತು ಚರ್ಚಿಸಿ.
3. ಕ್ಷತ್ರಪರ ರಾಜಕೀ೦ಯ ಬೆಳವಣಿಗೆ೦ಯನ್ನು ಬರೆ೦ಯಿರಿ
4. ಕ್ಷತ್ರಪರ ಕೊಡುಗೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

## 3.28 ಮಾದರಿ ಪ್ರಶ್ನೆಗಳಿಗೆ ಉತ್ತರ

1. ಉತ್ತರ 3.3, 3.6 ಯಿಂದ 3.10
2. ಉತ್ತರ 3.15
3. ಉತ್ತರ 3.18.2
4. ಉತ್ತರ 3.19 ಯಿಂದ 3.24

## 3.29 ಅಧ್ಯ೦ಯನ ಗ್ರಂಥಗಳು


1. ರಾಮ್‌ಶರಣ್ ಶರ್ಮಾ – ಪ್ರಾಚೀನ ಭಾರತ
2. ಜಿ.ಆರ್.ರಂಗಸ್ವಾಮ೦ಯ್ಯ – ಪ್ರಾಚೀನ ಭಾರತ
3. ವೈ.ಗುರುರಾಜಾರಾವ್ – ಆರ್ವಾಚೀನ ಭಾರತ
4. ಆರ್. ಈ. ಶಿವಣ್ಣ – ಭಾರತದ ಇತಿಹಾಸ ಮತ್ತು ಸಂಸ್ಕೃತಿ೦ಯ ಸಮೀಕ್ಷೆ
5. ಹ೦ಯವಂತಕುಳ್ಳಿ – ಪ್ರಾಚೀನ ಭಾರತದ ಕಂದಾ೦ಯ ಪದ್ಧತಿ

6. ಡಿ.ಡಿ. ಕೊಸಾಂಬಿ – ಪ್ರಾಚೀನ ಭಾರತದ ನಾಗರೀಕತೆ ಮತ್ತು ಸಂಸ್ಕೃತಿ.

## 3.30 ಪ್ರಮುಖ ಪದಗಳು

2 ಎಚಿಟಿಚಿರಿಚಿಜಭಿ – ವಿಭಾಗಗಳು

3 ಗ್ಖುಚಿಥಿಭಿ – ಜಿಲ್ಲೆಗಳು

4 ಖಜಜಟಜ – ತಾಲ್ಲೂಕುಗಳು

**ಪ್ರೊ.ಎನ್.ಸರಸ್ವತಿ**
ಇತಿಹಾಸ ಅಧ್ಯ0ಯನ ವಿಭಾಗ
ಮಾನಸ ಗಂಗೋತ್ರಿ
ಮೈಸೂರು ವಿಶ್ವವಿದ್ಯಾನಿಲ0ಯ
ಮೈಸೂರು–570006.

## ಘಟಕ-4: ಬನವಾಸಿಯ ಕದಂಬರು ಮತ್ತು ತಲಕಾಡಿನ ಗಂಗರು


4.0 ಉದ್ದೇಶಗಳು

4.1 ಪೀಠಿಕೆ

4.2 ಕದಂಬರು

- 4.2.1 ಆಡಳಿತ
- 4.2.2 ಧಾರ್ಮಿಕ ಪರಿಸ್ಥಿತಿ

4.3 ಸಾರಾಂಶ

4.4 ತಲಕಾಡಿನ ಗಂಗರು

4.5 ಗಂಗರ ರಾಜಕೀಯ ಇತಿಹಾಸ

4.6 ಆಡಳಿತ ಪದ್ಧತಿ

4.7 ಧಾರ್ಮಿಕ ಸ್ಥಿತಿಗತಿ

4.8 ವಿದ್ಯಾಭ್ಯಾಸ

4.9 ಕಲೆ

4.10 ಸಾಹಿತ್ಯ

4.11 ಸಾರಂಶ

4.12 ಸ್ವಪರೀಕ್ಷೆ ಪ್ರಶ್ನೆಗಳು

4.13 ಸ್ವ ಪರೀಕ್ಷೆ ಪ್ರಶ್ನೆಗಳಿಗೆ ಉತ್ತರ

4.14 ಅಧ್ಯಯನದ ಗ್ರಂಥಗಳು

4.15 ಪ್ರಮುಖ ಪದಗಳು

## ಘಟಕ–4: ಬನವಾಸಿಯ ಕದಂಬರು ಮತ್ತು ತಲಕಾಡಿನ ಗಂಗರು

### 4.0 ಉದ್ದೇಶಗಳು

ಈ ಘಟಕದ ಉದ್ದೇಶ ಬನವಾಸಿಯ ಕದಂಬರು ಮತ್ತು ತಲಕಾಡಿನ ಗಂಗರು ಈ ಎರಡು ಮನೆತನಗಳ ಬಗ್ಗೆ ತಿಳಿದುಕೊಳ್ಳುವಿರಿ ಹಾಗೂ ಈ ಘಟಕದಲ್ಲಿ ಅಡಕವಾಗಿರುವ ಇವರ ಮನೆತನಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ತಿಳಿಯುವಿರಿ.

- ಬನವಾಸಿ ಕದಂಬರ ಮೂಲ ಹಾಗೂ ಆಡಳಿತದ ಬಗ್ಗೆ ತಿಳಿಯುವಿರಿ.
- ಬನವಾಸಿ ಕದಂಬರ ಧಾರ್ಮಿಕ ನೀತಿಯ ಬಗ್ಗೆ ತಿಳಿಯುವಿರಿ.
- ತಲಕಾಡಿನ ಗಂಗರ ಮೂಲ ಹಾಗೂ ಆಡಳಿತದ ಬಗ್ಗೆ ತಿಳಿಯುವಿರಿ.
- ತಲಕಾಡಿನ ಗಂಗರ ಇತಿಹಾಸ, ಕಲೆ, ವಾಸ್ತುಶಿಲ್ಪ, ಸಾಹಿತ್ಯ ಮುಂತಾದವುಗಳ ಬಗ್ಗೆ ತಿಳಿದುಕೊಳ್ಳುವಿರಿ.

### 4.1 ಪೀಠಿಕೆ

ಕ್ರಿ.ಶ.3ನೇ ಶತಮಾನದ ಪೂರ್ವಾರ್ಧದಲ್ಲಿ ಶಾತವಾಹನ ಸಾಮ್ರಾಜ್ಯವು ಕೊನೆಗೊಂಡಿತು. ಅನಂತರ ಸುಮಾರು ಒಂದುನೂರು ವರ್ಷಗಳ ಕಾಲದ ಕರ್ನಾಟಕದ ಇತಿಹಾಸವು ಅಸ್ಪಷ್ಟ. ಶಾತವಾಹನರ ಸಮಕಾಲೀನರಾಗಿಯೋ ಅಥವಾ ಅವರ ಮಾಂಡಲಿಕರಾಗಿಯೊ ಕನ್ನಡನಾಡಿನಲ್ಲಿ ಹಲವು ಸಣ್ಣಪುಟ್ಟ ರಾಜರಿದ್ದರೆಂದು ತಿಳಿದುಬರುತ್ತದೆ. ಬನವಾಸಿ ಪ್ರದೇಶದ ಚೂಟುವಂಶವೂ ಇಂದಿನ ಹೆಗ್ಗಡದೇವನಕೋಟೆ ಪ್ರದೇಶದಲ್ಲಿದ್ದ ಪುನ್ನಾಟದ ರಾಜವಂಶವೂ ಅವುಗಳಲ್ಲಿ ಹೆಸರಿಸಬಹುದಾದ ಮನೆತನಗಳು. ಕದಂಬ ಸಂತತಿಯು ಸ್ಥಾಪನೆಯಾದ ಮೇಲೆ ಚೂಟು ವಂಶವು ಕೊನೆಗೊಂಡಿತು. ಶಿವಮೊಗ್ಗ ಜಿಲ್ಲೆಯಲ್ಲಿ ಸ್ವಲ್ಪ ಕಾಲ ಸೇಂದ್ರಕರು ಆಳುತ್ತಿದ್ದರೆಂಬುದಾಗಿ ತಿಳಿದುಬರುತ್ತದೆ. ಸೇಂದ್ರಕರನ್ನು ಮಯೂರವರ್ಮನು ಸೋಲಿಸುದುದಾಗಿ ತಿಳಿದುಬರುತ್ತದೆ. ತಲಕಾಡಿನ ಗಂಗ ಸಂತತಿಯು ಸ್ಥಾಪನೆಯಾದ ಮೇಲೆ ಪುನ್ನಾಟವು ಅದರ ಅಧೀನದಲ್ಲಿ ಸ್ವಲ್ಪ ಕಾಲ ಮುಂದುವರಿಯಿತು. ಪುನ್ನಾಟದ ರಾಜ ಸ್ಕಾಂದವರ್ಮನ ಪುತ್ರಿ ಜೇಷ್ಠಾದೇವಿಯು ಗಂಗರ ಅವನೀತನ ರಾಣಿಯಾಗಿದ್ದಳು. ಸ್ಕಾಂದವರ್ಮನಿಗೆ ಗಂಡು ಸಂತತಿ ನಶಿಸಿದುದರಿಂದ ಮೊಮ್ಮಗನೂ ಗಂಗ ಪ್ರಭುವೂ ಆದ ದುರ್ವಿನೀತನು ಪುನ್ನಾಟವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು.

ಕ್ರಿ.ಶ.ಎರಡನೆಯ ಶತಮಾನದಿಂದ ಕೋಲಾರ ಜಿಲ್ಲೆ ಹಾಗೂ ಆಂಧ್ರಪ್ರದೇಶ, ತಮಿಳುನಾಡಿನ ಹಲವು ಪ್ರದೇಶಗಳಲ್ಲಿ ಬಾಣರಾಜ ಮನೆತನವು ಸ್ಥಾಪನೆಯಾಗಿತ್ತು. ಪಲ್ಲವರು ಪ್ರಬಲವಾದ ನಂತರ ಸ್ವಲ್ಪ ಕಾಲ ಬಾಣರು ಅವರ ಅಧೀನರಾಗಿದ್ದರು. ಅನಂತರ ತಲಕಾಡಿನ ಗಂಗರು ಪ್ರಬಲರಾಗಿ ಬಾಣರನ್ನು ಆಶ್ರಿತ ರಾಜರನ್ನಾಗಿ ಮಾಡಿಕೊಂಡರು. ಬಾಣರು ರಾಷ್ಟ್ರಕೂಟರ ಹಾಗೂ ಚೋಳರ ಮಾಂಡಲಿಕರಾಗಿ ಹನ್ನೊಂದನೇ ಶತಮಾನದವರೆಗೂ ಆಳುತ್ತಿದ್ದರು. ಶಾತವಾಹನರ ತರುವಾಯ ತೊಂಡೈಮಂಡಲದಲ್ಲಿ ಪ್ರಬಲರಾಗಿ ಅನಂತರ ತಮಿಳುನಾಡಿನ ಮೇಲೆ ಸಾರ್ವಭೌಮತ್ವ ಸ್ಥಾಪಿಸಿದ ಪಲ್ಲವರು ಕನ್ನಡನಾಡಿನ ಉತ್ತರ ಭಾಗದಲ್ಲೂ ತಮ್ಮ ಅಧಿಕಾರವನ್ನು ಸ್ಥಾಪಿಸಿದುದಾಗಿ ತಿಳಿದುಬರುತ್ತದೆ. ಪಲ್ಲವರ ದೊರೆ ಶಿವಸ್ಕಾಂದವರ್ಮನ ಹೀರೆಹಡಗಲಿ ಶಾಸನವೂ ಮತ್ತು ಕದಂಬರಾಜ್ಯ ಸ್ಥಾಪಕ ಮಯೂರನು ಅವರೊಡನೆ ವಿಜಯ ಗಳಿಸಿದ ಸಂಗತಿಯೂ ಆ ಪ್ರದೇಶದ್ಲಲಿ ಸ್ಥಾಪಿತವಾಗಿದ್ದ ಪಲ್ಲವರ ಆಳ್ವಿಕೆಯ ಸುಚನೆಯನ್ನು ನೀಡುತ್ತವೆ.

## 4.2 ಕದಂಬರು

ಕದಂಬರು ಕ್ರಿ.ಶ.4ನೇ ಶತಮಾನದ ಮಧ್ಯಭಾಗದಿಂದ 6ನೇ ಶತಮಾನದ ಕೊನೆಯವರೆಗೆ ಬನವಾಸಿಯಲ್ಲಿ ಆಳಿದರು. ಇವರ ಮೂಲಕ್ಕೆ ಸಂಬಂಧಿಸಿದಂತೆ ಜಿಜ್ಞಾಸೆಗಳೂ, ವಿಭಿನ್ನ ಅಭಿಪ್ರಾಯಗಳೂ ಪ್ರಚಲಿತವಾಗಿವೆ. ಕದಂಬರ ಮೂಲ ಶಾಖೆಯು ಅಳಿದು ಶತಮಾನಗಳ ತರುವಾಯ 11 ಮತ್ತು 12ನೇ ಶತಮಾನಗಳಲ್ಲಿ ಕಲ್ಯಾಣಿ ಚಾಳುಕ್ಯರ ಸಾಮಂತ ಮನೆಗಳಾಗಿ ಆಳ್ವಿಕೆ ನಡೆಸಿದ ಹಾನಂಗಲ್ ಮತ್ತು ಇತರ ಶಾಖೆಗಳ ಶಾಸನದಲ್ಲಿ ಕದಂಬರ ಮೂಲಕ್ಕೆ ಸಂಬಂಧಿಸಿದಂತೆ ಪೌರಾಣಿಕ ವರ್ಣನೆಗಳು ಕಂಡುಬರುತ್ತವೆ. ಶಾಸನಗಳಲ್ಲಿಯೂ ಕೂಡ ವಿಭಿನ್ನ ವರ್ಣನೆಗಳಿವೆ. ಒಂದು ವರ್ಣನೆಯ ಪ್ರಕಾರ ತ್ರಿಲೋಚನ ಕದಂಬ ಎಂಬುವನು ಈ ಸಂತತಿಯ ಮೂಲಪುರುಷ. ಇವನಿಗೆ ಮೂರು ಕಣ್ಣುಗಳಿದ್ದವು ಮತ್ತು ಇವನು ಕದಂಬ ವೃಕ್ಷದಡಿಯಲ್ಲಿ ಬಿದ್ದ ಶಿವನ ಬೆವರಿನಿಂದ ಉತ್ಪತ್ತಿಯಾದನು; ಆದ್ದರಿಂದ ಕದಂಬ ಎಂಬ ಹೆಸರಾಯಿತು; ಇವನು ಕದಂಬ ವೃಕ್ಷದಡಿಯಲ್ಲಿ ಜನಿಸಿದುದರಿಂದ ಇವನ ಸಂತತಿಗೆ ಕದಂಬರೆಂಬ ಹೆಸರಾಯಿತು. ಕದಂಬರ ಮೂಲವನ್ನು ನಿರ್ಣಯಿಸಲು ಇಂತಹ ದಂತಕಥೆಗಳಿಂದ ಉಪಯೋಗವಾಗುವುದಿಲ್ಲ.

ಬನವಾಸಿಯ ಕದಂಬರ ಆರನೇ ಪ್ರಭುವೂ, ಕಾಕುಸ್ಥವರ್ಮನ ಮೊಮ್ಮಗನೂ ಆದ ಶಾಂತಿವರ್ಮನು ತಾಳಗುಂದದಲ್ಲಿ ಸ್ಥಾಪಿಸಿದ ಶಾಸನದ ಪ್ರಕಾರ ಕದಂಬರ ರಾಜ್ಯ ಸ್ಥಾಪಕನಾದ ಮಯೂರನು ಬ್ರಾಹ್ಮಣನಾಗಿದ್ದನು. ಇವನು ಹೆಚ್ಚಿನ ಅಧ್ಯಯನಕ್ಕಾಗಿ ಕಂಚಿಗೆ ಹೋದನು. ಅಲ್ಲಿ ಆಗ ಪಲ್ಲವರು ನೆರವೇರಿಸಿದ ಯಾಗದ ಸಂದರ್ಭದಲ್ಲಿ ಅವರ ಭೃತ್ಯರಿಂದ ಇವನಿಗೆ ಅಪಮಾನವುಂಟಾಗಿ ಕುಪಿತನಾದ ಮಯುರಶರ್ಮನು ತ್ರಿಪರ್ವತದ ಬಳಿಗೆ ಬಂದು ಸೈನ್ಯವನ್ನು ಕಟ್ಟಿ ಪಲ್ಲವರ ಸೈನ್ಯವನ್ನು ಪರಾಜಿತಗೊಳಿಸಿದನೆಂದೂ ಇದರಿಂದ ಪಲ್ಲವರು ಬನವಾಸಿ ಮತ್ತು ಸುತ್ತುಮುತ್ತಿನ ಪ್ರದೇಶವನ್ನು ಅವನಿಗೆ ಬಿಟ್ಟುಕೊಟ್ಟು ಇವನನ್ನು ರಾಜನೆಂದು ಒಪ್ಪಿದರೆಂದೂ ತಿಳಿದುಬರುತ್ತದೆ. ಈ ಘಟನೆಯಿಂದ ಬ್ರಾಹ್ಮಣನಾದ ಮಯೂರಶರ್ಮನು ಮಯೂರವರ್ಮ ಎಂಬ ಕ್ಷತ್ರಿಯನಾಮವನ್ನು ಪಡೆದನೆಂದೂ ಹೇಳಲಾಗಿದೆ. ಆದರೆ ಈ ಶಾಸನವೂ ಕೂಡ ಕದಮಬ ವಂಶದ ಪ್ರಾರಂಭದ ರಾಜರ ಕಾಲದಲ್ಲಿ ಹಾಕಿಸಿದುದಲ್ಲ. ಆದುದರಿಂದ ನಂಬಲರ್ಹವಲ್ಲ.

ತಮಿಳು ಗ್ರಂಥಗಳಲ್ಲಿ ಉಪಲಬ್ಧವಿರುವ ಮಾಹಿತಿಯ ಪ್ರಕಾರ ಕದಂಬರು ದಕ್ಷಿಣ ಭಾರತದ ಕುರಂಬ ಎಂಬ ಪಂಗಡಕ್ಕೆ ಸೇರಿದವರಗಿರಬೇಕೆಂದು ಹಲವು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಪ್ರಾಚೀನ ಕಾಲದ ತಮಿಳು ರಾಜನೊಬ್ಬನು ಸಮುದ್ರತೀರದಲ್ಲಿ ದರೋಡೆಯಲ್ಲಿ ತೊಡಗಿದ್ದ ಈ ಪಂಗಡದ ಹಲವರನ್ನು ಶಿಕ್ಷಿಸಿ ಅವರಿಗೆ ಪವಿತ್ರವೆನಿಸಿದ್ದ ಕದಂಬ ವೃಕ್ಷವನ್ನು ಕಡಿದು ಹಾಕಿಸಿ ಅದರಿಂದ ರಣಭೇರಿಯನ್ನು ಮಾಡಿಸಿದನೆಂದು ಪ್ರಾಚೀನ ತಮಿಳು ಗ್ರಂಥಗಳಿಂದ ತಿಳಿದುಬರುತ್ತದೆ. ಮತ್ತೊಂದು ಹೇಳಿಕೆಯ ಪ್ರಕಾರ ಕದಂಬರು ಕರಾವಳಿ ಪ್ರದೇಶದಲ್ಲಿ ವಾಸಿಸುತ್ತಿದ್ದ ಕುರುಂಬ ಎಂಬ ಪಂಗಡಕ್ಕೆ ಸೇರಿದವರೆಂದೂ ಹಾಗೂ ಅವರು ಕದಂಬ ವೃಕ್ಷದಿಂದ ಮದ್ಯವನ್ನು ತೆಗೆಯುವ ವೃತ್ತಿಯವರೆಂದು ತಿಳಿದುಬರುತ್ತದೆ. ಇವರು ಶಿವ ಮತ್ತು ಮುರುಗನ್ ದೇವತೆಯ ಉಪಾಸಕರಾಗಿದ್ದರೆಂದೂ ಆದುದರಿಂದಲೇ ಮುರುಗನ್ನನ ವಾಸಸ್ಥಾನವಾದ ಕದಂಬ ವೃಕ್ಷವೂ ಆ ದೇವತೆಯ ವಾಹನವಾದ ಮಯೂರವೂ ಇವರಿಗೆ ಪವಿತ್ರ ವಸ್ತುಗಳಾಗಿದ್ದವೆಂದೂ ಈ ಕಾರಣದಿಂದಲೇ ತಮ್ಮ ಸಂತತಿಯನ್ನು ಕದಂಬರೆಂದು ಕರೆದುಕೊಂಡರೆಂದೂ ಹಾಗೂ ಕದಂಬ ರಾಜರು ಮಯೂರವರ್ಮ, ಮೃಗೇಶವರ್ಮ ಮೊದಲಾದ ಹೆಸರುಗಳನ್ನು ಹೊಂದಿದ್ದರೆಂದೂ ತಿಳಿದುಬರುತ್ತದೆ. ಇದು ಸತ್ಯಕ್ಕೆ ಸಮೀಪವಾದ ವಿವರಣೆಯಾಗಿದೆ.

ಮೇಲ್ಕಂಡ ವಿಭಿನ್ನ ಹೇಳಿಕೆಗಳಿಂದ ಕದಂಬರ ಮೂಲವನ್ನು ಸ್ಪಷ್ಟವಾಗಿ ಹೇಳಲಾಗುವುದಿಲ್ಲ ಮತ್ತು ಕದಂಬ ರಾಜ್ಯ ಸ್ಥಾಪನೆಯ ಕಾಲವು ನಿಖರವಾಗಿ ತಿಳಿದುಬರುವುದಿಲ್ಲ. ಇವರ ರಾಜಧಾನಿಯಾಗಿದ್ದ ಬನವಾಸಿ ಅಥವಾ ವೈಜಯಂತೀಪುರವು ಪ್ರಾಚೀನ ಕಾಲದಲ್ಲಿ ಆ ಪ್ರದೇಶದಲ್ಲಿ ಪ್ರಸಿದ್ಧವಾದ ನಗರವಾಗಿತ್ತು. ಅಶೋಕನು

ಬನವಾಸಿ ಅಥವಾ ವನವಾಸಿಗೆ ಮತಪ್ರಚಾರಕ್ಕಾಗಿ ಬೌದ್ಧಭಿಕ್ಷುಗಳನ್ನು ಕಳುಹಿಸಿದುದು ಸರಿಯಷ್ಟೆ. ಗ್ರೀಕ್ ಮತ್ತು ರೋಮನ್ ಬರಹಗಾರರು ಬನವಾಸಿಯು ಶಾತವಾಹನ ಕಾಲದಲ್ಲೇ ಪ್ರಸಿದ್ಧ ವ್ಯಾಪಾರ ಕ್ಷೇತ್ರಗಳಲ್ಲೊಂದೆಂದು ತಿಳಿಸಿರುವರು. ನಾಗಾರ್ಜುನ–ಕೊಂಡದಲ್ಲಿ ದೊರೆತಿರುವ ಪ್ರಾಕೃತ ಶಾಶನಗಳ ಪ್ರಕಾರ ಅಲ್ಲಿನ ನಿವಾಸಿಗಳು ಯಾತ್ರಾರ್ಥಿಗಳಾಗಿ ಬನವಾಸಿಗೆ ಹೋಗಿ ಬೌದ್ಧಾಲಯಗಳನ್ನು ಸಂದರ್ಶಿಸುತ್ತಿದ್ದುದಾಗಿ ತಿಳಿದುಬರುತ್ತದೆ. ಅತ್ಯಂತ ಪ್ರಾಚೀನವು, ಧಾರ್ಮಿಕ ಮತ್ತು ವಾಣಿಜ್ಯ ಕೇಂದ್ರವು ಆಗಿದ್ದ ಬನವಾಸಿಯನ್ನು ಕದಂಬರು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ಈ ಮನೆತನವು ಕ್ರಿ.ಶ.4ನೇ ಶತಮಾನದ ಮಧ್ಯದಲ್ಲಿ ಪ್ರಾರಂಭವಾಯಿತು. ಇವರ ರಾಜ್ಯವು ಶಿವಮೊಗ್ಗ ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ ಮತ್ತು ಧಾರವಾಡ ಜಿಲ್ಲೆಗಳ ಹಲವು ಪ್ರದೇಶಗಳನ್ನೊಳಗೊಂಡಿತ್ತು.

ಕದಂಬ ಸಂತತಿಯ ಸ್ಥಾಪಕನಾದ ಮಯೂರವರ್ಮನ ಆಳ್ವಿಕೆಯ ಘಟನಾವಳಿಗಳನ್ನು ವಿವರಿಸುವ ಸಮಕಾಲೀನ ಐತಿಹಾಸಿಕ ಆಧಾರಗಳು ದೊರೆತಿಲ್ಲ. ಮಯೂರವರ್ಮನು ತ್ರಿಕೂಟ, ಅಭೀರ, ಪಲ್ಲವ, ಪಾರಿಯಾತ್ರ, ಶಕಸ್ಥಾನ, ಸೇಂದ್ರಕ, ಪುನ್ನಾಟ ಮತ್ತು ಮೌಖರಿ ರಾಜ್ಯರನ್ನೆಲ್ಲ ಗೆದ್ದು ಚಂದ್ರವಳ್ಳಿಯ ಹತ್ತಿರ ಒಂದು ಕೆರೆಯನ್ನು ಕಟ್ಟಿಸಿದನೆಂದು ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿಯ ಬಳಿಯಲ್ಲಿ ದೊರೆತಿರುವ ಪ್ರಾಕೃತ ಶಾಸನದಲ್ಲಿ ತಿಳಿಸಿದೆ. ಆದರೆ ಗಂಗಾನದಿ ತೀರದಲ್ಲಿದ್ದ ಮೌಖರಿ ರಾಜ್ಯವನ್ನು ಪಂಜಾಬ್ ಮತ್ತು ಸಿಂಧ್ ಪ್ರಾಂತದಲ್ಲಿದ್ದ ದೂರದ ಪ್ರದೇಶಗಳನ್ನು ಮಯೂರವರ್ಮನು ಗೆದ್ದನೆಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಚಂದ್ರವಳ್ಳಿಯ ಶಾಸನದ ವಿಷಯವಾಗಿ ಭಿನ್ನಾಭಿಪ್ರಾಯಗಳಿವೆ. ಈ ಶಾಸನವನ್ನು ಇತ್ತೀಚೆಗೆ ಓದಿ ಹಿಂದಿನ ತಪ್ಪುಗಳನ್ನು ಮನಗಾಣಿಸಲಾಗಿದೆ. ಮಯೂರವರ್ಮನು ಕ್ರಿ.ಶ.345 ರಿಂದ 360 ರವರೆಗೂ ಆಳಿದನೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಅವನ ಆಳ್ವಿಕೆಯ ಕಾಲವನ್ನು ತಿಳಿಯಲು ಯಾವ ಸಮಕಾಲೀನ ಆಧಾರಗಳೂ ದೊರೆತಿಲ್ಲ. ಮಯೂರವರ್ಮನ ನಂತರ ಕ್ರಮವಾಗಿ ಅವನ ಮಗನಾದ ಕಂಗವರ್ಮನೂ, ಮೊಮ್ಮಗನಾದ ಭಗೀರಥನೂ ಆಳಿದರು. ಮಯೂರವರ್ಮನ ಆಳ್ವಿಕೆಯ ಕಾಲದಂತೆಯೇ ಇವರ ಆಳ್ವಿಕೆಯ ಕಾಲದ ಬಗ್ಗೆಯೂ ಹೆಚ್ಚಿನ ವಿವರಗಳು ಲಭ್ಯವಾಗಿಲ್ಲ. ಕದಂಬರ ಕಾಲದ ಕೆಲವು ಪದ್ಮಟಂಕಗಳ ಮೇಲೆ 'ಭಗೀ' ಎಂಬ ಅಕ್ಷರಗಳು ಕಂಡುಬರುವುದರಿಂದ ಇವು ಭಗೀರಥನ ಕಾಲಕ್ಕೆ ಸೇರಿದವುಗಳೆಂದು ಊಹಿಸಲಾಗಿದೆ. ಭಗೀರಥನ ತರುವಾಯ ಆಳ್ವಿಕೆಯನ್ನಾರಂಭಿಸಿದ ರಘುವಿಗೆ ಮಕ್ಕಳಿಲ್ಲದ ಕಾರಣ, ಅವನ ಅಲ್ಪಕಾಲದ ಆಳ್ವಿಕೆಯ ಅನಂತರ, ಹಲಸಿ ಪ್ರಾಂತ್ಯದಲ್ಲಿ ಆಳುತ್ತಿದ್ದ, ಅವನ ತಮ್ಮನಾದ ಕಾಕುಸ್ಥವರ್ಮನು ಕದಂಬ ಸಿಂಹಾಸನವನ್ನೇರಿದನು.

ಬನವಾಸಿಯ ಕದಂಬ ರಾಜರಲ್ಲಿ ಅತ್ಯಂತ ಪ್ರಸಿದ್ಧನಾದವನೆಂದರೆ ಕಾಕುಸ್ಥವರ್ಮನು. ಇವನ ಆಳ್ವಿಕೆಯ ಕಾಲ ಕ್ರಿ.ಶ.ಸುಮಾರು 420 ರಿಂದ 350 ರವರೆಗೆಂದು ತಿಳಿಯಲಾಗಿದೆ, ತನ್ನ ಅಣ್ಣನಾದ ರಘುವಿನ ಕಾಲದಲ್ಲಿ ಅನೇಕ ಯುದ್ಧಗಳಲ್ಲಿ ಬಾಗವಹಿಸಿದ್ದ ಕಾರಣ ಇವನು ಸ್ವಾಭಾವಿಕವಾಗಿಯೇ ನುರಿತ ಯೋಧನಾಗಿದ್ದನು. ಹಲಸಿಯ ಒಂದು ಶಾಸನದಿಂದ ಕದಂಬ ದಳಪತಿಗಳೊಲ್ಲಬ್ಬನಾದ ಶೃತಕೀರ್ತಿಯು ಯುದ್ಧದಲ್ಲಿ ಪ್ರಾಣಾಪಾಯಕ್ಕೊಳಗಾಗಿದ್ದ ಕಾಕುಸ್ಥವರ್ಮನನ್ನು ರಕ್ಷಿಸಿದ ಅಂಶವು ತಿಳಿದುಬರುತ್ತದೆ. ಕಾಕುಸ್ಥವರ್ಮನು ಯುದ್ಧ ಮತ್ತು ಆಡಳಿತದಲ್ಲಿ ಒಳ್ಳೆ ಅನುಭವವನ್ನು ಪಟ್ಟಕ್ಕೆ ಬರುವ ಮೊದಲೇ ಗಳಿಸಿದ್ದನೆಂದು ತಿಳಿದುಬರುತ್ತದೆ. ಅಲ್ಲದೆ ತಾಳಗುಂದ ಶಾಸನವು ಆತನನ್ನು ಧರ್ಮಿಷ್ಟನಾದ ಪ್ರಭುವಾಗಿದ್ದನೆಂದೂ, ಕದಂಬ ಕುಲಭೂಷಣಪ್ರಾಯನೆಂದೂ ವರ್ಣಿಸಿದೆ. ಇದೇ ಶಾಸನದ ಪ್ರಕಾರ ಧಾರ್ಮಿಕ ಕೇಂದ್ರವಾಗಿದ್ದ ತಾಳಗುಂದ ಅಥವಾ ತಾಣಗುಂದೂರು ಗ್ರಾಮಕ್ಕೆ ಬೇಟೆಯ ನಿಮಿತ್ತ ಹೋಗಿದ್ದ ಕಾಕುಸ್ಥವರ್ಮನು ಅಲ್ಲಿ ಪ್ರಣವೇಶ್ವರ ಎಂಬ ಕೆರೆಯನ್ನು ಕಟ್ಟಿಸಿದನೆಂದು ತಿಳಿದುಬರುತ್ತದೆ. ತಾಣಗುಂದೂರಿನ ಬಳಿ ತಟಾಕಕ್ಕೆ ಇಂದಿಗೂ ಪಣವನಕೆರೆ ಎಂಬ ಹೆಸರಿದೆ. ಪ್ರಣವೇಶ್ವರ ದೇವಾಲಯವಿದ್ದ ಈ ಸ್ಥಳಕ್ಕೆ ಶಾತವಾಹನರ ಪ್ರಭುಗಳು ಭೇಟಿ ಕೊಡುತ್ತಿದ್ದರೆಂಬ ಅಂಶವೂ ತಿಳಿದುಬರುತ್ತದೆ.

ಕಾಕುಸ್ಥವರ್ಮನ ಕೀರ್ತಿ ವಿಶೇಷವಾಗಿ ವ್ಯಾಪಿಸಿ ಭಾರತದ ಬೇರೆ ಬೇರೆ ಪ್ರದೇಶದಲ್ಲಿ ಆಳುತ್ತಿದ್ದ ರಾಜರು ಕದಂಬ ಮನೆತನದೊಡನೆ ವೈವಾಹಿಕ ಸಂಬಂಧಗಳನ್ನು ಬೆಳೆಸಿದ ಅಂಶವೂ ತಿಳಿದುಬರುತ್ತದೆ. ಚಂದ್ರಗುಪ್ತ ವಿಕ್ರಮಾದಿತ್ಯನ ಮಗನಾದ ಕುಮಾರಗುಪ್ತನು, ಕಾಕುಸ್ಥವರ್ಮನ ಒಬ್ಬಳು ಪುತ್ರಿಯನ್ನೂ, ವಿದರ್ಭದ ವಾಕಾಟಕ ಅರಸ ನರೇಂದ್ರನು ಇನ್ನೊಬ್ಬ ಪುತ್ರಿಯನ್ನೂ ಹಾಗೂ ಪಶ್ಚಿಮ ತೀರದಲ್ಲಿ ಆಳುತ್ತಿದ್ದ ಅಳುಪರಾಜನು, ಕಾಕುಸ್ಥವರ್ಮನ ಮತ್ತೊಬ್ಬ ಮಗಲಾದ ಲಕ್ಷ್ಮಿಯನ್ನೂ ವಿವಾಹವಾಗಿದ್ದರೆಮದೂ ತಿಳಿದುಬರುತ್ತದೆ. ಅಲ್ಲದೆ ಕುಂತಳೇಶ್ವರ ದೌತ್ಯದಿಂದ ಗುಪ್ತ, ವಾಕಾಟಕ ಹಾಗೂ ಕದಂಬ ಮನೆತನಗಳಿಗೆ ಸಖ್ಯವಿತ್ತೆಂದು ಗೊತ್ತಾಗುತ್ತದೆ. ಕಾಕುಸ್ಥವರ್ಮನ ಮತ್ತೊಬ್ಬ ಮಗಳು ತಲಕಾಡು ಗಂಗರಾಜನಾದ ಮಾಧವನನ್ನು ವಿವಾಹವಾಗಿದ್ದಳು.

ತನ್ನ ಮೂವರು ಪುತ್ರರಾದ ಶಾಂತಿವರ್ಮ, ಮಾಂಧಾತರ್ಮ ಹಾಗೂ ಕೃಷ್ಣವರ್ಮ ಇವರಲ್ಲಿ ಕಾಕುಸ್ಥವರ್ಮನು ತಾನು ಜೀವಿತವಿರುವಾಗಲೇ ಹಿರಿಯ ಪುತ್ರನಾದ ಶಾಂತಿವರ್ಮನಿಗೆ ಪಟ್ಟಕಟ್ಟಿದನು. ಆದರೆ ಶಾಂತಿವರ್ಮನ ಅಕಾಲ ಮರಣದ ಪ್ರಯುಕ್ತ ರಾಜ್ಯಭಾರವನ್ನು ಕಾಕುಸ್ಥವರ್ಮನೇ ಪುನಃ ವಹಿಸಿಕೊಳ್ಳಬೇಕಾಯಿತು. ಅನಂತರ ಶಾಂತಿವರ್ಮನ ಮಗನಾದ ಯುವರಾಜ ಮೃಗೇಶನು ಪಟ್ಟಕ್ಕೆ ಬಂದನು. ಮೃಗೇಶವರ್ಮನ ಕಾಲದಲ್ಲಿ ಪಲ್ಲವರಾಜನಾದ ಸಿಂಹವರ್ಮ ಮತ್ತು ವಿಜಯಸಾಂದವರ್ಮರು ಕದಂಬ ರಾಹಜ್ಯದ ಮೇಲೆ ದಂಡೆತ್ತಿ ಬಂದು ಪೂರ್ವ ಭಾಗಗಳನ್ನು ಆಕ್ರಮಿಸಿಕೊಂಡರು. ಆದರೆ ಇವರನ್ನು ಎದುರಿಸಿದ ಮೃಗೇಶವರ್ಮ ಹಾಗೂ ಕಾಕುಸ್ಥವರ್ಮನ ಅಳಿಯನಾದ ಅಳುಪ ರಾಜ ಪಶುಪತಿಯೂ ಸೇರಿ ಪಲ್ಲವ ಸಾಮಂತರಾದ ಬಾಣ, ಸೇಂದ್ರಕ ಮೊದಲಾದವರನ್ನು ಸೋಲಿಸಿದರು.

ಕಾಕುಸ್ಥವರ್ಮನ ಮರಣಾನಂತರ ಪಟ್ಟಕ್ಕೆ ಬಂದ ಮೃಗೇಶವರ್ಮನ ಕಾಲದಿಂದ ಕದಂಬರಲ್ಲಿ ದಾಯಾದಿ ಕಲಹವು ಪ್ರಾರಂಭವಾಯಿತು. ಪಲ್ಲವರ ಸಹಾಯ ಪಡೆದ ಮೃಗೇಶವರ್ಮನ ಚಿಕ್ಕಪ್ಪನಾದ ಕೃಷ್ಣವರ್ಮನು, ಮೃಗೇಶವರ್ಮನನ್ನು ಸೋಲಿಸಿ ತ್ರಿಪರ್ವತ ಅಥವಾ ಉಚ್ಚಂಗಿಯಲ್ಲಿ ತನ್ನ ಆಡಳಿತವನ್ನು ಸ್ಥಾಪಿಸಿದನು. ಧರ್ಮಸಹಿಷ್ಣುವಾಗಿದ್ದ ಮೃಗೇಶವರ್ಮನು ಸ್ವತಃ ವೈದಿಕ ಮತೀಯನಾಗಿದ್ದರೂ, ಜೈನಮತೀಯರಿಗೆ ಉದಾರ ದಾನಗಳನ್ನು ನೀಡಿದನು. ಕೈಕಯ ಸಮತತಿಯ ಪ್ರಭಾವತಿ ಎಂಬುವಳು ಮೃಗೇಶವರ್ಮನ ರಾಣಿಯಾಗಿದ್ದಳು. ಮೃಗೇಶವರ್ಮನ ಮೂವರು ಪುತ್ರರಾದ ರವಿವರ್ಮ, ಭಾನುವರ್ಮ ಹಾಗೂ ಶಿವರಥದಲ್ಲಿ ಆತನ ಮರಣದ ನಂತರ ರವಿವರ್ಮನು ಪಟ್ಟಕ್ಕೆ ಬಂದನು. ಮೃಗೇಶವರ್ಮನ ಕಾಲದಲ್ಲಿ ಆರಂಭವಾದ ದಾಯಾದಿ ಕಲಹವು ಈತನ ಕಾಲದಲ್ಲೂ ಮುಂದುವರೆಯಿತು. ತ್ರಿಪರ್ವತದ ಪದಂಬ ಶಾಖೆಯ ಒಂದನೇ ಕೃಷ್ಣವರ್ಮನ ಮಗ ವಿಷ್ಣುವರ್ಮ ಮತ್ತು ಮೊಮ್ಮಗ ಎರಡನೇ ಕೃಷ್ಣವರ್ಮ ಮೊದಲಾದವರು ಬನವಾಸಿ ಕದಂಬರೊಡನೆ ದಾಯಾದೀ ಕಲಹವನ್ನು ಮುಂದುವರಿಸಿದರು. ಪರಿಣಾಮವಾಗಿ ಎರಡು ಮನೆತನಗಳು ಅವನತಿಯ ಹಾದಿ ಹಿಡಿದವು. ಶತ್ರುಗಳನ್ನು ನಿರಂತರವಾಗಿ ಎದುರಿಸಿ ರಾಜ್ಯವನ್ನು ಶತ್ರುಗಳು ಸಂಪೂರ್ಣವಾಗಿ ಆಕ್ರಮಿಸದಂತೆ ಮಾಡಲು ಕಾರಣರಾದವರೆಂದರೆ ಬನವಾಸಿಯ ರವಿವರ್ಮ ಮತ್ತು ಅವನ ಮಗ ಹರಿವರ್ಮ. ಬನವಾಸಿ ಕದಂಬರ ಕಡೆಯ ಅರಸನೆಂದರೆ ರವಿವರ್ಮ. ಈತನು ಕ್ರಿ.ಶ.6ನೇ ಶತಮಾನದ ಉತ್ತರಾರ್ಧದವರೆಗೂ ಸ್ವತಂತ್ರವಾಗಿ ಆಳುತ್ತಿದ್ದನು. ಆ ವೇಳೆಗೆ ಪ್ರಾಬಲ್ಯಕ್ಕೆ ಬಂದ ಬಾದಾಮಿ ಚಾಳುಕ್ಯ ವಂಶದ 1ನೇ ಪುಲಿಕೇಶಿ ಮತ್ತು ಆತನ ಮಗ 1ನೇ ಕೀರ್ತಿವರ್ಮನು ಕದಂಬರನ್ನು ಸಂಪೂರ್ಣವಾಗಿ ಸೋಲಿಸಿದರು. ಕ್ರಿ.ಶ.11 ಮತ್ತು 12ನೇ ಶತಮಾನದಲ್ಲಿ ಬನವಾಸಿ, ಹಾನಂಗಲ್ ಮತ್ತು ಗಟಿವೆ ಪ್ರದೇಶಗಳಲ್ಲಿ ಉಪಶಾಖೆಗಳನ್ನಾರಂಭಿಸಿದ ಕದಂಬ ಶಾಖೆಯ ಅರಸರು ಕಲ್ಯಾಣಿ ಚಾಳುಕ್ಯರಿಗೆ ಸಾಮಂತರಾಗಿ ಆಳ್ವಿಕೆ ನಡೆಸಿದರು.

### 4.2.1 ಆಡಳಿತ

ಬನವಾಸಿ 12000ದ ನಾಡು ಎಂದು ಪ್ರಸಿದ್ಧವಾಗಿದ್ದ ಕದಂಬರ ರಾಜ್ಯ, ಇಂದಿನ ಶಿವಮೊಗ್ಗ, ಧಾರವಾಡ ಹಾಗೂ ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನೊಳಗೊಂಡಿತ್ತು. ರಾಜತ್ವವು ವಂಶಪಾರಂಪರ್ಯವಾಗಿತ್ತು. ಹಾಗೂ

ರಾಜನೇ ಆಡಳಿತ ವ್ಯವಸ್ಥೆಯ ಉನ್ನತಾಧಿಕಾರಿಯಾಗಿದ್ದನು. ಹಿರಿಯ ಮಗನೆ ಉತ್ತರಾಧಿಕಾರಿಯಾಗುವ ಸಂಪ್ರದಾಯ ರೂಢಿಯಲ್ಲಿತ್ತು. ರಾಜ್ಯಾಡಳಿತದ ಸಹಾಯಕ್ಕಾಗಿ ಮಂತ್ರಿಗಳನ್ನು ದಂಡನಾಯಕರನ್ನು ಹಾಗೂ ಇತರ ಅಧಿಕಾರ ವರ್ಗವನ್ನು ನೇಮಿಸಲಾಗಿತ್ತು. ಅರಸನು ನಿರಮಕುಶಾಧಿಕಾರಿಯಾಗಿರಲಿಲ್ಲ. ಧರ್ಮಶಾಸ್ತ್ರಗಳನ್ನು ಅರಿತಿದ್ದ ಕದಂಬ ರಾಜರು ಯಾಗಗಳನ್ನಾಚರಿಸುತ್ತಿದ್ದರು. 1ನೇ ಕೃಷ್ಣವರ್ಮನು ವೈದಿಕ ಸಂಪ್ರದಾಯಕ್ಕನುಗುಣವಾಗಿ ಅಶ್ವಮೇಧ ಯಾಗವನ್ನು ಆಚರಿಸಿದನು. ರಾಜನೀತಿಶಾಸ್ತ್ರ ನಿಪುಣರಾಗಿದ್ದ ಕದಂಬರು ನೆರೆಯ ರಾಜ್ಯಗಳೊಡನೆ ವಿವಾಹ ಸಂಬಂಧಗಳನ್ನೇರ್ಪಡಿಸುವ ಮೂಲಕ ಬೇರೆ ಬೇರೆ ರಾಜ್ಯಗಳ ದಾಳಿಗಳನ್ನು ತಡೆಯುವುದರಲ್ಲಿ ಯಶಸ್ವಿಯಾಗಿದ್ದರು. ಆದರೆ ಪಲ್ಲವರೊಡನೆ ನಿರಮತರ ಹೋರಾಟ ನಡೆಸುತ್ತಿದ್ದ ಕಾರಣ ಪ್ರಬಲ ಯೋಧ ಪಡೆಯನ್ನೂ ಹೊಂದಿದವರಾಗಿದ್ದರು. ರಾಜ್ಯವನ್ನು ಪ್ರಾಂತಗಳನ್ನಾಗಿ ವಿಂಗಡಿಸಿದ್ದರು. ಪ್ರಾಂತ್ಯಾಧಿಕಾರಿಗಳು ರಾಜನ ನಿರೂಪದ ಪ್ರಕಾರ ಪ್ರಾಂತಗಳ ಆಡಳಿತ ನಿರ್ವಹಿಸುತ್ತಿದ್ದರು. ಸಾಧಾರಣವಾಗಿ, ಯುವರಾಜ ಹಾಗೂ ಇತರ ರಾಜಕುಮಾರರು ಪ್ರಾಂತ್ಯಾಧಿಕಾರಿ-ಗಳಾಗಿ ನೇಮಿಸಲ್ಪಡುತ್ತಿದ್ದರು. ಆಡಳಿತದ ಒಂದು ಮುಖ್ಯ ಘಟಕವಾಗಿದ್ದ ಗ್ರಾಮವು ಒಬ್ಬ ಮುಖಂಡನನ್ನು ಹೊಂದಿರುತ್ತಿತ್ತು. ಗ್ರಾಮದ ಮುಖಂಡನನ್ನು ಗವುಂಡನೆಂದು ಕರೆಯಲಾಗುತ್ತಿತ್ತು. ಅಲ್ಲದೆ ಗ್ರಾಮ ಸಭೆಗಳೂ ಅಸ್ಥಿತ್ವದಲ್ಲಿದ್ದವು. ರಾಜನು ಆಗಾಗ ರಾಜ್ಯದಲ್ಲಿ ಸಂಚರಿಸಿ ಪ್ರಜೆಗಳ ನೆಮ್ಮದಿಗಾಗಿ ಅನೇಕ ಸಾರ್ವಜನಿಕ ಕಾರ್ಯಗಳನ್ನು ಕೈಗೊಳ್ಳುತ್ತಿದ್ದನು. ವ್ಯವಸಾಯ ಮತ್ತು ವ್ಯಾಪಾರಗಲು ಉತ್ತಮ ಸ್ಥಿತಿಯಲ್ಲಿದ್ದವು ಹಾಗೂ ವೃತ್ತಿಸಂಘಗಳೂ ಅಸ್ಥಿತ್ವದಲ್ಲಿದ್ದವು. ಕದಂಬ ನಾಡಿನಲ್ಲಿ ಚಲಾವಣೆಯಲ್ಲಿದ್ದ ನಾಣ್ಯಗಳೆಂದರೆ ಪದ್ಮಟಂಕ, ಪಣ ಹಾಗೂ ಗದ್ಯಾಣ.

### 4.2.2 ಧಾರ್ಮಿಕ ಪರಿಸ್ಥಿತಿ

ಕದಂಬ ಅರಸರು ಶೈವ ಪಂಥಕ್ಕೆ ಸೇರಿದ ವೈದಿಕ ಮತಾವಲಂಬಿಗಳಾಗಿದ್ದರು. ವರ್ಣಾಶ್ರಮ ಧರ್ಮವು ರೂಢಿಯಲ್ಲಿತ್ತು. ಆರಂಭ ಕಾಲದಲ್ಲಿ ತಾಳಗುಂದದ ಪ್ರಣವೇಶ್ವರ, ಕದಂಬರ ಆರಾಧ್ಯ ದೈವವಾಗಿತ್ತು. ಮಯೂರವರ್ಮನು ಅಹಿಚ್ಛತ್ರದಿಂದ ಅನೇಕ ಬ್ರಾಹ್ಮಣ ಕುಟುಂಬಗಳನ್ನು ಆಮಂತ್ರಿಸಿ ಕದಂಬ ನಾಡಿನಲ್ಲಿ ವೇದಾಧ್ಯಯನ ಕಾರ್ಯವು ನಿರ್ವಿಘ್ನವಾಗಿ ಮುಂದುವರಿಯುವಂತೆ ಮಾಡಿದ್ದನೆಂದು ಕದಂಬ ಶಾಖೆಯ ಶಾಸನಗಳಿಂದ ತಿಳಿದುಬರುತ್ತದೆ. ಅನಂತರ ಸ್ಥಾಪಿತವಾದ ಕದಂಬ ಶಾಖೆಯ ಅರಸರು ಮಾಲತಿಮಧುಕೇಶ್ವರನನ್ನು ಆರಾಧಿಸುತ್ತಿದ್ದರು. ಬ್ರಾಹ್ಮಣರಿಗೂ, ವಿದ್ಯಾಭ್ಯಾಸಕ್ಕೂ ಆದ್ಯತೆಯನ್ನು ನೀಡಿದ್ದರು. ಮೃಗೇಶವರ್ಮನು ಧರ್ಮಮಹಾರಾಜನೆಂಬ ಬಿರುದನ್ನು ಹೊಂದಿದ್ದನು. ಮೃಗೇಶವರ್ಮನ ಮಗ ರವಿವರ್ಮನು ಗೋವಿಂದಸ್ವಾಮಿ ಎಂಬ ಬ್ರಾಹ್ಮಣ ವಿದ್ವಾಂಸನಿಗೆ ಎರಡು ಗ್ರಾಮಗಳನ್ನು ದತ್ತಿಯಾಗಿ ಕೊಟ್ಟು ಪುರಸ್ಕರಿಸಿದನು. ಅವರು ಅನೇಕ ಅಗ್ರಹಾರಗಳನ್ನು ಸ್ಥಾಪಿಸಿ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಿದ್ದರು. ಅಂದಿನ ಪ್ರಸಿದ್ಧ ಧಾರ್ಮಿಕ ಕೇಂದ್ರಗಳೆಂದರೆ ಬನವಾಸಿ, ತಾಳಗುಂದ ಮೊದಲಾದ ಪಟ್ಟಣಗಳು.

ಅನ್ಯಮತ ಸಹಿಷ್ಣುಗಳಾದ ಕದಮಬರು ತಾವು ಅನುಸರಿಸುತ್ತಿದ್ದ ವೈದಿಕಮತವೇ ಅಲ್ಲದೆ, ಜೈನ, ಬೌದ್ಧ ಮೊದಲಾದ ಧರ್ಮಗಳಿಗೆ ಸಮನಾದ ಪ್ರೋತ್ಸಾಹ ನೀಡಿದ್ದರು. ಜೈನ ಯತಿಗಳಿಗೂ, ಸಂಸ್ಥೆಗಳೀಗೂ ಪ್ರೋತ್ಸಾಹ ನೀಡಿದ್ದ ಹರಿವರ್ಮನು ಹಲಸಿಯಲ್ಲಿ ಬಸದಿಯೊಂದನ್ನು ಸ್ಥಾಪಿಸಲು ಪ್ರೋತ್ಸಾಹ ನೀಡಿದುದಲ್ಲದೆ, ಭೂಮಿಯನ್ನು ದತ್ತಿಯಾಗಿ ಕೊಟ್ಟು ಅಲ್ಲಿ ಪ್ರತಿವರ್ಷವೂ ಆಚರಿಸಲ್ಪಡುತ್ತಿದ್ದ ಮಹೋತ್ಸವ ಯಶಸ್ವಿಯಾಗಿ ಮುಂದುವರಿಯಲು ಸಹಕಾರಿಯಾದನು. ಕ್ರಿ.ಶ.3ನೇ ಶತಮಾನದಲ್ಲಿ ಅಶೋಕನ ಪರಿಶ್ರಮದಿಂದ ಬನವಾಸಿಯಲ್ಲಿ ಹಬ್ಬಿದ ಬೌದ್ಧಮತ, ಅಲ್ಲಿ ಅನೇಕ ಸ್ತೂಪಗಳ ರಚನೆಗೆ ಪ್ರೇರಣೆಯಾಗಿತ್ತು. ಕ್ರಿ.ಶ.7ನೇ ಶತಮಾನದಲ್ಲಿ ಬನವಾಸಿಗೆ ಭೇಟಿ ನೀಡಿದ್ದ ಹ್ಯೂಯನ್‌ತ್ಸಾಂಗನ ಅಭಿಪ್ರಾಯದಂತೆ ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಂಘಾರಾಮಗಳಿದ್ದವು.

ಈ ರೀತಿಯಲ್ಲಿ ಪರಮತ ಸಹಿಷ್ಣುಗಳಾದ ಕದಮಬ ಅರಸರು ವೈದಿಕ ದೇವಾಲಯಗಳ ಹಾಗೂ ಜೈನ ಬಸದಿಗಳ ರಚನೆಗೆ ಪ್ರೋತ್ಸಾಹವನ್ನಿತ್ತಿದ್ದರು. ಹಲಸಿಯ ಜೈನ ಬಸದಿ ಮೃಗೇಶವರ್ಮನ ಕಾಲದಲ್ಲಿ ನಿರ್ಮಾಣವಾಯಿತು. ಈ ಬಸದಿಯು ಗರ್ಭಗೃಹ, ಶುಕನಾಸಿ ಮತ್ತು ಮುಖಮಂಟಪಗಳಿಂದ ಕೂಡಿದೆ. ಹಲಸಿಯ ಹಟ್ಟಿಕೇಶ್ವರ, ಸುವರ್ಣೇಶ್ವರ ಹಾಗೂ ಕಲ್ಲೇಶ್ವರ, ದೇವಾಲಯಗಳನ್ನು ಕದಂಬ ಶೈಲಿಯಲ್ಲಿ ಕಟ್ಟಲಾಗಿದೆ. ಆ ಕಾಲದಲ್ಲಿ ರಚಿತವಾದ ಅನೇಕ ದೇವಾಲಯಗಳು ಈಗ ಶಿಥಿಲವಾಗಿವೆ.

## 4.3 ಸಾರಂಶ

ಮೂಲ ಕದಂಬ ಸಂತತಿಯು ಕ್ರಿ.ಶ.6ನೇ ಶತಮಾನದ ವೇಳೆಗೆ ಅವನತಿ ಹೊಂದಿತು. ಬಾದಾಮಿ ಚಾಳುಕ್ಯ ರಾಜರು ಕದಂಬರನ್ನು ಸೋಲಿಸಿ ಹಿರಿದಾದ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಅವರು ಕದಂಬರ ಆಳ್ವಿಕೆಯ ಕಾಲದಲ್ಲಿ ಆಚರಣೆಗೆ ಬಂದಿದ್ದ ಸಾಂಸ್ಕೃತಿಕ ಸಂಪ್ರದಾಯಗಳನ್ನು ಮುಂದುವರಿಸಿದರು. ಕಲ್ಯಾಣಿಚಾಳುಕ್ಯರ ಕಾಲದಲ್ಲಿ ನಾಗರಖಂಡ, ಹಾನಂಗಲ್ ಮತ್ತು ಗೋವೆ ಮೊದಲಾ ಪ್ರದೇಶಗಳಲ್ಲಿ ಕದಂಬ ಶಾಖೆಗಳು ಸ್ಥಾಪನೆಯಾದವು. ಪ್ರಾರಂಭದಲ್ಲಿ ಈ ಶಾಖೆಗಳ ಅರಸರು ಕಲ್ಯಾಣಿ ಚಾಳುಕ್ಯ ಸಾಮ್ರಾಟರ ಅಧೀನ ರಾಜರಾಗಿದ್ದರು. ಕಲ್ಯಾಣಿ ಚಾಳುಕ್ಯರ ತರುವಾಯ ಸ್ವಲ್ಪಕಾಲ ಆಳಿದ ಕಳಚೂರ್ಯರು ಕದಂಬ ಶಾಖೆಗಳ ಮೇಲೆ ಪರಮಾಧಿಕಾರ ಸ್ಥಾಪಿಸಿದ್ದರು. ಅನಂತರ ಹಾನಂಗಲ್ ಕದಂಬರು ಸ್ವಲ್ಪ ಕಾಲ ಹೊಯ್ಸಳರ ಆಶ್ರಿತರಾಗಿಯೂ ಮತ್ತೆ ಸ್ವಲ್ಪ ಕಾಲ ದೇವಗಿರಿಯ ಸೇವುಣರ ಆಶ್ರಯದಲ್ಲಿಯೂ ತಮ್ಮ ಆಳ್ವಿಕೆಯನ್ನು ಮುಂದುವರಿಸಿದರು. ಮೂಲ ಮನೆತನವಾದ ಬನವಾಸಿ ಕದಂಬರು ಮತ್ತು 11–12ನೇ ಶತಮಾನದಲ್ಲಿ ಆಶ್ರಿಯ ಮನೆತನಗಳಾಗಿ ಮುಂದುವರಿದ ಕದಂಬ ಶಾಖೆಗಳು ಕನ್ನಡನಾಡಿನ ಆಡಳಿತ ಮತ್ತು ಸಂಸ್ಕೃತಿಗೆ ತಮ್ಮ ಕಾಣಿಕೆಯನ್ನು ಸಲ್ಲಿಸಿವೆ.

## 4.4 ತಲಕಾಡಿನ ಗಂಗರು

ತಲಕಾಡಿನ ಗಂಗ ಸಂತತಿಗೆ ಪಶ್ಚಿಮ ಗಂಗರೆಂದೂ ಹೆಸರಾಗಿದೆ. ಗಂಗ ಮನೆತನವು ಕ್ರಿ.ಶ.4ನೇ ಶತಮಾನದ ಮಧ್ಯದಲ್ಲಿ ಪ್ರಾರಂಭವಾಗಿ ಕ್ರಿ.ಶ.11ನೇ ಶತಮಾನದ ಪೂರ್ವಾರ್ಧದವರೆಗೂ ಅತಿ ದೀರ್ಘಕಾಲ ಆಳ್ವಿಕೆ ನಡೆಸಿತು. ಗಂಗರ ರಾಜ್ಯವನ್ನು ಗಂಗವಾಡಿ ತೊಂಭತ್ತಾರು ಸಾವಿರ ಎಂದು ಶಾಸನಗಳಲ್ಲಿ ನಿರ್ದೇಶಿಸಲಾಗಿದೆ. ಗಂಗರ ಶಾಸನಗಳು ಕೊಡಗು ಜಿಲ್ಲೆಯಿಂದ ಉತ್ತರ ಆರ್ಕಾಟ್ ಜಿಲ್ಲೆಯವರೆಗೂ ಬಳ್ಳಾರಿ ಜಿಲ್ಲೆಯಿಂದ ಸೇಲಂ ಮತ್ತು ಕೊಯಮತ್ತೂರು ಜಿಲ್ಲೆಗಳ ಪ್ರದೇಶದಲ್ಲೂ ದೊರೆತಿವೆ. ಮೈಸೂರು ಜಿಲ್ಲೆಯ ತಲಕಾಡು ಇವರ ಮುಖ್ಯ ರಾಜಧಾನಿಯಾಗಿತ್ತು. ರಾಜ್ಯವು ವಿಸ್ತಾರವಾಗಿದ್ದುದರಿಂದ ಬೆಂಗಳೂರು ಜಿಲ್ಲೆಯಲ್ಲಿರುವ ಮಾನ್ಯಪುರ ಅಥವಾ ಇಂದಿನ ಮಣ್ಣೆ ಮೊದಲಾದ ಪಟ್ಟಣಗಳು ಇವರ ಉಪರಾಜಧಾನಿಯಾಗಿದ್ದವು. ಈ ಸಂತತಿಯ ಸುಮಾರು 30 ಮಂದಿ ರಾಜರು ದೀರ್ಘಕಾಲ ಆಳ್ವಿಕೆ ನಡೆಸಿದರು. ತಮ್ಮ ಸುದೀರ್ಘ ಆಳ್ವಿಕೆಯ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ಆಳಿದ ರಾಜ ಮನೆತನಗಳಾದ ಪಲ್ಲವರು, ಕದಂಬರು, ಬಾದಾಮಿ ಚಾಳುಕ್ಯರು, ರಾಷ್ಟ್ರಕೂಟ ಮತ್ತು ಚಓಳ ರಾಜ ಮನೆತನಗಳೊಡನೆ ರಾಜಕೀಯ ಸಂಬಂಧ ಮತ್ತು ಹಲವು ವೇಳೆ ರಕ್ತಸಂಬಮಧವನ್ನೂ ಹೊಂದಿದ್ದರು. ತಲಕಾಡಿನ ಗಂಗ ಸಂತತಿಯು ಆಳಿದ ನಮತರ ಇದರ ಉಪಶಾಖೆಗಳು ಶಿವಮೊಗ್ಗ, ಮೈಸೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ರಾಜ್ಯಗಳನ್ನು ಸ್ಥಾಪಿಸಿಕೊಂಡು ಹೊಯ್ಸಳರು ಅನಂತರ ವಿಜಯನಗರ ಸಾಮ್ರಾಜ್ಯದ ಅಧೀನರಾಗಿ ಕ್ರಿ.ಶ.15ನೇ ಶತಮಾನದವರೆಗೂ ಆಳಿದರು. ದೀರ್ಘಕಾಲ ಆಳ್ವಿಕೆ ನಡೆಸಿ ಆಡಳಿತ, ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಂಪರೆಗೆ ಅಮೋಘ ಕಾಣಿಕೆ ಸಲ್ಲಿಸಿರುವ ಗಂಗರ ಇತಿಹಾಸವು ಪ್ರಾಚೀನ ಕರ್ನಾಟಕ ಇತಿಹಾಸದಲ್ಲಿ ಒಂದು ಭವ್ಯ ಅಧ್ಯಾಯವಾಗಿದೆ.

ಕರ್ನಾಟಕದಲ್ಲಿ ಆಳಿದ ರಾಜ ಮನೆತನಗಳಲ್ಲೆಲ್ಲಾ ಗಂಗರ ಆಳ್ವಿಕೆಯೇ ಅತಿ ದೀರ್ಘ ಕಾಲದ್ದು. ಕದಂಬರ ಮೂಲದಂತೆ ಗಂಗರ ಮೂಲವನ್ನು ಕುರಿತು ವಿದ್ವಾಂಸರು ವಿಭಿನ್ನ ಅಭಿಪ್ರಾಯಗಳನ್ನು ನೀಡಿದ್ದಾರೆ. ಇವರ ವಂಶಾನುಕ್ರಮಣಿಕೆ ಹಾಗೂ ಕಾಲಾನುಕ್ರಮಣಿಕೆಯನ್ನು ಕುರಿತು ಭಿನ್ನಾಭಿಪ್ರಾಯಗಳಿವೆ. ಗಂಗರ ಇತಿಹಾಸ ರಚನೆಗೆ ಬರವಣಿಗೆಯ ಹಾಗೂ ಪ್ರಾಕ್ತನ ಆಧಾರಗಳು ದೊರೆಯುತ್ತವೆ. ಗಂಗರ ಆಳ್ವಿಕೆಯಲ್ಲಿ ಪ್ರಾಕೃತ, ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಸಾಹಿತ್ಯ ಗ್ರಂಥಗಳು ರಚನೆಯಾದವು. ಮಾಧವ, ದುರ್ವಿನೀತ, ಶ್ರೀಪುರುಷ, ಶಿವಮಾರ ಮೊದಲಾದ ಗಂಗ ಪ್ರಭುಗಳು ಗ್ರಂಥ ರಚನೆ ಮಾಡಿದುದಾಗಿ ತಿಳಿದುಬರುತ್ತದೆ. ಆದರೆ ಇವರ ಗ್ರಂಥಗಳು ದೊರೆತಿಲ್ಲ. ಇವರ ಆಸ್ಥಾನದಲ್ಲಿದ್ದ ಮತ್ತು ಸಮಕಾಲೀನ ಕವಿಗಳಾದ ಪೂಜ್ಯಪಾದನ ಶಬ್ದಾವತಾರ, ಭಾರವಿಯ ಕಿರಾತಾರ್ಜುನೀಯ, ಚಾವುಂಡರಾಯನ ಚಾವುಂಡರಾಯ ಪುರಾಣ ಮೊದಲಾದ ಗ್ರಂಥಗಳು ಇವರ ಚರಿತ್ರೆಯ ರಚನೆಗೆ ಸ್ವಲ್ಪಮಟ್ಟಿಗೆ ಸಹಕಾರಿಯಾಗಿವೆ. ಈ ವಂಶದ ರಾಜರು ಹಾಕಿಸಿದ 800ಕ್ಕೂ ಮಿಗಿಲಾದ ಶಾಸನಗಳು ಮತ್ತು ಛಾಪಿಸಿದ ಹಲವಾರು ಚಿನ್ನದ ನಾಣ್ಯಗಳು ದೊರತಿವೆ. ಮಿಗಿಲಾಗಿ ಗಂಗರ ಕಾಲದಲ್ಲಿ ತಲಕಾಡು, ಶ್ರವಣಬೆಳಗೊಳ ಮೊದಲಾದ ಅನೇಕ ಸ್ಥಳಗಳಲ್ಲಿ ನಿರ್ಮಿಸಿದ ಹಿಂದೂ ದೇವಾಲಯಗಳು ಜೈನ ಬಸದಿ ಮತ್ತು ಸ್ಮಾರಕಗಳು ಇವರ ಕಾಲದ ಕಲೆ, ಧರ್ಮ ಮತ್ತು ಸಾಮಾಜಿಕ ಸ್ಥಿತಿಗಳ ಪರಿಸ್ಥಿತಿಯನ್ನು ಸಾರುವ ಆಧಾರಗಳಾಗಿವೆ. ಗಂಗರ ತಾಮ್ರ ಶಾಸನಗಳಲ್ಲಿ ಅದರಲ್ಲೂ ದಾನ ಶಾಸನಗಳಿಗೆ ಸಂಬಂಧಿಸಿದಂತೆ ಕೆಲವು ಕೂಟ ಶಾಸನಗಳನ್ನು ವಿದ್ವಾಂಸರು ಗುರುತಿಸಿದ್ದಾರೆ. ಗಂಗ ವಂಶಾವಳಿ ಮತ್ತು ರಾಜರ ಆಳ್ವಿಕೆಯ ಕಾಲಗಣನೆಗೆ ಶಾಸನಗಳೇ ಮುಖ್ಯ ಆಧಾರಗಳಾಗಿವೆ.

ಗಂಗ ಸಂತತಿಯ ಮೂಲಕ್ಕೆ ಸಂಬಂಧಿಸಿದಂತೆ ಅನೇಕ ಜಿಜ್ಞಾಸೆಗಳಿವೆ. ಈ ಸಂತತಿಯ ಪ್ರಾರಂಭದ ರಾಜರ ಶಾಸನಗಳಲ್ಲಿ ಗಂಗರ ಮೂಲಕ್ಕೆ ಸಂಬಂಧಿಸಿದ ವಿವರಗಳು ಕಾಣಬರುವುದಿಲ್ಲ. ಶತಮಾನಗಳ ತರುವಾಯದ ಹಾಗೂ 10 ಮತ್ತು 11ನೇ ಶತಮಾನದಲ್ಲಿ ಸ್ಥಾಪಿತವಾದ ಶಾಸನಗಳಲ್ಲಿ ಗಂಗರ ಮೂಲಕ್ಕೆ ಸಂಬಂಧಿಸಿದಂತೆ ಪೌರಾಣಿಕ ಮತ್ತು ನಂಬಲಸಾಧ್ಯವಾದ ವಿಭಿನ್ನ ವರ್ಣನೆಗಳಿವೆ. ಆದ್ದರಿಂದ ಇವರ ಮೂಲಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ಹೇಳಿಕೆಗಳು ಪ್ರಚಲಿತವಾಗಿವೆ.

ತಲಕಾಡಿನ ಗಂಗ ಮನೆತನವು ಅಂತ್ಯವಾದ ನಂತರ ಈ ಮನೆತನದ ಶಾಖೆಗಳು ಮತ್ತು ಇವರೊಡನೆ ನಿಕಟ ಸಂಬಂಧ ಹೊಂದಿದ್ದ ಹಲವು ಆಶ್ರಿತ ಸಂಸ್ಥಾನಗಳು 11 ಮತ್ತು 12ನೇ ಶತಮಾನಗಳಲ್ಲಿ ಅಲ್ಲಲ್ಲಿ ಆಳಿದುದು ಸರಿಯಷ್ಟೆ. ಈ ಶಾಖೆಗಳ ರಾಜರು ಹಾಕಿಸಿದ ಶಾಸನಗಳಲ್ಲಿ ಗಂಗರಾಜ್ಯ ಸ್ಥಾಪಕರು ಅಯೋಧ್ಯೆಯಿಂದ ಬಂದವರೆಂದೂ, ಇಕ್ಷ್ವಾಕು ವಂಶಕ್ಕೆ ಸೇರಿದವರೆಂದೂ ವರ್ಣಿಸಲಾಗಿದೆ. ಈ ವರ್ಣನೆಯೂ ಏಕರೀತಿಯಾಗಿಲ್ಲ. ಮಿಗಿಲಾಗಿ ಪೌರಾಣಿಕ ಕಲ್ಪನೆಗಳನ್ನು ಹೊಂದಿದೆ. ದೇವಾನುದೇವತೆಗಳ ಕೊಡಿಗೆಗಳು ಮತ್ತು ಅಲೌಕಿಕ ಉತ್ಪ್ರೇಕ್ಷೆಗಳಿಂದ ಕೂಡಿವೆ. ಗಂಗ ಎಂಬ ಹೆಸರು ಬರಲು ಸಹ ಗಂಗಾನದಿಗೆ ಸಂಬಂಧಿಸಿದಂತೆ ಅವಾಸ್ತವಿಕವಾದ ಕಥನಗಳಿಂದ ಕೂಡಿದೆ. ಈ ವರ್ಣನೆಯು ಮೂಲ ಸಂತತಿಯ ಅಂತ್ಯದ ನಂತರ ಪ್ರಚಾರಕ್ಕೆ ಬಂದಿತು. ಆದರೆ ಗಂಗ ಸಂತತಿಯ ಪ್ರಾರಂಭದ ರಾಜರು ಅಥವಾ ಅನಂತರದ ರಾಜರ ಶಾಸನಗಳಲ್ಲಿ ಮೇಲ್ಕಂಡ ವರ್ಣನೆ ಇಲ್ಲ. ಈ ವರ್ಣನೆ ಅಸ್ವಾಭಾವಿಕವಾದುದು ಮತ್ತು ಪೌರಾಣಿಕವಾದುದು. ಇಂತಹ ಕಾಲ್ಪನಿಕ ವರ್ಣನೆಗಳು ಹನ್ನೊಂದು ಮತ್ತು ಹನ್ನೆರಡನೇ ಶತಮಾನಗಳಲ್ಲಿ ಕರ್ನಾಟಕ ಮತ್ತು ದಕ್ಷಿಣ ಭಾರತದಲ್ಲಿ ಆಳುತ್ತಿದ್ದ ಎಲ್ಲಾ ರಾಜಮನೆತನಗಳನ್ನೂ ಕುರಿತು ಪ್ರಚಾರಕ್ಕೆ ಬಂದವು. ಆದುದರಿಂದ ಇದು ಸತ್ಯಕ್ಕೆ ದೂರವೆಂದು ಕೈಬಿಡಲಾಗಿದೆ.

ಎರಡನೆಯದಾಗಿ, ಈ ಸಂತತಿಯು ಜೈನಮುನಿ ಸಿಂಹನಂದಿ ಮತ್ತು ಪದ್ಮಾವತಿ ದೇವಿಯ ಕೃಪೆಯಿಂದ ಸ್ಥಾಪಿತವಾಯಿತೆಂದು ಹಲವು ಶಾಸನಗಳಲ್ಲಿ ವರ್ಣಿಸಲಾಗಿದೆ. ಕ್ರಿ.ಶ.963ರ ಸುಮಾರಿನ ಮಾರಸಿಂಹನ ಕೂಡಲೂರು ಶಾಸನದಲ್ಲಿ ಪ್ರಪ್ರಥಮವಾಗಿ ಈ ವರ್ಣನೆಯು ಕಾಣಬರುತ್ತದೆ. ಇದರ ಪ್ರಕಾರ ಗಂಗರಾಜ್ಯ ಸ್ಥಾಪಕರಾದ ಧಡಿಗ ಮತ್ತು ಮಾಧವ ಎಂಬ ಸಹೋದರರು ಉತ್ತರದಿಂದ ದಕ್ಷಿಣಕ್ಕೆ ಬಂದರು. ಇವರು

ಸಿಂಹನಮದಿ ಎಂಬ ಆಚಾರ್ಯನನ್ನು ಪೇರೂರು ಎಂಬಲ್ಲಿ ಸಂಧಿಸಿದರು. ಪೇರೂರು ಎಂಬುದು ಹಲವರ ಪ್ರಕಾರ ಆಂಧ್ರದ ಕಡಪ ಜಿಲ್ಲೆಯಲ್ಲೂ ಮತ್ತೂ ಕೆಲವರ ಪ್ರಕಾರ ತಮಿಳುನಾಡಿನ ಕೊಯಮತ್ತೂರಿನ ಸಮೀಪದಲ್ಲೂ ಇದ್ದಿತೆಂದು ವಿವಾದಾಸ್ಪದ ವಿಷಯವಾಗಿದೆ. ಧಡಿಗ ಮತ್ತು ಮಾಧವ ಎಂಬ ಸಹೋದರರಿಂದ ಆಕರ್ಷಿತನಾದ ಸಿಂಹನಂದಿ ತನ್ನ ಇಷ್ಟದೇವತೆಯಾದ ಪದ್ಮಾವತಿಯಿಂದ ವರಪಡೆದು ರಾಜ್ಯವನ್ನು ಮತ್ತು ಕರ್ಣಿಕಾಪುಷ್ಪದಿಂದ ತಯಾರು ಮಾಡಿದ ಕಿರೀಟವನ್ನು ದಯಪಾಲಿ–ಸಿದನೆಂದೂ ಈ ರೀತಿಯಾಗಿ ಗಂಗರಾಜ್ಯದ ಅಂಕುರಾರ್ಪಣೆಯಾಯಿತೆಂದೂ ವರ್ಣಿಸಲಾಗಿದೆ. ಈ ಹೇಳಿಕೆಯೂ ಸಹ ನಂಬಲರ್ಹವಲ್ಲದ ಕಾಲ್ಪನಿಕ ಕಥೆಯಾಗಿದೆ. ಮೊದಲನೆಯದಾಗಿ ಪ್ರಾರಂಭದಿಂದ ಕ್ರಿ.ಶ.963ರ ವರೆಗಿನ ನೂರಾರು ಶಾಸನಗಳಲ್ಲಿ ಇಂತಹ ಹೇಳಿಕೆಯಿಲ್ಲ. ಮಿಗಿಲಾಗಿ ಗಂಗರಾಜ್ಯ ಸ್ಥಾಪನೆಯಾದ ನಂತರವೂ ನೂರಾರು ವರ್ಷಗಳ ಕಾಲ ಆಳಿದ ಈ ಸಂತತಿಯ ರಾಜರು ಹಿಂದೂ ಧರ್ಮಾವಲಂಬಿಗಳಾಗಿದ್ದರು. ಇವರು ವೈದಿಕ ಯಜ್ಞಯಾಗಗಳನ್ನು ಮಾಡಿದರು. ಇವರ ರಾಜಧಾನಿಯಾದ ತಲಕಾಡು ಅನೇಕಾನೇಕ ವೈದಿಕ ದೇವತೆಗಳ ಗುಡಿಗೋಪುರಗಳನ್ನು ಹೊಂದಿದ್ದುದನ್ನು ಇಂದಿಗೂ ಕಾಣಬಹುದು. ಮಿಗಿಲಾಗಿ ಜೈನಧರ್ಮದ ಗ್ರಂಥಗಳ ಪ್ರಕಾರ ಸಿಂಹನಂದಿ ಎಂಬ ಹೆಸರಿನ ಆಚಾರ್ಯನು 7ನೇ ಶತಮಾನದ ಕೊನೆಯವರೆಗೂ ಇರಲಿಲ್ಲ. ಗಂಗಸಂತತಿಯ ರಾಜರು 9ನೇ ಶತಮಾನದ ಪ್ರಾರಂಭದಿಂದ ಜೈನಧರ್ಮವನ್ನು ಸ್ವೀಕರಿಸಿದರು. ಅನಂತ ಆಳಿದ ರಾಜರ ಕಾಲದಲ್ಲಿ ಮೇಲ್ಕಂಡ ವರ್ಣನೆ ಪ್ರಾರಂಭವಾಯಿತು. ಆದ್ದರಿಂದ ಈ ಹೇಳಿಕೆಯೂ ಸಹ ಸತ್ಯಕ್ಕೆ ದೂರವೆಂದು ಪರಿಗಣಿಸಲ್ಪಟ್ಟಿದೆ.

ಗಂಗರು ಕಣ್ವ ಗೋತ್ರಕ್ಕೆ ಸೇರಿದವರೆಂದೂ ಹಾಗೂ ಶ್ರೀಕೃಷ್ಣನಿಂದ ಪುನೀತವಾದ ಯದು ವಂಶಕ್ಕೆ ಸೇರಿದವರೆಂದು ಒಂದೆರಡು ಸಮಕಾಲೀನವಲ್ಲದ ಶಾಸನಗಳಲ್ಲಿ ಹೆಸರಿಸಲಾಗಿದೆ. ಇಂತಹ ಹೇಳಿಕೆಗಳೂ ಸಹ ಅನಂತರದ ಆಸ್ಥಾನ ವಿದ್ವಾಂಸರ ಚಮತ್ಕಾರದಿಂದ ಮೂಡಿಬಂದವೇ ಹೊರತು ನಿಜ ಸಂಗತಿಯನ್ನು ತಿಳಿಸುವುದಿಲ್ಲ. ಅಲ್ಲದೆ ಗಂಗರಾಜ್ಯ ಸ್ಥಾಪಕರು ಪೇರೂರು ಎಂಬಲ್ಲಿ ಜೈನಯತಿ ಸಿಂಹನಂದಿಯನ್ನು ಸಂಧಿಸಿದರೆಂಬ ಹೇಳಿಕೆಯ ಆಧಾರದ ಮೇಲೆ ಒಬ್ಬಿಬ್ಬ ವಿದ್ವಾಂಸರು ಪೇರೂರು ಎಂಬುದು ಕೊಯಮತ್ತೂರಿನ ಬಳಿಯಲ್ಲಿತ್ತೆಂಬುದಾಗಿ ಊಹಿಸಿ ಇವರು ತಮಿಳುನಾಡಿಗೆ ಸೇರಿದವರೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಗಂಗರ ಶಾಸನಗಳು ಮತ್ತು ಇತರ ಯಾವ ಆಧಾರದಿಂದಲೂ ಇವರು ಕರ್ನಾಟಕದ ಹೊರಗಡೆಯಿಂದ ಬಂದವರೆಂದು ಹೇಳಲು ಸಾಧ್ಯವಾಗುವುದಿಲ್ಲ.

ಮೇಲ್ಕಂಡ ಎಲ್ಲ ಹೇಳಿಕೆಗಳನ್ನು ಪರಿಶೀಲಿಸಿದ ನಂತರ, ಬಿ.ಎಲ್.ರೈಸ್, ಎಂ.ವಿ.ಕೃಷ್ಣರಾವ್ ಮತ್ತು ಡಾ.ಬಿ.ಷೇಕ್ ಅಲಿ ಮೊದಲಾದ ವಿದ್ವಾಂಸರು ಗಂಗರರಾಜ್ಯ ಸ್ಥಾಪಕರು ಕರ್ನಾಟಕದ ನಿವಾಸಿಗಳೆಂದೂ ಇವರು ಬಹುಮಟ್ಟಿಗೆ ಇಂದು ಗಂಗಟಿಕಾರ ಎಂದು ಕರೆಯಲಾಗಿರುವ ಒಕ್ಕಲಿಗರ ಪಂಗಡಕ್ಕೆ ಸೇಱಇದವರಾಗಿರಬೇಕೆಂದೂ ಆದ್ದರಿಂದಲೇ ಇವರ ರಾಜ್ಯಕ್ಕೆ ಗಂಗವಾಡಿ ಎಂದು ಹೆಸರಾಯಿತೆಂದೂ ಮಿಗಿಲಾಗಿ ಗಂಗರು ಮೂಲತಃ ರಾಜ್ಯ ಸ್ಥಾಪಿಸಿದ ಪ್ರದೇಶದಲ್ಲಿ ಇಂದಿಗೂ ಸಹ ಈ ಪಂಗಡದ ಜನರೇ ಬಹುಸಂಖ್ಯೆಯಲ್ಲಿ ವಾಸಿಸುತ್ತಿದ್ದಾರೆಂದೂ ನಿರ್ಣಯಿಸಿದ್ದಾರೆ. ಮೂಲತಃ ರಾಜ್ಯ ಸ್ಥಾಪಿಸಲು ವ್ಯಕ್ತಿಗಳು ತಮ್ಮ ಶಾಸನಗಳಲ್ಲಿ ಎಲ್ಲಿಯೂ ತಮ್ಮ ಕುಲಗೋತ್ರಗಳನ್ನು ಹೇಳಿಕೊಂಡಿಲ್ಲ. ಅನಂತರದ ರಾಜರ ಕಾಲದಲ್ಲಿ ಆಸ್ಥಾನ ವಿದ್ವಾಂಸರು ಚಂದ್ರವಂಶದೊಡನೆಯೋ ಅಥವಾ ಸೂರ್ಯವಂಶದೊಡನೆಯೋ ಕಲ್ಪಿಸಿಕೊಟ್ಟ ಸಂಬಂಧ ಹೇಳಿಕೊಂಡಿರುವುದು ಸರ್ವೇ ಸಾಮಾನ್ಯವಾಗಿ ಕಾಣಬರುವ ನಿರೂಪಣೆಯಾಗಿದೆ. ಆದ್ದರಿಂದ ಗಂಗರಾಜ್ಯ ಸ್ಥಾಪಕರು ಕರ್ನಾಟಕದ ಹೊರಗಿನಿಂದ ಬಂದು ರಾಜ್ಯಾ ಸ್ಥಾಪಿಸಿದರೆಂದು ವರ್ಣಿಸಿರುವ ಅನಂತರದ ಹೇಳಿಕೆಗಳು ಉತ್ಪ್ರೇಕ್ಷೆಯೆಂಬುದರಲ್ಲಿ ಸಂಶಯವಿಲ್ಲ.

ಗಂಗರ ಮೂಲದ ಜೊತೆಗೆ ಇವರು ಪ್ರಾರಂಭದಲ್ಲಿ ರಾಜ್ಯ ಸ್ಥಾಪಿಸಿದ ಪ್ರದೇಶ ಮತ್ತು ಅನುಸರಿಸಿದ ಧರ್ಮಕ್ಕೆ ಸಂಬಂಧಿಸಿದಂತೆಯೂ ಜಿಜ್ಞಾಸೆಗಳಿವೆ. ಗಂಗರು ಅನಂತರದ ವರ್ಣನೆಯ ಪ್ರಕಾರ ಪೇರೂರಿನಿಂದ

ಬಂದು ಕುಲಾಳ ಅಥವಾ ಕೋಲಾರವನ್ನು ರಾಜಧಾನಿಯಾಗಿ ಮಾಡಿಕೊಂಡರೆಂದು ಹೇಳಲಾಗಿದೆ. ಆದರೆ ಗಂಗರ ಶಾಶನಗಳ ಪ್ರಕಾರ ತಲಕಾಡು ಪ್ರಾರಂಭವಿಂದಲೂ ಅವರ ರಾಜಧಾನಿಯಾಗಿತ್ತೆಂದು ಸ್ಪಷ್ಟವಾಗಿ ತಿಳಿದುಬರುತ್ತದೆ. ಮಿಗಿಲಾಗಿ ಗಜಾರಣ್ಯವೆಂದು ಹೆಸರಾಗಿದ್ದು ಆನೆಗಳು ವಿಶೇಷವಾಗಿ ವಾಸಿಸುತ್ತಿದ್ದ ಪ್ರದೇಶ ಇದಾಗಿದ್ದುದರಿಂದಲೇ ಇವರು ಮದಗಜವನ್ನು ತಮ್ಮ ರಾಜ ಚಿಹ್ನೆಯಾಗಿ ಆರಿಸಿಕೊಂಡರು. ಅಂತೆಯೇ ಪ್ರಾರಂಭದ ರಾಜರು ವೈದಿಕ ಮತಾವಲಂಬಿಗಳಾಗಿದ್ದು ವೈದಿಕ ಯಜ್ಞಯಾಗಾದಿಗಳನ್ನು ಆಚರಿಸಿದರು. ಗೋಬ್ರಾಹ್ಮಣ ಪಾದಪೂಜಕರೆಂಬ ಬಿರುದು ಹೊಂದಿದ್ದರು. ಆದರೆ ಇಮ್ಮಡಿ ಶಿವಮಾರನ ಕಾಲದಿಂದ ಜೈನಮತವನ್ನವಲಂಬಿಸಿದರು.

## 4.5 ಗಂಗರ ರಾಜಕೀಯ ಇತಿಹಾಸ

ಧಡಿಗ ಮತ್ತು ಮಾಧವ ಎಂಬ ಸಹೋದರರು ಗಂಗರಾಜ್ಯ ಸ್ಥಾಪಕರೆಂದು ಇವರ ಶಾಸನಗಳಿಂದ ತಿಳಿದುಬರುತ್ತದೆ. ಧಡಿಗನು ರಾಜ್ಯ ಸ್ಥಾಪಿಸಿದ ಮೇಲೆ ಮಾಧವನೆಂಬ ಹೊಸ ಹೆಸರಿನಿಂದ ರಾಜ್ಯವಾಳಿರಬೇಕೆಂದು ತೋರುತ್ತದೆ. ಕೆಲವು ಇತಿಹಾಸಕಾರರು ರಾಜ್ಯ ಸ್ಥಾಪಿಸುವ ವೇಳೆಗೆ ಧಡಿಗನಿಗೆ ವಯಸ್ಸಾಗಿದ್ದುದರಿಂದ ಅವನು ಬೇಗ ಮರಣ ಹೊಂದಿ ಅವನ ಸಹೋದರನಾದ ಒಂದನೇ ಮಾಧವನು ರಾಜನಾಗಿರಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ. ಮಾಧವನು ಕ್ರಿ.ಶ.340 ರಿಂದ 370 ರವರೆಗೆ ಆಳಿದನೆಂದು ತಿಳಿದುಬರುತ್ತದೆ. ತಲಕಾಡು ಮಾಧವನ ರಾಜಧಾನಿಯಾಗಿತ್ತು. ಇವನು ಇಂದಿನ ಸೇಲಂ ಮತ್ತು ಕೊಯಮತ್ತೂರು ಜಿಲ್ಲೆಗಳನ್ನು ಜಯಿಸಿದನು. ಆಗ ಈ ಪ್ರದೇಶವನ್ನು ಕೊಂಗು ಎಂದು ಕರೆಯಲಾಗಿತ್ತು. ಆದ್ದರಿಂದ ಕೊಂಗುಣೀವರ್ಮ ಎಂಬ ಬಿರುದನ್ನು ಧರಿಸಿದನು. ಈ ಬಿರುದನ್ನು ಇವನ ಸಂತತಿಯ ರಾಜರೆಲ್ಲರೂ ಹೊಂದಿದ್ದರು. ಮಾಧವ ಕೊಂಗುಣೀವರ್ಮನು ಬಾಣರನ್ನು ಸೋಲಿಸಿ ಕೋಲಾರದವರೆಗೂ ರಾಜ್ಯವನ್ನು ವಿಸ್ತರಿಸಿದನು. ಒಂದನೇ ಮಾಧವನ ಮರಣಾನಂತರ ಇವನ ಸಹೋದರನ ಮಗನಾದ ಎರಡನೇ ಮಾಧವನು ರಾಜನಾದನು. ಇವನನ್ನು ಕಿರಿಯ ಮಾಧವ ಎಂಬುದಾಗಿಯೂ ಕರೆಯಲಾಗಿದೆ. ಇವನು ಕ್ರಿ.ಶ.370 ರಿಂದ 390 ರವರೆಗೆ ಆಳಿದನು. ಎರಡನೇ ಮಾಧವನು ತಾನೇ ವಿದ್ವಾಂಸನಾಗಿದ್ದು, ವಿದ್ವಾಂಸರಿಗೆ ಪ್ರೋತ್ಸಾಹ ನೀಡಿದನು. ಇವನು ಉಪನಿಷತ್ತು ಮತ್ತು ನೀತಿಶಾಸ್ತ್ರದಲ್ಲಿ ಪ್ರವೀಣನಾಗಿದ್ದನು. ಇವನು ದತ್ತಕಸೂತ್ರಕ್ಕೆ ಭಾಷ್ಯವನ್ನೂ ಬರೆದನೆಂದು ಹೇಳಲಾಗಿದೆ. ಎರಡನೇ ಮಾಧವನು ಗೋಬ್ರಾಹ್ಮಣ ಮತ್ತು ಧರ್ಮರಕ್ಷಣೆಗಾಗಿ ಅಧಿಕಾರ ವಹಿಸಿಕೊಂಡನೆಂದು ಶಾಸನಗಳಲ್ಲಿ ಹೇಳಿರುವುದರಿಂದ ಇವನು ವೈದಿಕ ಮತಾವಲಂಬಿಯೆಂದು ಸ್ಪಷ್ಟವಾಗುತ್ತದೆ.

## ಎರಡನೇ ಮಾಧವ

ಎರಡನೇ ಮಾಧವನ ತರುವಾಯ ಹರಿವರ್ಮನು ರಾಜನಾಗಿ ಕ್ರಿ.ಶ.390 ರಿಂದ 410 ರವರೆಗೆ ಆಳಿದನೆಂದು ತಿಳಿದುಬರುತ್ತದೆ. ಆದರೆ ಎರಡನೇ ಮಾಧವನ ಮತ್ತಿಬ್ಬರು ಮಕ್ಕಳೂ ಬೇರೆ ಬೇರೆ ಪ್ರದೇಶದಲ್ಲಿ ಸ್ವತಂತ್ರವಾಗಿ ಆಳುತ್ತಿದ್ದರೆಂದು ಹೇಳಲಾಗಿದೆ. ಕೃಷ್ಣವರ್ಮ ಎಂಬುವನು ಅನಂತಪುರ ಜಿಲ್ಲೆಯ ಪಾರವಿ ಎಂಬ ರಾಜಧಾನಿಯಿಂದಲೂ ಇನ್ನೊಬ್ಬನಾದ ಅಯ್ಯಾವರ್ಮನು ಕೋಲಾರ ಜಿಲ್ಲೆಯ ಕೈವಾರದಿಂದಲು ಆಳುತ್ತಿದ್ದರೆಂದು ಬೆಂಡಗಾನಹಳ್ಳಿ ಮತ್ತು ಚಿಕ್ಕತ್ತೂರು ಬಳಿಯ ಶಾಸನಗಳಲ್ಲಿ ಹೇಳಲಾಗಿದೆ. ಹರಿವರ್ಮನ ಹೆಸರನ್ನೇ ಬೇರೆ ಬೇರೆ ಶಾಸನಗಳಲ್ಲಿ ಬೇರೆ ಬೇರೆ ಹೆಸರಿನಿಂದ ಕೆತ್ತಲಾಗಿದೆಯೆಂದೂ ಗಂಗರಾಜ್ಯವು ಶಾಖೆಗಳಾಗಿ ಒಡೆದಿರಲಿಲ್ಲವೆಂದೂ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಪಲ್ಲವ ರಾಜನಾದ ಸಿಂಹವರ್ಮನು ಹರಿವರ್ಮನ ಪಟ್ಟಾಭಿಷೇಕ ಸಮಯದಲ್ಲಿ ತಲಕಾಡಿಗೆ ಬಂದಿದ್ದನು. ಇದರಿಂದ ಗಂಗರಿಗೂ ಪಲ್ಲವರಿಗೂ ಇದ್ದ ಅನ್ಯೋನ್ಯ ರಾಜಕೀಯ ಸಂಬಂಧ ವಿಶದವಾಗುತ್ತದೆ. ಹರಿವರ್ಮನು ಪ್ರಬಲವಾದ ಗಜಬಲವನ್ನಿಟ್ಟಿದ್ದನು. ಬಾಣಪ್ರಯೋಗದಲ್ಲಿ ಸಿದ್ಧ ಹಸ್ತನಾಗಿದ್ದನು. ರಾಜ್ಯವನ್ನು ವಿಸ್ತರಿಸಿದನು. ಒಂದು ಶಾಸನದ ಪ್ರಕಾರ ಹೆಂಜೇರು ಎಂಬ ಯುದ್ಧದಲ್ಲಿ

ವೀರಾವೇಶದಿಂದ ಕಾದಾಡಿದ ಗವುಂಡ (ಗೌಡ) ನಿಗೆ ನಂಜನಗೂಡು ತಾಲ್ಲೂಕಿನ ಅಪ್ಪೆಗಾಲ ಎಂಬ ಗ್ರಾಮವನ್ನು ದತ್ತಿಯಾಗಿ ನೀಡಿದನು. ಹರಿವರ್ಮನು ವೈದಿಕ ಮತಾವಲಂಬಿಯಾಗಿದ್ದು ಬ್ರಾಹ್ಮಣರಿಗೆ ದಾನದತ್ತಿ ನೀಡಿದನು. ವಾದಿಮದ ಗಜೇಂದ್ರ ಎಂಬ ಬಿರುದನ್ನು ಹೊಂದಿದ್ದ ಬೌದ್ಧ ವಿದ್ವಾಂಸನನ್ನು ತನ್ನ ಅರಮನೆಯಲ್ಲಿ ವಾದದಲ್ಲಿ ಸೋಲಿಸಿದ ಮಾಧವಭಟ್ಟ ಎಂಬ ಬ್ರಾಹ್ಮಣನಿಗೆ ವಾದಿಸಿಂಹ ಎಂಬ ಬಿರುದನ್ನು ನೀಡಿ ಮೈಸೂರು ಜಿಲ್ಲೆಯಲ್ಲಿ ಒಂದು ಗ್ರಾಮವನ್ನು ಮೆಚ್ಚುಗೆಯಾಗಿ ನೀಡಿದನು. ಹರಿವರ್ಮನ ತರುವಾಯ ವಿಷ್ಣುಗೋಪನು ರಾಜನಾಗಿ ಕ್ರಿ.ಶ.410 ರಿಂದ 430 ರವರೆಗೆ ಆಳಿದನು. ಇವನು ಸದ್ಗುಣಿಯೂ ಜ್ಞಾನ ಪಕ್ಷಪಾತಿಯೂ ಆಗಿದ್ದನು. ವಿಷ್ಣುಗೋಪನು ವಿಷ್ಣುವಿನ ಆರಾಧಕನಾಗಿದ್ದನು. ವಿಷ್ಣುಗೋಪನ ತರುವಾಯ ತಡಂಗಲ ಮಾಧವನು ರಾಜನಾದನು.

## ಮೂರನೇ ಮಾಧವ

ತಡಂಗಲ ಮಾಧವನನ್ನು ಮೂರನೇ ಮಾಧವ ಎಂದು ಕರೆಯಲಾಗಿದೆ. ಇವನು ಕ್ರಿ.ಶ.430 ರಿಂದ 466 ರವರೆಗೆ ಆಳಿದನೆಂದು ತಿಳಿದುಬರುತ್ತದೆ. ಪಲ್ಲವ ರಾಜನಾದ ಸ್ಕಾಂದವರ್ಮನು ತಡಂಗಲ ಮಧವನ ಪಟ್ಟಾಭಿಷೇಕ ಸಮಯದಲ್ಲಿ ಪಾಲ್ಗೊಂಡಿದ್ದನು. ಮಾಧವನು ಪಲ್ಲವರೊಡನೆ ಸ್ನೇಹದಿಂದಿದ್ದು ರಾಜ್ಯ ವಿಸ್ತರಿಸಿದನು. ಕದಂಬ ರಾಜಕುಮಾರಿಯನ್ನು ವರಿಸಿದ್ದನು. ಪಾರವಿ ಮತ್ತು ಕೈವರ ಶಾಖೆಗಳನ್ನು ಅಂತ್ಯಗೊಳಿಸಿದನು. ವಿಶಾಲ ಗಂಗವಾಡಿ ರಾಜ್ಯದ ಮೇಲೆ ಇವನ ಆಳ್ವಿಕೆಯು ಸ್ಥಾಪಿತವಾಗಿತ್ತು. ಇವನು ವೈದಿಕ ಮತಾವಲಂಬಿಯಾಗಿದ್ದು ಬೌದ್ಧ ಮತ್ತು ಜೈನಧರ್ಮಗಳಿಗೂ ಪ್ರೋತ್ಸಾಹ ನೀಡಿದನು. ಇವನ ಆಳ್ವಿಕೆಯ ಕಾಲದಲ್ಲಿ ರಾಜ್ಯವು ಆರ್ಥಿಕವಾಗಿ ಹೆಚ್ಚು ಸುಭಿಕ್ಷವಾಗಿತ್ತು. ತಡಂಗಲ ಮಾಧವನ ತರುವಾಯ ಇವನ ಮಗ ಅವಿನೀತನು ರಾಜನಾಗಿ ಕ್ರಿ.ಶ.466 ರಿಂದ 495 ರವರೆಗೆ ಆಳಿದನು. ಅವಿನೀತನು ಗಂಗ ಸಂತತಿಯ ಪ್ರಖ್ಯಾತ ರಾಜರಲ್ಲೊಬ್ಬನು. ಪುನ್ನಾಟದ ರಾಜನಾದ ಸ್ಕಾಂದವರ್ಮನ ಪುತ್ರಿಯಾದ ಜೇಷ್ಠಾದೇವಿ ಎಂಬುವಳನ್ನು ಅವಿನೀತನು ಸ್ವಯಂವರವಾಗಿದ್ದನು. ಇವನು ಗಜತುರುಗಗಳನ್ನು ನಡೆಸುವುದರಲ್ಲಿ ಪ್ರವೀಣನಾಗಿದ್ದನೆಂದೂ ಯುದ್ಧದಲ್ಲಿ ಪರಾಕ್ರಮಿಯಾಗಿದ್ದನೆಂದೂ ತಿಳಿದುಬರುತ್ತದೆ. ಅನೇಕ ಯುದ್ಧಗಳನ್ನು ಕೈಗೊಂಡು ರಾಜ್ಯವನ್ನು ವಿಸ್ತರಿಸಿದನು. ಅವಿನೀತನು ಉದಾರ ಮತೀಯ ನೀತಿಯನ್ನು ಅನುಸರಿಸಿದನು. ತಾನು ಸ್ವತಃ ವೈದಿಕ ಮತಾವಲಂಬಿಯಾದರೂ ವಿಜಯ ಕೀರ್ತಿ ಎಂಬ ಜೈನ ವಿದ್ವಾಂಸನನ್ನು ತನ್ನ ಗುರುವೆಂದು ಪುರಸ್ಕರಿಸಿದನು. ಇವನನ್ನು ವರ್ಣಾಶ್ರಮಧರ್ಮ ಸಂರಕ್ಷಕನಾಗಿದ್ದನೆಂದು ಶಾಸನಗಳಲ್ಲಿ ಹೆಸರಿಸಲಾಗಿದೆ. ಅವಿನೀತನು ಶಿವೋಪಾಸಕನಾಗಿದ್ದು, ಹರ ಚರಣಾರವಿಂದ ಪ್ರಣೀಪತ ಎಂಬ ಬಿರುದನ್ನು ಹೊಂದಿದ್ದನು. ಇವನ ಶಾಸನಗಳಲ್ಲಿ ಜನರು ಅನುಸರಿಸಿದ್ದ ಹಲವಾರು ಕಸಬುಗಳು ಮತ್ತು ಆರ್ಥಿಕ ವಿವರಗಳು ಇವೆ. ಅವಿನೀತನು ಬ್ರಾಹ್ಮಣರಿಗೆ ವಿಶೇಷ ದಾನದತ್ತಿಗಳನ್ನು ನೀಡಿದುದಲ್ಲದೆ ಅಶ್ವಮೇಧ ಯಾಗವನ್ನು ಸಹ ಮಾಡಿದುದಾಗಿ ಇವನ ಶಾಸನಗಳಿಂದ ತಿಳಿದುಬರುತ್ತದೆ.

## ದುರ್ವಿನೀತ

ಅವಿನೀತನ ತರುವಾಯ ಅವನ ಹಿರಿಯ ಮಗನಾದ ದುರ್ವಿನೀತನು ರಾಜನಾಧನು. ಅವಿನಿತನು ತನ್ನ ಕಿರಿಯ ರಾಣಿಯ ಮಗನಿಗೆ ಪಟ್ಟಕಟ್ಟಿದುದರಿಂದ ಪ್ರಾರಂಭದಲ್ಲಿ ಸಹೋದರರಲ್ಲಿ ಯಾದವೀಕಲಹವು ನಡೆಯಿತು. ಆದರೆ ಪರಾಕ್ರಮಿಯಾದ ದುರ್ವಿನೀತನು ತನ್ನ ಸಹೋದರ ಮತ್ತು ಅವನ ಸಹಾಯಕ್ಕೆ ಧಾವಿಸಿದ ಪಲ್ಲವರನ್ನು ಸೋಲಿಸಿ ಸಿಂಹಾಸನವನ್ನು ಪಡೆದನು. ದುರ್ವಿನೀತನ ಹೆಬ್ಬೆಟ್ಟ ಶಾಸನವು ಇವನ ಆಳ್ವಿಕೆ ಮತ್ತು ಗಂಗರ ಕಾಲಾನುಕ್ರಮಣಿಕೆಯನ್ನು ವಿವರಿಸುವ ಉತ್ತಮ ದಾಖಲೆಯೆಂದು ಪರಿಗಣಿಸಲ್ಪಟ್ಟಿದೆ. ದುರ್ವಿನೀತನು ಕ್ರಿ.ಶ.495 ರಿಂದ 535 ರವರೆಗೆ ಆಳಿದನು.

ಜೇಷ್ಠಾದೇವಿ ಮತ್ತು ಅವಿನೀತನ ಪುತ್ರನಾದ ದುರ್ವಿನೀತನು ತನ್ನ ಮಲ ಸಹೋದರನನ್ನು ಸೋಲಿಸಿದ ಹಲವು ವರ್ಷಗಳ ಕಾಲ ಅವನ ಪ್ರತಿರೋಧವನ್ನು ಎದುರಿಸಬೇಕಾಯಿತು. ಅವನ ತಾಯಿಯು ಪಲ್ಲವ ಮನೆತನದ ಸಂಬಂಧಿಯಾಗಿದ್ದುದರಿಂದ ಪಲ್ಲವರು ದುರ್ವಿನೀತನ ಮೇಲೆ ಯುದ್ಧ ಹೂಡಿದರು. ದುರ್ವಿನೀತನು ಪಲ್ಲವರ ಸೈನ್ಯವನ್ನು ಕೊಯಮತ್ತೂರು ಮತ್ತು ಸೇಲಂ ಜಿಲ್ಲೆಗಳಲ್ಲಿರುವ ಅಂಧೇರಿ, ಆಲತ್ತೂರು, ಪುರುಲಾರೆ ಮತ್ತು ಪೆನ್ನಾಗರಂ ಎಂಬ ಸ್ಥಳಗಳಲ್ಲಿ ಪೂರ್ಣವಾಗಿ ಸೋಲಿಸಿದನು. ಅಲ್ಲದೆ ತನ್ನ ಮಲತಮ್ಮನ ಸಹಾಯಕ್ಕೆ ಧಾವಿಸಿದ್ದ ಕದಂಬ ಕೃಷ್ಣವರ್ಮನ ಮಕ್ಕಳಾದ ಅಜವರ್ಮ ಮತ್ತು ಭೋಗವರ್ಮರನ್ನೂ ಸೋಲಿಸಿದನು. ಈ ಯುದ್ಧಗಳು ಮತ್ತು ಅವುಗಳಲ್ಲಿ ಗಳಿಸಿದ ವಿಜಯಗಳಿಂದ ಗಂಗರಾಜ್ಯದ ಎಲ್ಲೆಗಳು ವಿಸ್ತಾರವಾದವು. ಪುನ್ನಾಟದ ರಾಜನು ಮಡಿದು ಉತ್ತರಾಧಿಕಾರಿಗಳಿರಲಿಲ್ಲ–ವಾದ್ದರಿಂದ ಅಲ್ಲಿನ ರಾಜನ ಮಗಳ ಮಗನಾದ ದುರ್ವಿನೀತನಿಗೆ ಆ ರಾಜ್ಯವು ಸೇರಿತು. ಕಾವೇರಿ ಕಪಿಲಾನದಿಗಳ ಬಯಲಿನಲ್ಲಿದ್ದ ಸಂಪದ್ಭರಿತವಾದ ಪುನ್ನಾಟವು ಗಂಗರಾಜ್ಯಕ್ಕೆ ಸೇರಿದುದರಿಂದ ಗಂಗವಾಡಿಯು ವಿಶಾಲವೂ ಅಜೇಯವೂ ಆದ ಸಾರ್ವಭೌಮ ರಾಜ್ಯವಾಗಿ ಪರಿಣಮಿಸಿತು.

ಪಲ್ಲವರು ಆಗ ತಾನೆ ಸ್ಥಾಪಿತವಾಗಿದ್ದ ಬಾದಾಮಿ ಚಾಳುಕ್ಯರ ಮೇಲೆ ಆಕ್ರಮಣ ಮಾಡಿದರು. ದುರ್ವಿನೀತನ ಮಗಳನ್ನು ಚಾಳೂಕ್ಯ ಸಂತತಿಯ ವಿಜಯಾದಿತ್ಯನಿಗೆ ಕೊಟ್ಟು ಗಂಗ ಮತ್ತು ಚಾಳುಕ್ಯ ಮನೆತನಗಳ ಮಧ್ಯೆ ವೈವಾಹಿಕ ಬಾಂಧವ್ಯವೇರ್ಪಟ್ಟಿತ್ತು. ಪಲ್ಲವರು ವಿಜಯಾದಿತ್ಯನನ್ನು ಯುದ್ಧದಲ್ಲಿ ಕೊನೆಗಾಣಿಸಿ ಅವನ ರಾಜ್ಯವನ್ನು ಆಕ್ರಮಿಸಿದರು. ಒಂದನೇ ಪುಲಿಕೇಶಿಯ ತಾತನಾದ ಜಯಸಿಂಹನು ಆಗ ಇನ್ನು ಬಾಲಕನಾಗಿದ್ದನು. ಈ ದಾರುಣ ಸಂದರ್ಭದಲ್ಲಿ ದುರ್ವಿನೀತನು ಚಾಳುಕ್ಯರ ಸಹಾಯಕ್ಕೆ ಧಾವಿಸಿ ಪಲ್ಲವರನ್ನು ಸೋಲಿಸಿ ಬಾಲಕ ಜಯಸಿಂಹನನ್ನು ಚಾಳುಕ್ಯ ಸಿಂಹಾಸನದ ಮೇಲೆ ಕೂಡಿಸಿ, ಅವನು ಪ್ರಾಪ್ತ ವಯಸ್ಸಿಗೆ ಬರುವವರೆಗೂ ಸಂರಕ್ಷಿಸಿದನು. ದುರ್ವಿನೀತನ ಕಾಲದಿಂದ ಗಂಗ ಮತ್ತು ಪಲ್ಲವರ ಮಧ್ಯೆ ಹಗೆತನವು ಮತ್ತು ಗಂಗ ಹಾಗೂ ಬಾದಾಮಿ ಚಾಳುಕ್ಯ ಮನೆತನಗಳ ಮಧ್ಯೆ ಮಧುರ ಬಾಂಧವ್ಯವೂ ಸ್ಥಾಪಿತವಾಯಿತು.

ದುರ್ವಿನೀತನು ಸಮರ್ಥ ಆಡಳಿತಗಾರನಾಗಿದ್ದನು. ಇವನು ರಾಜನಿಗಿರಬೇಕಾದ ಪ್ರಭುಶಕ್ತಿ, ಮಂತ್ರಶಕ್ತಿ ಮತ್ತು ಉತ್ಸಾಹಶಕ್ತಿ ಇವುಗಳನ್ನು ಹೊಂದಿದ್ದು ಶತ್ರುಗಳಿಗೆ ಅಜೇಯನಾಗಿದ್ದನೆಂದು ಶಾಸನಗಳು ವರ್ಣಿಸುತ್ತವೆ. ಇವನ ಕಾಲದಲ್ಲಿ ರಾಜ್ಯವು ಉತ್ತರದಲ್ಲಿ ಬಳ್ಳಾರಿ ಜಿಲ್ಲೆಯಿಂದ ದಕ್ಷಿಣದಲ್ಲಿ ಸೇಲಂ ಮತ್ತು ಕೊಯಮತ್ತೂರು ಜಿಲ್ಲೆಗಳನ್ನು ಒಳಗೊಂಡಿತ್ತು. ದುರ್ವಿನೀತನು ಹಿಂದೂ ಮತಾವಲಂಬಿಯಾಗಿದ್ದು ವಿಷ್ಣುವಿನ ಪರಮ ಆರಾಧಕನಾಗಿದ್ದನು. ಇವನಿಗೆ ಕಮಲೋದರ ಎಂಬ ಬಿರುದು ಇದ್ದಿತು. ಇವನು ಹಿರಣ್ಯ ಗರ್ಭಯಾಗವನ್ನು ಆಚರಿಸಿದುದಾಗಿ ಇವನ ಶಾಸನಗಳಿಂದ ತಿಳಿದುಬರುತ್ತದೆ. ದುರ್ವಿನೀತನು ಅನೇಕ ಬ್ರಾಹ್ಮಣ ವಿದ್ವಾಂಸರಿಗೆ ಗ್ರಾಮಗಳನ್ನು ದತ್ತಿಯಾಗಿ ನೀಡಿದನು. ಜೈನ ವಿದ್ವಾಂಸರಿಗೂ ತನ್ನ ಆಸ್ಥಾನದಲ್ಲಿ ವಿಶೇಷ ಮನ್ನಣೆ ನೀಡಿದ್ದನು.

ದುರ್ವಿನೀತನು ಮಹಾ ಮೇಧಾವಿ ಪ್ರಭುಗಳಲ್ಲೊಬ್ಬನು. ಇವನ ಪ್ರೋತ್ಸಾಹದಿಂದ ಕನ್ನಡ ನಾಡಿನಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿಯಲ್ಲಿ ವಿಶೇಷ ಪುರೋಭಿವೃದ್ಧಿಯಾಯಿತು. ಕನ್ನಡ ಮತ್ತು ಸಂಸ್ಕೃತದಲ್ಲಿ ಅನೇಕ ಗ್ರಂಥಗಳು ರಚನೆಯಾದವು. ಆ ಕಾಲದ ಕನ್ನಡ ಗ್ರಂಥಗಳು ದೊರೆತಿಲ್ಲದಾಗ್ಗೂ ಕವಿರಾಜಮಾರ್ಗದ ಪ್ರಕಾರ ದುರ್ವಿನೀತನು ಕನ್ನಡ ಗದ್ಯಪದ್ಯ ರಚನೆಯ ಅಗ್ರಗಣ್ಯರಲ್ಲೊಬ್ಬನಾಗಿದ್ದನು. ಸ್ವತಃ ವಿದ್ವಾಂಸನಾದ ದುರ್ವಿನೀತನು ಭಾರವಿಯ ಕಿರಾತಾರ್ಜುನೀಯದ 15ನೇ ಸರ್ಗಕ್ಕೆ ಭಾಷ್ಯ ಬರೆದದುದಲ್ಲದೆ ಗುಣಾಢ್ಯನ ವಡ್ಡಕಥೆಯನ್ನು ಸಂಸ್ಕೃತಕ್ಕೆ ತರ್ಜುಮೆ ಮಾಡಿದನು. ದುರ್ವಿನೀತನ ಆಸ್ಥಾನದಲ್ಲಿದ್ದ ಪೂಜ್ಯಪಾದನು ಶಬ್ದಾವತಾರ ಎಂಬ ಗ್ರಂಥವನ್ನು ರಚಿಸಿದನು. ವಿದ್ವಾಂಸನೂ ವಿದ್ವಜ್ಜನರ ಪ್ರೋತ್ಸಾಹಕನೂ ಆದ ದುರ್ವಿನೀತನ ಆಸ್ಥಾನಕ್ಕೆ ಸುಪ್ರಸಿದ್ಧ ಕವಿಯಾದ ಭಾರವಿಯು ಭೇಟಿ ನೀಡಿದುದಾಗಿ ತಿಳಿದುಬರುತ್ತದೆ.

ದುರ್ವಿನೀತನು ರಾಜನೀತಜ್ಞನೆಂದೂ ವೀರಾಗ್ರಣಿಯೆಂದೂ ಸಂಗೀತ ಸಾಹಿತ್ಯದಲ್ಲಿ ಪ್ರೌಢಿಮೆ ಹೊಂದಿದ್ದನೆಂದೂ ಇವನ ಸಮಕಾಲೀನ ಶಾಸನಗಳಲ್ಲಿ ವಿವರಿಸಲಾಗಿದೆ. ರಾಜತಂತ್ರ ಕೌಶಲದಲ್ಲಿ ಚಾಣಕ್ಯನಿಗೂ ಕಲೆ, ಸಂಗೀತ ಮತ್ತು ನೃತ್ಯದಲ್ಲಿ, ತುಂಬುರು ನಾರದ ಮತ್ತು ಭರತ ದೇವನಿಗೂ ಅಸ್ತ್ರೋಪಾಸ್ತ್ರ ಬಳಕೆಯಲ್ಲಿ ಪರಶುರಾಮನಿಗೂ, ಆಯುರ್ವೇದಪಾಂಡಿತ್ಯದಲ್ಲಿ ಚರಕ ಮತ್ತು ಧನ್ವಂತರಿಗೂ ಇವನನ್ನು ಹೋಲಿಸಲಾಗಿರುವ ಶಾಸನಗಳು ದೊರೆತಿವೆ. ಒಂದು ಶಾಸನದಲ್ಲಿ ಇವನನ್ನು ಶ್ರೀಕೃಷ್ಣನಿಗೂ ಮತ್ತೊಂದರಲ್ಲಿ ಶ್ರೀಮನ್ಮಹಾವಿಷ್ಣುವಿನ ಅವತಾರವೆಂದೂ ಪೌರಾಣಿಕವಾಗಿಯೂ ವರ್ಣಿಸಲಾಗಿದೆ. ದುರ್ವಿನೀತನು ಅವನೀಸ್ಥಿರ ಪ್ರಜಾಲಯ, ದಕ್ಷಿಣರಾಜ್ಯ ಸಂರಕ್ಷಣ ಸಮರ್ಥ ಕೊಂಗುಣೀವರ್ಮ, ಮಾಧವ ದುರ್ವಿನೀತ ಮತ್ತು ಕೊಂಗುಣೀವರ್ಮಧರ್ಮ ಮಹಾರಾಜಾಧಿರಾಜ ದುರ್ವಿನೀತ ಎಂಬ ಅನೇಕ ಸಾರ್ವಭೌಮ ಬಿರುದುಗಳನ್ನು ಹೊಂದಿದ್ದನು. ನಲವತ್ತು ವರ್ಷಗಳ ಕಾಲದ ಇವನ ಆಳ್ವಿಕೆಯು ಕನ್ನಡನಾಡಿನ ಬಹುಭಾಗ ಮತ್ತು ಆಜುಬಾಜಿನ ಪ್ರದೇಶಗಳ ಮೇಲೆ ಸ್ಥಾಪನೆಯಾಗಿತ್ತು. ದಕ್ಷಿಣ ಭಾರತದಲ್ಲಿ ಗಂಗ ಮನೆತನವು ಅಜೇಯವಾದುದಾಗಿತ್ತು. ಬಾದಾಮಿ ಚಾಳುಕ್ಯ ಮನೆತನ ಉಳಿದು ಬಾಳಲು ದುರ್ವಿನೀತನು ನೆರವಾದನು. ಈ ರೀತಿಯಾಗಿ ಗಂಗಪ್ರಭು ಮಾಧವ ದುರ್ವಿನೀತನು ಕನ್ನಡನಾಡಿನಲ್ಲಿ ಹಾಗೂ ಪ್ರಾಚೀನ ಕಾಲದ ದಕ್ಷಿಣ ಭಾರತದಲ್ಲಿ ಆಳಿದ ಸಮರ್ಥ ಹಾಗೂ ಶ್ರೇಷ್ಠ ರಾಜರಲ್ಲಿ ಒಬ್ಬನಾಗಿದ್ದಾನೆ.

ದುರ್ವಿನೀತನ ಮರಣಾನಂತರ ಇವನ ಮಗನಾದ ಮುಷ್ಕರನು ರಾಜನಾಗಿ ಕ್ರಿ.ಶ.535ರಿಂದ 585 ರವರೆಗೆ ಆಳ್ವಿಕೆ ನಡೆಸಿದನು. ಇವನ ಶಾಸನವೊಂದನ್ನು ಲಂಡನ್ನಿನ ಬ್ರಿಟಿಷ್ ಮೂಸಿಯಂನಲ್ಲಿಡ–ಲಾಗಿದೆ. ಮುಷ್ಕರನು ರಾಜ್ಯಾಡಳಿತವನ್ನು ಸಮರ್ಥವಾಗಿ ಮುಂದುವರಿಸಿದನು. ಇವನ ತಮ್ಮನಾದ ಪೊಲವೀರನು ಆಡಳಿತದಲ್ಲಿ ಮುಷ್ಕರನಿಗೆ ನೆರವಾಗಿದ್ದನು. ಮುಷ್ಕರ ಮರಣಾನಂತರ ಇವನ ಮಗ ಶ್ರೀವಿಕ್ರಮನು ಪಟ್ಟಕ್ಕೆ ಬಂದು ಕ್ರಿ.ಶ.585 ರಿಂದ 635 ರವರೆಗೆ ಆಳಿದನು. ಇವನೂ ಸಹ ತನ್ನ ತಾತನಂತೆ ವಿದ್ವಾಂಸನಾಗಿದ್ದನೆಂದು ತಿಳಿದುಬರುತ್ತದೆ. ಶ್ರೀ ವಿಕ್ರಮನೂ ಇವನ ಮಗ ಭೂವಿಕ್ರಮನೂ ಗಂಗವಾಡಿಯ ಬೇರೆ ಬೇರೆ ಪ್ರದೇಶಗಳನ್ನು ಏಕಕಾಲದಲ್ಲಿ ಆಳುತ್ತಿದ್ದರೆಂದು ನಂಬಲಾಗಿತ್ತು. ಆದರೆ ಇತ್ತೀಚಿನ ಸಂಶೋಧನೆಗಳಿಂದ ಯುವರಾಜ ಭೂವಿಕ್ರಮನು ತನ್ನ ತಂದೆಯ ಕಾಲದಲ್ಲಿ ಕೋಲಾರ ಪ್ರಾಂತದ ಮಾಂಡಲಿಕನಾಗಿ ಹೆಚ್ಚು ಸ್ವತಂತ್ರ ವಹಿಸಿ ಅಧಿಕಾರ ನಡೆಸಿದನೆಂದು ಗೊತ್ತಾಗಿದೆ. ಶ್ರೀವಿಕ್ರಮನ ಮರಣಾನಂತರ ಭೂ ವಿಕ್ರಮನು ರಾಜನಾದನು.

## ಭೂ ವಿಕ್ರಮ

ಭೂ ವಿಕ್ರಮನು ಕ್ರಿ.ಶ.635 ರಿಂದ 679 ರವರೆಗೆ ಆಳಿದನು. ಕ್ರಿ.ಶ.608 ರಿಂದ ಕುವಲಾಳ ನಾಡಿನ ಪ್ರಾಂತ್ಯಾಧಿಕಾರಿಯಾಗಿ ದಕ್ಷತೆಗೂ ಪರಾಕ್ರಮಕ್ಕೂ ಹೆಸರಾಗಿದ್ದನು. ಚಾಳುಕ್ಯರಿಗೂ ಗಂಗರಿಗೂ ರಕ್ತಸಂಬಂಧವಿತ್ತು. ಚಾಳುಕ್ಯ ಇಮ್ಮಡಿ ಪುಲಿಕೇಶಿಯ ದಕ್ಷಿಣದ ವಿಜಯದಲ್ಲಿ ಭೂ ವಿಕ್ರಮನು ಭಾಗವಹಿಸಿದ್ದನೆಂದು ತಿಳಿದುಬರುತ್ತದೆ. ಪಲ್ಲವ ಒಂದನೇ ನರಸಿಂಹನ ವಾತಾಪಿಯ ಮುತ್ತಿಗೆ ಪುಲಿಕೇಶಿಯ ಮರಣ ಮತ್ತು ಚಾಳುಕ್ಯ ರಾಜ್ಯಶ್ರೀಗೆ ಕವಿದ ಮಂಕು ಇವುಗಳಿಂದ ಕುಪಿತನಾದ ಭೂ ವಿಕ್ರಮನು ಪಲ್ಲವರನ್ನು ಪರಾಜಯಗೊಳಿಸಲು ಕಂಕಣಬದ್ಧನಾದನು. ಚಾಳುಕ್ಯ ಒಂದನೇ ವಿಕ್ರಮಾದಿತ್ಯನ ರಾಣಿಯಾದ ಗಂಗಮಹಾದೇವಿಯು ಭೂವಿಕ್ರಮನ ಮಗಳೆಂದು ತಿಳಿದುಬರುತ್ತದೆ. ಭೂ ವಿಕ್ರಮನು ನರಸಿಂಹವರ್ಮನ್ ಮತ್ತು ಅವನ ಉತ್ತರಾಧಿಕಾರಿಗಳೊಡನೆ ವೀರಾವೇಶದಿಂದ ಹೋರಾಡಿ ಅವರನ್ನು ವಿಲಂದೆ ಎಂಬ ಪ್ರಸಿದ್ಧ ಯುದ್ಧದಲ್ಲಿ ಸೋಲಿಸಿ ಪಲ್ಲವ ರಾಜನ ಉಗ್ರೋದಯ ಎಂಬ ಕಂಠೀಹಾರವನ್ನು ಕಸಿದು ಕೊಂಡುದಲ್ಲದೆ ಶ್ರೀ ವಲ್ಲಭ ಮೊದಲಾದ ಸಾರ್ವಭೌಮ ಬಿರುದುಗಳನ್ನು ಧರಿಸಿದನು. ಇವನ ಕಾಲದಲ್ಲಿ ಚನ್ನಪಟ್ಟಣ ತಾಲ್ಲೂಕಿನ ಮಾಂಕುಂದ ಎಂಬ ಗ್ರಾಮವೂ ಒಂದು ಉಪರಾಜಧಾನಿಯಾಗಿತ್ತು. ಶೌರ್ಯ ಪರಾಕ್ರಮಗಳಿಗೆ ಹೆಸರಾದ ಭೂವಿಕ್ರಮನು ಪ್ರಖ್ಯಾತನಾಗಿದ್ದಾನೆ. ಪಲ್ಲವರ ಮೇಲಿನ ಯುದ್ಧದಲ್ಲಿ

ಸಾಹಸದಿಂದ ಹೋರಾಡಿದ ಬಾಣ ರಾಜನಾದ ಬಾಣವಿದ್ಯಾಧರ ಮಹಾಪಟುಭಟ ವಿಕ್ರಮಾದಿತ್ಯ ಗವುಂಡ ಎಂಬುವನಿಗೆ ವಿಶೇಷ ಸನ್ಮಾನ ಮಾಡಿದನು.

## ಒಂದನೇ ಶಿವಮಾರ

ಇವನ ಮರಣಾನಂತರ ಇವನಿಗೆ ಗಂಡು ಮಕ್ಕಳಿರಲಿಲ್ಲದುದರಿಂದ ಕಿರಿಯ ಸೋದರ ಒಂದನೇ ಶಿವಮಾರನು ರಾಜನಾಗಿ ಕ್ರಿ.ಶ.679 ರಿಂದ 725 ರವರೆಗೆ ಆಳಿದನು. ಇವನಿಗೆ ನವಕಾಮ, ಶಿಷ್ಟಪ್ರಿಯ, ಅವನೀಮಹೇಂದ್ರ, ಸ್ಥಿರವಿನೀತ, ವೃದ್ಧರಾಜ ಮೊದಲಾದ ಬಿರುದುಗಳಿದ್ದವು. ಇವನ ಕಾಲದಲ್ಲೂ ಗಂಗ ಮತ್ತು ಚಾಳುಕ್ಯ ಮನೆತನಗಳ ಮಧ್ಯೆ ಮಧುರ ಬಾಂಧವ್ಯವಿತ್ತು. ಚಾಳುಕ್ಯರ ಶಾಸನಗಳಲ್ಲಿ ಗಂಗರನ್ನು ಉಚ್ಚವಂಶೀಯರೆಂದು ಗೌರವದಿಂದ ಸಂಬೋಧಿಸಲಾಗಿದೆ. ಮಂಡ್ಯ ಜಿಲ್ಲೆಯ ಹಳ್ಳಿಗೆರೆ ಸಾಸನದ ಪ್ರಕಾರ ಶಿವಮಾರನು ನೊಳಂಬ ಸಾಮಂತನನ್ನು ಅವಿಧೇಯತೆಗಾಗಿ ಶಿಕ್ಷಿಸಿದನು. ಅಲ್ಲದೆ ಪಲ್ಲವರನ್ನೂ ಸೋಲಿಸಿದುದಾಗಿಯೂ ತಿಳಿದುಬರುತ್ತದೆ. ಇವನ ಕಾಲದಲ್ಲಿ ರಾಜ್ಯವು ಪುನ್ನಾಟ, ಕೊಂಗು, ತೊರೆನಾಡು 500, ಕೊಂಗಲ್ ನಾಡು 2000, ಮಲೆನಾಡು 1000 ಮೊದಲಾದ ನಾಡುಗಳನ್ನೊಳ-ಗೊಂಡಿತ್ತು. ಇವನ ಮಗನಾದ ಎರೆಗಂಗ ಮತ್ತು ಮೊಮ್ಮಗ ಶ್ರೀಪುರುಷ ಇವರು ಪ್ರಾಂತ್ಯಾಧಿಕಾರಿಗಳಾಗಿ ನೇಮಕವಾಗಿದ್ದರು. ಶಿಷ್ಟಪ್ರಿಯ ಎಂಬ ಬಿರುದನ್ನು ಹೊಂದಿದ್ದ ಶಿವಮಾರನು ಬ್ರಾಹ್ಮಣರಿಗೂ ಜೈನ ವಿದ್ವಾಂಸರಿಗೂ ಗ್ರಾಮಗಳನ್ನು ದತ್ತಿ ನೀಡಿದನು. ಒಂದನೇ ಶಿವಮಾರನು ಕ್ರಿ.ಶ.725ರಲ್ಲಿ ಮರಣ ಹೊಂದಿದನು.

ಶಿವಮಾರನ ಮಗನಾದ ಎರೆಗಂಗನು ಮೊದಲೇ ಮರಣ ಹೊಂದಿದ್ದರಿಂದ ಮೊಮ್ಮಗನಾದ ಶ್ರೀಪುರುಷನು ಕ್ರಿ.ಶ.725ರಲ್ಲಿ ರಾಜನಾಗಿ 788ರವರೆಗೂ ಆಳಿದನು. ಶ್ರೀಪುರುಷನ ಆಳ್ವಿಕೆಯ ಕಾಲವು ಕರ್ನಾಟಕದ ಚರಿತ್ರೆಯಲ್ಲಿ ಪ್ರಮುಖ ಘಟನೆಗಳನ್ನು ಕಂಡಿತು. ಬಾದಾಮಿ ಚಾಳುಕ್ಯ ಮನೆತನವು ಕೊನೆಗೊಂಡಿತು. ರಾಷ್ಟ್ರಕೂಟ ಸಂತತಿಯು ಸ್ಥಾಪಿತವಾಯಿತು. ತಮಿಳುನಾಡಿನಲ್ಲಿ ಪಲ್ಲವರ ಪ್ರಭಾವವು ಇಳಿಮುಖವಾಗತೊಡಗಿತು. ಶ್ರೀಪುರುಷನು ಸಿಂಹಾಸನಕ್ಕೆ ಬರುವ ಮೊದಲು ಕೆರೆಗೋಡುನಾಡು, ಎಳೆನಾಗರನಾಡು, ಅವನೀಯನಾಡು, ಮೊದಲಾದ ಪ್ರಾಂತಗಳ ಆಡಳಿತ ಮುಖ್ಯನಾಗಿದ್ದು ವಿಶೇಷ ಅನುಭವ ಗಳಿಸಿದ್ದನು. ಯುವರಾಜನಾಗಿರುವಾಗಲೇ ಮಹಾಬಲಿ ಬಾಣನನ್ನು ಸೋಲಿಸಿ ಅವನ ಮಗ ಜಗದೇಕಮಲ್ಲ ಬಾಣನಿಗೆ ಪಟ್ಟಕಟ್ಟಿದ್ದನು.

ಅಧಿಕಾರ ವಹಿಸಿಕೊಂಡ ತರುವಾಯ ಪಲ್ಲವರೊಡನೆ ಹೋರಾಡಬೇಕಾಯಿತು. ಪ್ರಾರಂಭದಲ್ಲಿ ಶ್ರೀಪುರುಷನು ನಂದಿವರ್ಮನ್ ಪಲ್ಲವ ಮಲ್ಲನಿಂದ ಪರಾಜಯಗೊಳ್ಳಬೇಕಾಯಿತು. ಆದರೆ ತನ್ನ ಬಲವನ್ನು ವೃದ್ಧಿಸಿಕೊಂಡು ವಿಲಂದೆ ಎಂಬಲ್ಲಿ ಪಲ್ಲವರನ್ನು ಎದುರಿಸಿದನು. ಪಲ್ಲವರ ಸೈನ್ಯ ಸೋತು ಹೋಯಿತು. ಶ್ರೀಪುರುಷನು ಪಲ್ಲವರ ಬಿರುದಾದ ಪೆರ್ಮಾಡಿ ಎಂಬುದನ್ನು ತಾನೇ ಧರಿಸಿದನು. ಇವನು ಪಲ್ಲವರ ಮೇಲೆ ತೋರಿಸಿದ ಶೌರ್ಯದಿಂದ ಇವನಿಗೆ ಭೀಮಕೋಪ ಎಂಬ ಬಿರುದು ಬಂದಿತ್ತು. ರಾಜನೀತಜ್ಞನಾದ ಶ್ರೀಪುರುಷನು ಮಧುರೆಯ ಪಾಂಡ್ಯರೊಡನೆ ವೈವಾಹಿಕ ಸಂಬಂಧ ಬೆಳಸಿ ತನ್ನ ಪುತ್ರಿಯೊಬ್ಬಳನ್ನು ರಾಜಸಿಂಹ ಪಾಂಡ್ಯನ ಕುಮಾರ ಜಟಿಲ ಪರಾಂತಕನಿಗೆ ಕೊಟ್ಟು ವಿವಾಹ ಮಾಡಿದ್ದನು. ಇದರಿಂದ ಪಲ್ಲವರ ಪ್ರಾಬಲ್ಯವನ್ನು ಕುಗ್ಗಿಸಲು ಸಹಕಾರಿಯಾಯಿತು.

ಕ್ರಿ.ಶ.757ರಲ್ಲಿ ರಾಷ್ಟ್ರಕೂಟ ದಂತಿದುರ್ಗನು ಬಾದಾಮಿ ಚಾಳುಕ್ಯ ಮನೆತನದ ಕೊನೆಯ ಅರಸನಾದ ಇಮ್ಮಡಿ ಕೀರ್ತಿವರ್ಮನನ್ನು ಸೋಲಿಸಿ ರಾಷ್ಟ್ರಕೂಟ ಸಾರ್ವಭೌಮತ್ವವನ್ನು ಸ್ಥಾಪಿಸಿದನು. ಚಾಳುಕ್ಯ ಮನೆತನವನ್ನು ಅಂತ್ಯಗೊಳಿಸಿದ ರಾಷ್ಟ್ರಕೂಟರನ್ನು ಗಂಗರು ವಿರೋಧಿಸಿದರು. ಗಂಗ ಮತ್ತು ರಾಷ್ಟ್ರಕೂಟರ ಮಧ್ಯೆ ವೈಮನಸ್ಯವು ಬೆಳೆದು ಪರಸ್ಪರ ಕಾದಾಟದಲ್ಲಿ ಪರ್ಯವಸಾನಗೊಂಡಿತು. ಸುಮಾರು ಒಂದು ನೂರು ವರ್ಷಗಳ ಕಾಲ ಗಂಗರು

ರಾಷ್ಟ್ರಕೂಟರ ಕಡುವಿರೋಧಿಗಳಾಗಿ ಮುಂದುವರಿದರು. ದಂತಿದುರ್ಗನ ತರುವಾಯ ಸಿಂಹಾಸನಕ್ಕೆ ಬಂದ ಕೃಷ್ಣನು ಕ್ರಿ.ಶ.768ರಲ್ಲಿ ಗಂಗವಾಡಿಯನ್ನು ಮುತ್ತಿದನು. ಶ್ರೀಪುರುಷನು ಅನೇಕ ಅಪಜಯಗಳನ್ನು ಹೊಂದಬೇಕಾಯಿತು. ಪಿಂಚನೂರು, ಕಾಗೆಮೊಗೆಯೂರು, ಬಾಗೆಯೂರು ಮೊದಲಾದ ಕಡೆಗಳಲ್ಲಿ ಯುದ್ಧಗಳು ಎಡೆಬಿಡದೆ ನಡೆದವು. ಗಂಗರ ಉಪರಾಜಧಾನಿಯಾದ ಮಾನ್ಯಪುರ ಅಥವಾ ಮಣ್ಣೆಯು ಸ್ವಲ್ಪಕಾಲ ರಾಷ್ಟ್ರಕೂಟರ ವಶವಾಯಿತು. ಆದರೂ ಶ್ರೀ ಪುರುಷನು ಧೃತಿಗೆಡದೆ ತನ್ನ ಮಗನೂ ಪರಾಕ್ರಮಿಯೂ ಆದ ಸಿಯಾಗೆಲ್ಲ ಮತ್ತು ಇತರೆ ದಳಪತಿಗಳೊಡನೆ ವೀರಾವೇಶದಿಂದ ಹೋರಾಡಿದನು. ರಾಷ್ಟ್ರಕೂಟ ಕೃಷ್ಣನು ಶ್ರೀಪುರುಷನನ್ನು ಪೂರ್ಣವಾಗಿ ಸೋಲಿಸಲಾಗಲಿಲ್ಲ. ಕೃಷ್ಣನ ಮರಣಾನಂತರ ಅವನ ಉತ್ತರಾಧಿಕಾರಿಯಾದ ಧೃವನ ಕಾಲದಲ್ಲೂ ಯುದ್ಧಗಳು ಮುಂದುವರಿದವು. ಗಂಗರ ಹಲವು ಪ್ರದೇಶಗಳು ರಾಷ್ಟ್ರಕೂಟರ ವಶವಾದವು. ಮಿಗಿಲಾಗಿ ಶ್ರೀಪುರುಷನ ಮಗನಾದ ಸಿಯಾಗಲ್ಲನು ರಣರಂಗದಲ್ಲಿ ಮಡಿದನು. ಆದರೂ ಶ್ರೀ ಪುರುಷನು ರಾಷ್ಟ್ರಕೂಟರಿಗೆ ತಲೆಬಾಗಲಿಲ್ಲ. ತನ್ನ ಕೊನೆಗಾಲದವರೆಗೂ ಹೋರಾಡಿ ರಾಜಾಧಿರಾಜ, ಪರಮೇಶ್ವರ, ಶ್ರೀಪುರುಷ ಎಂಬ ಪರಮಾಧಿಕಾರ ಬಿರುದನ್ನು ಧರಿಸಿದನು.

## ಶ್ರೀ ಪುರುಷ

ಶ್ರೀಪುರುಷನಿಗೆ ಮುತ್ತಯ್ಯ, ಮುತ್ತರಸ, ಮಾಧವ ಮುತ್ತುರಸ ಮತ್ತು ಕೊಂಗುಣೀ ಮುತ್ತರಸ ಎಂಬ ಹೆಸರುಗಳೂ ಇದ್ದವು. ಚಾಳುಕ್ಯ ಮನೆತನದ ವಿಜಯ ಮಹಾದೇವಿ ಎಂಬುವವಳು ಇವನ ರಾಣಿಯರಲ್ಲೊಬ್ಬಳಾಗಿದ್ದಲೂ. ವಿನಿಯವತಿನಿಮ್ಮಡಿ ಮತ್ತು ಕೊನಾರ್ಕದೇವಿ ಎಂಬುವರೂ ಇವನ ರಾಣೀಯಾಗಿದ್ದರೆಂದು ತಿಳಿದುಬರುತ್ತದೆ. ಇವನ ರಾಣಿಯರು ಆಡಳಿತದಲ್ಲಿ ಪಾಲ್ಗೊಂಡಿದ್ದರು. ಇವನಿಗೆ ಶಿವಮಾರ, ರಣವಿಕ್ರಮ ವಿಜಯಾದಿತ್ಯ, ದುಗ್ಗಮಾರ, ಎರೆಯಪ್ಪ ಮತ್ತು ಸಿಯಾಗೆಲ್ಲ ಎಂಬ ನಾಲ್ವರು ಗಂಡು ಮಕ್ಕಳಿದ್ದರು. ಶ್ರೀಪುರುಷನು ವೈದಿಕ ಮತಾವಲಂಬಿಯಾಗಿದ್ದು ಬ್ರಾಹ್ಮಣರಿಗೂ ಜೈನರಿಗೂ ದಾನದತ್ತಿಗಳನ್ನು ನೀಡಿದನು. ಗಜಶಾಸ್ತ್ರದಲ್ಲಿ ವಿಶೇಷ ಪ್ರವೀಣನಾಗಿದ್ದು ಗಜಶಾಸ್ತ್ರ ಎಂಬ ಗ್ರಂಥವನ್ನು ರಚಿಸಿದನು. ಇವನು ವ್ಯವಸಾಯ ವ್ಯಾಪಾರಕ್ಕೆ ನೀಡಿದ ಪ್ರೋತ್ಸಾಹದಿಂದ ಅನೇಕ ಯುದ್ಧಗಳು ಎಡಬಿಡದೆ ನಡೆದರೂ ರಾಜ್ಯದಲ್ಲಿ ಸುಭಿಕ್ಷವಿದ್ದು ಗಂಗರಾಜ್ಯವು ಶ್ರೀರಾಜ ಎಂಬ ಬಿರುದಿಗೆ ಪಾತ್ರವಾಗಿತ್ತು. ಅಲ್ಲದೆ ಇವನಿಗೆ ಶ್ರೀವಲ್ಲಭ, ಭೀಮಕೋಪ, ಪೆರ್ಮಾಡಿ, ರಣಭಾಜನ ಕೊಂಗುಣೀ ರಾಜಾಧಿರಾಜ ಪರಮೇಶ್ವರ ಶ್ರೀಪುರುಷ ಮೊದಲಾದ ಬಿರುದುಗಳಿದ್ದವು. ಶ್ರೀಪುರುಷನು ದಕ್ಷ ಆಡಳಿತಗಾರ. ಪರಾಕ್ರಮಿಯಾದ ಯೋಧ, ಸ್ವತಃ ಪಂಡಿತ. ಇವನ 63 ವರ್ಷಗಳ ದೀರ್ಘಕಾಲದ ಆಳ್ವಿಕೆಯು ಕನ್ನಡನಾಡಿನ ಇತಿಹಾಸದಲ್ಲಿ ಅನೇಕ ಘಟನಾವಳಿಗಳಿಂದ ಕೂಡಿದೆ.

ಶ್ರೀಪುರುಷನ ತರುವಾಯ ಇವನ ಮಗ ಎರಡನೇ ಶಿವಮಾರನು ರಾಜನಾಗಿ ಕ್ರಿ.ಶ.788 ರಿಂದ 812 ರವರೆಗೂ ಆಳಿದನು. ಇವನ ಆಳ್ವಿಕೆಯು ಗಂಗ ಮನೆತನದ ಇತಿಹಾಸದಲ್ಲಿ ಅತ್ಯಂತ ಸಂದಿಗ್ಧವೂ ಕ್ಲಿಷ್ಟಕರವೂ ಆದ ಕಾದವಾಗಿತ್ತು. ಪ್ರಾರಂಭದಲ್ಲಿ ತನ್ನ ಸಹೋದರನಾದ ದುಗ್ಗಮಾರ ಎರೆಯಪ್ಪನು ಸಿಂಹಾಸನಕ್ಕಾಗಿ ದಂಗೆಯೆದ್ದನು. ಶಿವಮಾರನು ನೊಳಂಬ ಸಾಮಂತ ಸಿಂಗಪೋತನ ಸಹಾಯದಿಂದ ಅವನನ್ನು ಅಡಗಿಸಿದನು. ಆ ವೇಳೆಗೆ ರಾಷ್ಟ್ರಕೂಟ ಸಿಂಹಾಸನಕ್ಕಾಗಿ 2ನೇ ಗೋವಿಂದನಿಗೂ ಧೃವನಿಗೂ ಅಂತಃಕಲಹಗಳು ಪ್ರಾರಂಭವಾಗಿದ್ದವು. ಶಿವಮಾರನು ಗೋವಿಂದನ ಸಹಾಯಕ್ಕೆ ಧಾವಿಸಿದನು. ಆದರೆ ಧೃವನಿಮದ ಗೋವಿಂದನು ಸೋತುಹೋದನು. ಅನಂತರ ಧೃವನು ಶಿವಮಾರನನ್ನು ಸೋಲಿಸಲು ಗಂಗವಾಡಿಗೆ ಮುತ್ತಿಗೆ ಹಾಕಿದನು. ಅವನು ಶಿವಮಾರನನ್ನು ಸೋಲಿಸಿ ಸೆರೆಹಿಡಿದನು. ತನ್ನ ಹಿರಿಯ ಮಗನಾದ ಕಂಭನನ್ನು ಗಂಗವಾಡಿಯ ರಾಜ್ಯಪಾಲನಾಗಿ ನೇಮಿಸಿದನು. ಶಿವಮಾರನು ಧೃವನ ಮರಣದವರೆಗೂ ರಾಷ್ಟ್ರಕೂಟರ ಸೆರೆಮನೆಯಲ್ಲೇ ಇದ್ದನು. ಧೃವನ ತರುವಾಯ ಅವನ ಮಕ್ಕಳಾದ ಕಂಭ ಮತ್ತು 3ನೇ ಗೋವಿಂದ ಇವರು ಸಿಂಹಾಸನಕ್ಕಾಗಿ ಕಾದಾಡಿದರು. ಶಿವಮಾರನ ಸಹಾಯವನ್ನಪೇಕ್ಷಿಸಿ ಗೋವಿಂದನು ಇವನನ್ನು ಸೆರೆಮನೆಯಿಂದ ಪಾರುಮಾಡಿ ಗಂಗವಾಡಿಗೆ ಕಳುಹಿಸಿದನು.

ಆದರೆ ಶಿವಮಾರನು ಕಂಭನ ಪಕ್ಷವನ್ನು ವಹಿಸಿದನು. ಪರಾಕ್ರಮಿಯಾದ ಗೋವಿಂದನು ಕಂಭನನ್ನು ಸೋಲಿಸಿದನು. ಅನಂತರ ಗಂಗವಾಡಿಯನ್ನು ಮುತ್ತಿ ಶಿವಮಾರನನ್ನು ಸೋಲಿಸಿ ಸೆರೆಹಿಡಿದನು. ತನ್ನ ಸಹೋದರನನ್ನು ಕ್ಷಮಿಸಿ ಅವನನ್ನು ಪುನಃ ಗಂಗವಾಡಿಯ ರಾಜ್ಯಪಾಲನನ್ನಾಗಿ ನೇಮಿಸಿದನು. ಹಲವು ವರ್ಷಗಳ ನಂತರ ಕಂಬನು ಮರಣ ಹೊಂದಿದನು. ಆ ವೇಳೆಗೆ ಉತ್ತರದ ದಿಗ್ವಿಜಯವನ್ನು ಕೈಗೊಂಡು ಯಶಸ್ವಿಯಾಗಿ ಹಿಂದಿರುಗಿದ ಮೂರನೇ ಗೋವಿಂದನು ಕರುಣೆಯಿಂದ ಶಿವಮಾರನನ್ನು ನಡೆಸಿಕೊಂಡನು. ಅವನನ್ನು ಸೆರೆಯಿಂದ ಬಿಡಿಸಿ ತಾನೇ ಸ್ವತಃ ತಲಕಾಡಿಗೆ ಬಂದು ಶಿವಮಾರನನ್ನು ಪುನಃ ಸಿಂಹಾಸನದ ಮೇಲೆ ಕೂಡಿಸಿದನು.

ಅನಂತರ ಶಿವಮಾರನು ಗೋವಿಂದನಿಗೆ ನಿಷ್ಠೆಯಿಂದಿದ್ದು ಶಾಂತಿಯಿಂದ ರಾಜ್ಯಭಾರ ಮಾಡಿದನು. ಶಿವಮಾರನು ರಾಷ್ಟ್ರಕೂಟರ ಸೆರೆಮನೆಯಲ್ಲಿದ್ದು ಕಾರಣಾಂತರಗಳಿಂದ ಜೈನಧರ್ಮಕ್ಕೆ ಮಾರುಹೋದಂತೆ ತೋರುತ್ತದೆ. ಇವನು ಜೈನಧರ್ಮವನ್ನು ಸ್ವೀಕರಿಸಿ ಆ ಧರ್ಮಕ್ಕೆ ವಿಶೇಷ ಪ್ರೋತ್ಸಾಹ ನೀಡಿದನು. ಸೆರೆಮನೆಯಲ್ಲಿದ್ದಾಗಲೇ ಕುಮ್ಮಡವಾಡ ಎಂಬಲ್ಲಿ ಒಂದು ಜೈನಬಸದಿಯನ್ನು ಕಟ್ಟಿಸಿದನು. ಅನಂತರ ಶ್ರವಣ ಬೆಳಗೊಳದಲ್ಲೂ ಜೈನಬಸದಿಗಳನ್ನು ಕಟ್ಟಿಸಿದನು. ಇದುವರೆಗೂ ದೊರೆತಿರುವ ಸಮಕಾಲೀನ ಶಾಸನಗಳ ಪ್ರಕಾರ ಗಂಗಮನೆತನದಲ್ಲಿ ಎರಡನೇ ಶಿವಮಾರನೇ ಸ್ವತಃ ಜೈನಬಸದಿಯನ್ನು ಕಟ್ಟಿಸಿದ ಪ್ರಪ್ರಥಮ ರಾಜನಾಗಿದ್ದಾನೆ. ಇವನು ವಿದ್ವಾಂಸರಿಗೆ ಪ್ರೋತ್ಸಾಹ ನೀಡಿದುದಲ್ಲದೆ ತಾನೇ ಕನ್ನಡದಲ್ಲಿ ಗಜಾಷ್ಟಕ ಎಂಬ ಗ್ರಂಥವನ್ನು ರಚಿಸಿದನು. ಇವನಿಗೆ ಸೈಗೊಟ್ಟ ಶಿವಮಾರ ಎಂಬ ಬಿರುದಿದ್ದಿತು. ಶಿವಮಾರನಿಗೆ ಮಾಋಸಿಂಹ ಎರೆಯಪ್ಪ ಮತ್ತು ಪೃಥ್ವೀಪತಿ ಎಂಬ ಇಬ್ಬರು ಗಂಡು ಮಕ್ಕಳಿದ್ದರು. ಶಿವಮಾರನು ಇವರಿಬ್ಬರಿಗೂ ರಾಜ್ಯವನ್ನು ಹಂಚಿಕೊಟ್ಟನೆಂದು ತಿಳಿದುಬರುತ್ತದೆ.

ಶಿವಮಾರನ ಮರಣಾನಂತರ ಮಾರಸಿಂಹ ಎರಯಪ್ಪನು ತಲಕಾಡಿನಲ್ಲಿ ಅಧಿಕಾರ ವಹಿಸಿ ಕ್ರಿ.ಶ.812 ರಿಂದ 817 ರವರೆಗೆ ಆಳಿದನು. ಇವನನ್ನು ಒಂದನೇ ಮಾರಸಿಂಹ ಎಂದು ಕರೆಯಲಾಗಿದೆ. ಪೃಥ್ವೀಪತಿಯು ಕೋಲಾ ಪ್ರದೇಶದಲ್ಲಿ ಆಳುತ್ತಿದ್ದನು. ಪೃಥ್ವೀಪತಿಗೂ ಮಾರಸಿಂಹ ಎಂಬ ಮಗನಿದ್ದನು ಇವನನ್ನು ಎರಡನೇ ಮಾರಸಿಂಹ ಎಂದು ಹೆಸರಿಸಲಾಗಿದೆ. ಇವನು ಕ್ರಿ.ಶ.880 ರಿಂದ 821 ರವರೆಗೂ ಆಳುತ್ತಿದ್ದನು. ಇವನಿಗೆ ಎರಡನೇ ಪೃಥ್ವೀಪತಿ ಎಂಬ ಮಗನಿದ್ದನು. ಅವನು ಸ್ವಲ್ಪಕಾಲ ರಾಜ್ಯವಾಳಿದ ತರುವಾಯ ಅವನ ಮಗನಾದ ನನ್ನೀಯಗಂಗನು ಸ್ವಲ್ಪಕಾಲ ಆಳ್ವಿಕೆ ನಡೆಸಿ ಮರಣ ಹೊಂದಿದನು. ಅನಂತರ ಈ ಶಾಖೆಯ ವಶದಲ್ಲಿದ್ದ ರಾಜ್ಯ ತಲಕಾಡಿನ ಮೂಲ ಸಂತತಿಯ ರಾಜ್ಯದೊಡನೆ ವಿಲೀನವಾಯಿತು.

ತಲಕಾಡಿನ ಎರಡನೇ ಮಾರಸಿಂಹನ ತರುವಾಯ ಇವನ ಚಿಕ್ಕಪ್ಪ ವಿಜಯಾದಿತ್ಯನು ರಾಜನಾಗಿ ಸ್ವಲ್ಪಕಾಲ ಅಧಿಕಾರ ವಹಿಸಿದ್ದನು. ವಿಜಯಾದಿತ್ಯನು ತನ್ನ ಮಗನಾದ ರಾಜಮಲ್ಲನಿಗೆ ಅಧಿಕಾರ ವಹಿಸಿದನು. ರಾಜಮಲ್ಲನು ಕ್ರಿ.ಶ.817 ರಿಂದ 853 ರವರೆಗೂ ಆಳಿದನು. ಇವನನ್ನು ಒಂದನೇ ರಾಜಮಲ್ಲ ಸತ್ಯವಾಕ್ಯ ಎಂಬ ಹೆಸರಿನಿಂದ ಕರೆಯಲಾಗಿದೆ. ರಾಜಮಲ್ಲನು ನೊಳಂಬ ಸಿಂಹ ಪೋತನ ಮಗಳನ್ನು ವರಿಸಿದ್ದನು. ರಾಷ್ಟ್ರಕೂಟ ನೃಪತುಂಗ ಚಕ್ರವರ್ತಿಯ ಮೇಲೆ ಯುದ್ಧ ಘೋಷಿಸಿದನು. ಹಿಂದೆ ರಾಷ್ಟ್ರಕೂಟರು ವಶಪಡಿಸಿಕೊಂಡಿದ್ದ ಪ್ರದೇಶವನ್ನು ಪುನಃ ತನ್ನ ರಾಜ್ಯಕ್ಕೆ ಸೇರಿಸಿಕೊಂಡನು. ಒಂದನೇ ರಾಜಮಲ್ಲನು ಉತ್ತರ ಆರ್ಕಾಟ್ ಜಿಲ್ಲೆಯಲ್ಲಿರುವ ವಳ್ಳಿಮಲೈ ಎಂಬಲ್ಲಿ ಒಂದು ಜೈನ ಗುಹಾಲಯವನ್ನು ನಿರ್ಮಿಸಿದನು. ಇವನ ಮರಣಾನಂತರ ನೀತಿಮಾರ್ಗ ಎರೆಗಂಗನು ರಾಜನಾದನು.

## ನೀತಿಮಾರ್ಗ ಎರೆಗಂಗ

ನೀತಿಮಾರ್ಗ ಎರೆಗಂಗನು ಕ್ರಿ.ಶ.853 ರಿಂದ 870 ರವರೆಗೆ ಆಳಿದನು. ಇವನ ಆಳ್ವಿಕೆಯು ಗಂಗ ಮತ್ತು ರಾಷ್ಟ್ರಕೂಟ ಮನೆತನಗಳ ಹಗೆತನ ಮತ್ತು ಸಖ್ಯಕ್ಕೆ ಸಂಬಂಧಿಸಿದಂತೆ ಒಂದು ಮುಖ್ಯ ಮಜಲಾಗಿದೆ. ಇವನು ಬಾಣರನ್ನು ಸೋಲಿಸಿ ರಾಜ್ಯ ವಿಸ್ತರಿಸಿದನು. ಆ ವೇಳೆಗೆ ಅಧಿಕಾರದಲ್ಲಿ ಭದ್ರವಾಗಿ ನೆಲೆಯೂರಿದ್ದ ರಾಷ್ಟ್ರಕೂಟರ ಚಕ್ರವರ್ತಿ ಅಮೋಘವರ್ಷ ನೃಪತುಂಗನು ಗಂಗರ ಮೇಲೆ ಯುದ್ಧ ಹೂಡಿ ದೊಡ್ಡ ಸೈನ್ಯವನ್ನು ಕಳುಹಿಸಿದನು. ಕೋಲಾರ ಜಿಲ್ಲೆಯ ರಾಜರಮಡು ಎಂಬಲ್ಲಿ ಭೀಕರ ಯುದ್ಧ ಸಂಘಟಿಸಿತು. ನೀತಿಮಾರ್ಗನು ರಾಷ್ಟ್ರಕೂಟ ಸೈನ್ಯವನ್ನು ಸಂಪೂರ್ಣವಾಗಿ ಸೋಲಿಸಿದನು. ನೃಪತುಂಗನು ಗಂಗರೊಡನೆ ಸಂಧಾನವೇರ್ಪಡಿಸಿಕೊಳ್ಳಬೇಕಾಯಿತು. ಚಕ್ರವರ್ತಿಯು ತನ್ನ ಮಗಳಾದ ಚಂದ್ರೋಬಲಬ್ಬೆಯನ್ನು ನೀತಿಮಾರ್ಗನ ಕುಮಾರನಾದ ಒಂದನೇ ಭೂತುಗನಿಗೆ ವಿವಾಹ ಮಾಡಿಕೊಟ್ಟನು. ಇದರಿಂದ ಈ ಎರಡು ಮನೆತನಗಳ ಮಧ್ಯೆ ಸುಮಾರು ಒಂದು ಶತಮಾನ ಕಾಲದ ಹಗೆತನ ಮತ್ತು ಕಾದಾಟ ಕೊನೆಗೊಂಡು ಮಧುರ ಬಾಂಧವ್ಯ ಏರ್ಪಟಟಿತು. ನೀತಿಮಾರ್ಗನು ಜೈನಮತಕ್ಕೆ ಪ್ರೋತ್ಸಾಹ ನೀಡಿದನು. ತಿರುಮಕೊಡಲು ನರಸೀಪುರ ತಾಲ್ಲೂಕಿನ ದೊಡ್ಡ ಹುಂಡಿ ಶಾಸನದಲ್ಲಿ ನೀತಿ ಮಾರ್ಗನ ಮರಣಶಯ್ಯೆಯನ್ನು ಕೆತ್ತಲಾಗಿದೆ. ಇವನಿಗೆ ರಾಜಮಲ್ಲ ಮತ್ತು ಭೂತುಗ ಎಂಬ ಇಬ್ಬರು ಗಂಡು ಮಕ್ಕಳಿದ್ದರು. ನೀತಿ ಮಾರ್ಗನ ನಂತರ ರಾಜಮಲ್ಲನು ಅಧಿಕಾರಕ್ಕೆ ಬಂದನು.

## ಎರಡನೇ ರಾಜಮಲ್ಲ

ಇವನಿಗೆ ಎರಡನೇ ರಾಜಮಲ್ಲ ಸತ್ಯವಾಕ್ಯ ಎಂದು ಹೆಸರಾಗಿದೆ. ಇವನು ಕ್ರಿ.ಶ.870 ರಿಂದ 907 ರವರೆಗೂ ಆಳಿದನು. ರಾಜಮಲ್ಲ ಸತ್ಯವಾಕ್ಯನು ಬಾಣರು ಚೋಳರು ಮತ್ತು ವೆಂಗಿ ಚಾಳುಕ್ಯರ ಮೇಲೆ ಯುದ್ಧ ಮಾಡಿದನು. ಎಲ್ಲಾ ಯುದ್ಧಗಳಲ್ಲೂ ಜಯಗಳಿಸಿದನು. ಇವನು ಜೈನಧರ್ಮೀಯ–ನಾದರು ಸಹ ಬ್ರಾಹ್ಮಣರಿಗೂ ವಿಶೇಷ ದಾನಧರ್ಮಗಳನ್ನು ಮಾಡಿದನು. ಆಲೂರು ಎಂಬ ಗ್ರಾಮವನ್ನು ಕಾಳಾಮುಖ ಪಂಥದ ನೇತ್ರ ಶಿವಾಚಾರ್ಯ ಎಂಬುವನಿಗೆ ದಾನವಾಗಿ ನೀಡಿದನು. ಕೊಡಗು ಜಿಲ್ಲೆಯಲ್ಲಿದ್ದ ಸತ್ಯವಾಕ್ಯ ಎಂಬ ಜೈನ ಬಸದಿಗೆ ಕ್ರಿ.ಶ.890ರಲ್ಲಿ ಲಕ್ಷ್ಮಣತೀರ್ಥದ ದಂಡೆಯಲ್ಲಿದ್ದ 12 ಗ್ರಾಮಗಳನ್ನು ದತ್ತಿಯಾಗಿ ನೀಡಿದನು. ಎರಡನೇ ರಾಜಮಲ್ಲ ಸತ್ಯವಾಕ್ನು ವ್ಯಕ್ತಿಗಳ ಶೌರ್ಯ ಮತ್ತು ದಕ್ಷತೆಗಳನ್ನು ಗುರುತಿಸಿ ಉನ್ನತ ಹುದ್ದೆ ಮತ್ತು ಬಿರುದುಗಳನ್ನು ನೀಡಿ ಗೌರವಿಸಿದನು. ಕೊಡಗು ಜಿಲ್ಲೆಯ ಕಿಗ್ಗಟ್ಟನಾಡಿನ ಗವುಂಡನೊಬ್ಬನಿಗೆ ಪೆರ್ಮಾಡಿ ಎಂಬ ರಾಜಗೌರವದ ಬಿರುದನ್ನು ನೀಡಿ ಗೌರವಿಸಿದನು. ರಾಜಮಲ್ಲನಿಗೆ ಗಂಡು ಮಕ್ಕಳಿರಲಿಲ್ಲ. ಇವನ ತಮ್ಮನಾದ ಭೂತುಗನೂ ಮರಣ ಹೊಂದಿದ್ದನು. ಆದ್ದರಿಂದ ತನ್ನ ತಮ್ಮ ಭೂತುಗನ ಮಗನಾದ ಎರೆಯಪ್ಪನನ್ನು ಯುವ ರಾಜನನ್ನಾಗಿ ನೇಮಿಸಿದ್ದನು. ಎರಡನೇ ರಾಜಮಲ್ಲನು ಗಂಟಲಿನ ಬೇನೆಯಿಂದ ಮರಣಕ್ಕೆ ತುತ್ತಾದಾಗ ಇವನ ಆಪ್ತ ಭಟರನೇಕರು ದುಃಖತಪ್ತರಾಗಿ ತಮ್ಮ ರಾಜನ ಅಂತ್ಯದೊಡನೆ ಪ್ರಾಣಾರ್ಪಣೆ ಮಾಡಿಕೊಂಡರು. ಅನಂತರ ನೀತಿಮಾರ್ಗ ಎರೆಯಪ್ಪನು ರಾಜನಾದನು.

## ಎರಡನೇ ನೀತಿಮಾರ್ಗ

ಇವನನ್ನು ಎರಡನೇ ನೀತಿಮಾರ್ಗ ಎರೆಯಪ್ಪ ಎಂದು ಕರೆಯಲಾಗಿದೆ. ಇವನು ಕ್ರಿ.ಶ.907 ರಿಂದ 920 ರವರೆಗೆ ಆಳಿದನು. ಇವನು ಚಂದ್ರೋಬಲಬ್ಬೆ ಮತ್ತು ಯುವರಾಜನಾಗಿದ್ದ ಭೂತುಗ ಇವರ ಮಗನು. ನೊಳಂಬರಿಗೂ ಗಂಗರಿಗೂ ನಡೆದ ಯುದ್ಧವು ಎರಡನೇ ನೀತಿಮಾರ್ಗ ಎರೆಯಪ್ಪನ ಕಾಲದ ಪ್ರಮುಖ ಘಟನೆಗಳಲ್ಲೊಂದಾಗಿದೆ. ನೊಳಂಬ ರಾಜ ವೀರಮಹೇಂದ್ರನು ಗಂಗವಾಡಿಯ ಹಲವು ಭಾಗಗಳನ್ನು

ಆಕ್ರಮಿಸಿದನು. ತುಮಕೂರು ಜಿಲ್ಲೆಯಲ್ಲಿರುವ ತುಂಬೆಪಾಡಿ ಎಂಬಲ್ಲಿ ಘೋರ ಯುದ್ಧವು ನಡೆಯಿತು. ಗಂಗರ ದಂಡನಾಯಕನಾದ ನಾಗತ್ತರ ಎಂಬುವನು ಈ ಯುದ್ಧದಲ್ಲಿ ಮಡಿದನು. ನೀತಿಮಾರ್ಗನು ತಾನೇ ಸೈನ್ಯದ ಮುಖಂಡತ್ವವನ್ನು ವಹಿಸಿ ವೀರಾವೇಶದಿಂದ ಹೋರಾಡಿ ನೊಳಂಬ ವೀರಮಹೇಂದ್ರನನ್ನು ಕೊಂದನು. ತನ್ನ ನೆಚ್ಚಿನ ದಂಡನಾಯಕನ ಜ್ಞಾಪಕಾರ್ಥವಾಗಿ ಬೆಂಗಳೂರಿನ ಬಳಿಯ ಬೇಗೂರಿನಲ್ಲಿ ಒಂದು ವೀರಗಲ್ಲನ್ನು ಸ್ಥಾಪನೆ ಮಾಡಿದನು. ನಾಗತ್ತರನ ಮಗನಾದ ಇರುಗಪ್ಪನನ್ನು ದಂಡನಾಯಕನನ್ನಾಗಿ ನೇಮಿಸಿದನು. ಧರಸೇನ, ನಾಗವರ್ಮ ಮತ್ತು ಗೋವಿಂದ ಎಂಭುವರು ನೀತಿಮಾರ್ಗನ ಸಚಿವರಾಗಿದ್ದರು. ಎರಡನೇ ನೀತಿಮಾರ್ಗನ ನಂತರ ಇವನ ಹಿರಿಯ ಮಗ ನರಸಿಂಹದೇವನು ಕ್ರಿ.ಶ.920 ರಿಂದ 925 ರವರೆಗೂ ಆಳಿದನು. ನರಸಿಂಹನು ಇತಿಹಾಸ, ಪುರಾಣ ಆಯುರ್ವೇದ, ಸಂಗೀತ ಮತ್ತು ನೃತ್ಯದಲ್ಲಿ ಪಾಂಡಿತ್ಯ ಮತ್ತು ಅಭಿರುಚಿ ಹೊಂದಿದ್ದುದಾಗಿ ತಿಳಿದುಬರುತ್ತದೆ. ನರಸಿಂಹದೇವನ ತರುವಾಯ ಅವನ ಸಹೋದರ ರಾಜಮಲ್ಲ ಸತ್ಯವಾಕ್ಯನು ರಾಜನಾಗಿ ಕ್ರಿ.ಶ.925 ರಿಂದ 935 ರವರೆಗೆ ಆಳಿದನು. ಇವನನ್ನು 3ನೇ ರಾಜಮಲ್ಲ ಸತ್ಯವಾಕ್ಯ ಎಂದು ಕರೆಯಲಾಗಿದೆ. ಇವನು ಗಂಗ ಮನೆತನದ ಅರಸರಲ್ಲಿ ವಿಲಕ್ಷಣವಾಗಿ ಕೊನೆಗೊಂಡ ಅರಸನಾಗಿದ್ದಾನೆ. ಇವನ ತಮ್ಮನಾದ ಎರಡನೇ ಭೂತುಗನು ತಾನೇ ಸಿಂಹಾಸನವನ್ನು ಪಡೆಯಲು ಕಾತುರನಾಗಿದ್ದನು. ಭೂತುಗನು ಎರಡನೇ ಅಮೋಘವರ್ಷನ ಪುತ್ರಿಯಾದ ರೇವಕನಿಮ್ಮಡಿಯನ್ನು ವರಿಸಿದ್ದನು. ಸಿಂಹಾಸನಕ್ಕಾಗಿ ಕಚ್ಚಾಟಗಳು ನಡೆದವು. ಆದರೆ ಭೂತುಗನು ತನ್ನ ಭಾವಮೈದುನನಾದ ರಾಷ್ಟ್ರಕೂಟ ಮೂರನೇ ಕೃಷ್ಣನ ಸಹಾಯದಿಂದ ರಾಜಮಲ್ಲನನ್ನು ಕೊಂದು ತಾನೇ ರಾಜನಾದನು.

## ಎರಡನೇ ಭೂತಗ

ಎರಡನೇ ಭೂತಗನು ಕ್ರಿ.ಶ.939 ರಿಂದ 960 ರವರೆಗೂ ಆಳಿದನು. ಭೂತುಗನು ರಾಜಮಲ್ಲನನ್ನು ವಧಿಸಿ ಸಿಂಹಾಸನ ಪಡೆದುದು ಸರಿಯಷ್ಟೆ. ಅನಂತರ ರಾಜಮಲ್ಲನಿಗೆ ಸಹಾಯ ಮಾಡಿದ ಬಾಣರನ್ನು ಮತ್ತು ಚೋಳರನ್ನು ಶಿಕ್ಷಿಸಲು ಹವಣಿಸಿದನು. ಆ ವೇಳೆಗೆ ಅವನ ಮಾವನಾದ ಎರಡನೇ ಅಮೋಘವರ್ಷನು ಗತಿಸಿದನು. ಆ ಸಮಯದಲ್ಲಿ ಮೂರನೇ ಕೃಷ್ಣನು ಉತ್ತರದ ದಂಡಯಾತ್ರೆಯಲ್ಲಿ ತೊಡಗಿದ್ದನು. ಮಾನ್ಯಖೇಟದಲ್ಲಿ ಲಲ್ಲಯ್ಯ ಎಂಬುವನು ದಂಗೆ ಎದ್ದು ಸಿಂಹಾಸನವನ್ನಾಕ್ರಮಿಸಿದನು. ಭೂತುಗನು ರಾಷ್ಟ್ರಕೂಟ ರಾಜಧಾನಿಗೆ ಧಾವಿಸಿ ದಂಗೆಕೋರ ಲಲ್ಲಯ್ಯನನ್ನು ಸದೆಬಡಿದು ಅವನಿಂದ ಸಿಂಹಾಸನವನ್ನೂ ಇತರ ರಾಜಲಾಂಛನಗಳನ್ನು ವಶಪಡಿಸಿಕೊಂಡು ಆ ವೇಳೆಗೆ ರಾಜಧಾನಿಗೆ ಹಿಂತಿರುಗಿದ ಕೃಷ್ಣನಿಗೆ ವಹಿಸಿದನು. ರಾಷ್ಟ್ರಕೂಟ ಸಂತತಿಗೆ ಒದಗಿದ್ದ ವಿಪತ್ತಿನಿಂದ ಅದನ್ನು ಭೂತುಗನು ಪಾರುಮಾಡಿದನು. ಭೂತುಗನ ಸಹಾಯಕ್ಕೆ ಮೆಚ್ಚಿ ರಾಷ್ಟ್ರಕೂಟ ಸಾರ್ವಭೌಮನು ಬಳುವಳಿಯಾಗಿ ಪುಲಿಗೆರೆ, ಬೆಳುವೊಲ, ಕಿಸುಗಾಡು ಮತ್ತು ಬಾಗೆನಾಡುಗಳನ್ನು ಕೊಟ್ಟನು. ಗಂಗರ ರಾಜ್ಯವು ಧಾರವಾಡ ಮತ್ತು ಬೆಳಗಾಂ ಜಿಲ್ಲೆಗಳವರೆಗೂ ವಿಸ್ತರಿಸಿತು.

ಆ ವೇಳೆಗೆ ತಮಿಳುನಾಡಿನಲ್ಲಿ ಪಲ್ಲವರನ್ನು ಸೋಲಿಸಿ ಚೋಳರು ಪ್ರವರ್ಧಮಾನಕ್ಕೆ ಬಂದಿದ್ದರು. ಚೋಳ ಸಂತತಿಯ ಪರಾಂತಕನು ಕರ್ನಾಟಕದತ್ತ ರಾಜ್ಯ ವಿಸ್ತರಿಸುವ ಯೋಜನೆಯನ್ನು ಹಾಕಿಕೊಂಡನು. ಆದ್ದರಿಂದ ಗಂಗರಿಗೂ ಚೋಳರಿಗೂ ಘರ್ಷಣೆಗಳು ಪ್ರಾರಂಭವಾದವು. ರಾಷ್ಟ್ರಕೂಟ ಮುಮ್ಮಡಿಕೃಷ್ಣ ಮತ್ತು ಗಂಗ ಇಮ್ಮಡಿ ಭೂತುಗ ಇವರ ನೇತೃತ್ವದಲ್ಲಿ ಹಿರಿದಾದ ಸೈನ್ಯವು ತಮಿಳುನಾಡಿನತ್ತ ಧಾವಿಸಿತು. ಪರಾಂತಕನ ಮಗನಾದ ಆದಿತ್ಯನು ಕರ್ನಾಟಕ ಬಲವನ್ನು ಎದುರಿಸಿದನು. ಕ್ರಿ.ಶ.949ರ ಸುಮಾರಿನಲ್ಲಿ ತಕ್ಕೋಲಂ ಎಂಬಲ್ಲಿ ಭೀಕರವಾದ ಯುದ್ಧವು ನಡೆದು ಚೋಳ ಸೈನ್ಯವು ಸೋತು ಓಡಿ ಹೋಯಿತು. ಚೋಳ ಯುವರಾಜ ಆದಿತ್ಯನು ಭೂತುಗನ ಪೆಟ್ಟಿಗೆ ಬಲಿಯಾಗಿ ಮರಣ ಹೊಂದಿದನು. ಈ ರಣರಂಗದಲ್ಲಿ ಭೂತುಗನ ದಳಪತಿಗಳಾದ ಕೋಟೆ ದಂಡನಾಯಕ ಮತ್ತು ಮನಲಾರ ಎಂಬುವರೂ ಸಹ ವೀರಾವೇಶದಿಂದ ಹೋರಾಡಿದರು. ಕೃಷ್ಣ ಮತ್ತು

ಭೂತುಗರು ಕಂಚಿಯವರೆಗೂ ದಂಡಯಾತ್ರೆ ನಡೆಸಿದರು. ಚೋಳರು ಈ ಅಪಜಯದಿಂದ ಚೇತರಿಸಿಕೊಳ್ಳಲು ಹಲವಾರು ವರ್ಷಗಳು ಬೇಕಾಯಿತು.

ಭೂತುಗನು ನೊಳಂಬ ಸಾಮಂತ ದಿಲೀಪನನ್ನು ಅವಿಧೇಯತೆಗಾಗಿ ಶಿಕ್ಷಿಸಿದನು. ಮುಮ್ಮಡಿ ಕೃಷ್ಣನ ಉತ್ತರ ದಿಗ್ವಜಯದಲ್ಲಿ ಪಾಲ್ಗೊಂಡು ಚಿತ್ರಕೂಟ ಮತ್ತು ಮಾಳವಗಳಲ್ಲಿ ನಡೆದ ಯುದ್ಧಗಳಲ್ಲಿ ವೀರಾವೇಶದಿಂದ ಶತ್ರುಗಳನ್ನು ಸೋಲಿಸಿದನು. ಇವನ ಕಾಲದಲ್ಲಿ ಗಂಗರ ಪ್ರಭುತ್ವವು ಅಜೇಯವಾಗಿತ್ತು. ರಾಷ್ಟ್ರಕೂಟ ಸಿಂಹಾಸನವನ್ನು ಆಪತ್ತಿನಿಂದ ಪಾರುಮಾಡಿ, ಚೋಳರ ಆಕ್ರಮಣದಿಂದ ಕನ್ನಡ ನಾಡನ್ನು ಸಂರಕ್ಷಿಸಿದನು. ಇವನಿಗೆ ನನ್ನೀಯಗಂಗ, ಗಂಗನಾರಾಯಣ ಮತ್ತು ಗಂಗ ಗಾಂಗೇಯ ಮೊದಲಾದ ಬಿರುದುಗಳಿದ್ದವು. ಇವನ ಮರಣಾನಂತರ ಕ್ರಿ.ಶ.969ರಲ್ಲಿ ಪಟ್ಟದ ರಾಣಿಯ ಕುಮಾರನಾದ ಮರುಳದೇವನು ಸಿಂಹಾಸನಕ್ಕೆ ಬಂದನು. ಆದರೆ ಇವನು ಕೆಲವೇ ತಿಂಗಳಲ್ಲಿ ಅಕಾಲ ಮರಣಕ್ಕೀಡಾದನು. ಅನಂತರ ಭೂತಗನ ಎರಡನೇ ಮಗನಾದ ಮಾರಸಿಂಹನು ರಾಜನಾದನು.

## ಮೂರನೇ ಮಾರಸಿಂಹ

ಮೂರನೇ ಮಾರಸಿಂಹನು ಕ್ರಿ.ಶ.960 ರಿಂದ 974 ರವರೆಗೆ ಆಳಿದನು. ಇವನಿಗೆ ನೊಳಂಬ ಕುಲಾಂತಕ ಮಾರಸಿಂಹನೆಂದೇ ಹೆಸರಾಗಿದೆ. ಇವನ ಆಳ್ವಿಕೆಯ ಕಾಲವೂ ಕರ್ನಾಟಕದ ಚರಿತ್ರೆಯಲ್ಲಿ ಮುಖ್ಯ ಘಟನಾವಳಿಗಳಿಂದ ಕೂಡಿದೆ. ರಾಷ್ಟ್ರಕೂಟ ಗಂಗರ ಅಸಾಧಾರಣ ಮೈತ್ರಿ, ಗೂರ್ಜರ ರಾಜ್ಯದ ಆಕ್ರಮಣ, ನೊಳಂಬ ಪ್ರಭಾವದ ನಿರ್ಮೂಲನ, ರಾಷ್ಟ್ರಕೂಟ ಸಂತತಿಯ ಅಂತ್ಯ, ಕಲ್ಯಾಣಿ ಚಾಳುಕ್ಯ ಸಾಮ್ರಾಜ್ಯದ ಉದಯಸಾಹಿತ್ಯ ಮತ್ತು ಕಲೆಯ ಪ್ರೋತ್ಸಾಹ ಮೊದಲಾದವು ಇವನ ಕಾಲದ ಮುಖ್ಯ ಘಟನೆಗಳಾಗಿವೆ.

ಮೂರನೇ ಮಾರಸಿಂಹನು ಬಾಲ್ಯದಿಂದಲೂ ಶೌರ್ಯ, ಪರಾಕ್ರಮ ಮತ್ತು ಸದ್ಗುಣಗಳಿಗೆ ಹೆಸರಾಗಿದ್ದನು. ಇವನು ಭೂತುಗ ಮತ್ತು ಅವನ ರಾಣಿ ಕಲ್ಲಬ್ಬರಿಸಿಯ ಪುತ್ರ, ಇವನ ಪಟ್ಟಾಭಿಷೇಕವನ್ನು ಮೂರನೇ ಕೃಷ್ಣನು ತಾನೇ ಸ್ವತಃ ತಲಕಾಡಿಗೆ ಬಂದು ನೆರವೇರಿಸಿ ಕೊಟ್ಟನು. ರಾಜನಾದ ಹಲವೇ ವರ್ಷಗಳಲ್ಲಿ ರಾಷ್ಟ್ರಕೂಟ ಸಾಮ್ರಾಟನ ಉತ್ತರ ಭಾಗಗಳ ರಕ್ಷಣೆಗಾಗಿ ಮಾರಸಿಂಹನು ದಂಡೆತ್ತಿ ಹೋಗಬೇಕಾಯಿತು. ಗುಜರಾತಿನಲ್ಲಿ ಅದುವರೆಗೂ ವಿಧೇಯನಾಗಿ ಆಳುತ್ತಿದ್ದ ಸಾಮಂತ ರಾಜನಾದ ಪಾರಮಾರ ಸೀಯಕ ಹರ್ಷನು ರಾಷ್ಟ್ರಕೂಟರ ಪರಮಾಧಿಕಾರವನ್ನು ಕಡೆಗಣಿಸಿದ್ದನು. ಅವನನ್ನು ಶಿಕ್ಷಿಸಲು ಮುಮ್ಮಡಿ ಕೃಷ್ಣನು ಮೂರನೇ ಮಾರಸಿಂಹನನ್ನು ಸೈನ್ಯಸಮೇತ ಕಳುಹಿಸಿದನು. ಗಂಗ ಮತ್ತು ರಾಷ್ಟ್ರಕೂಟ ಸೈನ್ಯಗಳ ನಾಯಕತ್ವವನ್ನು ವಹಿಸಿ ಮಾರಸಿಂಹ ಮಾಳವದತ್ತ ಮುಂದುವರಿಸಿದನು. ಸೀಯಕನಿಗೂ ಮಾರಸಿಂಹನಿಗೂ ಅನೇಕ ಕಡೆ ಕದನಗಳು ನಡೆದವು. ಸೀಯಕನು ಸೋತು ಹೋದನು. ಮಾರಸಿಂಹನ ದಳಪತಿಗಳಾದ ಶೂದ್ರಕಯ್ಯ ಮತ್ತು ಗೊಗ್ಗಿಮಯ್ಯ ಎಂಬುವರು ಶತ್ರುಗಳನೊಡನೆ ಪರಾಕ್ರಮದಿಂದ ಹೋರಾಡಿದರು. ಉಜ್ಜೈನಿಯು ಮಾರಸಿಂಹನ ವಶವಾಯಿತು. ಪಾರಮಾರ ಸೀಯಕನು ಪುನಃ ರಾಷ್ಟ್ರಕೂಟರ ಪರಮಾಧಿಕಾರವನ್ನು ಒಪ್ಪಿದನು. ಮಾರಸಿಂಹನು ಕಪ್ಪಕಾಣಿಕೆಯೊಡನೆ ಹಿಂದಿರುಗಿದನು. ಕೃಷ್ಣನು ಅವನನ್ನು ವಿಶೇಷವಾಗಿ ಸತ್ಕರಿಸಿ ಗೂರ್ಜರಾಧಿರಾಜ ಎಂಬ ಬಿರುದನ್ನು ನೀಡಿದುದಲ್ಲದೆ ತನ್ನ ಸಾಮ್ರಾಜ್ಯದ ಬೆಳುವೊಲ, ಪುಲಿಗೆರೆ ಮತ್ತು ಶಾಂತಳಿಗೆ ನಾಡುಗಳನ್ನು ಮಾರಸಿಂಹನಿಗೆ ಮೆಚ್ಚುಗೆಯಾಗಿ ನೀಡಿದನು. ಮಾರಸಿಂಹನೂ ಸಹ ತನ್ನ ದಳಪತಿಗಳಿಗೆ ಅವರ ಪರಾಕ್ರಮಕ್ಕಾಗಿ ಗ್ರಾಮಗಳನ್ನು ನೀಡಿ ಅವರಿಗೆ ಉಜನಿ ಭುಜಂಗ ಎಂಬ ಬಿರುದುಗಳನ್ನು ನೀಡಿದನು.

ಕ್ರಿ.ಶ.968ರಲ್ಲಿ ಮುಮ್ಮಡಿ ಕೃಷ್ಣನು ಮರಣ ಹೊಂದಿದನು. ಅವನ ಉತ್ತರಾಧಿಕಾರಿಯಾದ ಖೊಟ್ಟಿಗನು ಅಶಕ್ತನಾಗಿದ್ದನು. ಮಾರಸಿಂಹನು ರಾಷ್ಟ್ರಕೂಟ ಸಾಮ್ರಾಜ್ಯದ ಹಿತರಕ್ಷಣೆಗೆ ತೊಡಗಿದ್ದಾಗ ನೊಳಂಬರು ಗಂಗರ

ಪರಮಾಧಿಕಾರವನ್ನು ಪುನಃ ಧಿಕ್ಕರಿಸಿ ರಾಜ್ಯ ವಿಸ್ತರಣೆಯಲ್ಲಿ ತೊಡಗಿದರು. ಮಾರಸಿಂಹನು ಸೈನ್ಯ ಸಮೇತ ನೊಳಂಬ ರಾಜ್ಯವನ್ನು ಮುತ್ತಿದನು. ನೊಳಂಬರ ಸೈನ್ಯವು ಸೋತಿತು. ನೊಳಂಬ ರಾಜನು ತಲೆಮರೆಸಿಕೊಂಡನು. ಯುದ್ಧದಲ್ಲಿ ಮಾರಸಿಂಹನ ದಂಡನಾಯಕರಾದ ಅಮಾವಾಸಯ್ಯ ಮತ್ತು ಚಾವುಂಡರಾಯ ಇವರು ವಿಶೇಷ ಪರಾಕ್ರಮದಿಂದ ಹೋರಾಡಿದರು. ಮಾರಸಿಂಹನು ನೊಳಂಬ "ಕುಲಾಂತಕ" ಎಂಬ ಬಿರುದನ್ನು ಧರಿಸಿದನು. ನೊಳಂಬರ ಪ್ರಭಾವವು ಕ್ರಮೇಣ ನಶಿಸಿತು.

ಈ ಮಧ್ಯೆ ರಾಷ್ಟ್ರಕೂಟರ ವೈರಿಗಳು ಮಾನ್ಯಖೇಟವನ್ನು ಮುತ್ತಿದರು. ಪಾರಮಾರ ಸೀಯಕ ಹರ್ಷನು ರಾಷ್ಟ್ರಕೂಟ ಸೈನ್ಯವನ್ನು ಸೋಲಿಸಿ ಸಿಂಹಾಸನವನ್ನಾಕ್ರಮಿಸಿದನು. ಖೊಟ್ಟಿಗನು ಮರಣ ಹೊಂದಿದನು. ಆ ವೇಳೆಗೆ ಮಾರಸಿಂಹನು ಸೈನ್ಯಸಮೇತ ರಾಷ್ಟ್ರಕೂಟರ ನೆರವಿಗೆ ಧಾವಿಸಿ ಶತ್ರುಗಳನ್ನು ಸೋಲಿಸಿ ಓಡಿಸಿದನು. ಪಾರಮಾರ ಸೈನ್ಯವನ್ನು ನರ್ಮದಾ ನದಿಯ ತೀರದವರೆಗೂ ಬೆನ್ನಟ್ಟಿ ಅನಂತರ ಹಿಂದಿರುಗಿದನು. ಆದರೆ ರಾಷ್ಟ್ರಕೂಟರ ರಾಜಧಾನಿಯಲ್ಲಿ ಅನಾಯಕತೆ ತಲೆದೋರಿತ್ತು. ಸಿಂಹಾಸನಕ್ಕಾಗಿ ಕಚ್ಚಾಟಗಳು ನಡೆದವು. ಮುಮ್ಮಡಿ ಕೃಷ್ಣರಾಜನ ಮೊಮ್ಮಗನಾದ 3ನೇ ಇಂದ್ರನಿಗೆ ಮಾರಸಿಂಹನು ಪಟ್ಟಕಟ್ಟಿದನು. ಆದರೆ ಸಾಮಂತರ ವಿರೋಧ ಸಿಂಹಾಸನಕ್ಕಾಗಿ ನಡೆದ ಕಚ್ಚಾಟದಿಂದ ಅರಾಜಕತೆಯುಂಟಾಗಿತ್ತು. ಕ್ರಿ.ಶ.973ರಲ್ಲಿ ಕಲ್ಯಾಣಿ ಚಾಳುಕ್ಯ ತೈಲಪನು ರಾಷ್ಟ್ರಕೂಟ ಸಂತತಿಯನ್ನು ಕೊನೆಗಾಣಿಸಿ ತನ್ನ ಮನೆತನವನ್ನು ಸ್ಥಾಪಿಸಿದನು. ಮಾರಸಿಂಹನು ತನ್ನ ರಾಜ್ಯದಲ್ಲಿ ಅರಾಜಕತೆಯನ್ನು ತೊಡೆದು ತನ್ನ ಮಗ ರಾಜಮಲ್ಲನಿಗೆ ಪಟ್ಟಕಟ್ಟಿ ಕ್ರಿ.ಶ.975ರಲ್ಲಿ ಸಿಂಹಾಸನ ತ್ಯಾಗ ಮಾಡಿದನು. ಅನಂತರ ಬಂಕಾಪುರಕ್ಕೆ ಹೋಗಿ ಅಲ್ಲಿ ತನ್ನ ಗುರುವಾದ ಅಜಿತ ಸೇನಾಚಾರ್ಯರ ಬಳಿಯಲ್ಲಿ ಜೈನವಿಧಿ ಸಲ್ಲೇಖನ ವ್ರತವನ್ನು ಕೈಗೊಂಡು ಕೊನೆಯುಸಿರೆಳೆದನು.

ಮೂರನೇ ಮಾರಸಿಂಹನು ಗಂಗ ಸಂತತಿಯ ಕೊನೆಯ ಸಮರ್ಥ ಪ್ರಭು. ಮಾರಸಿಂಹನು ಯುದ್ಧದಲ್ಲಿ ನಿರತನಾಗಿದ್ದರೂ ವಿದ್ವಾಂಸರಿಗೂ, ಸಾಹಿತ್ಯ ಮತ್ತು ಕಲೆಗೂ ಪ್ರೋತ್ಸಾಹ ನೀಡಿದನು. ಇವನಿಗೆ ಗಂಗಚೂಡಾಮಣಿ, ಗಂಗವಜ್ರ, ಗಂಗಸಿಂಹ, ಗೂರ್ಜರರಾಜ, ನೊಳಂಬ ಕುಲಾಂತಕ, ನನ್ನೀಯಗಂಗ ಮೊದಲಾದ ಬಿರುದುಗಳಿದ್ದವು. ಇವನೂ ಸಹ ಕನ್ನಡನಾಡಿನ ಪ್ರಖ್ಯಾತ ಅರಸುಗಳಲ್ಲೊಬ್ಬನಾಗಿದ್ದಾನೆ.

ಮಾರಸಿಂಹನ ಮಗನಾದ ನಾಲ್ಕನೇ ರಾಜಮಲ್ಲ ಸತ್ಯವಾಕ್ಯನು ಕ್ರಿ.ಶ.975 ರಿಂದ 983 ರವರೆಗೆ ಆಳಿದನು. ಇವನ ಆಳ್ವಿಕೆಯಲ್ಲಿ ಸಿಂಹಾಸನಕ್ಕಾಗಿ ಅಂತಃಕಲಹಗಳು ನಡೆದವು. ಮಾರಸಿಂಹನ ತಮ್ಮನಾದ ಗೋವಿಂದರಸನು ಸಿಂಹಾಸನಕ್ಕಾಗಿ ಸೆಣಸಿದನು. ಆದರೆ ಅವನು ಪರಾಭವಗೊಂಡನು. ಗಂಗರ ಮಾಂಡಳಿಕರಲ್ಲೊಬ್ಬನಾದ ಪಾಂಚಾಲ ರಾಜ ಎಂಬುವವನು ದಂಗೆಯೆದ್ದನು. ಆದರೆ ಚಾಳುಕ್ಯ ತೈಲಪನಿಂದ ಅವನು ಹತನಾದನು. ಈ ಮಧ್ಯೆ ಮಧುರಾಚಯ್ಯ ಎಂಬುವನು ಗಂಗ ಸಿಂಹಾಸನವನ್ನಾಕ್ರಮಿಸಲು ಯತ್ನಿಸಿದನು. ಆದರೆ ರಾಜಮಲ್ಲನ ಮಂತ್ರಿಗಳಾದ ಬೋಯಿಗ ಮತ್ತು ಚಾವುಂಡರಾಯ ಇವರು ಶತ್ರುವನ್ನು ಸದೆಬಡಿದರು. ಈ ವಿಜಯದಿಂದ ಚಾವುಂಡರಾಯನಿಗೆ ಸಮರ ಪರಶುರಾಮ ಎಂಬ ಬಿರುದನ್ನು ಕೊಡಲಾಯಿತು. ನಾಲ್ಕನೇ ರಾಜಮಲ್ಲನೂ ಸಹ ಅನೇಕ ಬಿರುದುಗಳನ್ನು ಹೊಂದಿದ್ದನು.

ಗಂಗರಾಳ್ವಿಕೆಯ ಈ ಕಾಲದ ಅತ್ಯಂತ ಪ್ರಸಿದ್ಧ ವ್ಯಕ್ತಿಯೆಂದರೆ ಚಾವುಂಡರಾಯ, ಸ್ವಾಮಿನಿಷ್ಠೆಯಿಂದ ಗಂಗರ ಸಿಂಹಾಸನಕ್ಕೊದಗಿದ ತೀವ್ರ ಕಂಟಕಗಳನ್ನು ನಿರ್ನಾಮ ಮಾಡಿದನು. ಅನಂತರ ನೊಳಂಬ ಜಗದೇಕವೀರನನ್ನು ಗೋಣೂರು ಯುದ್ಧದಲ್ಲಿ ಸೋಲಿಸಿ ವೀರ ಮಾರ್ತಾಂಡ ಎಂಬ ಬಿರುದಿಗೆ ಪಾತ್ರನಾದನು. ಬಾಗೆಯೂರು ಕದನದಲ್ಲಿ ತ್ರಿಭುವನ ವೀರನೆಂಬ ಮತ್ತೊಬ್ಬ ಶತ್ರುವನ್ನು ಸಂಹರಿಸಿದನು. ಉಚ್ಛಂಗಿಯ ಪಾಂಡ್ಯ ರಾಜ ರಾಜಾದಿತ್ಯನನ್ನು ಸೋಲಿಸಿ ರಣರಂಗ ಸಿಂಹ ಎಂಬ ಬಿರುದನ್ನು ಪಡೆದನು. ರಾಜಮಲ್ಲನು

ಪರಾಕ್ರಮಿಯಾದ ಚಾವುಂಡರಾಯನಿಗೆ ವೈರಿಕುಲಕಾಲದಂಡ, ಭುಜವಿಕ್ರಮ, ಸಮರ ಧುರಂಧರ, ವೀರಮಾರ್ತಾಂಡ ಮೊದಲಾದ ಬಿರುದುಗಳನ್ನು ನೀಡಿ ಗೌರವಿಸಿದನು.

ಚಾವುಂಡರಾಯ ಪರಾಕ್ರಮಿಯಾಗಿದ್ದಂತೆ ವಿದ್ವಾಂಸನೂ ಆಗಿದ್ದನು. ಕನ್ನಡ, ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಲ್ಲಿ ಅವನು ವಿಶೇಷ ಪಾಂಡಿತ್ಯ ಹೊಂದಿದ್ದನು. ವ್ಯಾಕರಣ, ತರ್ಕ, ಗಣಿತಶಾಸ್ತ್ರಗಳಲ್ಲಿಯೂ ಅವನಿಗೆ ವಿಶೇಷ ಪರಿಣತೆ ಇತ್ತು. ಜೈನ ತೀರ್ಥಂಕರರನ್ನು ಕುರಿತು ಕನ್ನಡ ಭಾಷೆಯಲ್ಲಿ ಚಾವುಂಡರಾಯಪುರಾಣ ಎಂಬ ಕೃತಿಯನ್ನು ರಚಿಸಿದನು. ಅಲ್ಲದೆ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿ ಎಂಬ ಜೈನಯತಿಯಿಂದ ರಚಿತವಾದ 'ಗೊಮ್ಮಟಸಾರ' ಎಂಬ ಗ್ರಂಥಕ್ಕೆ ಭಾಷ್ಯವನ್ನು ರಚಿಸಿದ್ದಾನೆ. ಪ್ರಸಿದ್ಧ ಕವಿಯಾದ ರನ್ನನೂ ಸಹ ಚಾವುಂಡರಾಯನಿಂದ ಪ್ರೋತ್ಸಾಹವನ್ನು ಪಡೆದಿದ್ದನು.

ಜೈನ ಧರ್ಮಾವಲಂಬಿಯಾಗಿದ್ದ ಚಾವುಂಡರಾಯನು ಜೈನಧರ್ಮದ ಏಳಿಗೆಗೆ ಸತತವಾಗಿ ಶ್ರಮಿಸಿದನು, ಅನ್ಯಮತ ಸಹಿಷ್ಣುವಾಗಿದ್ದನು. ಚಾವುಂಡರಾಯನು ಮಾರಸಿಂಹ ಮತ್ತು ರಾಜಮಲ್ಲನ ಗುರು ಅಜಿತಸೇನಾಚಾರ್ಯರ ಶಿಷ್ಯನಾಗಿದ್ದನು. ಇತಿಹಾಸದಲ್ಲಿ ಮೇರುಶಿಲ್ಪಕೃತಿಯಾದ ಶ್ರವಣಬೆಳಗೊಳದ 58 ಅಡಿ ಎತ್ತರದ ಗೊಮ್ಮಟ ವಿಗ್ರಹವನ್ನು ಅಖಂಡ ಶಿಲೆಯಿಂದ ಕೆತ್ತಿಸಿದನು. ಅವನ ಅವಿರತ ಶ್ರದ್ಧೆ ಹಾಗೂ ಪ್ರೋತ್ಸಾಹದ ಫಲವಾಗಿ ಶ್ರವಣಬೆಳಗೊಳವು ಇಂದಿಗೂ ಭಾರತದಲ್ಲಿ ಜೈನರ ಪವಿತ್ರ ಕ್ಷೇತ್ರವಾಗಿ ಉಳಿದುಬಂದಿದೆ. ತನ್ನ ತಾಯಿಯ ಅಭಿಲಾಷೆಯಂತೆ ಚಾವುಂಡರಾಯನು ಈ ಉತ್ತುಂಗ ವಿಗ್ರಹವನ್ನು ಕೆತ್ತಿಸಿದ್ದೇ ಅಲ್ಲದೆ ಮಹಾಮಸ್ತಕಾಭಿಷೇಕವನ್ನೂ ನೆರವೇರಿಸಿದನು. ಈ ಎಲ್ಲದರ ಪರಿಣಾಮವಾಗಿ ಅನಂತರದ ಶಾಸನಗಳಲ್ಲಿ ಈತನನ್ನು 'ರಾಯ' ಎಂಬ ಗೌರವದ ಹೆಸರಿನಿಂದ ಸ್ಮರಿಸಲಾಗಿದೆ.

ಪರಾಕ್ರಮ, ಸ್ವಾಮಿನಿಷ್ಠೆ, ಸ್ವಧರ್ಮನಿಷ್ಠೆ, ಪರಧರ್ಮ ಸಹಿಷ್ಣುತೆ, ಸಾಹಿತ್ಯ ರಚನೆ ಮತ್ತು ಬೃಹತ್ ಶಿಲ್ಪನಿರ್ಮಾಣ ಇವುಗಳಿಂದ ಚಾವುಂಡರಾಯನ ಹೆಸರು ಕರ್ನಾಟಕದ ಇತಿಹಾಸದಲ್ಲಿ ಅಜರಾಮರವಾಗಿದೆ.

ರಾಜಮಲ್ಲನ ಆಳ್ವಿಕೆಯು ಕ್ರಿ.ಶ.988ರಲ್ಲಿ ಕೊನೆಗೊಂಡು ಇವನ ತಮ್ಮನಾದ ರಕ್ಕಸಗಂಗನ ಆಳ್ವಿಕೆಯು ಪ್ರಾರಂಭವಾಯಿತು. ತನ್ನ ಅಣ್ಣನ ಆಳ್ವಿಕೆಯ ಕಾಲದಲ್ಲಿ ಅನೇಕ ಯುದ್ಧಗಳಲ್ಲಿ ಪಾಲ್ಗೊಂಡಿದ್ದಲ್ಲದೆ ಪ್ರಾಂತ್ಯಾಧಿಕಾರಿಯಾಗಿ ಆಡಳಿತ ನಡೆಸಿದ್ದ ರಕ್ಕಸ ಗಂಗನು, ಕ್ರಿ.ಶ.1004ರವರೆಗೂ ಸ್ವತಂತ್ರವಾಗಿ ಆಳ್ವಿಕೆಯನ್ನು ಮುಂದುವರೆಸಿದನು. ಜೈನಮತಕ್ಕೆ ವಿಶೇಷ ಪ್ರೋತ್ಸಾಹ ನೀಡಿ, ತಲಕಾಡಿನಲ್ಲಿ ಒಂದು ಬಸದಿಯನ್ನು ಕಟ್ಟಿಸಿದನು. ಅವನ ಆಸ್ಥಾನದಲ್ಲಿ ಅಷ್ಟಾಂಗ ಯೋಗ ಪರಿಣಿತನೂ, ಉದ್ಧಾಮ ವಿದ್ವಾಂಸರೂ ಆದ ಸೋವರ ಸಿದ್ಧಾಂತ ಎಂಬ ಜೈನ ಮುನಿಯಿದ್ದನು. ನೊಳಂಬ ಹಾಗೂ ಇತರ ಸಾಮಂತರು ವಿಧೇಯರಾಗೇ ಇದ್ದರೂ, ಕ್ರಿ.ಶ.990ರಲ್ಲಿ ದಕ್ಷಮಂತ್ರಿ ಚಾವುಂಡರಾಯನ ಮರಣದ ನಂತರ ಗಂಗರ ಆಳ್ವಿಕೆ ಮುಂದುವರೆಯುವುದು ದುರ್ಲಭವಾಯಿತು.

ತಕ್ಕೋಲಂನಲ್ಲಿ ಹೊಂದಿದ್ದ ಅಪಜಯದ ಸೇಡನ್ನು ತೀರಿಸಿಕೊಳ್ಳಲು ಹವಣಿಸುತ್ತಿದ್ದ ಚೋಳರಿಗೆ, ಕ್ರಿ.ಶ.984ರಲ್ಲಿ ಪರಾಕ್ರಮಿಯಾದ ರಾಜರಾಜನು ಪಟ್ಟಕ್ಕೆ ಬಂದದ್ದು ವರವೇ ಆಯಿತು. ಚೇರ, ಪಾಂಡ್ಯ ಮತ್ತು ಸಿಂಹಳದ ರಾಜರನ್ನು ಸೋಲಿಸಿ ಅವನು ಗಂಗವಾಡಿಯತ್ತ ಗಮನಹರಿಸಿದನು. ಕ್ರಿ.ಶ.991ರಲ್ಲಿ ರಾಜರಾಜನ ದಕ್ಷ ಸೇನಾನಿಗಳು ಕೋಲಾರ ಪ್ರದೇಶವನ್ನು ಆಕ್ರಮಿಸಿದರು. ಕ್ರಿ.ಶ.997ರಲ್ಲಿ ರಾಜರಾಜನೇ ಸ್ವತಃ ಸೈನ್ಯವನ್ನು ನಡೆಸಿ, ಹೊಸಕೋಟೆಯವರೆಗಿನ ಪ್ರದೇಶವನ್ನು ವಶಪಡಿಸಿಕೊಂಡನು. ರಾಜರಾಜನು ಗೆದ್ದ ಪ್ರದೇಶಗಳಲ್ಲಿ ದಕ್ಷ ದಳಪತಿಗಳ ನೇತೃತ್ವದಲ್ಲಿ ಸೈನ್ಯತುಕಡಿಗಳನ್ನು ನೆಲೆಗೊಳಿಸಿದನು. ಗಂಗವಾಡಿಯನ್ನು ಜಯಿಸುವ ಕಾರ್ಯವನ್ನು ವಹಿಸಿಕೊಂಡ ಯುವರಾಜ ರಾಜೇಂದ್ರನು ಕ್ರಿ.ಶ.1004ರಲ್ಲಿ ದೊಡ್ಡ ಸೈನ್ಯದೊಂದಿಗೆ ತಲಕಾಡನ್ನು ಮುತ್ತಿ ವಶಪಡಿಸಿಕೊಂಡು 700 ವರ್ಷಗಳ ಗಂಗರ ದೀರ್ಘ ಆಳ್ವಿಕೆಯನ್ನು ಕೊನೆಗಾಣಿಸಿದನು.

ತಲಕಾಡಿನ ಪತನಾನಂತರವೂ ಉಳಿದಿದ್ದ ರಕ್ಕಸಗಂಗನು, ಛಂದೋಂಬುದಿಯ ಪ್ರಕಾರ ಕ್ರಿ.ಶ.1025ರ ವರೆಗೂ ಚೋಳರ ಸಾಮಂತನಾಗಿ ಆಡಳಿತ ನಡೆಸಿದನೆಂದು ತಿಳಿದುಬರುತ್ತದೆ. ರಕ್ಕಸಗಂಗನು ತಲಕಾಡು ಗಂಗಮನೆತನದ ರಾಜರಲ್ಲಿ ಕಟ್ಟಕಡೆಯವನು. ಗಂಗರ ಮುಖ್ಯ ಶಾಖೆ ರಕ್ಕಸಗಂಗನ ಕಾಲಕ್ಕೆ ಮುಗಿದರೂ ಗಂಗ ಉಪಶಾಖೆಗಳು ಕಲ್ಯಾಣಿ ಚಾಳುಕ್ಯರ ಹಾಗೂ ಅನಂತರ ಹೊಯ್ಸಳರ ಆಶ್ರಿತರಾಗಿ ಆಳ್ವಿಕೆ ಮುಂದುವರೆಸಿದವು. ವಿಜಯನಗರ ಸಾಮ್ರಾಟ ಕೃಷ್ಣದೇವರಾಯನು ಉಮ್ಮತ್ತೂರಿನ (ಶಿವಸಮುದ್ರ) ಗಂಗರಾಜನ ಆಳ್ವಿಕೆಯನ್ನು ಕೊನೆಗಾಣಿಸಿದಾಗ ಗಂಗ ಸಂತತಿಯ ಕೊನೆಯ ಉಪಶಾಖೆಯು ಅಂತ್ಯಗೊಂಡಿತು.

## 4.6 ಆಡಳಿತ ಪದ್ಧತಿ

ಗಂಗವಾಡಿ 96,000 ಎಂದು ಹೆಸರಾಗಿದ್ದ ಗಂಗರಾಜ್ಯ ಪ್ರಾರಂಭದಲ್ಲಿ ಮೈಸೂರು, ಮಂಡ್ಯ, ಬೆಂಗಳೂರು, ಕೋಲಾರ ಮತ್ತು ಕೊಡಗು ಜಿಲ್ಲೆಗಳಿಗೆ ಸೀಮಿತವಾಗಿತ್ತು. ಅನಂತರ ಗಂಗರಾಜರು ತಮ್ಮ ಶಕ್ತಿ ಸಾಮರ್ಥ್ಯಗಳಿಂದ ಸಾಮ್ರಾಜ್ಯವನ್ನು ವಿಸ್ತರಿಸಿದರು. ಅವರ ಪ್ರವರ್ಧಮಾನ ಕಾಲದಲ್ಲಿ ರಾಜ್ಯವು ಕೊಡಗು ಜಿಲ್ಲೆಯಿಂದ ಕೋಲಾರ ಜಿಲ್ಲೆಯವರೆಗೂ ಕೊಯಮತ್ತೂರು, ಸೇಲಂ ಜಿಲ್ಲೆಗಳಿಂದ ಬಳ್ಳಾರಿ ಧಾರವಾಡ ಜಿಲ್ಲೆಗಳವರೆಗೂ ವ್ಯಾಪಿಸಿತ್ತು. ಪ್ರಾರಂಭದಿಂದ ಕಡೆಯವರೆಗೂ ತಲಕಾಡು ಅವರ ಮುಖ್ಯ ರಾಜಧಾನಿಯಾಗಿದ್ದರೂ, ಚನ್ನಪಟ್ಟಣದ ಬಳಿಯ ಮಾಕುಂದ ಮತ್ತು ನೆಲಮಂಗಲ ತಾಲ್ಲೂಕಿನ ಮಣ್ಣೆ (ಮಾನ್ಯಪುರ) ಗ್ರಾಮಗಳು ಹಲವು ಕಾಲ ಅವರ ಉಪರಾಜಧಾನಿಗಳಾಗಿದ್ದವು. ಆಡಳಿತಕ್ಕೆ ಸಂಬಂಧಿಸಿದಂತೆ ಉದಾತ್ತ ಧ್ಯೇಯಗಳನ್ನು ಹೊಂದಿದ್ದ ಗಂಗರು, ಪ್ರಜೆಗಳ ಹಿರತಕ್ಷಣೆಗಾಗಿಯೇ ಆಡಳಿತದ ಜವಾಬ್ದಾರಿಯನ್ನು ವಹಿಸಿಕೊಂಡಿದ್ದುದಾಗಿ ತಮ್ಮ ಶಾಸನಗಳಲ್ಲಿ ಹೇಳಿಕೊಂಡಿದ್ದಾರೆ. ಈ ಸಂತತಿಯ ಪೂರ್ವಾರ್ಧ ಕಾಲದಲ್ಲಿ ಆಳಿದ ಮಾಧವ, ಹರಿವರ್ಮ, ಅವನೀತ ದುರ್ವಿನೀತ, ಶ್ರೀಪುರುಷ ಮುಂತಾದ ಅರಸರು ವೈದಿಕ ಮತಾವಲಂಬಿಗಳಾಗಿದ್ದು ಮನು, ಕೌಟಿಲ್ಯರ ಗ್ರಂಥಗಳು ಹಾಗೂ ಸ್ಮೃತಿಗಳು ಮತ್ತು ಪುರಾಣಗಳಲ್ಲಿ ಪರಿಣಿತಿ ಹೊಂದಿದ್ದರು. ಸ್ವತಃ ವೈದಿಕ ಮತಾವಲಂಬಿಗಳಾಗಿದ್ದರೂ, ಇತರ ಮತಗಳಿಗೆ ಪ್ರೋತ್ಸಾಹವನ್ನಿತ್ತಿದ್ದರು. ವರ್ಣಾಶ್ರಮ ಧರ್ಮ ಪರಿಪಾಲನೆ, ಗೋಬ್ರಾಹ್ಮಣ ಸಂರಕ್ಷಣೆ ದುಷ್ಟನಿಗ್ರಹ ಶಿಷ್ಟಪರಿಪಾಲನೆ, ಮೊದಲಾದ ರಾಜನ ಕರ್ತವ್ಯಗಳನ್ನು ಯಶಸ್ವಿಯಾಗಿ ಪರಿಪಾಲಿಸುತ್ತಿದ್ದ ಗಂಗ ಅರಸರು ತಮ್ಮನ್ನು 'ಧರ್ಮಮಹಾರಾಜ'ರೆಂದು ಕರೆದುಕೊಂಡಿರುವುದು ಅನ್ವರ್ಥವಾಗಿಯೇ ಇದೆ. ರಾಜತ್ವವು ವಂಶಪಾರಂಪರ್ಯವಾಗಿದ್ದು ಹಿರಿಯ ಮಗನೇ ಉತ್ತರಾಧಿಕಾರಿಯಾಗುತ್ತಿದ್ದನು. ಆದರೂ ಅಧಿಕಾರಕ್ಕಾಗಿ ನಡೆಯುತ್ತಿದ್ದ ಅಂತಃಕಲಹಗಳಿಗೆ ಗಂಗರ ಸಂತತಿಯೂ ಹೊರತಾಗಿರಲಿಲ್ಲ. ಪರಿಣಾಮವಾಗಿ ಹಲವು ಸಾರಿ ಗಂಗ ಸಂತತಿಯು ಒಂದೆರಡು ಶಾಖೆಗಳಾಗಿ ವಿಭಜನೆಯಾಗಿತ್ತು. ಆದರೆ ಪುನಃ ಸಮರ್ಥರಾಜರ ಕಾಲದಲ್ಲಿ ಮುಖ್ಯ ಶಾಖೆಯ ಆಳ್ವಿಕೆಗೊಳಪಡುತ್ತಿತ್ತು. ರಾಜ್ಯದ ಸರ್ವಶ್ರೇಷ್ಠ ಅಧಿಕಾರವನ್ನು ಹೊಂದಿದ್ದ ರಾಜನು ಸೈನಿಕ ಪಡೆಯ ಸರ್ವೋಚ್ಚ ದಂಡನಾಯಕನಾಗಿದ್ದನು. ರಾಜನ ಆಸ್ಥಾನವು ಪಂಡಿತರು, ವಿದ್ವಾಂಸರು ಹಾಗೂ ಕವಿಗಳಿಂದ ಕೂಡಿತ್ತು.

ರಾಜ್ಯದ ಅಭ್ಯುದಯಕ್ಕಾಗಿ ಗಂಗ ಅರಸರು ಅನೇಕ ಸಾರ್ವಜನಿಕ ಯೋಜನೆಗಳನ್ನು ರೂಪಿಸಿಕೊಂಡಿದ್ದರು. ಸ್ವತಃ ಪಂಡಿತರೂ ಕವಿಗಳೂ ಆಗಿದ್ದು, ಅನೇಕ ಗ್ರಂಥಗಳನ್ನು ರಚಿಸಿದ್ದ, ಈ ಸಂತತಿಯ ಅರಸರು ಜ್ಞಾನವರ್ಧನೆಗಾಗಿ ಅಗ್ರಹಾರಗಳನ್ನು ಸ್ಥಾಪಿಸಿದ್ದರು. ವ್ಯವಸಾಯಕ್ಕಾಗಿ ಕೆರೆ ಕಾಲುವೆಗಳನ್ನು ನಿರ್ಮಿಸಿದರು. ಹಾಗೂ ಕ್ರಮಬದ್ಧ ತೆರಿಗೆಗಳನ್ನು ಮಾತ್ರ ಜಾರಿಗೆ ತರುವುದರ ಮೂಲಕ ವ್ಯಾಪಾರವನ್ನು ಪ್ರೋತ್ಸಾಹಿಸಿದರು. ಗಂಗ ಪ್ರಭುಗಳು ನಿರಂಕುಶಾಧಿಕಾರಿಗಳಾಗಿರಲಿಲ್ಲ. ಇವರ ಸಹಾಯಕ್ಕೆ ಮಂತ್ರಾಲೋಚನೆ ಸಭೆಯಿತ್ತು. ಚಾವುಂಡರಾಯ, ಅಸಗಯ್ಯ, ಅಮಾವಾಸಯ್ಯ ಮೊದಲಾದ ಅನೇಕ ಸಚಿವರ ಮತ್ತು ದಂಡನಾಯಕರ ಹೆಸರುಗಳೂ, ಅವರ ದಕ್ಷತೆಯೂ ಶಾಸನಗಳಿಂದ ತಿಳಿದುಬರುತ್ತದೆ. ರಾಜ್ಯವನ್ನು ವಿಷಯ,

ನಾಡು, ಕಂಪಣ ಮೊದಲಾದ ವಿಭಾಗಗಳಾಗಿ ವಿಂಗಡಿಸಲಾಗಿತ್ತು ಹಾಗೂ ಗ್ರಾಮವು ಆಡಳಿತದ ಅತಿ ಚಿಕ್ಕ ಘಟಕವಾಗಿತ್ತು. ಯುವರಾಜ ಹಾಗೂ ಇತರ ರಾಜಕುಮಾರರುಗಳಣ್ನು ಪ್ರಾಂತ್ಯಗಳ ಅಧಿಕಾರಿಗಳನ್ನಾಗಿ ನೇಮಿಸಲಾಗುತ್ತಿತ್ತು. ಅಲ್ಲದೆ ಗಂಗರ ಕಾಲದಲ್ಲಿ ರಾಣಿಯರೂ ಸಹ ಆಡಳಿತದಲ್ಲಿ ಭಾಗವಹಿಸುತ್ತಿದ್ದ ಅನೇಕ ನಿದರ್ಶನಗಳಿವೆ. ಹೆಗ್ಗಡೆ, ನಾಡಗೌಡ ಮೊದಲಾದವರು, ನಾಡು ಮತ್ತು ಇತರ ವಿಭಾಗಗಳ ಮುಖ್ಯರಾಗಿದ್ದರು. ಹಳ್ಳಿಗಳಲ್ಲಿ, ಗೌಡ ಮತ್ತು ಕರಣಿಕರು ಆಡಳಿತವನ್ನು ನಿರ್ವಹಿಸುತ್ತಿದ್ದರು. ಗ್ರಾಮಸಭೆಗಳೂ ಸಹ ಆಡಳಿತ ನಿರ್ವಹಿಸುವುದರಲ್ಲಿ ಸಹಕಾರಿಯಾಗಿದ್ದವು.

## 4.7 ಧಾರ್ಮಿಕ ಸ್ಥಿತಿಗತಿ

ಈ ಸಂತತಿಯ ಅರಸರು ಪ್ರಾರಂಭದಿಂದ ಕ್ರಿ.ಶ.8ನೇ ಶತಮಾನದ ಕೊನೆಯವರೆಗೂ ಹಿಂದೂ ಮತೀಯರಾಗಿದ್ದು ಶೈವ ಮತ್ತು ವೈಷ್ಣವ ಮತವನ್ನು ಅನುಸರಿಸುತ್ತಿದ್ದರು. ವರ್ಣಾಶ್ರಮ ಸಂರಕ್ಷಣೆ ಹಾಗೂ ಬ್ರಾಹ್ಮಣ ರಕ್ಷಣೆ ತಮ್ಮ ಮುಖ್ಯ ಕರ್ತವ್ಯವೆಂದು ಶಾಸಗಳಲ್ಲಿ ಹೇಳಿಕೊಂಡಿರುವರು. ಗಂಗರಾಜ್ಯ ಸ್ಥಾಪನೆಯ ಕಾಲದಿಂದಲೂ ಪ್ರಚಾರದಲ್ಲಿದ್ದ ಜೈನ ಹಾಗೂ ಬೌದ್ಧ ಮತಗಳಿಗೆ, ಪರಧರ್ಮಸಹಿಷ್ಣುಗಳಾಗಿದ್ದ ಗಂಗರು ಉದಾರ ಪ್ರೋತ್ಸಾಹವನ್ನಿತ್ತಿದ್ದರು. ತಡಂಗಲ ಮಾಧವನು ಬೌದ್ಧ ಸಂಘಕ್ಕೆ ದಾನದತ್ತಿಗಳನ್ನು ನೀಡಿದ್ದನು. ಬೌದ್ಧ ಧರ್ಮವು ಕ್ಷೀಣಿಸಿದ್ದು ಹಿಂದೂ ಮತ್ತು ಜೈನಧರ್ಮಗಳು ಪ್ರವರ್ಧಮಾನವಾಗಿದದವು.

ಜೈನಧರ್ಮವು ಸಹ ವೈದಿಕ ಧರ್ಮದಂತೆ ಗಂಗವಾಡಿಯಲ್ಲಿ ಹೆಚ್ಚು ಪ್ರಚಾರದಲ್ಲಿತ್ತು. ಪೂಜ್ಯ ಪಾದನೆಂಬ ಪ್ರಸಿದ್ಧ ಜೈನ ವಿದ್ವಾಂಸ ಹಾಗೂ ಭಾರವಿ ಮೊದಲಾದ ಕವಿಗಳು ಯದುಕುಲ ತಿಲಕ ಕೃಷ್ಣನೊಡನೆ ಹೋಲಿಸಲ್ಪಟ್ಟಿರುವ ದುರ್ವಿನೀತನ ಆಸ್ಥಾನದಲ್ಲಿ ಮನ್ನಣೆ ಪಡೆದಿದ್ದರು. ಆ ಕಾಲದಲ್ಲಿ ಶ್ರವಣಬೆಳಗೊಳ ಜೈನರ ಪ್ರಸಿದ್ಧ ಯಾತ್ರಾಸ್ಥಳವಾಗಿತ್ತು. ಜೈನಪಂಥವನ್ನು ಸ್ವೀಕರಿಸಿದ ಪ್ರಪ್ರಥಮ ರಾಜ ಎರಡನೇ ಶಿವಮಾರನು ಶ್ರವಣಬೆಳಗೊಳ ಮತ್ತು ಇತರ ಕಡೆಗಳಲ್ಲಿ ಬಸದಿಗಳನ್ನು ಕಟ್ಟಿಸಿದನು. ಚಾವುಂಡರಾಯನು ಕನ್ನಡನಾಡಿನ ಅಗ್ರಗಣ್ಯ ಜೈನಧರ್ಮಿಗಳಲ್ಲೊಬ್ಬನಾಗಿದ್ದು ಮಂತ್ರಿ ಮತ್ತು ದಂಡನಾಯಕನಗಿ ಕೊನೆಯ ಮೂರು ಗಂಗ ರಾಜನಿಗೆ ಸೇವೆ ಸಲ್ಲಿಸಿದನು. 'ಚಾವುಂಡರಾಯ ಪುರಾಣ'ದ ಕರ್ತೃವಾದ ಈತನು, ರನ್ನ ನಾಗವರ್ಮ ಕೇಶಿರಾಜ ಮೊದಲಾದ ಕವಿಗಳಿಗೆ ಆಶ್ರಯದಾತನೂ ಆಗಿದ್ದನು. ಗಂಗರ ಉತ್ತರಾರ್ಧ ಕಾಲದ ಕನ್ನಡ ಸಾಹಿತ್ಯದ ಪ್ರಾರಂಭದೆಸೆಯ ಉತ್ಕೃಷ್ಟ ಕಾಲವಾಗಿತ್ತು. ಜೈನ ವಿದ್ವಾಂಸರು ಮತ್ತು ಆಚಾರ್ಯರಿಂದ ಪ್ರಾಕೃತ, ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಅನೇಕ ಸಾಹಿತ್ಯ ಕೃತಿಗಳು ರಚಿತವಾದವು. ಗಂಗರ ಕೊನೆಗಾಲದ ರಾಜರ ಕಾಲದಲ್ಲಿ ಏಳಾಚಾರ್ಯ ಮತ್ತು ಅಜಿತ ಸೇನಾಚಾರ್ಯ ಮೊದಲಾದ ಪ್ರಸಿದ್ಧ ಜೈನಯತಿಗಳಿದ್ದರು.

## 4.8 ವಿದ್ಯಾಭ್ಯಾಸ

ಗಂಗರ ಕಾಲದಲ್ಲಿನ ವಿದ್ಯಾಭ್ಯಾಸದ ಬಗ್ಗೆ ಅಂದಿನ ಶಾಸನಗಳಿಂದ ಹೆಚ್ಚಿನ ಮಾಹಿತಿ ದೊರೆಯುತ್ತದೆ. ಇವುಗಳಿಂದ ತಿಳಿದುಬರುವಂತೆ ವಿದ್ವಾಂಸರಿಗೂ, ವಿದ್ಯಾಸಂಸ್ಥೆಗಳಿಗೂ ಹೆಚ್ಚಿನ ಪ್ರೋತ್ಸಾಹವಿತ್ತು. ದೇವಾಲಯಗಳು ಹಾಗೂ ಮಠಗಳು ಅಂದಿನ ವಿದ್ಯಾಭ್ಯಾಸದ ಕೇಂದ್ರಗಳಾಗಿದ್ದವು. ವೈದಿಕ ವಿದ್ಯಾಕೇಂದ್ರಗಳಲ್ಲಿ ಧಾರ್ಮಿಕ ತತ್ವಗಳ ಜೊತೆಗೆ ವೇದಗಳು, ಉಪನಿಷತ್ತುಗಳು, ಪುರಾಣಗಳು, ಧರ್ಮಶಾಸ್ತ್ರಗಳು ಹಾಗೂ ವ್ಯಾಕರಣ, ತರ್ಕ, ವೈದ್ಯ ಮೊದಲಾದ ವಿಷಯಗಳಲ್ಲಿ ವ್ಯಾಸಂಗಕ್ಕೆ ಅವಕಾಶವಿದ್ದಿತು. ಮಾರಸಿಂಹನ ಕೂಡ್ಲೂರು ಶಾಸನ ಗಂಗರ ಕಾಲದ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ಕೆಲವು ವಿಶಿಷ್ಟ ಮಾಹಿತಿಗಳನ್ನೊದಗಿಸುತ್ತದೆ. ಬೌದ್ಧ, ಜೈನ ಹಾಗೂ ಹಿಂದೂ ವಿದ್ವಾಂಸರು ತಮ್ಮ ಧರ್ಮಗಳ ಪ್ರಚಾರದಲ್ಲಿ ತೊಡಗಿದ್ದುದರಿಂದ ಅವರು ಎಲ್ಲ ಧರ್ಮಗಳ ತತ್ವವನ್ನು

ಅಭ್ಯಸಿಸುತ್ತಿದ್ದು, ಆಗಾಗ ಪರಸ್ಪರವಾದ ವಿವಾದಗಳು ನಡೆಯುತ್ತಿದ್ದವು. ವಿದ್ವಾಂಸರಿಗೆ ಪ್ರೋತ್ಸಾಹ ನೀಡಲು ಗ್ರಾಮಗಳನ್ನು ದತ್ತಿಯಾಗಿ ನೀಡುವುದು ಸಾಮಾನ್ಯವಾಗಿತ್ತೆಂದು ದುರ್ವಿನೀತನ ನಲ್ಲಾಳ, ಹೆಬ್ಬೆಟ್ಟ, ಶ್ರೀಪುರುಷನ ಜವಳಿ, ಮಾರಸಿಂಹನ ಕೂಡ್ಲೂರು ಶಾಸನಗಳಿಂದ ತಿಳಿದುಬರುತ್ತದೆ. 1ನೇ ಶಿವಮಾರನ ಹಳ್ಳಿಗೆರೆ ಶಾಸನದಲ್ಲಿ ಉಲ್ಲೇಖಿಸಲಾಗಿರುವಂತೆ, ಬ್ರಹ್ಮಪುರಿಗಳೂ, ಹಾಗೂ ಘಟಕಗಳು ವಿದ್ಯಾಭ್ಯಾಸದ ಉನ್ನತ ಕೇಂದ್ರಗಳಾಗಿದ್ದವು. ಅಂತಹ ಕೇಂದ್ರದಲ್ಲಿ ವೇದಾರ್ಥ, ವಾಕ್ಯಾರ್ಥ, ಶಾಸ್ತ್ರಾರ್ಥಕ್ಕೆ ಸಂಬಂಧಿಸಿದ ವಿಶೇ಼ ಚರ್ಚೆಗಳೂ, ಜಿಜ್ಞಾಸೆಗಳೂ ನಡೆಯುತ್ತಿದ್ದವು. ತಲಕಾಡು, ಮೇಲುಕೋಟೆ, ಶ್ರೀರಂಗಪಟ್ಟಣ, ಶ್ರವಣಬೆಳಗೊಳ, ಶಿವಗಂಗ, ಬಂಕಾಪುರ ಮತ್ತು ಇತರ ಅನೇಕ ಸ್ಥಳಗಳು ಜ್ಞಾನ ಕೇಂದ್ರಗಳಾಗಿದ್ದವು.

## 4.9 ಕಲೆ

ಬೇರೆ ಬೇರೆ ಧರ್ಮಗಳ ಪ್ರೋತ್ಸಾಹಕರಾಗಿದ್ದ ಗಂಗರು, ಹಿಂದೂ ದೇವಾಲಯಗಳನ್ನೂ ಹಾಗೂ ಜೈನ ಬಸದಿಗಳನ್ನೂ ಕಟ್ಟಲು ಪ್ರೋತ್ಸಾಹ ನೀಡಿದರು. ಕ್ರಿ.ಶ.7ನೇ ಶತಮಾನದ ಕೊನೆಯವರೆಗೆ ಕಟ್ಟಲಾದ ಗುಡಿಗಳಲ್ಲಿ ಹಲವು ನಾಶವಾಗಿರುವುದರಿಂದ ಹಾಗೂ ಹಲವು ರೂಪಾಂತರ ಹೊಂದಿರುವುದರಿಂದ ಗುರುತಿಸುವುದು ಕಷ್ಟಕರವಾಗಿದೆ. ಆದರೂ ಹಿರೇಮಗಳೂರಿನ ಕೋದಂಡರಾಮ ದೇವಾಲಯ, ಅವನೀತನ ಸ್ಮರಣಾರ್ಥವಾಗಿ ಕಟ್ಟಲಾದ ವಿನೀತೇಶ್ವರ ದೇವಾಲಯ, ಶ್ರೀಪುರುಷನ ಕಾಲದಲ್ಲಿ ಕಟ್ಟಲಾದ ಮಾನ್ಯಪುರದ ಕಪಿಲೇಶ್ವರ ದೇವಾಲಯ, ಈ ಕಾಲಕ್ಕೆ ಸೇರಿದವುಗಳೆಂದು ತಿಳಿದು ಬಂದಿದೆ. ಚಾಮರಾಜನಗರ ತಾಲ್ಲೂಕಿನ ನರಸಮಂಗಲದ ರಾಮೇಶ್ವರ ದೇವಾಲಯ ಗಂಗರ ಶೈಲಿಗೆ ಸಂಬಂಧಿಸಿದ ಮತ್ತೊಂದು ದೇವಾಲಯವಾಗಿದೆ. ಇದರ ಕಾಲ ಸುಮಾರು 8ನೇ ಶತಮಾನ. ಈ ಗುಡಿ ವಿಶಾಲ ಗರ್ಭಗೃಹ ಶುಕನಾಸಿ ಮತ್ತು ನವರಂಗದಿಂದ ಕೂಡಿದ್ದು, ಗೋಡೆಗಳ ಮೇಲೆ ಸಿಂಃ ಮತ್ತು ನೀರ್ಗುದುರೆಗಳ ಸಾಲುಗಳನ್ನು ಹೊಂದಿದೆ. ಕ್ರಿ.ಶ.9ನೇ ಶತಮಾನದ ಹಾಗೂ ನಂತರದ ಕಾಲದಲ್ಲಿ ನಿರ್ಮಿತವಾದ ದೇವಾಲಯಗಳೆಂದರೆ ನಂದಿಯ ಭೋಗನಂದೀಶ್ವರ ದೇವಾಲಯ, ಅವನೀಯ ರಾಮೇಶ್ವರ, ಸುತ್ತೂರಿನ ನಾರಾಯಣಸ್ವಾಮಿ, ಸಿಂಧಘಟ್ಟದ ಸಂಗಮೇಶ್ವರ, ಅರಳಗುಪ್ಪೆಯ ಕಲ್ಲೇಶ್ವರ, ಧಡಿಗದ ಯೋಗನರಸಿಂಹ ಮತ್ತು ಧಡಿಗೇಶ್ವರ ದೇವಾಲಯಗಳು. ಸಪ್ತಮಾತೃಕೆ ಹಾಗೂ ಪೌರಾಣಿಕ ದೇವ ದೇವತೆಗಳನ್ನು ಕೆತ್ತಲಾಗಿರುವ ವರುಣದ ಮಹಾಲಿಂಗೇಶ್ವರ ದೇವಾಲಯ ಗಂಗರ ಕಾಲದ ಮತ್ತೊಂದು ಭವ್ಯ ದೇವಾಲಯ. ಗಂಗರ ದೇವಾಲಯಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುವುದು ರಾಜಧಾನಿಯಾದ ತಲಕಾಡು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ತಲಕಾಡಿನ ಮರುಳೇಶ್ವರ ಆರ್ಕೇಶ್ವರ ಮೊದಲಾದ ದೇವಾಲಯಗಳು ಗಂಗರ ಕಾಲದಲ್ಲಿ ನಿರ್ಮಿತವಾದ ಇತರ ಪ್ರಮುಖ ದೇವಾಲಯಗಳು.

ಗಂಗರಾಳ್ವಿಕೆಯ ಉತ್ತರಾರ್ಧ ಕಾಲದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಸದಿಗಳನ್ನು ನಿರ್ಮಿಸಲಾಯಿತು. ಈ ಕಾಲದಲ್ಲಿ ನಿರ್ಮಿತವಾದ ಹೆಚ್ಚು ಬಸದಿಗಳು ಶ್ರವಣ ಬೆಳಗೊಳದಲ್ಲಿ ಇನ್ನೂ ಉರ್ಜಿತಾವಸ್ಥೆಯಲ್ಲಿವೆ. ಅವುಗಳಲ್ಲಿ ಪ್ರಮುಖವಾದುವುಗಳೆಂದರೆ, ಚಂದ್ರ ಪ್ರಭ ಬಸದಿ, ಇರುವೆ ಬ್ರಹ್ಮದೇವ ಬಸದಿ ಹಾಗೂ ಚಾವುಂಡರಾಯ ಬಸದಿ. ಭಾರತೀಯ ಶಿಲ್ಪಕಲೆಗೆ ಗಂಗರ ಬೃಹತ್ ಕೊಡುಗೆಯೆಂದರೆ, ಶ್ರವಣಬೆಳಗೊಳದ ವಿಂಧ್ಯ ಗಿರಿಯ ಮೇಲೆ ಕೆತ್ತಲಾಗಿರುವ 58 ಅಡಿ ಎತ್ತರದ ಗೊಮ್ಮಟ ವಿಗ್ರಹ, ಇದರ ಕರ್ತೃ ನಾಲ್ಕನೇ ರಾಜಮಲ್ಲನ ಅಮಾತ್ಯ ಚಾವುಂಡರಾಯ. ಪ್ರಾಚೀನ ಜಗತ್ತಿನ ಶಿಲ್ಪಗಳಲ್ಲಿ ಅತ್ಯಂತ ಎತ್ತರವಾದ ಈ ಏಕಶಿಲಾ ಗೊಮ್ಮಟ ಪ್ರತಿಮೆಯು ಪ್ರಪಂಚದ ಕಲಾಶಿಲ್ಪಕ್ಕೆ ಗಂಗರು ಅರ್ಪಿಸಿರುವ ಅಮೋಘ ಕಾಣಿಕೆಯಾಗಿದೆ. ಈ ಮೂರ್ತಿಯಲ್ಲಿ ಮೂಡಿಸಿರುವ ಗಾಂಭೀರ್ಯ, ತ್ಯಾಗ, ವೈರಾಗ್ಯ, ಭಾವ ಮೊದಲಾದವು ವರ್ಣನಾತೀತವಾಗಿವೆ. ಗಂಗರ ಕಲೆಯ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲಲು ಇನ್ನೂ ಶಾಸ್ತ್ರೀಯ ಅಧ್ಯಯನ ನಡೆಯಬೇಕಾಗಿದೆ.

## 4.10 ಸಾಹಿತ್ಯ

ಗಂಗರ ಪ್ರೋತ್ಸಾಹದಿಂದ ಸಂಸ್ಕೃತ ಹಾಗೂ ಕನ್ನಡದಲ್ಲಿ ಅತಿಹೆಚ್ಚು ಸಂಖ್ಯೆಯಲ್ಲಿ ಸಾಹಿತ್ಯ ಕೃತಿಗಳು ರಚಿತವಾದವು. ಸ್ವತಃ ವಿದ್ವಾಂಸರಾದ 1ನೇ ಮಾಧವ, 3ನೇ ಮಾಧವ, ದುರ್ವಿನೀತ, ಶ್ರೀಪುರುಷ, ಸೈಗೊಟ್ಟ, ಶಿವಮಾರ, 2ನೇ ಮಾರಸಿಂಹ ಮೊದಲಾದ ಅರಸರು 'ದತ್ತಕಸೂತ್ರ', 'ಗಜಶಾಸ್ತ್ರ', 'ಗಜಾಷ್ಟಕ' ಮೊದಲಾದ ಗ್ರಂಥಗಳನ್ನು ರಚಿಸಿದರು. ದುರ್ವಿನೀತನು ಭಾರವಿಯ ಕಿರಾತಾರ್ಜುನೀಯದ 15ನೇ ಸರ್ಗಕ್ಕೆ ಟೀಕೆಯನ್ನು ರಚಿಸಿದ್ದೇ ಅಲ್ಲದೆ, ಗುಣಾಢ್ಯನ 'ವಡ್ಡಕಥೆ'ಯನ್ನು ಸಂಸ್ಕೃತಕ್ಕೆ ತರ್ಜುಮೆ ಮಾಡಿದ್ದಾನೆ. ಶಬ್ದಾವತಾರದ ಕರ್ತೃವೂ ದುರ್ವಿನೀತನೇ ಎಂದು ಹೇಳಲಾಗಿದೆ. ಹಾಗೂ 'ಕವಿರಾಜಮಾರ್ಗ'ದಿಂದ ದುರ್ವಿನೀತನು ಕನ್ನಡದ ಅತ್ಯಂತ ಪ್ರಾಚೀನ ಗದ್ಯರಚನಾಕಾರದಲ್ಲಿ ಒಬ್ಬನೆಂದು ತಿಳಿದುಬರುತ್ತದೆ. ಅಲ್ಲದೆ ಈತನು ಪ್ರಸಿದ್ಧ ವಿದ್ವಾಂಸರೂ ಕವಿಗಳೂ ಆದ ಪೂಜ್ಯಪಾದ ಮತ್ತು ಭಾರವಿ ಇವರಿಗೆ ಮನ್ನಣೆ ನೀಡಿದ್ದನು. 3ನೇ ಮಾರಸಿಂಹನು ವ್ಯಾಕರಣ, ತರ್ಕ, ತತ್ವಶಾಸ್ತ್ರ ಮೊದಲಾದವುಗಳಲ್ಲಿ ವಿಶೇಷ ಪರಿಣತಿ ಹೊಂದಿದ್ದನು.

ಗಂಗರಾಳ್ವಿಕೆಯ ಉತ್ತರಾರ್ಧ ಹಾಗೂ ರಾಷ್ಟ್ರಕೂಟರ ಕಾಲದಲ್ಲಿ ಕನ್ನಡನಾಡು ಜೈನಧರ್ಮದ ಸುವರ್ಣಯುಗವಾಗಿತ್ತು. ವಿಜಯಕೀರ್ತಿ, ಪೂಜ್ಯಪಾದ, 1ನೇ ಮತ್ತು 2ನೇ ಅಜಿತಸೇನಾಚಾರ್ಯರು, ವಿಮಲಚಂದ್ರ, ಗುಣಧರ, ವಜ್ರನಂದಿ, ವೀರಸೇನ ಮೊದಲಾದ ಪ್ರಸಿದ್ಧ ಕವಿಗಳ ಹೆಸರುಗಳ ಶಾಸನಗಳಿಮದ ಹಾಗೂ ಅವರು ರಚಿಸಿದ ಕೃತಿಗಳಿಂದ ತಿಳಿದುಬರುತ್ತದೆ. ಇವರೆಲ್ಲರೂ ಗಂಗರಾಜರ ಸಮಕಾಲೀನರಾಗಿದ್ದರೆಂದೂ ಹಾಗೂ ಅವರಿಂದ ಪ್ರೋತ್ಸಾಹವನ್ನು ಹೊಂದಿದ್ದರೆಂದೂ ತಿಳಿದುಬರುತ್ತದೆ. ಚಾವುಂಡರಾಯನು ಕನ್ನಡ, ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಲ್ಲಿಯೂ ವ್ಯಾಕರಣ, ತರ್ಕ, ಗಣಿತ ಶಾಸ್ತ್ರಗಳಲ್ಲಿಯೂ ಪಾಂಡಿತ್ಯವನ್ನು ಹೊಂದಿದ್ದು, ರನ್ನ, ನಾಗವರ್ಮ ಮತ್ತು ಕೇಶಿರಾಜ ಮೊದಲಾದವರ ಪೋಷಕನೂ ಆಗಿದ್ದನು. ಕನ್ನಡದ 'ಆದಿಕವಿ' ಪಂಪನೂ ಇದೇ ಕಾಲಕ್ಕೆ ಸೇರಿದವನು. ಒಟ್ಟಿನಲ್ಲಿ ಈ ಕಾಲದಲ್ಲಿ ಕನ್ನಡ ಸಾಹಿತ್ಯದಲ್ಲಿ ಸರ್ವತೋಮುಖ ಪ್ರಗತಿಯ ಬುನಾದಿ ಪ್ರಾರಂಭವಾದುದಲ್ಲದೆ ಉಜ್ವಲವಾಗಿ ಬೆಳೆಯಿತು. ಅತಿದೀರ್ಘಕಾಲ ಕನ್ನಡನಾಡಿನ ಮೇಲೆ ಆಳ್ವಿಕೆ ನಡೆಸಿದ ಗಂಗ ಸಂತತಿಯು ಕರ್ನಾಟಕದ ಸಂಸ್ಕೃತಿಗೆ ವಿಪುಲವಾದ ಕಾಣಿಕೆಯನ್ನು ನೀಡಿದೆ.

## 4.11 ಸಾರಂಶ

ಆನಾನುರಾಗದಿಂದ ಕೂಡಿದ ದಕ್ಷ ಆಡಳಿತ, ಎಂತಹ ದಾರುಣ ಪರಿಸ್ಥಿತಿಯಲ್ಲೂ ಬೇರೆ ಮನೆತನಗಳ ಸಾರ್ವಭೌಮತ್ವಕ್ಕೆ ತಲೆಬಾಗದ ಅನವರತ ಹೋರಾಟ, ದಕ್ಷಿಣದಲ್ಲಿ ಪಲ್ಲವ, ಚೋಳ ಹಾಗೂ ಉತ್ತರದಲ್ಲಿ ಗೂರ್ಜರರ ಮೇಲೆ ಗಳಿಸಿದ ವಿಜಯ, ಧರ್ಮ, ಸಾಹಿತ್ಯ ಮತ್ತು ಕಲೆಗೆ ನೀಡಿದ ಪ್ರೋತ್ಸಾಹ ಮತ್ತು ಆ ಮೂಲಕ ಕರ್ನಾಟಕ ಸಂಸ್ಕೃತಿಗೆ ನೀಡಿದ ಅನುಪಮ ಕೊಡುಗೆ ಇವುಗಳಿಂದ ಗಂಗ ಸಂತತಿಯ ಆಳ್ವಿಕೆಯು ಪ್ರಸಿದ್ಧವಾಗಿದೆ.

## 4.12 ಸ್ವಪರೀಕ್ಷೆ ಪ್ರಶ್ನೆಗಳು

1) ಕದಂಬರ ಆಡಳಿತ ಮತ್ತು ಧಾರ್ಮಿಕ ಪರಿಸ್ಥಿತಿಯ ಬಗ್ಗೆ ಚರ್ಚಿಸಿ.
2) ತಲಕಾಡಿನ ಗಂಗರು ಆಡಳಿತ ಮತ್ತು ರಾಜಕೀಯ ಇತಿಹಾಸದ ಬಗ್ಗೆ ಚರ್ಚಿಸಿ.

## 4.13 ಪ್ರಶ್ನೆಗಳಿಗೆ ಉತ್ತರ

1. ಉತ್ತರ 4.2.1 ಮತ್ತು 4.2.2
2. ಉತ್ತರ 4.4 ಯಿಂದ 4.6

**4.14 ಅಧ್ಯಯನದ ಗ್ರಂಥಗಳು**

1) ಪ್ರೌಢಭಾರತದ ಇತಿಹಾಸ – ಶಾರದ ಪ್ರಸಾದ್
2) G.R.Rangaswamaiah - Pracheena Bharatha Ithihasa
3) IV. Mahalingam - South Indian History

**4.15 ಪ್ರಮುಖ ಪದಗಳು**

Shat karma-Niratha Shrutha SheelaShuchadyalankruta- ಒರ್ವ ಸತ್ಯವಾದ ಬ್ರಾಹ್ಮಣನ ಆರು ಧಾರ್ಮಿಕ ವಿಧಿಗಳನ್ನು ಅನುಸರಿಸುವವನು.

**ಪ್ರೊ.ಎನ್.ಸರಸ್ವತಿ**
ಇತಿಹಾಸ ಅಧ್ಯಯನ ವಿಭಾಗ
ಮಾನಸ ಗಂಗೋತ್ರಿ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು–570006.